REGISTERED No. M. 1393. ೪೦ ಪುಟಗಳು.



# ಕಂಠೀರವ



ಪರ್ಯಾಯ ಸಂಚಿಕೆ ೧೯೩೬

# PARIYAYAM SPECIAL 1936.

ಮಂಗಳೂರು ೧೯೩೬ನೇ ಇಸವಿ ಜನವರಿ ತಾರೀಕು ೧೪ನೇ ಮಂಗಳವಾರ.


## TO OUR UNKNOWN FRIENDS

THE OTHER DAY A BUSINESSMAN FROM ANOTHER TOWN CAME INTO THE BANK AND DEPOSITED A LARGE AMOUNT WITH US.

THE OFFICERS OF THE CANARA BANK ARE NOT SATISFIED MERELY TO HAVE PEOPLE PUT MONEY IN THE BANK. THEY WANT TO KNOW THE CUSTOMERS PERSONALLY—AN ACQUAINTANCE WHICH IS HELPFUL TO BOTH. ACCORDINGLY THE OFFICER ASKED THIS MAN WHETHER ANY ONE HAD RECOMMENDED HIM TO THE BANK.

HE SMILED AND SAID "I CAME INTO YOUR CITY FOR THE PURPOSE OF OPENING A BANK ACCOUNT, BUT WITH NO KNOWLEDGE OF BANKS. ON THE STREET, I SELECTED AN INTELLIGENT LOOKING MAN PASSING BY AND ASKED HIM TO TELL ME THE NAME OF A GOOD BANK. HE REPLIED: CANARA BANK. I STOPPED A SECOND WITH THE SAME RESULT—AND THEY WERE MY RECOMMENDATIONS."

THIS MESSAGE IS DIRECTED TO THOSE "UNKNOWN FRIENDS". WE WANT TO THANK YOU AND THE SCORES OF OTHERS WHOSE FRIENDLINESS WE VALUE SO HIGHLY. MONEY CAN BUY MANY THINGS, BUT IT CANNOT PURCHASE REAL FRIENDSHIP. WE SHALL CONTINUE TO DO EVERYTHING POSSIBLE TO JUSTIFY YOUR CONFIDENCE AND MERIT YOUR RECOMMENDATION.

ESTD. 1906.

CANARA BANK

LIMITED.

# Messrs. Kochikar Brothers

Branch Secretaries For South India and Indian States

(ESTD. 1910.)

Chief Agents for Bombay City and Suburbs

FOR

# The Bombay Life Assurance Co., Ltd.

(ESTD. 1908,)

## JUST CELEBRATED OUR SILVER JUBILEE ON 13TH DECEMBER 1935.

IT PAYS TO REPRESENT THIS LONG STANDING CONCERN.

***Wanted Agents in unrepresented parts.***

**Experienced organisers started on decent pay and allowance.**

**Write to, or call at, any of our following offices:-**

GOUTAM NIVAS, CHARNI ROAD, GIRGAUM, BOMBAY NO. 4 (PHONE NO. 26314).

VISWESWARAPURAM, BANGALORE CITY. HUZUR ROAD, CALICUT, MALABAR.

POST BOX 337, MOUNT ROAD, MADRAS. CAR STREET, MANGALORE. UDIPI, (S. INDIA).

---

# ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್

(1910ರಲ್ಲಿ ಸ್ಥಾಪನೆಯಾದದ್ದು.)

ದಕ್ಷಿಣ ಇಂಡಿಯಕ್ಕೂ ಹಿಂದೀ ಆಶ್ರಿತ ಸಂಸ್ಥಾನಗಳಿಗೂ ಬ್ರಾಂಚ್ ಸೆಕ್ರಟರಿಗಳು.

(1908ರಲ್ಲಿ ಸ್ಥಾಪನೆಯಾದದ್ದು.)

ಬೊಂಬಯಿ ನಗರಕ್ಕೂ, ಆಸುಪಾಸಿನ ಪ್ರದೇಶಗಳಿಗೂ ಮುಖ್ಯ ಏಜಂಟರು.

# ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡಿಗೆ

## ಕಳೆದ 1935ನೇ ದಶಂಬರ ತಾ. 13ರಲ್ಲಿ, ಇದೀಗಲೇ ನಮ್ಮ ರಜತಮಹೋತ್ಸವವನ್ನು ನೆರವೇರಿಸಿದೆ.

ದೀರ್ಘ ಕಾಲದಿಂದ ನೆಲೆನಿಂತ ಈ ಸಂಸ್ಥೆಯ ಪ್ರಾತಿನಿಧ್ಯವನ್ನು ನಿರ್ವಹಿಸುವುದರಿಂದ ಕೈತುಂಬ ಲಾಭವಿದೆ.

ಅನುಭವಶಾಲಿಗಳಾದ 'ಆರ್ಗನೈಸರುಗ'ಳಿಗೆ ಆರಂಭದಲ್ಲೇ ಒಳ್ಳೆಯ ಸಂಬಳವೂ ಅಲ್ಲದೆ ಪ್ರತ್ಯೇಕ ಎಲೊವೆನ್ಸ್ ಕೂಡ ಇದೆ.

ಈ ಕೆಳಗಿನ ನಮ್ಮ ಕಾರ್ಯಾಲಯಗಳಿಗೆ ಬರೆದು ಕೇಳಿ ಅಥವಾ ಖುದ್ದಾಗಿ ಬಂದು ಮಾತನಾಡಿ:—

ಗೌತಮ ನಿವಾಸ, ಚರ್ನಿ ರೋಡ್, ಗಿರಗಾಂ, ಬೊಂಬೇ ನಂಬ್ರ 4 (ಫೋನ್ ನಂಬ್ರ 26314).

ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ. ಹುಜೂರು ರೋಡ್, ಕಲ್ಲಿಕೋಟೆ, ಮಲಬಾರ್. ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್, ಮದ್ರಾಸ್.

ಕಾರ್ ಸ್ಟ್ರೀಟ್, ಮಂಗಳೂರು. ಉಡ್ಪಿ (ದ. ಇಂಡಿಯಾ).

REGISTERED NO. M. 1393. ಬಿಡಿ ಸಂಚಿಕೆ ಒಂದಾಣೆ




ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಶಸ್ತ್ರಸ್ತ್ರದ್ವದವಿಷು ಸಂಯ್ಯವಹೃತಿಪ್ರಾಗಲ್ಭ್ಯಮಾತ್ತೋಽನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ಶ್ರೀಕಂಠಕಂಠೀರವಃ ॥

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಠವರ್ಗದ
ಕನ್ನಡ
ವಾರ್ತಾಪತ್ರಿಕೆ.

ನರರ ಕುಲಗಳೊಳಾರ್ಯವಂಶವು, । ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೭ ಮಂಗಳೂರು ೧೯೩೬ನೇ ಇಸವಿ ಜನವರಿ ತಾರೀಕು ೧೪ನೇ ಮಂಗಳವಾರ ಸಂಚಿಕೆ ೪೧.

ಅಮೃತಾಂಜನ

(Regd.)

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯವ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ.

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಅಮೃತಾಂಜನ

TO INSURE
OR
TO REPRESENT

CONSULT

The Bombay Life Assurance Co., Ltd.

ESTD. 1908.

OFFERS

(1) Attractive schemes of Assurance to suit individual needs.
(2) Rebate for yearly payment of premiums.
(3) Additional Rebate for larger Assurances.
(4) Permanent Disability Benefits without extra.
(5) Increased rate of Bonuses.
(6) Accident Risk on a small extra payment.

ATTRACTIVE RATES OF COMMISSION & BONUSES TO AGENTS.

*For particulars apply to any of our offices:—*

KOCHIKAR BROTHERS,
*BRANCH SECRETARIES.*

| Offices at | P. B. 337 Mount Rd. Madras. | Visveswarapuram Circle Bangalore City. | Huzur Rd. Calicut. | Car Street Mangalore. | Udipi S. India. | Charni Rd. Girgaum Bombay No. 4. |
|---|---|---|---|---|---|---|

ಅಮಲ್ದಾರ್ ರಾಮಕೃಷ್ಣರಾಯರು ಹಜಾರದಲ್ಲಿ ಬಂದು ಆರಾಮಕುರ್ಚಿಯಲ್ಲಿ ಕುಳಿತವರಾಗಿ 'ಲೋ, ಸಿದ್ಧಾ!' ಎಂದು ಕರೆದರು. ತಕ್ಷಣ ಬೀದಿಯ ಬಾಗಿಲಿನಿಂದ ಡವಾಲಿಯನ್ನು ಧರಿಸಿದ ಒಬ್ಬ ಸೇವಕನು ಅಲ್ಲಿಗೆ ಓಡಿ ಬಂದು ಕೈಕಟ್ಟಿ ಕೊಂಡು ನಿಂತುಕೊಂಡು, 'ಅಪ್ಪಣೇ ಬುದ್ಧಿ,' ಎಂದನು.

ರಾಮು,—'ಒಳಗೆ ಹೋಗಿ ಅಮ್ಮಾವರನ್ನು ಕರೆದೆನೆಂದು ಹೇಳು,' ಎನಲು, ಸೇವಕನು ಒಳಗೆ ಹೋದನು. ನಿತ್ಯವೂ ಮೋಟಾರ್ ಸೈಕಲ ಶಬ್ದನನ್ನು ಕೇಳಿದೊಡನೆಯೇ ಬೀದಿಯಲ್ಲಿ ಬಂದು ನಿಂತುಕೊಂಡು ನಸುನಗುತ್ತಲಿದ್ದ ಲಲಿತೆಯು ಈ ದಿವಸವೆಲ್ಲಿ ಕಾಣಲಿಲ್ಲವಲ್ಲಾ? ಅವಳು ಕೇಳಿದ್ದ ಹೊಸ ಚಿನ್ನದ ಸರಪಣಿಯೂ ಸಹಾ ನಿನ್ನೆ ಮಾಡಿ ಬಂದುಬಿಟ್ಟಿತಲ್ಲಾ? ಅವಳಿಗಿನ್ನೇನು ಕೋಪವಿರಬಹುದು? ಎಂಬುದಾಗಿ ಅಮಲ್ದಾರರು ಯೋಚಿಸುತ್ತಿರಲು ಲಲಿತೆಯು ಕೋಪಾಧಿಕ್ಯಳಾಗಿ, 'ಯಾಕಂತೆ ಕರದದ್ದು?' ಎಂದು ಕೇಳುತ್ತಾ ಹಜಾರವನ್ನು ಪ್ರವೇಶಿಸಿದಳು.

ರಾಮು—'ಏನೂ ವಿಶೇಷವಿಲ್ಲ. ಸುಮ್ಮನೇನೇ ಕರೆದೆ. ಏಕೆ? ಮೈಸರಿಯಾಗಿಲ್ಲವೇನು? ಹ್ಯಾಗೋ ಇರುವಿಯಲ್ಲ?'

ಲಲಿತೆ, 'ನಾನು ಹ್ಯಾಗಿದ್ದರೆ ನಿನ್ನನ್ನು ಕೇಳುವವರಾರು? ನನ್ನ ಕಷ್ಟಸುಖಗಳನ್ನು ಕಂಡು ಕರಗುವ ತಂದೆತಾಯಿಗಳಂತೂ ಮೊದಲೇ ಕಣ್ಣು ಮುಚ್ಚಿಕೊಂಡದ್ದಾಯಿತು,' ಎಂದು ಹೇಳಿ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ತಕ್ಷಣ ರಾಮಕೃಷ್ಣನು ತನ್ನ ಜಾಗದಿಂದೆದ್ದು ಲಲಿತೆಯನ್ನು ಒಂದು ಕೊಠಡಿಗೆ ಕರೆದುಕೊಂಡು ಹೋಗಿ, 'ಲಲಿತಾ, ನಿನಗೆ ಹಿಂಸೆಕೊಟ್ಟವರಾರು? ನನಗೆ ಹೇಳಿದರೆ ಈ ಕ್ಷಣ ಅವರನ್ನು ದಂಡಿಸುವೆನು. ನನ್ನ ಪ್ರೇಮಮಯಿಯು ಕಷ್ಟಕ್ಕೊಳಗಾದ್ದರೆ ನಾನು ನೋಡಿ ಸಹಿಸಲಾರೆ' ಎಂದು ಹೇಳುತ್ತಾ ತನ್ನ ಕೈವಸ್ತ್ರದಿಂದ ಆಕೆಯ ಕಣ್ಣುಗಳನ್ನು ಪ್ರೇಮದಿಂದ ತೊರೆಸಿದನು.

ಲಲಿತೆ, 'ನನ್ನ ತೌರುಮನೆಯ ಬಾಂಧವ್ಯದಲ್ಲಿ ನನ್ನ ತಮ್ಮ ನೊಬ್ಬನು ನನಗಿರುವುದು ಎಲ್ಲರ ಕಣ್ಣನ್ನೂ ಚುಚ್ಚುತ್ತದೆ. ಪಾಪ, ಮಗು ರಜದಲ್ಲಿ ಅಕ್ಕನನ್ನು ನೋಡಬೇಕೆಂದು ಬಂದರೆ, ಅವನನ್ನು ಬಾಯಿಗೆ ಬಂದಂತೆ ಕಂಡಕಂಡ ಮಾತುಗಳನ್ನಾಡಿದರೆ ನಾನು ಸಹಿಸಲಾರೆ,' ಎಂದು ಕಂಪಿತ ಸ್ವರದಲ್ಲಿ ಹೇಳುತ್ತಾ ಅಳುವನ್ನು ಮತ್ತಷ್ಟು ಹೆಚ್ಚಿಸಿದಳು. (ಪರಮಾತ್ಮನೇ, ಇಂತಹ ಸುಳ್ಳು ಮಾತುಗಳನ್ನಾಡುವ, ನಿರಪರಾಧಿಗಳ ಮೇಲೆ ಅಪವಾದವನ್ನು ಹೊರಿಸತಕ್ಕಂತಹ ಪಾಪಿಗಳನ್ನು ಏಕೆ ಈ ಪ್ರಪಂಚದಲ್ಲಿ ಸೃಷ್ಟಿಸಿರುವೆ?) ಲಲಿತೆಯ ಮಾತುಗಳನ್ನು ದೈವವಾರ್ತೆಯೆಂದು ನಂಬಿದ ರಾಮಕೃಷ್ಣನು 'ನನ್ನ ಚಿನ್ನ, ನನ್ನ ರನ್ನ, ನಮ್ಮ ಮನೆಗೆ ಬಂದಿರುವ ನಿನ್ನ ತಮ್ಮನನ್ನು ಯಾರಿಗೆ ಬೈಯುವುದಕ್ಕೆ ನ್ಯಾಯ ಉಂಟು? ಅದು ಯಾರೆಂಬುದನ್ನು ಸ್ವಲ್ಪ ಹೇಳಮ್ಮಾ, ಅವರನ್ನು ತಕ್ಷಣ ತರಿಸಿ ಖಂಡಿಸುವೆನು' ಎಂದಳು.

ಲಲಿತೆ, 'ಎಲ್ಲವೂ ನಿಮ್ಮ ಪ್ರೀತಿಪಾತ್ರನಾದ ತಮ್ಮನ ಕೆಲಸವೇ. ಮಧ್ಯಾಹ್ನ ಯಾತಕೊ ಮಗುವನ್ನು 'ಕತ್ತು ಹಿಡಿದು ನೂಕುತ್ತೇನೆ ನೋಡು' ಎಂದೂ ಸಹಾ ಬಂದು ಬಿಟ್ಟನಂತೆ. ನೂರುನೂರಾಗಿ ಲೆಕ್ಕವಿಲ್ಲದಷ್ಟು ಹಣವನ್ನು ಖರ್ಚುಮಾಡಿ ಓದಿಸಿದ ಫಲವನ್ನು ನೋಡೀಂದ್ರೆ,' ಎಂದು ಹೇಳುತ್ತಾ ಕಣ್ಣುಗಳನ್ನು ಹಿಸಿಕಿಕೊಂಡು ಕಣ್ಣೀರನ್ನು ಬರಮಾಡಿಕೊಂಡಳು.

ತಕ್ಷಣ ರಾಮಕೃಷ್ಣರಾಯರ ಕಣ್ಣುಗಳು ಕೆಂಪಗಾದವು. ಅಟ್ಟಹಾಸವಾಗಿ 'ಲೋ ಸಿದ್ಧಾ ಸಿದ್ಧಾ, ಜಯಚಂದ್ರನನ್ನು ನಾನು ಕರೆದುದಾಗಿ ಹೇಳಿ ಕರೆದುಕೊಂಡು ಬಾ,' ಎಂದು ಕೂಗಿದನು. ಅಣ್ಣನ ಮಕ್ಕಳನ್ನು ತೋಟದಲ್ಲಿ ಆಟವಾಡಿಸುತ್ತಿದ್ದ ಜಯಚಂದ್ರನು ತನ್ನ ತಂದೆಯ ಸಮಾನನಾಗಿದ್ದ ರಾಮಕೃಷ್ಣರಾಯರ ಮಾತಿಗೆ ಒಂದು ನಿಮಿಷವೂ ತಡೆಯಾಗದಂತೆ ಚಿಕ್ಕ ಮಗುವಾದ ಶ್ರೀಧರ ಮೂರ್ತಿಯನ್ನು ಕಂಕುಳಲ್ಲಿ ಎತ್ತಿಕೊಂಡು, ಎಂಟು ವರ್ಷದ ಹುಡುಗಿಯಾದ ಸಾವಿತ್ರಿಯನ್ನು ಬಲಗೈಯಲ್ಲಿ ಹಿಡಿದು ಕೊಂಡು ನಡೆಸುತ್ತಾ ಶ್ರೀರಾಮಚಂದ್ರರ ತಮ್ಮನಾದ ಲಕ್ಷ್ಮಣನ ಗುಣವಿಶೇಷಗಳನ್ನು ಹೊಂದಿದ ನಮ್ಮ ಕಥಾನಾಯಕನು ತನ್ನ ಅಣ್ಣನಿದ್ದೆಡೆಗೆ ಬಂದನು.

ಅವನನ್ನು ಕಂಡ ರಾಮಕೃಷ್ಣರಾಯರು ತನ್ನ ಹೆಂಡತಿಯ ದುರ್ಬೋಧನೆಯಿಂದುಂಟಾದ ಸಿಟ್ಟಿನೊಡನೆ, 'ಲೋ, ದುಷ್ಟ, ನನ್ನ ಮಕ್ಕಳನ್ನು ನೀನು ಮುಟ್ಟಬೇಡ, ತಕ್ಷಣ ಕೆಳಗೆ ಬಿಡು. ನನ್ನ ಮನೆಗೆ ಬಂದವರನ್ನು ಬೈಯುವುದಕ್ಕೆ ನೀನ್ಯಾರೊ? ನಾನೂ ಇದುವರೆವಿಗೆ ತಮ್ಮನಲ್ಲಾ ಎಂದು ನಿನ್ನ ದುರ್ನಡತೆಗಳನ್ನು ಕೇಳಿ ಕೇಳಿಯೂ ಸುಮ್ಮನಿದ್ದೆನು. ನನ್ನನ್ನು ಕಡೆರೆ ಪೆಟ್ಟಿಗೆಯೊಳಗೆ ಅಡಗಿಸಿದ ಹಾವಿನಂತೆ ಇರುತ್ತೀ! ಮಿಕ್ಕ ಹೊತ್ತಿನಲ್ಲಿ ಅಟ್ಟಹಾಸ ಮಾಡುತ್ತೀ. ಈ ಕ್ಷಣ' ನಮ್ಮ ಮನೆಯನ್ನು ಬಿಟ್ಟು ಹೊರಡು,' ಎಂದು ಗದರಿಸಿದನು. ತನ್ನ ಪ್ರೀತಿಯುಳ್ಳ ಚಿಕ್ಕಪ್ಪನ ಸೊಂಟದಿಂದ ಇಳಿದ ಕೂಡಲೇ ಶ್ರೀಧರನು ಬಿಕ್ಕಿಬಿಕ್ಕಿ ಅಳಲಾರಂಭಿಸಿದನು. ಸಾವಿತ್ರಿಯು ಅವನ ಕಾಲುಗಳನ್ನು ಕಟ್ಟಿಕೊಂಡು ನಿಂತಿರಲು, ಲಲಿತೆಯು ಅವಳನ್ನು ದರದರನೆ ತನ್ನ ಹತ್ತಿರಕ್ಕೆ ಎಳೆದುಕೊಂಡಳು.

3, 31-12.

**ಈ ವಾರದ ಕಥೆ—**

# ಜಯಚಂದ್ರ.

**(ಶ್ರೀಮತಿ ಎಸ್. ಆರ್. ಜಯಲಕ್ಷ್ಮೀ, ಮೈಸೂರು.)**

ಈ ವಾರ್ತೆಗಳನ್ನು ಕೇಳಿ ದಿಗ್ಭ್ರಮಿತನಾಗಿ ಜಯಚಂದ್ರನು ತನ್ನ ಅಣ್ಣನ ಹತ್ತಿರದಲ್ಲಿ ವಿನಯದೊಡನೆ 'ಅಣ್ಣಾ, ಅಣ್ಣಾ, ಒಂದು ತಪ್ಪಿತವನ್ನೂ ಮಾಡದವನನ್ನು ತೊಲಗಿಸಬೇಡ! ನನಗೆ ಈ ಭೂಮಿಯಲ್ಲಿ ಒಂದೇ ಬಂಧುವಾದ ನಿನ್ನನ್ನು ಬಿಟ್ಟಿರಲು ನನ್ನ ಮನಸ್ಸು ಒಪ್ಪಲಾರದು. ವಿಷಯವನ್ನು ಸರಿಯಾಗಿ ಪರಿಶೀಲಿಸಿ ನೋಡು,' ಎಂದು ಬೇಡಿದನು. ಆದರೆ ಕಲ್ಲಿಗಿಂತ ಕಠಿಣವಾದ ರಾಮಕೃಷ್ಣರಾಯರ ಹೃದಯವು ಕರಗದೇ ಹೋಗಲು, ಜಯಚಂದ್ರನು ಬಹು ವ್ಯಸನಾಕ್ರಾಂತನಾಗಿ ತನ್ನ ಸಾಮಾನುಗಳನ್ನೆತ್ತಿಕೊಂಡು ಮನೆಯನ್ನು ಬಿಟ್ಟು ಹೊರಟನು. ಇದೆಲ್ಲವನ್ನು ಮರೆಯಾಗಿ ಅವಿತುಕೊಂಡು ಗಮನಿಸುತ್ತಿದ್ದ ಲಲಿತೆಯ ತಮ್ಮನಾದ ಸುಬ್ಬುವು ಅವನ ಹಿಂದೆ ಹೋಗಿ ಕೈತಟ್ಟಿ 'ಹೀ, ಹೀ,' ಎಂದು ಗಟ್ಟಿಯಾಗಿ ನಗಲು ಜಯಚಂದ್ರನ ದುಃಖಕ್ಕೆ ಮಿತಿಯಿಲ್ಲದಂತಾಯಿತು.

* * * * *

ಜಯಚಂದ್ರನು ತನ್ನ ಮುಂಜಿಯಲ್ಲಿ ತನ್ನ ಕಾಲವಾಗಿ ಹೋದ ಸೋದರ ಮಾವನು ಮಾಡಿ ಹಾಕಿದ್ದ ಕೆಂಪು ಕಲ್ಲು ಹೂತಿದ್ದ ಉಂಗುರವನ್ನು ಮಾರಿ ಬಂದ ಮೂವತ್ತು ರೂಪಾಯಿಗಳನ್ನಿಟ್ಟುಕೊಂಡು ಊಟಕ್ಕೆ ಖರ್ಚು ಮಾಡಲು ತೊಡಗಿದನು. ಎಲ್ಲೆಲ್ಲಿ ಯಾವ ಯಾವ ಆಫೀಸುಗಳಲ್ಲಿ ಕೆಲಸ ಖಾಲಿಯಿದೆ ಎಂದು ತಿಳಿಯಿತೋ ಅಲ್ಲಿಗೆಲ್ಲಾ ಅಪ್ಲಿಕೇಷನ್ ಹಾಕುವುದರಲ್ಲಿಯೇ ಅವನಿಗೆ ೭-೮ ರೂಪಾಯಿಗಳು ಖರ್ಚಾಗಿ ಹೋದವು. ಕಟ್ಟಕಡೆಗೆ ಬೆಂಗಳೂರಿನ ದಂಡಿನಲ್ಲಿ ಒಂದು ಲೈಫ್ ಇನ್ಶೂರೆನ್ಸ್ ಕಂಪೆನಿಯಲ್ಲಿ ೪೦ ರೂಪಾಯಿ ಸಂಬಳದಲ್ಲಿ ಒಂದು ಕೆಲಸವು ಸಿಗಲು, ಅದರಲ್ಲಿ ಹೋಗಿ ಸೇರಿಕೊಂಡನು. ಅವನಿಗೆ ಹೋದ ವರ್ಷ ತಾನೆ ಬಿ. ಎಸ್. ಸಿ. ಆನರ್ಸ್ನ ಪಾರ್ಟ್ ಆಯಿತು. ಪಾಪ, ವಯಸ್ಸಿನಲ್ಲೂ ೧೯ ತುಂಬಿರಲಾರದು. ಅಣ್ಣನ ಮನೆಯಲ್ಲಿದ್ದುಕೊಂಡು ಕೆಲಸ ಹುಡುಕುತ್ತಲಿದ್ದನು. ಅವನ ಬಾಲ್ಯದಲ್ಲಿಯೇ ತಂದೆಯು ತೀರಿಹೋದರು. ಹೋದ ವರ್ಷ ತಾಯಿಯನ್ನೂ ಕಳೆದುಕೊಂಡನು. ಅವನಂತಹ ಸದ್ಗುಣ ಶೀಲರೂ, ರೂಪಲಾವಣ್ಯಗಳುಳ್ಳವರೂ ಬಹಳ ವಿರಳವೇ.

ಜಯಚಂದ್ರನಿಗೆ ಕೆಲಸವಾದ ಕೂಡಲೇ ಒಳ್ಳೆಯ ಜಾಗಗಳಿಂದ ಮದುವೆಗೆ ಹೆಣ್ಣುಗಳು ಬಂದವು. ಆದರೆ ತನ್ನ ಬಡವಳಾದ ಸೋದರತ್ತೆಯ ಮಗಳಾದ ವಿಮಲೆಯ ಸದ್ಗುಣ ಸೌಂದರ್ಯಗಳನ್ನು ಕಂಡು ಜಯಚಂದ್ರನು ಬೆರಗಾಗಿ, ಅವಳನ್ನೇ ಪ್ರೀತಿಸಿದವನಾಗಿ, ಧನದೊಂದಿಗೆ ಬಂದ ಅನೇಕ ಒಳ್ಳೆಯ ಹುಡುಗಿಯರನ್ನು ಬಿಟ್ಟು, ಬಡ ಹುಡುಗಿಯಾದ ವಿಮಲೆಯನ್ನೇ ಮದುವೆಯಾದನು. ವಿಮಲೆಯ ತಾಯಿತಂದೆಯರು ತಮ್ಮ ಮೊದಲ ಮೂರು ಹುಡುಗಿಯರಿಗೆ ನೂರು ರೂಪಾಯಿಗಳು ವರದಕ್ಷಿಣೆ ಕೊಟ್ಟು ಮದುವೆ ಮಾಡಿದ ಸಾಲವನ್ನೇ ತೀರಿಸಲಾಗದೆ ಇರಲು, ವಿಮಲೆಯು ವಿವಾಹವಯಸ್ಕಳಾದುದನ್ನು ಕಂಡು ಭೀತಿಗೊಳ್ಳಲು, ಸಮಯಸಂಜೀವಿಯಂತೆ ಹಣ ಕಾಸು ಖರ್ಚಿಲ್ಲದೆ ಜಯಚಂದ್ರನು ತನ್ನ ಮಗಳನ್ನು ಮದುವೆಯಾಗಲು ಒಪ್ಪಿದುದನ್ನು ಕಂಡು ಅತ್ಯಾನಂದಗೊಂಡು ಅಳಿಯನನ್ನು ಹಲವು ತರಹಗಳಲ್ಲಿ ಹೊಗಳಿದರು. ಜಯಚಂದ್ರನು ತನ್ನ ಅಣ್ಣನ ತಪ್ಪಿತವನ್ನು ಮರೆತು ಮದುವೆಗೆ ಬರುವಂತೆ ಅಣ್ಣನಿಗೆ ಕಾಗದವನ್ನು ಬರೆದರೂ ಕೂಡ, ಅಣ್ಣನಿಂದ ಅವನಿಗೆ ಉತ್ತರವೂ ಸಹ ಬರಲಿಲ್ಲ.

* * * * *

ಹೀಗಿರಲು ಒಂದು ದಿನ ವಿಮಲೆಯು ತನ್ನ ಮನೆಯ ಕೆಲಸಕಾರ್ಯಗಳನ್ನೆಲ್ಲವೂ ಮುಗಿಸಿಕೊಂಡು ತನ್ನ ಪುಟ್ಟ ಮನೆಯಲ್ಲಿ ನಿರ್ಮಲವಾಗಿದ್ದ ಒಂದು ಕೊಠಡಿಯಲ್ಲಿ ಎಲೆಕ್ಟ್ರಿಕ್ ದೀಪವನ್ನು ಹಚ್ಚಿಕೊಂಡು ವೃತ್ತಾಂತ ಪತ್ರಿಕೆಯನ್ನು ಓದುತ್ತಿ

(೬ನೇ ಪುಟಕ್ಕೆ ಮುಂದರಿಸಿಯದೆ)


"ಸಿಟಿಜನ್" ವಾಚುಗಳನ್ನು ಉಪಯೋಗಿಸುವ ಮೂಲಕ,
ಕಾಲಕ್ಕೆ ತಕ್ಕಂತೆ ನಡೆದುಕೊಳ್ಳಿ.

ಈ ವಾಚುಗಳನ್ನು ಪ್ರಥಮತಃ ಪ್ರವೇಶಗೊಳಿಸಿದಾಗ ಅವು ಇದ್ದ ಸ್ಥಿತಿಗಿಂತಲೂ, ಈಗಿನ ಪರಿಸ್ಥಿತಿಯು ಬಹಳ ಬದಲಾವಣೆಗಳನ್ನು ಹೊಂದಿದೆ. ಅವು ಆಧುನಿಕ ರೀತಿಗೊಪ್ಪುವಂತೆ ಬಹಳವಾಗಿ ಸುಧಾರಿಸಲ್ಪಟ್ಟಿವೆ. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹೆಚ್ಚು ಶಿಫಾರಸು ಮಾಡಲ್ಪಟ್ಟಿವೆ. "ಜುವೆಲ್"ಗಳಿರುವ "ಲಿವರ್" ಚಲನ; ಒಳ್ಳೇ "ಪಾಲಿಶ್" ಇರತಕ್ಕದ್ದು; ಯಂತ್ರಭಾಗಗಳು ಮುರಿಯತಕ್ಕುದಲ್ಲ. ಕ್ರೋಮಿಯಮ್ ಕೇಸ್, ಚರ್ಮದ ಕೈಪಟ್ಟಿ ಮತ್ತೂ ಪೆಟ್ಟಿಗೆಗಳಿಂದ ಕೂಡಿರತಕ್ಕದ್ದು.



"ಲಿವರ್" ಚಲನ
10½" ಸ್ಯಾಜಿನ ಲೆನ್ಸ್
ಕ್ರೋಮಿಯಮ್ ಕೇಸ್–ರೂ. 14-0-0.

"ಲಿವರ್" ಚಲನ
10½" ಸ್ಯಾಜಿನ ಲೆನ್ಸ್
ಹಾರ್ನ್ ಕುಣಿಕೆ, ಕ್ರೋಮಿಯಮ್ ಕೇಸ್–ರೂ. 15-0-0.





"ಲಿವರ್" ಚಲನ
10½" ಸ್ಯಾಜಿನ ಕುಶನ್ ಆಕಾರದ ಕ್ರೋಮಿಯಮ್ ಕೇಸ್–ರೂ. 17-0-0.

"ಲಿವರ್" ಚಲನ
10½" ಸ್ಯಾಜಿನ ಸ್ಕ್ರೂ ಬೆಸಲ್ ಮತ್ತೂ ಹಿಂಭಾಗದ ಕ್ರೋಮಿಯಮ್ ಕೇಸ್–ರೂ. 17-0-0.



ಪ್ಯಾಕಿಂಗ್ ಮತ್ತೂ ಪೋಸ್ಟೇಜ್ ಪ್ರತ್ಯೇಕ.

ಜಲಾಲ್ ಎಂಡ್ ಸನ್ಸ್,

ಗವರ್ನಮೆಂಟ್ ಮತ್ತೂ ರೈಲ್ವೆಗಳಿಗೆ ಒದಗಿಸಿ ಕೊಡುವವರು,
ಹೆಡ್ ಆಫೀಸು:— K. 46, ರತನ್ ಬಜಾರ್, — ಶಾಖೆ:— 190, ಬಿ. ಮೌಂಟ್ ರೋಡ್,
ಮದ್ರಾಸು.

# ಈಸ್ಟ್ ಏಂಡ್ ವೆಸ್ಟ್
## ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
**1913.**

**ಕಂದ ಪದ್ಯ.**

ಗಳಿಸಿದ ಧನವನು ಮಾನವ ।
ರುಳಿಸುವಂತೆ ಭದ್ರದ ವಸ್ತು ದೊರಕಿತು ನಿಮಗೆ ।
ತಲೆಯಾಂತರ ನಿಮ್ಮವರ ।
ಪಲವಿಧ ರಕ್ಷಿಪುದುತ್ತಮುದೀ ಕಂಪೆನಿಯೂ ॥ ೧ ॥
ತೆರುವ ಹಣವು ಪ್ರೀಮಿಯಮಿನ ।
ಎರಡೂವರೆಯಂತೊಂದು ವರುಷಕೆ ಶೇಕಡಕೆ ॥
ದರ ತಗ್ಗಿಸಿದರು ಮರೆಯದೆ ।
ಪರಮಾಪ್ತರು ವಿಮಾದಾರರಾಗಿರಿ ಮುದದಿ ॥ ೨ ॥
ಪೂರ ಜೀವಮಾನದ ವಿಮೆ ।
ಕಾರಣದುಂಬಳಿ ವಿಮೆಗಳ ಲಾಭವು ಪದಿನೈದ ॥
ಸೇರಿಸಿ ಧನವನು ಕೊಡುವೆವು ।
ಪೂರಿತ ಸಂಗತಿ ತಿಳಿಯಿರಿ ವಿಳಾಸಕೆ ಬರೆದು ॥ ೩ ॥
ಕಡು ಸಾಹಸದಿಂ ಸಿರಿಯುತ ।
ಪಡೆಬಿದರೆ ಸಹೋದರರೆನ್ನುವ ನವತರುಣರು ॥
ಬಿಡದೀ ಕಂಪೆನಿಯೊಳು ಬಲು ।
ದುಡಿಯುತ ಪ್ರಾಮುಖ್ಯದ ಕೆಲಸವನು ವಹಿಸಿ ದರು॥೪ ॥

ಕಂಪೆನಿಯ ವಿಳಾಸ:—

ಷಡುಬಿದ್ರಿ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಕರ್ನಾಟಕ ಮತ್ತು ಮಹಾರಾಷ್ಟ್ರ
40, ನಾರಾಯಣಲಾಲ್ ಬನ್ಸಿಲಾಲ್ ಭವನ,
ಬೆಲಾಸಿಸ್ ರೋಡ್,
ಮುಂಬಯಿ ನಂಬ್ರ 8.



# ಉನ್ಮಾದ ರೋಗಕ್ಕೆ
## ಅತ್ಯುತ್ತಮ ಔಷಧ.
**(ಹುಚ್ಚು ರೋಗಕ್ಕೆ ಕೈಕಂಡ ಮದ್ದು).**

ರೋಗವು ಎಷ್ಟೇ ಘೋರವಾಗಿರಲಿ, ಎಷ್ಟೇ ಹಳೆಯದಾಗಿರಲಿ, ನಮ್ಮ ಔಷಧದ ಉಪಯೋಗದಿಂದ ಖಂಡಿತವಾಗಿ ಗುಣವಾಗುವುದು. ಒಂದೇ ವಾರದ ಉಪಯೋಗದಿಂದ ರೋಗವು ಹಿಮ್ಮೆಟ್ಟುವುದು. ಅಪಸ್ಮಾರ, ಹಿಸ್ಟೀರಿಯಗಳೂ ಶಾಂತಿ ಹೊಂದುವುವು.

ವಾರದ ಔಷಧಕ್ಕೆ ಕ್ರಯ ರೂ. 3—8—0.

ಮಾಳ ನಾರಾಯಣ ಭಟ್ಟ, ವೈದ್ಯ,
'ಸಿದ್ಧೌಷಧ ಭವನ', ಪಡ್ಡೂರು ಗ್ರಾಮ,
ಪೋಸ್ಟು ವಿಟ್ಲ, ದ. ಕನ್ನಡ.



**ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ**

# ಹಾರ್ಮೋನಿಯಂ ಶಿಕ್ಷಕ

**ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನ್ ಹಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.**
**ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.**
**ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.**

**B. V. PHATAK.**
**Fort, MIRAJ (S.M C.)**



## JAYA LAXMI BANK, LTD.,
MANGALORE.

## ಜಯಲಕ್ಷ್ಮೀ ಬೇಂಕ್, ಲಿಮಿಟೆಡ್.,
## ಮಂಗಳೂರು.

**ಶಾಖೆಗಳು:— ಪುತ್ತೂರು, ಕಾಸರಗೋಡು.**

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

**ಕಾಯಂ ಠೇವಣಾತಿಗಳು.**

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

**ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.**

M. GANESH RAO,
ಸೆಕ್ರೆಟರಿ.



# ಶುಭ್ರ ಪ್ರಕಾಶ-ದೀರ್ಘ ಬಾಳಿಕೆ

ಯು. ಎಸ್. ಎ. ಯಲ್ಲಿ ತಯಾರಾದ್ದು.



# REPUTATION.

A Bank's reputation is not gained from the magnificence of its building nor from the elegance of its glittering fixtures.

True reputation is gained only through public knowledge of the high character and ability of its management and often high ideals of service to the community. For about a decade the Central Bank has enjoyed a reputation for efficient management, sound banking principles and careful yet liberal policies.

To maintain this reputation every effort is made to give to all transactions large or small a sympathetic consideration and extend the most liberal courtesies consistent with sound banking practice.

The entire facilities of the Central Bank are yours to command.

## THE CENTRAL BANK LIMITED,
(INCORPORATED IN TRAVANCORE)
**Bunder Road,** **MANGALORE.**



# ಅಶೋಕ

**ಬೋನಸ್**
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

**ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.**

ಗುಜರಾಥಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಚೋಡ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜಿ. ಎಸ್. ಮರಾಠೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಆನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚಿದರೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

**ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:**

## THE ASHOK INSURANCE CO., LTD.,
**9, Forbes Street, Fort, BOMBAY.** **Raikhad, AHMEDABAD.**

ಅಥವಾ
ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
**ನಾಥ ಬ್ರದರ್ಸ್,** 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.



## ವಾರವಾರವೂ ತಪ್ಪದೆ
# 'ಕಂಠೀರವ' ಪತ್ರಿಕೆಯನ್ನು ಓದಿರಿ.

ಬಿಡಿ ಸಂಚಿಕೆ ಬೆಲೆ ಆಣೆ ೦—೧—೦. ಎಲ್ಲೆಲ್ಲಿಯೂ ಸಿಗುತ್ತದೆ.

(೪ನೇ ಪುಟದಿಂದ)

ದ್ದಳು. ಆದರೆ ಅವಳು ಕೈಯಲ್ಲಿ ಸುಮ್ಮನೆ ಪತ್ರಿಕೆಯನ್ನು ಹಿಡಿದುಕೊಂಡಿದ್ದಳೇ ವಿನಹ ಅವಳ ಮನಸ್ಸೆಲ್ಲವನ್ನೂ ತನ್ನ ಪತಿಯ ಮೇಲಿಟ್ಟಿದ್ದಳು. ಈ ದಿನ ರಾತ್ರೆ ೯ ಘಂಟೆ ಆಯಿತಾದರೂ ಕೂಡ ತನ್ನ ಪತಿಯು ಏಕೆ ಇನ್ನೂ ಮನೆಗೆ ಬಂದಿಲ್ಲವಲ್ಲಾ ಎಂದೂ, ಅವರಿಗೇನು ವಿಪತ್ತು ಒದಗಿರಬಹುದೋ ಎಂದೂ ಹಲವು ತರಹದಲ್ಲಿ ಚಿಂತಿಸುತ್ತಿದ್ದಳು. ಎಲ್ಲಿಂದಲಾದರೂ ಸ್ವಲ್ಪ ಶಬ್ದವು ಕೇಳಿ ಬಂದರೂ ಕೂಡ ತನ್ನ ಪತಿಯು ಬೀದಿಯ ಬಾಗಿಲನ್ನು ತಟ್ಟುತ್ತಿದ್ದಾರೆಯೇ ಎಂದು ಅಡಿಗಡಿಗೆ ಬೀದಿಯ ಬಾಗಿಲನ್ನು ನೋಡುತ್ತಾ ಓದುತ್ತಿದ್ದಳು. ಘಂಟೆ ೯॥ ಯಾದ ನಂತರ ಬೀದಿಯ ಬಾಗಿಲು ತಟ್ಟಲ್ಪಡುತ್ತಾ 'ವಿಮಲಾ, ವಿಮಲಾ' ಎಂಬ ಪ್ರೇಮಭರಿತವಾದ ಧ್ವನಿಯು ಕೇಳ ಬರಲು, ಅಂದು ಅರಳಿದ ಗುಲಾಬಿ ಹೂವಿನಂತಹ ವದನವನ್ನು ಹೊಂದಿದ ವಿಮಲೆಯು ಆನಂದದೊಡಗೂಡಿ ನಸುನಗುತ್ತಾ, ಪತ್ರಿಕೆಯನ್ನು ಅಲ್ಲೇ ಇಟ್ಟು, ಓಡಿ ಹೋಗಿ ಕದವನ್ನು ತೆರೆದಳು.

ಜಯಚಂದ್ರನು, 'ವಿಮಲಾ, ಇಷ್ಟು ಹೊತ್ತು ಪಾಪ ಹೆದರುತ್ತಿದ್ದಿ ಏನು? ಮುಖವು ಬಾಡಿರುವುದಲ್ಲಾ?' ಎಂದು ಅವಳ ಕೈಯಲ್ಲಿ ಕುಲಾವಿಯನ್ನೆತ್ತಿ ಕೊಟ್ಟು ತಾನು ಉಡುಪನ್ನು ಬದಲಾಯಿಸಲಾರಂಭಿಸಿದನು.

ವಿಮಲೆಯು ಹಸನ್ಮುಖದೊಡನೆ, 'ಏಕೆ ಈ ದಿವಸ ಮನೆಗೆ ಬರುವುದಕ್ಕೆ ಇಷ್ಟು ಹೊತ್ತು ಮಾಡಿದಿರಿ? ತಮಗೆ ಏನು ವಿಪತ್ತು ಹೊದಗಿತೋ ಎಂದು ನಾನು ಬಹಳ ಚಿಂತಿಸುತ್ತಿದ್ದೆನು.'

ಜಯಚಂದ್ರ—'ಹೋಗೆ ಹುಚ್ಚಿ, ನಿತ್ಯವೂ ಒಂದೇ ಸಮನಾಗಿರುತ್ತದೆಯೇನೇ? ಏನೋ ಕೆಲಸವಿರಬಹುದು, ಬರಲು ತಡವಾಯಿತೇನೋ ಎಂದಿರಬಾರದೆ? ಮುಟ್ಟಿದ್ದಕ್ಕೆಲ್ಲಾ ಹೀಗೆ ಚಿಂತಿಸಲಾರಂಭಿಸಿದರೆ ನಾವು ಸಂಸ್ಕಾರ ಮಾಡಿದಂತೆಯೇ! ಹೋಗಲ್‌ಬಾ, ಊಟ ಮಾಡೋಣ.'

ಜಯಚಂದ್ರನು ತನ್ನೊಡನೆ ತಂದಿದ್ದ ಒಂದು ದೊಡ್ಡ ಕಾಗದದ ಪೊಟ್ಟಣವನ್ನು ಕಂಡು ವಿಮಲೆಯು, 'ಇದೇನು ದೊಡ್ಡ ಪೊಟ್ಟಣ ಕಣ್ರೀ?' ಎಂದು ಪ್ರಶ್ನಿಸಿದಳು.

ಜಯಚಂದ್ರ—'ನಮ್ಮ ಆಫೀಸಿನ ಅಧಿಕಾರಿಗಳು ಯಾವುದೋ ಒಂದು ಅವಸರ ಕೆಲಸದ ನಿಮಿತ್ತವಾಗಿ ನನ್ನನ್ನು ನಾಳೆಯ ರಾತ್ರಿಯೇ ಕಲ್ಕತ್ತೆಗೆ ಹೋಗುವಂತೆ ಹೇಳಿರುವರು. ಅದಕ್ಕಾಗಿ ಊರಿಗೆ ಹೊರಡಲು ಆವಶ್ಯಕವಾದ ಬಟ್ಟೆಬರೆ ಮುಂತಾದ ಕೆಲವು ಸಾಮಾನುಗಳನ್ನು ಪೇಟೆಗೆ ಹೋಗಿ ಕೊಂಡು ಬಂದೆನು.'

ವಿಮಲೆ—'ಆದರೆ ತಾವು ಹಿಂತಿರುಗಿ ಬರಲು ಎಷ್ಟು ದಿನಗಳಾಗುವುದು?'

ಜಯಚಂದ್ರ—'ಸುಮಾರು ೨೦ ದಿವಸಗಳಾಗಬಹುದು. ನಾಳೆಯ ಬೆಳಿಗ್ಗಿನ ಗಾಡಿಯಲ್ಲಿಯೇ (ರೈಲು ಗಾಡಿ) ನಿನ್ನನ್ನು ಮೈಸೂರಿಗೆ ಕರೆದುಕೊಂಡು ಹೋಗಿ, ನಿಮ್ಮಮ್ಮನ ಮನೆಯಲ್ಲಿ ಬಿಟ್ಟುಬಿಟ್ಟು, ಮಧ್ಯಾಹ್ನ ೪ ಘಂಟೆಯ ಗಾಡಿಯಲ್ಲಿಯೇ ಇಲ್ಲಿಗೆ ಹಿಂತಿರುಗಿ ಬಂದು, ರಾತ್ರಿಯೇ ಕಲ್ಕತ್ತೆಗೆ ಪ್ರಯಾಣ ಮಾಡುವೆನು.'

ವಿಮಲೆ ಭಯಭರಿತಳಾಗಿ, 'ನಾನ್ಹಾಗಂದ್ರೇ, ನಿಮ್ಮನ್ನು ಅಷ್ಟು ದಿನಗಳು ಬಿಟ್ಟಿರಲು ಸಾಧ್ಯ?' ಎಂದು ಅವನ ಹತ್ತಿರಕ್ಕೆ ಜರುಗಿ ಅವನ ಕರಗಳನ್ನು ಹಿಡಿದುಕೊಂಡು ದೈನ್ಯದಿಂದ ಹೇಳಿದಳು.

ಜಯಚಂದ್ರನು ತನ್ನ ಪತ್ನಿಯನ್ನು ಬಹು ಪ್ರೇಮದೊಡನೆ ದೃಷ್ಟಿಸುತ್ತಾ, 'ವಿಮಲಾ, ನನ್ನ ಭಂಗಾರ, ನಿನ್ನನ್ನು ಬಿಟ್ಟಿರಲು ಮಾತ್ರ ನನ್ನ ಮನವೂ ಸಮ್ಮತಿಸುವುದೇನೇ? ಎಲ್ಲವೂ ಹೊಟ್ಟೆ ಹೊರೆದುಕೊಳ್ಳಲು ಕಷ್ಟಪಡಬೇಕಾಗಿದೆ ತಾಯಿ. ನನಗಾಗಿ ನನ್ನ ಪ್ರೇಮಮಯಿಯು ನನ್ನ ಅಗಲಿಕೆಯನ್ನು ಸಹಿಸಿಕೊಂಡಿರುವಳಲ್ಲವೇ?' ಎಂದು ಅವಳ ಬೆನ್ನನ್ನು ತಟ್ಟಿದನು. ನಂತರ ದಂಪತಿಗಳು ಊಟ ಮಾಡಲು ಸಂಭಾಷಿಸುತ್ತಲೇ ಹೊರಟುಹೋದರು.

* * * * *

ಮಾರನೇಯ ದಿವಸವೇ ಜಯಚಂದ್ರನು ಮುಂದಿನ ದಿವಸ ಹೇಳಿದಂತೆ ವಿಮಲೆಯನ್ನು ತೌರುಮನೆಗೆ ಕರೆತಂದು ಬಿಟ್ಟು ಬಿಟ್ಟು ತಾನು ಕಲ್ಕತ್ತೆಗೆ ಪ್ರಯಾಣ ಮಾಡಿದನು.

ಮೈಸೂರಿನ ವೀವರ್ಸ್ ಲೈಸ್ ಎಕ್ಸ್‌ಟೆನ್‌ಶನ್ನಿನಲ್ಲಿ ಒಂದು ಚಿಕ್ಕ ಮನೆಯ ಹಜಾರದಲ್ಲಿ ಮಧ್ಯಾಹ್ನ ಸುಮಾರು ೧೨ ಘಂಟೆಯ ಸಮಯದಲ್ಲಿ ಒಬ್ಬ ಮಧ್ಯವಯಸ್ಕಳಾದ ಹೆಂಗಸು ವೀಳ್ಯವನ್ನು ಹಾಕಿಕೊಳ್ಳುತ್ತಾ ಜಾಪೆಯ ಮೇಲೆ ಕುಳಿತಿರಲು, ಅವಳ ಹತ್ತಿರದಲ್ಲಿ ವಿಮಲೆಯು ಹೊಲಿಯುತ್ತಾ ಕುಳಿತಿದ್ದಳು. ಏಳೆಂಟು ದಿವಸಗಳಾಗಿ ತನ್ನ ಪತಿಯ ಹತ್ತಿರದಿಂದ ಕಾಗದವೇ ಬರಲಿಲ್ಲವಲ್ಲವೆಂದು ವಿಮಲೆಯು ಒಹಳವಾಗಿ ಚಿಂತಿಸುತ್ತಾ ಕುಳಿತಿದ್ದಳು. ಈಗ ಜಯಚಂದ್ರನು ಉತ್ತರ ದೇಶಕ್ಕೆ ಹೋಗಿ ಎರಡು ಮೂರು ತಿಂಗಳುಗಳಾಗುತ್ತಾ ಬಂದಿತು. ಹತ್ತು ದಿವಸಗಳಲ್ಲಿ ಬರುತ್ತೇನೆ, ಹದಿನೈದು ದಿವಸಗಳಲ್ಲಿ ಬರುತ್ತೇನೆ ಎಂದು ವಿಮಲೆಗೆ ಸಮಾಧಾನ ಕಾಗದಗಳು ಬರೆಯುತ್ತಲೇ ಇದ್ದನು. ವಿಮಲೆಯು ಚಿಂತಾಕ್ರಾಂತಳಾಗಿ ಹಗಲಿರುಳೂ ತನ್ನ ಪತಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದಳು. ಈಚಿಗೆ ಏಳೆಂಟು ದಿನಸಗಳಿಂದ ಜಯಚಂದ್ರನಿಂದ ಕಾಗದವೂ ಸಹ ಬಾರದೇ ಹೋಗಲು ವಿಮಲೆಗೆ ಮತ್ತಿಷ್ಟು ಯೋಚನೆಯು ಹತ್ತಿತ್ತು. ಆಗ ಬೀದಿಯ ಬಾಗಿಲನ್ನು ಯಾರೋ ತಟ್ಟಲು, ವಿಮಲೆಯು ಎದ್ದು ಹೋಗಿ ಕದವನ್ನು ತೆರೆದಳು. ಒಬ್ಬ ತಂತೀ ಜವಾನನು ಬಂದು ಇವಳ ಕೈಯಲ್ಲಿ ಒಂದು ಟೆಲಿಗ್ರಾಮನ್ನು ಕೊಡಲು, ವಿಮಲೆಯ ಗಾಬರಿಯು ಮತ್ತಿಷ್ಟು ಹೆಚ್ಚಾಗಿ ಗಡಗಡನೆ ನಡುಗಲಾರಂಭಿಸಿದಳು. ಬಹಳ ಶ್ರಮದೊಡನೆ ಅವನು ಕೊಟ್ಟ ಮತ್ತೊಂದು ಚೀಟಿಗೆ ಸಹಿ ಹಾಕಿ ಕೊಟ್ಟು, ಟೆಲಿಗ್ರಾಮನ್ನು ಬಿಚ್ಚಿ ಓದಲಾರಂಭಿಸಿದಳು. ಅದರಲ್ಲಿ ತನ್ನ ತಂದೆಯವರಿಗೆ ಹೀಗೆಂದು ಬರೆದಿರುವುದನ್ನು ನೋಡಿದಳು—

'ನನಗೆ ಕಲ್ಕತ್ತೆಯಲ್ಲಿ ಇನ್ನೂ ನಾಲ್ಕು ತಿಂಗಳುಗಳು ಕೆಲಸವಿರುವುದರಿಂದ ಬರುವ ಭಾನುವಾರ ಬಂದು ವಿಮಲೆಯನ್ನು ಕರೆತರುವೆನು.

ಜಯಚಂದ್ರ.'

ಎಂದಿತ್ತು. ತಕ್ಷಣ ವಿಮಲೆಯ ವದನವು ಅರಳಿಹೋಯಿತಲ್ಲದೆ ಆತ್ಯಾನಂದದೊಡನೆ ತನ್ನ ತಾಯಿಯ ಹತ್ತಿರದಲ್ಲಿ ಈ ಸಮಾಚಾರವನ್ನು ತಿಳಿಸಿದಳು.

* * * * *

ವಿಮಲಾಜಯಚಂದ್ರರು ಹತ್ತಿ ಬಂದ ಮೋಟಾರು ಕಲ್ಕತ್ತೆಯ ಒಂದು ವಿಶಾಲವಾದ ರಸ್ತೆಯ ಪಕ್ಕದಲ್ಲಿದ್ದ ಒಂದು ಸುಂದರ ಭವನದ ಎದುರಿಗೆ ಬಂದು ನಿಂತಿತು. ವಿಮಲೆಯು ಇದೆಲ್ಲವನ್ನೂ ಮೌನದೊಡನೆ ನೋಡಿ, 'ಮೋಟಾರು ಸ್ನೇಹಿತರದೆಂದು ಹೇಳಿದಿರಲ್ಲದೆ ಅವರ ಮನೆಗೇನೆ ಬರುತ್ತಿದ್ದೇವೆಂದು ನೀವು ನನಗೆ ತಿಳಿಸಲೇ ಇಲ್ಲವಲ್ಲಾ?' ಎಂದು ತನ್ನ ಪತಿಯನ್ನು ಪ್ರಶ್ನಿಸಲು, ಜಯಚಂದ್ರನು ನಸುನಗುತ್ತಾ, 'ವಿಮಲೂ, ಈ ಮೋಟಾರೂ ನಿನ್ನದೇ! ಈ ಬಂಗಲೆಯ ಯಜಮಾನಿಯೂ ನೀನೇ! ಮೇಲೆ ನಿನ್ನ ಗಂಡನ ಹೆಸರಿನ ಹಿಂದೆ B. Sc., ಅಕ್ಷರಗಳ ಹಿಂದೆ F. C. S. ಎಂಬ ಅಕ್ಷರಗಳೂ ಕಂಡುಬರುವುವು!'

ವಿಮಲೆಯು ಆತ್ಯಾಶ್ಚರ್ಯದೊಡನೆ, 'ಓಹೋ! ಈ ಪರೀಕ್ಷೆಗಾಗಿಯೇನು ಈ ಐದಾರು ತಿಂಗಳಾಗಿ ಅಷ್ಟು ಓದುತ್ತಿದ್ದುದು? ನಾನು ಕೇಳಿದರೆ ಸುಮ್ಮನೇ ವಿಷಯಗಳನ್ನು ಅರಿತುಕೊಳ್ಳಲು ನಾನಾ ತರಹದ ಪುಸ್ತಕಗಳನ್ನು ಓದುತ್ತಿರುವುದಾಗಿ ಹೇಳಿ ನನ್ನನ್ನು ಮೈನುರೆಸುತ್ತಿದ್ದಿರಲ್ಲವೇ?'

ಜಯಚಂದ್ರ, 'ಎಲ್ಲವೂ ನನ್ನ ವಿಮಲೆಯು ಆಶ್ಚರ್ಯಗೊಳ್ಳಿಬೇಕೆಂತಲೇ ಏರ್ಪಡಿಸುತ್ತಿದ್ದೆನು. ಬಾಮ್ಮಾ, ಅಡಿಗೆಯವನು ಕಾಫಿ ಮಾಡಿಟ್ಟುಕೊಂಡು ಕಾದಿರುವನು' ಎನಲು, ಇಬ್ಬರೂ ಮೋಟಾರಿನಿಂದಿಳಿದು ಬಂಗಲೆಯೊಳಗೆ ಪ್ರವೇಶಿಸಿದರು.

* * * * *

ಈಗ ಯಾವುದೋ ಲಂಚ ತಿಂದುದಕ್ಕಾಗಿ ಕೆಲಸವನ್ನು ಕಳೆದುಕೊಂಡು ತಪಿಸುತ್ತಿರುವ ರಾಮಕೃಷ್ಣರಾಯರು, ನಂತರ ತನ್ನ ಹೆಂಡತಿಯು ತನ್ನ ತಪ್ಪಿತವನ್ನು ತಿಳಿಸಿದಳೆಂತಲೂ ತಮ್ಮಿಬ್ಬರ ತಪ್ಪಿತವನ್ನೂ ಮನ್ನಿಸಿ, ಸಾವಿತ್ರಿಯ ಮದುವೆಗಾಗಿ ಹಣವಿಲ್ಲದೆ ತಪಿಸುತ್ತಿರುವ ತಮಗೆ ದಯವಿಟ್ಟು ೧,೦೦೦ ರೂ. ಕಳುಹಿಸಿ ಕೊಡಬೇಕೆಂದು ಬೇಡುವುದಾಗಿಯೂ ಜಯಚಂದ್ರನಿಗೊಂದು ಕಾಗದ ಬರೆಯಲು, ಸದ್ಗುಣಸ್ವರೂಪಿಯಾದ ಜಯಚಂದ್ರನು ವಿಮಲೆಯೊಡನೆಯೂ ತಮ್ಮ ಒಂದು ವರ್ಷ ಪ್ರಾಯದ ಮಗುವಾದ ಸರತ್‌ಚಂದ್ರನೊಡನೆಯೂ ಬೆಂಗಳೂರಿಗೆ ಹೋಗಿ ಸಾವಿತ್ರಿಯ ವಿವಾಹವನ್ನು ತನ್ನ ಖರ್ಚಿನಿಂದ ಸಾಂಗವಾಗಿ ನೆರವೇರಿಸಲು, ಅವನ ಅಣ್ಣ ಅತ್ತಿಗೆಯರು ಅವನ ಕ್ಷಮೆಯನ್ನು ಬೇಡಲು, 'ತಾವುಗಳು ನನ್ನನ್ನು ಕ್ಷಮೆ ಬೇಡುವುದು ಉಚಿತವೇ? ತಮ್ಮನ್ನು ಬಿಟ್ಟುಹೋದ ನನ್ನನ್ನಲ್ಲವೇ ತಾವು ಮನ್ನಿಸಬೇಕೆ'ಂದು ಅವರನ್ನು ಸಮಾಧಾನಗೊಳಿಸಿ ಕಲ್ಕತ್ತೆಗೆ ಹಿಂತಿರುಗಿ ಸೌಖ್ಯವಾಗಿದ್ದನು. ಇದಲ್ಲವೇ ಸಹೋದರವಾತ್ಸಲ್ಯ!

ಸಂಪೂರ್ಣ.


DIAMONDS! DIAMONDS!
BEST BRILLIANCY!
K. R. K. SHET,
Near Mission High-School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು! ಎಮ್ಸ್ಟ್ಯಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನನ್ಮಲ್ಲಿ ವಿಕ್ರಯಿಸಲ್ಪಡುತ್ತವೆ.
ನನ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನನ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಸದ್ಯದಲ್ಲೆ ಹಂಪನಕಟ್ಟೆಯಲ್ಲಿ ತೆರೆಯಲಾಗುವುದು.
ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶ್ಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಬಿಳೇ ತೊನ್ನು—
ಮತ್ತೂ ಕುಷ್ಠ ರೋಗ.
ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ನೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.
Vaidiya Raj Akhila Kishori Ram,
*No. 223, P. O., Katri Sarai. (GAYA).*
ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಚಿತ್ರಾ ಟೊಕಿಸ್,
(ಮಾಜಿ ಹಿಂದೂಸ್ಥಾನ್ ಥಿಯೇಟರ್)
ಮಂಗಳೂರು,
ಇವರು
ಶ್ರೇಷ್ಠ ತರಗತಿಯ ಫಿಡೆಲಿಟಿ ಸೌಂಡ್ ಸಿಸ್ಟಂ ಯಂತ್ರದಿಂದ ಸದ್ಯದಲ್ಲೇ
ಪ್ರಭಾತ ಸಿನೆಟೋನಿನವರ ಪ್ರಖ್ಯಾತ ಪೌರಾಣಿಕ
"ಚಂದ್ರಸೇನಾ"
ಚಿತ್ರದೊಡನೆ ಪ್ರದರ್ಶನಗಳನ್ನಾರಂಭಿಸುವರು.
ಧ್ವನಿಯು ಅತ್ಯಂತ ಸ್ಪಷ್ಟ!

AN OPEN LETTER TO THE READERS OF "KANTEERAVA"

Dear Mr. Reader,

Will it cause you any surprise if I inform you that THE GUARDIAN OF INDIA INSURANCE CO., LTD., which has done a record business of about 37 Lakhs within an year of its start, has a most attractive 'Depositors Insurance Scheme' which enables every man or woman between the ages 18 and 50 to take out an Endowment Policy for 15, 20 & 25 years WITH PROFITS through The Travancore National Bank Ltd., The Canara Banking Corporation Udipi Ltd., or any other good Banks in South Kanara.

If you have an account with any of the Banks mentioned above it is high time for you to take out a policy under the above scheme at once, and the advantages you get thereby are many.

You pay the LOWEST PREMIUM of all the Insurance Companies in India. You get interest on your account from the Bank. You are saved the trouble of remitting your premium. The premium rate under this scheme is about Rs. 5 less than our standard premiums.

All these advantages coupled with the fact that we have done a record business already, must induce you and your friends to write to the undersigned for full particulars.

Kindly note that the Directorate of THE GUARDIAN consists of, among others Heads of two of the foremost Banks in South India. A post-card from you to the undersigned will bring you back a handsome Book-let of The Depositors Insurance Scheme.

Thanking you in advance, I remain,

very truly yours,
V. D. HERANJAL,
*Dt. Organiser, Udipi*

# ವೆಂಕಟಗಿರಿ ಮಹಾತ್ಮೆ

**೪೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.**

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಸ್ಸಮಾಧಾನವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

**ಬೆಲೆ ರೂಪಾಯಿ ೧—೪—೦.**

**ಟಪ್ಪಾಲು ಹಾಸಲು ಬೇರೆ.**

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಷಾಂತರಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುಕೂಲಕರ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

---

1935ನೇ ಮಾದರಿಯ

# ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ

**"ಕಾಫಿ ಕಲ್ಲರ್"**

ಸೀರೆಗಳನ್ನೇ ಉಪಯೋಗಿಸಿರಿ!

ಕಡಿಮೆ ಬೆಲೆಗೆ–ತರತರದ ಬಣ್ಣದ–ನಮೂನೆವಾರು ಅಂಚಿನ–ಸೀರೆಗಳು!

ಒಮ್ಮೆ ಬಂದು ನಮ್ಮ ಅಂಗಡಿಯನ್ನು ಸಂದರ್ಶಿಸಿರಿ!

**ಪಿ. ಎ. ಪೈ ಬ್ರದರ್ಸ—ಉಡುಪಿ.**

ದಿ ಕರ್ನಾಟಕ ಡ್ಯಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್ಸ್-

ಏಜಂಟರು:—**ಸೂಜಿಕಾರ್ ಬ್ರದರ್ಸ್—ಮಂಗಳೂರು.**

---




---

ಆರ್. ಮಾರ್ಟಿನ್ಸ್‌ರ

# ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿದಲ್ಲಿ' ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮೂತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ನೇವಿ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಹೊಗಳಲ್ಪಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

***R. D. KATELY & Co.,***
*319 Frere Road,*
Opposite Fort Market, near Fountain,
BOMBAY.

**ಆರ್. ಡಿ. ಕಟ್ಲೀ ಅಂಡ್ ಕೋ.,**
**319 ಫ್ರಿಯರ್ ರೋಡ್,**
**ಫೋರ್ಟ್ ಮಾರ್ಕೆಟಿನ ಎದುರು,**
**ಫೋರ್ಟ್, ಬೊಂಬಾಯಿ.**

---

## ಇಂದ್ರಜಾಲದಂತೆ ವರ್ತಿಸುತ್ತದೆ.

ಮಗುವಿನ ಅಜೀರ್ಣದ ನೋವುಗಳನ್ನು ವುಡ್ವರ್ಡರ ಗ್ರೈಪ್ ವಾಟರು ಎಷ್ಟು ಬೇಗನೇ, ಎಷ್ಟು ಮೆತ್ತಗಾಗಿ ನಿವಾರಿಸಿ ಬಿಡುತ್ತದೆಂದರೆ,–ಅದು ಇಂದ್ರಜಾಲದ ಹಾಗೆಯೇ ತೋರುತ್ತದೆ. ಆದರೆ ಆಧುನಿಕ ವಿಜ್ಞಾನಶಾಸ್ತ್ರವು ಮಾತ್ರವೇ ನಿಮಗೆ ವುಡ್‌ವರ್ಡರಂಥ ಆಶ್ಚರ್ಯಕರವಾದ ಔಷಧವನ್ನು ಒದಗಿಸಬಲ್ಲುದು.



**WOODWARD'S**
**"GRIPE WATER"**
**Keeps baby well**

I WW 31-111 W. WOODWARD LTD. LONDON, ENGLAND

---

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

**ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ**

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

# ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಪಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ನಾನ, ಸ್ವಚ್ಛಾವಸ್ಥೆಯಿಂದ ಆಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ಸಪ್ಷವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವೃಭಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಒಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಪ್ರಮಾಣ:—ನಸಿಕಿನಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ. ೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಪ್ಪ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

**ಮಂಗಳೂರು–ಮಿಜಾರಕರ ಬ್ರದರ್ಸ್, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ.**

**ಕಾರ್ಕಳ—ವ್ಹಿ. ವ್ಹಿ. ಶೆಣೈ.**
**ಕುಂದಾಪುರ–ಕೆ. ಆರ್. ಭಡಜೀ.**
**ಕಾಸರಗೋಡು—ಕೆ. ರಾಮ ನಾಯ್ಕ ಮತ್ತು ಭಕ್ತ ಬ್ರದರ್ಸ್.**

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸರ್ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

---

# ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—**ಮದ್ರಾಸು. ಪೋಸ್ಟು ಬಾಕ್ಸ್ ನಂಬ್ರ 182.**

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಆಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

**ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತ್ತುಗಳು ಅತ್ಯಾಕರ್ಷಕ.**

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

## ಬೇಕಾಗಿದ್ದಾರೆ

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು.

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕೆಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ್ ಲೋಕಲ್ ಬೋರ್ಡು ಆಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, C/o. ಕೂರ್ಗ್ ಕೊ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು.

(3) ವೈ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಆಫ್ ಮೈಸೂರು ಸಿಟಿ, ಮೈಸೂರು.

# ಉಡುಪಿ

ಉಡುಪಿಯ ಹೆಸರು ಭರತಖಂಡದಲ್ಲೆಲ್ಲಾ ಪ್ರಸಿದ್ಧವಾದುದಾಗಿದೆ. ಇಂದು ಅದು ಯಾತ್ರಿಕರ ಕಣ್ಮುಂದೆಯೇ ಇದೆ. ಪ್ರವಾಸಿಗಳಂತೂ ಅದನ್ನು ನೋಡಿಯೇ ನೋಡುವರು. ಅದರ ನೈಸರ್ಗಿಕ ಸೌಂದರ್ಯವನ್ನು ವರ್ಣಿಸುವದಕ್ಕಿಂತಲೂ ಅನುಭವಿಸಿಯೇ ನೋಡಬೇಕು. ಕಣ್ಮನಗಳನ್ನು ಮರುಳುಗೊಳಿಸುವ ದೃಶ್ಯವೈಶಿಷ್ಟ್ಯಗಳೂ, ಪ್ರಕೃತಿಯ ಬೆಡಗಿನ ಏರಿಳಿಗಳೂ ಆಕರ್ಷಣೀಯವಾದ ದೃಶ್ಯವಿಶೇಷಗಳೂ ಎಂಥವನನ್ನೂ ಮುಗ್ಧಗೊಳಿಸದಿರವು. ಯಾತ್ರಿಕರೆಂದು ಮಠಗಳನ್ನು ಸಂದರ್ಶಿಸಿದೊಡನೆ ಉಡುಪಿಯನ್ನು ಕಂಡಂತಾಗಲಿಲ್ಲ. ಇಲ್ಲಿಯ ಜನರ ಸರಳ ಜೀವನದ ರೀತಿನೀತಿಗಳನ್ನೂ, ನಡೆನುಡಿಗಳನ್ನೂ, ಚಿಕ್ಕ ಚೊಕ್ಕ ಮನೆಗಳನ್ನೂ, ಸೊಬಗನ್ನೂ, ಸಂಭ್ರಮವನ್ನೂ, ರಮಣೀಯತೆಯನ್ನೂ ಕಾಣಲು ಬೇಕು.

ಪ್ರಮುಖ ಮತಪ್ರಚಾರಕರಾದ ಶ್ರೀ ಮಧ್ವಾಚಾರ್ಯರ ಜನ್ಮಭೂಮಿಯೂ, ಅವರ ಮತಪ್ರಚಾರದ ಮೂಲ ಕೇಂದ್ರವೂ, ವಿಷ್ಣುಸರ್ವೋತ್ತಮತ್ವದ ಸಂಸ್ಥಾಪನೆಗಾಗಿ ಅಂತವರು ಸ್ವಹಸ್ತದಿಂದ ಅಲ್ಲಿ ಮಾಡಿರುವ ಶ್ರೀ ಕೃಷ್ಣಪರಮಾತ್ಮನ ಮೂಲ ವಿಗ್ರಹದ ಪ್ರತಿಷ್ಠಾಪನೆಯೂ ಮತವಿಚಾರದಲ್ಲಿ ಈ ಉಡುಪಿ ಕ್ಷೇತ್ರಕ್ಕೆ ಪ್ರಥಮ ಸ್ಥಾನವನ್ನು ಕೊಡಲು ಕಾರಣವಾಗಿವೆ.

ಹಿಂದುಸ್ಥಾನದಲ್ಲಿ ಮುಖ್ಯ ಧರ್ಮವಾದ ವೈದಿಕ ಧರ್ಮದ ಪ್ರವಚನಕ್ಕಾಗಿ ಇಡೀ ದೇಶದಲ್ಲಿ ಹಲವು ಮಠಸಂಸ್ಥೆಗಳು ಪೂರ್ವಿಕರಿಂದ ಏರ್ಪಡಿಸಲಾಗಿವೆ. ಅವುಗಳಲ್ಲಿ ಮುಖ್ಯ ಸಿದ್ಧಾಂತಗಳೆಲ್ಲೊಂದೆನಿಸುವ ದ್ವೈತ ತತ್ವಗಳ ಪ್ರವಚನಗಳಿಗಾಗಿ ಮಧ್ವಾಚಾರ್ಯರಿಂದ ಏರ್ಪಾಡಾದುದು ಹೆಚ್ಚಿನ ಪ್ರಸಿದ್ಧಿಯಿಂದ ನಡೆದುಬರುತ್ತಿದೆ. ಶ್ರೀಮನ್ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರಚುರಗೊಳಿಸಿ, ಅವರ ಪ್ರವಚನಕ್ಕಾಗಿ ಗೃಹಸ್ಥಾಶ್ರಮಿಗಳೂ ತದನಂತರ ಸನ್ಯಾಸಿಗಳೂ ಆದ ಹಲವು ಮಂದಿ ಶಿಷ್ಯರನ್ನು ಅಲ್ಲಲ್ಲಿ ನಿಯೋಜಿಸಿದ್ದರು. ಆದರೆ, ತಮ್ಮ ಮೂಲಸ್ಥಳವಾದ ಉಡುಪಿಯಲ್ಲಿ ಮಾತ್ರ ವಿಶಿಷ್ಟತೆಯನ್ನು ಬಯಸಿದವರಂತೆ ಬಾಲಸನ್ಯಾಸದೀಕ್ಷಾಕ್ರಮದಿಂದ ಎಂಟು ಮಂದಿ ಶಿಷ್ಯರನ್ನಾರಿಸಿ ಪ್ರವಚನ-ಪೂಜಾದಿಗಳನ್ನು ವ್ಯವಸ್ಥೆಗೊಳಿಸಿದರು. ಅವರ ವರಂಪರೆಯವರೇ ಇಂದಿನ ಉಡುಪಿಯ ಅಷ್ಟಪೀಠಾಧಿಪತ್ತಿಗಳು. ಅಂದಿನಿಂದ ಇಂದಿಗೂ ಮಧ್ವಸಿದ್ಧಾಂತವೆಂದು ಪ್ರಸಿದ್ಧವಾದ ದ್ವೈತತತ್ವದ ಪ್ರವಚನಕ್ಕೂ ಮಠಸಂಸ್ಥೆಗಳಿಗೂ ಉಡುಪಿಯೊಂದು ಪ್ರಮುಖ ಕೇಂದ್ರವಾಗಿ, ಹಿಂದು ಸ್ಥಾನದಲ್ಲೊಂದು ಗಣನೀಯ ಕ್ಷೇತ್ರವಾಗಿ ಪ್ರಸಿದ್ಧಿಗೊಂಡಿರುತ್ತದೆ. ಒಂದೇ ಕಡೆಗೆ ಇಷ್ಟೊಂದು ಮಠಸಂಸ್ಥೆಗಳೂ ಗುರುಪೀಠಗಳೂ ಹಿಂದೂಸ್ಥಾನದ ಯಾವುದೊಂದು ಮತಧರ್ಮದವರಲ್ಲೂ ಕಂಡುಬರುವುದಿಲ್ಲ. ಶ್ರೀ ಮಧ್ವಾಚಾರ್ಯರು ಈ ಶಿಷ್ಯಯತಿಗಳಿಗೆ ಪ್ರತ್ಯೇಕಗಳಾದ ಪೂಜ್ಯಪ್ರತೀಕಗಳನ್ನಿತ್ತಿರುವರು. ಮೂಲ ಗುರುಗಳಿಂದ ಪ್ರಾಪ್ತಗಳಾದ ದೇವತಾಮೂರ್ತಿಗಳಿಗೆ ಶಾಸ್ತ್ರೋಕ್ತಗಳಾದ ಅಹೋರಾತ್ರ ವ್ಯವಸ್ಥಿತ ಪೂಜಾಕ್ರಮಗಳು ಪ್ರತಿಯೊಂದು ಮಠದಲ್ಲೂ ಇಂದಿಗೂ ನಡೆಯುತ್ತಲೇ ಇವೆ.

ಎರಡೆರಡು ಮಠಗಳಿಗೆ ದ್ವಂದ್ವಾನುಬಂಧದ ಏರ್ಪಾಡಿರುವದು ಇಲ್ಲಿಯ ವಿಶೇಷವುಹತ್ವ. ಅಷ್ಟಪೀಠಗಳವರು ಪರಸ್ಪರ ಸಂದರ್ಶನ ಮತ್ತು ಮರ್ಯಾದಾ ಸ್ವೀಕಾರಗಳಲ್ಲಿ ತಮ್ಮೊಳಗೆ ಆಶ್ರಮಜ್ಯೇಷ್ಠ-ಕನಿಷ್ಠಭಾವದಿಂದ ವರ್ತಿಸುವುದೂ ಶ್ರೀಕೃಷ್ಣ ಪೂಜಾನಿಯಮದಿಂದ ಯಾವತ್ತೂ ಮಠಾಧೀಶರೂ ಒಮ್ಮೆಗೇ ಮೂಲಸ್ಥಳವನ್ನು ತೊರೆಯದಂತಿರುವುದೂ ಗುರುವರ್ಗದ ಹಾಗೂ ಸ್ಥಳದ ವೈಶಿಷ್ಟ್ಯವೆನಿಬಹುದು. ಅಲ್ಲದೆ, 'ಪೀಠಕೆ ಶುದ್ಧ'ವೆಂದು ಪ್ರಸಿದ್ಧವಾದ ಇಲ್ಲಿಯ ಮಠಗಳ ಶೌಚಾಚಾರ ಕ್ರಮವೂ, ಅನ್ನದಾನಕ್ರಮವೂ, ಒಳ-ಹೊರ ಜನರ ಏಕಮತ್ಯದಿಂದ ಕಾಲಕಾಲದ ಉತ್ಸವಾದಿಗಳನ್ನು ಏಕಪ್ರಕಾರವಾಗಿ ನಡೆಯಿಸುತ್ತಿರುವ ಕ್ರಮವೂ, ವಾದ್ಯವೈಭವಗಳಿಂದ ತರ್ಕಾರಿ ಹೊರೆ-ಉಲುಪೆ ಸರಬರಾಯಿಗಳನ್ನು ಸಾಗಿಸುವ ಕ್ರಮವೂ, ಕಟ್ಟಿಗೆಗಳನ್ನೂ ಸಹ ಅಲಂಕಾರವಾಗಿ ಕೂಡಿಡುವ ಕ್ರಮವೂ, ಇತರ ಕಡೆಗಳಲ್ಲಿ ಕಾಣಸಿಗದ ಇಲ್ಲಿಯ ಮಠಗಳ ವಿಶೇಷ ಸಂಗತಿಗಳೆನಿಬಹುದು.

ಲೋಕದಲ್ಲಿ ಕೃಷ್ಣಕ್ಷೇತ್ರಗಳು ಬೇರೆ ಇಲ್ಲವೆಂದಲ್ಲ. ಆದರೂ, ಅವುಗಳಲ್ಲಿ ಯಾವುದೊಂದೂ ಈ ಕ್ಷೇತ್ರದೊಂದಿಗೆ ತೂಗುವಾಗ, ಇದರ ಸರಿ ನಿಲ್ಲಲಾರದೆಂದು ಧೈರ್ಯವಾಗಿ ಹೇಳಬಹುದು ಏಕೆಂದರೆ, ಇಲ್ಲಿಯ ಕೃಷ್ಣವಿಗ್ರಹವು ದೇವಶಿಲ್ಪಿಯಾದ ವಿಶ್ವಕರ್ಮನಿಂದಲೇ ಕೆತ್ತಲ್ಪಟ್ಟು ದ್ವಾರಕಾಪುರಿಯಲ್ಲಿ ರುಕ್ಮಿಣಿಯಿಂದ ಸ್ವತಃ ಅರ್ಚಿಸಲ್ಪಟ್ಟುದೆಂಬ ಐತಿಹ್ಯವಿದ್ದು ಮೇಲಾಗಿ ಮುಖ್ಯಪ್ರಾಣಾಂಶಸಂಭೂತರಾದ ಆದಿಗುರು ಮಧ್ವಾಚಾರ್ಯರಿಂದಲೇ ಇಲ್ಲಿ ಸ್ಥಾಪಿತವಾಯಿತೆಂದ ಮೇಲೆ, ಇಲ್ಲಿ ದೈವೀಕಳೆಯು ಅತಿಶಯವಾಗಿಯೇ ಇರಬೇಕೆಂಬುದರಲ್ಲಿ ಸಂದೇಹವಿಲ್ಲ. ಉಡುಪಿಯ ಯಾತ್ರಿಕರಿಗೆ, ಗುರೂಪಾಸನೆಗೆ ತಕ್ಕಂತೆ ಮತಗುರುಗಳಾದ ಸರ್ವಜ್ಞರ ಪೀಠವೂ ಇಲ್ಲೇ ಇರುವುದರಿಂದ, ಸ್ಥಳದ ಗೌರವವು ಇನ್ನೂ ಹೆಚ್ಚಿದಂತಾಗುವುದು. ಇಲ್ಲಿನ ಮಧ್ವಸರೋವರವನ್ನೂ ಸಾಮಾನ್ಯ ತೀರ್ಥವೆಂದೆಣಿಸಲಾಗುವುದಿಲ್ಲ. ಈ ಸರೋವರಕ್ಕೆ ಮಧ್ವಾಚಾರ್ಯರ ಕಾಲದಿಂದಲೂ ಗಂಗೆಯು ಗುಪ್ತಗಾಮಿನಿಯಾಗಿ ಬರುವ ವಿಷಯವು ಆಸ್ತಿಕವೃಂದದಲ್ಲಿ ಯಾರಿಗೂ ತಿಳಿಯದ ವಿಷಯವಲ್ಲವೆಂದ ಮೇಲೆ, ಭಾವನಾದಾರ್ಢ್ಯವಿರುವ ಮನುಷ್ಯನಿಗೆ ಪುರಾಣಪ್ರಸಿದ್ಧಗಳಾದ ಯಾವುವೇ ಮಹಾತೀರ್ಥಗಳ ಸೇವನೆಯಿಂದ ಆಗುವ ಸುಕೃತ ಸಿದ್ಧಿಯು ಇಲ್ಲಿ ಈ ಪಾವನತೀರ್ಥದಿಂದ ಆಗಿಯೇ ಆಗಬಹುದು; ಕೇವಲ ಐಹಿಕವಾದ ಧನದಾರಾಪುತ್ರಾದಿ ಸಂಪತ್ತಿಯು ಕೂಡ ಇಲ್ಲಿ ನೆಲೆಸಿರುವ ಅನಂತಾಸನ ಮುಖ್ಯಪ್ರಾಣರಿಂದ ಲಭ್ಯವಾಗದೆ ಇಲ್ಲ. ಇಬ್ಬರೂ ಅವರು ಸಂಪ್ರತಿಯ ಅಧಿದೇವತೆಗಳು. ಸರ್ವತೀರ್ಥಗಳಿಗೂ ಸಂಗನುವಾದ ಸಮುದ್ರವೂ ಇಲ್ಲಿರುವುದರಿಂದ, ಯಾತ್ರಾಕಾಲದಲ್ಲಿ ಪಿತೃಸಂತುಷ್ಟಿಯನ್ನು ಮಾಡಬಯಸುವವರು ಅಲ್ಲಿ ಸ್ನಾನ, ತಿಲತರ್ಪಣ ಮುಂತಾದ ವಿಧಿಗಳಿಂದ ಪಿತೃದೇವತೆಗಳನ್ನು ಆರಾಧಿಸುವುದು ಇಲ್ಲಿ ಕೇವಲ ಸುಲಭ. ಹಾಗೂ, ಲೋಕದಲ್ಲಿ ಯಾತ್ರಿಕರಿಗೆ, ಯಾತ್ರೆಯ ಉದ್ದೇಶಗಳೇನಿದ್ದರೂ, ಅವುಗಳೆಲ್ಲಾ ಸ್ವಲ್ಪ ಹೆಚ್ಚುಕಡಮೆಯಾಗಿ ಒಂದೇ ಕಡೆಯಲ್ಲಿ ದೊರೆಯಬೇಕಾದರೆ, ಇದೇ ಉಡುಪಿ ಕ್ಷೇತ್ರದಲ್ಲಿ ದೊರೆಯಬೇಕಲ್ಲದೆ ಬೇರೆಲ್ಲಿಯೂ ಇಲ್ಲ.

ನಿತ್ಯವೂ ಹಗಲಲ್ಲಿ ಇಲ್ಲಿಯ ಶ್ರೀಕೃಷ್ಣಮೂರ್ತಿಗೆ ನಿರ್ಮಾಲ್ಯವಿಸರ್ಜನಪೂಜೆ, ಉಷಃಕಾಲಪೂಜೆ, ಪಂಚಾಮೃತ ಪೂಜೆ, ಕ್ಷೀರನವನೀತಪೂಜೆ, ಉದ್ವರ್ತನಪೂಜೆ, ಅಭಿಷೇಕಪೂಜೆ, ಅಲಂಕಾರಪೂಜೆ, ಅವಸರಪೂಜೆ, ಮಹಾಪೂಜೆಗಳೆಂಬ ಒಂಭತ್ತು ಪೂಜೆಗಳು ಇಲ್ಲಿ ಪದ್ಧತಿಯಾಗಿ ನಡೆಯುತ್ತಿವೆ. ಹಾಗೆಯೇ ಪ್ರತಿ ರಾತ್ರಿಯಲ್ಲಿ ದೀವಟಿಗೆಸೇವೆ, ರಾತ್ರಿಪೂಜೆ, ದೋಲಾಪೂಜೆ, ಏಕಾಂತಸೇವಾಪೂಜೆ ಎಂಬ ಈ ನಾಲ್ಕು ಪೂಜೆಗಳೂ ನಡೆಯುತ್ತಿವೆ. ಭಕ್ತಾದಿಗಳು ಇಲ್ಲಿ ನಡೆವ ಈ ಪೂಜಾದಿಗಳನ್ನೂ ಉತ್ಸವಾದಿಗಳನ್ನೂ ದ್ರವ್ಯವಿನಿಮಯದಿಂದ ಶ್ರೀಕೃಷ್ಣ ಪರಮಾತ್ಮನಿಗೆ ತಮ್ಮ ತಮ್ಮ ಸೇವೆಗಳಾಗಿ ನಡೆಯಿಸಿ, ಅವುಗಳ ಫಲವನ್ನು ತಾವು ಪಡೆವುದು ಪದ್ಧತಿಯು. ಮುಖ್ಯವಾಗಿ ಎಲ್ಲರೂ ನಡೆಯಿಸುವ ಕ್ಷೀರಾಭಿಷೇಕ, ಪಂಚಾಮೃತಪೂಜೆ, ಅಲಂಕಾರ ಪೂಜೆ, ತುಳಸ್ಯರ್ಚನೆಗಳಿಗೆ ಅನುಕ್ರಮವಾಗಿ ರೂ. ೮—೮—೦, ೧೬-೮-೦, ೨೬-೮-೦, ಮತ್ತೂ ೬-೦-೦ ಈ ರೀತಿಯಲ್ಲಿಯೂ, ಉದ್ಯಾವನಹವನಗಳಿಗೆ ರೂ. ೨೦-೦-೦ರ ಪ್ರಕಾರವೂ, ಮುಖ್ಯವಾದ ಮಹಾಪೂಜೆಗೆ ಉತ್ತಮಮಧ್ಯಮಾಧಮಕಲ್ಪಗಳಲ್ಲಿ ಕ್ರಮವಾಗಿ ರೂ. ೧೫೦-೧೦೦-೫೦ ಈ ಬಗೆಯಾಗಿಯೂ ಸೇವಾಮೂಲ್ಯಗಳಿವೆ. ಇದಿಷ್ಟು ಕ್ಷೇತ್ರವಿಚಾರವಾಯಿತು.

ಉಡುಪಿಯು ದಕ್ಷಿಣ ಕನ್ನಡ ಜಿಲ್ಲೆಯ ದ್ವಿತೀಯ ಪ್ರಧಾನ ನಗರ. ಇಲ್ಲೊಂದು ತಾಲೂಕು ಕಚೇರಿಯೂ, ಸಬ್ ಮ್ಯಾಜಿಸ್ಟ್ರೇಟರ ಕೋರ್ಟೂ, ಬೆಂಚ್ ಕೋರ್ಟೂ, ಸಬ್ ರಿಜಿಸ್ಟ್ರಾರರ ಆಫೀಸೂ, ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟೂ, ತಾಲೂಕು ಪೋಲೀಸು ಸ್ಟೇಶನೂ ಇವೆ. ಜನಸಂಖ್ಯೆಯು ಸುಮಾರು ಇಪ್ಪತ್ತು ಸಾವಿರವೆನ್ನಬಹುದು. ಈಗಾಗಲೇ ಮುನಿಸಿಪಾಲಿಟಿಯಾಗಿ ಮಾರ್ಪಾಟಾಗಿದ್ದು ಇನ್ನು ಕೆಲವೇ ತಿಂಗಳುಗಳಲ್ಲಿ ಕೌನ್ಸಿಲರರ ಹಾಗೂ ಚೆಯರ್ಮ್ಯಾನರ ಚುನಾವಣೆಯೂ ನಡೆಯಲಿದೆ. ಮುನಿಸಿಪಾಲಿಟಿಗೊಬ್ಬ ಕಮಿಶನರರೂ ಬರಬಹುದು. ಆರಂಭದಿಂದಲೇ ಬಂದರೆ ಸಮರ್ಪಕ ಆಡಳಿತ ದೃಷ್ಟಿಯಿಂದ ಹಿತ. ಮುನಿಸಿಪಾಲಿಟಿ ಬೇಡವೆಂದು ಗುಲ್ಲೆಬ್ಬಿಸಿದವರೂ ಪ್ರಾಯಶಃ ಕೌನ್ಸಿಲರರ ಮತ್ತು ಚೆಯರ್ಮ್ಯನರ ಚುನಾವಣೆಯಲ್ಲಿ ಭಾಗವಹಿಸದಿರಲಾರರು. ಸುಶಿಕ್ಷಿತರ ಕ್ಲಬ್ಬುಗಳು ಇವೆ. ಮಹಿಳೆಯರಿಗಾಗಿ ಪ್ರತ್ಯೇಕ ಕ್ಲಬ್ಬು ಇಲ್ಲವೆಂದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರಿಂದ ನಡೆಯಿಸಲ್ಪಡುವ ಸಾರ್ವಜನಿಕ ವಾಚನಾಲಯವೂ ಇದೆ. ಆರೋಗ್ಯಸಂರಕ್ಷಣೆಗಾಗಿ ಹೆಲ್ತ್ ಡಿಪಾರ್ಟ್ಮೆಂಟೂ ಇದೆ. ಅಂತೂ ನಾಗರಿಕ ಸೌಕರ್ಯಗಳು ಇದ್ದೇ ಇವೆ.

ಲೌಕಿಕ ವಿದ್ಯಾಭ್ಯಾಸಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡು ಹೈಸ್ಕೂಲು (ಇದು ಇನ್ನು ಮುನಿಸಿಪಾಲಿಟಿಯ ವಶವಾಗಬಹುದು,) ಕ್ರಿಶ್ಚಿಯನ್ ಹೈಸ್ಕೂಲು, ಹೆಮ್ಮಕ್ಕಳಿಗಾಗಿ ಕೊನ್ವೆಂಟಿನವರ ಹೈಸ್ಕೂಲು; ಉಪಾಧ್ಯಾಯಿನಿಯರಿಗಾಗಿ ಗವರ್ನಮೆಂಟ್ ಟ್ರೈನಿಂಗ್ ಶಾಲೆಯೂ; ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಹಲವು ಎಲಿಮೆಂಟರಿ ಶಾಲೆಗಳೂ ಇವೆ. ಧಾರ್ಮಿಕ ವಿದ್ಯಾಭ್ಯಾಸಕ್ಕೂ ತುಂಬ ಅನುಕೂಲವಿದೆ. ದ್ವೈತ ಸಿದ್ಧಾಂತ, ತರ್ಕ, ಜ್ಯೋತಿಷ್ಯ ಇತ್ಯಾದಿ ವಿಷಯಗಳಿಗಾಗಿ ಶ್ರೀಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯಿದೆ.

ರೋಗಿಗಳ ಚಿಕಿತ್ಸೆಗಾಗಿ ಸರಕಾರಿ ಆಸ್ಪತ್ರೆಯೊಂದಿದೆ. ಗಂಡಸು ಡಾಕ್ಟರರಲ್ಲದೆ ಹೆಂಗಸರಿಗಾಗಿ ಪ್ರತ್ಯೇಕ ಹೆಂಗಸು ಡಾಕ್ಟರರೊಬ್ಬರು ಇರುವರು. ರೋಗಿಗಳಿಗಿಲ್ಲಿ ಧರ್ಮಾರ್ಥ ಔಷಧಿ ದೊರೆಯುವದು. ಕೇವಲ ನಿರ್ಗತಿಕರನ್ನು ಇಲ್ಲಿಯೇ ಇಟ್ಟುಕೊಂಡು ಚಿಕಿತ್ಸೆ ಮಾಡುವರು. ಆರೋಗ್ಯ ದೃಷ್ಟಿಯೋಗ್ಯ ಸ್ಥಳದಲ್ಲಿ ಬಾಸೆಲ್ ಮಿಶ್ಶನಿನವರು ನಡೆಯಿಸುವ ಹೆಂಗಸರ ಆಸ್ಪತ್ರೆಯಿದೆ. ರೋಗಿಗಳ ನಿವಾಸಕ್ಕೂ ಆರೈಕೆಗೂ ತಕ್ಕ ವ್ಯವಸ್ಥೆಯಿದೆ. ಇವುಗಳಲ್ಲದೆ ಖಾಸಗಿ ಡಾಕ್ಟರುಗಳ ರೋಗಿಗಳ ನಿವಾಸಗಳೂ ಚಿಕಿತ್ಸಾಲಯಗಳೂ, ವೈದ್ಯರುಗಳ ಆಯುರ್ವೇದ ಚಿಕಿತ್ಸಾಭವನಗಳೂ ಇವೆ.

ವ್ಯಾಪಾರ ಉದ್ಯಮಗಳ ದೃಷ್ಟಿಯಲ್ಲಿಯೂ ಉಡುಪಿಯು ಹಿಂದುಳಿದಿರುವದಿಲ್ಲ. ಮಲ್ಪೆ ಬಂದರವು ಸಮೀಪದಲ್ಲಿರುವುದು ವ್ಯಾಪಾರಕ್ಕೆ ತುಂಬಾ ಅನುಕೂಲವಾಗಿರುತ್ತದೆ. ಇಲ್ಲಿಂದ ಜಿಲ್ಲೆಯ ನಾನಾ ಭಾಗಗಳಿಗೂ, ಸರಹದ್ದಿನಲ್ಲಿರುವ ಮೈಸೂರು ಪ್ರಾಂತಕ್ಕೂ ರಸ್ತೆಗಳಿರುವದರಿಂದ ಮೋಟಾರು ಚಲಾವಣೆಗೆ ಅನುಕೂಲವಾಗಿರುತ್ತದೆ. ಮಿಶ್ಶನಿನವರ ಮತ್ತಿತರರ ಹಂಚು ಕಾರ್ಖಾನೆಗಳಿವೆ. ಬೇಸಿಗೆಯಲ್ಲಿ ವಿೂನಿನ ಕಾವುಗಾರಿಯೂ ದೊಡ್ಡ ಪರಿವಾಣದಿಂದ ನಡೆಯುತ್ತದೆ. ಸದ್ಯದಲ್ಲಿಯೆ ಕಲ್ಯಾಣಪುರದಲ್ಲೊಂದು ಸಕ್ಕರೆಯ ಕಾರ್ಖಾನೆಯು ಆರಂಭವಾಗಲಿರುವುದರಿಂದ ಇದು ಕಬ್ಬಿನ ವ್ಯವಸಾಯಕ್ಕೆ ತುಂಬಾ ಸಹಕಾರಿಯಾಗುವದು. ಶಾಸ್ತ್ರೀಯ ರೀತ್ಯಾ ಆಯುರ್ವೇದೌಷಧಗಳನ್ನೂ ಅಲೋಪೆತಿಕ್ ಔಷಧಗಳನ್ನೂ ಯಂತ್ರಮೂಲಕ ಸಿದ್ಧಗೊಳಿಸುವ ದಿ ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯುಟಿಕಲ್ ವರ್ಕ್ಸ್ ಎಂಬ ಕಾರ್ಖಾನೆಯೊಂದಿದೆ. ಸಾಬೂನಿನ ಕಾರ್ಖಾನೆಗಳೂ ಇವೆ. ಉತ್ತಮ ಸೀರೆ ಇತ್ಯಾದಿಗಳ ನೆಯ್ಗೆಯ ಕಾವುಗಾರಿಯು ಪಿ. ಎ. ಪೈ. ಬ್ರದರ್ಸ್‌ರವರಿಂದ ನಡೆಸಲ್ಪಡುತ್ತದೆ. ಹಿತ್ತಾಳೆ ಪೆಟ್ಟಿಗೆಗಳನ್ನು ಮಾಡುವ, ತೆಂಗಿನ ಚಿಪ್ಪಿನಿಂದ ಅಂಗೀಗುಂಡಿಗಳನ್ನು ಕೊರೆಯುವ, ಹಣ್ಣುಹಂಪಲುಗಳಿಂದ ಚಿರಸ್ಥಾಯಿಯಾಗಿ ಉಳಿಯುವ ಸಿರಪನ್ನು ಸಿದ್ಧಗೊಳಿಸುವ ಕೈಗಾರಿಕೆಯ ಮಂದಿರಗಳೂ ಇವೆ. ಮುದ್ರಣಾಲಯಗಳು ಹಲವಿವೆ. ಇಲ್ಲಿಯವುಗಳೇ ಸಾಲದುದಕ್ಕೆ ಮಂಗಳೂರಿನ ಛಾಪಖಾನೆಯೊಂದರ ಶಾಖೆಯೂ ಇಲ್ಲಿದೆ. ಉತ್ತಮ ಮುದ್ರಣಕೆಲಸವು ಸಾಗುತ್ತಿದ್ದು ಪ್ರಭಾಕರ ಮುದ್ರಾಯಂತ್ರದವರ ಹೆಸರು ಕರ್ಣಾಟಕದಲ್ಲೆಲ್ಲಾ ಪ್ರಖ್ಯಾತವಾಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲೆಲ್ಲಾ ಪ್ರಥಮದ್ದಾಗಿ ಬ್ಯಾಂಕು ಸ್ಥಾಪಿತವಾದುದು ಇಲ್ಲಿಯೇ,—ವ್ಯಾಪಾರಸ್ಥರಿಗೂ, ಸಾಲಮೂಲಗಾರರಿಗೂ ವಿಶೇಷ ಪ್ರಯೋಜನವಾಗಲು ಇಲ್ಲಿಯೇ ಹಲವು ಬ್ಯಾಂಕುಗಳು ಜನ್ಮತಾಳಿರುವುದಲ್ಲದೆ, ಮಂಗಳೂರಿನ ಕೆಲವು ಬ್ಯಾಂಕುಗಳೂ ಶಾಖೆಗಳನ್ನೇರ್ಪಡಿಸಿಕೊಂಡಿವೆ. ಪರಜಿಲ್ಲೆಯ ಬ್ಯಾಂಕುಗಳ ಶಾಖೆಗಳೂ ಸದ್ಯದಲ್ಲಿಯೇ ಬರಲಿವೆಯಂತೆ. ವಾರಪತ್ರಿಕೆ, ಮಾಸಪತ್ರಿಕೆಗಳೂ ಕ್ರಮವಾಗಿ ಪ್ರಕಟವಾಗುತ್ತಲಿವೆ. ಪ್ರಸಿದ್ಧ ಇನ್ಶೂರೆನ್ಸ್ ಕಂಪೆನಿಗಳ ಪ್ರಾತಿನಿಧ್ಯವಿಲ್ಲದ್ದು ಈಗಲೀಗ ಇಲ್ಲಿಯೇ ದಿ ಕೆನರಾ ಮ್ಯುಚುವಲ್ ಇನ್ಶೂರೆನ್ಸ್ ಕಂಪೆನಿಯು ಸ್ಥಾಪಿತವಾಗಿದ್ದು, ಈ ಸಂಸ್ಥೆಯ ಈ ಚಿಕ್ಕ ಅವಧಿಯ ಕಾರ್ಯಭಾರವು ಕರ್ಣಾಟಕದ ಎಲ್ಲಾ ಕಂಪೆನಿಗಳ ದಾಖಲೆಯನ್ನು ವಿಾರಿಸುವಂಥಾದ್ದಾಗಿದ್ದು, ಇಷ್ಟರಲ್ಲೆ ವಿಮಾಪ್ರಪಂಚದಲ್ಲಿ ರಜತಪೀಠಕ್ಕೊಂದು ಯೋಗ್ಯಸ್ಥಾನವನ್ನು ಕಲ್ಪಿಸಿಯದೆ.

ಉಡುಪಿ ನಗರದ ಹೊರನಲಯವೆಂಬಂತೆ ಪ್ರತಿಯೋರ್ವನೂ ದರ್ಶಿಸಬೇಕಾದ ಸ್ಥಳವೆಂದರೆ 'ಮಣಿಪಾಲ'. ಇದು ಇಲ್ಲಿಯ ಪ್ರಸಿದ್ಧ ಡಾಕ್ಟರರೂ, ವ್ಯವಹಾರಕುಶಲರೂ, ಬ್ಯಾಂಕು ಮತ್ತು ಜೀವವಿಮಾ ಸಂಸ್ಥೆಗಳ ನಿರ್ಮಾಣಕರ್ತರೂ ಆದ ಶ್ರೀ. ಟಿ. ಮಾಧವ ಪೈಗಳ ಯೋಜನೆ. ಕೆಲವು ವರ್ಷಗಳ ಹಿಂದೆ ಬರೇ ಗುಡ್ಡಗಾಡಿನಂತಿದ್ದ ಇದು ಇಂದು ಭಾವೀ ನಗರದಂತೆ ತೋರುತ್ತಿದೆ. ಚಿಕ್ಕದೊಂದು ಹಂಚಿನ ಕಾರ್ಖಾನೆಯೂ, ಕ್ಷಯರೋಗಿಗಳಿಗಾಗಿ ಆರೋಗ್ಯಭವನವೂ ಇಷ್ಟರಲ್ಲೇ ನಿರ್ಮಿತವಾಗಿದ್ದು, ವಸತಿಗೃಹಗಳಿಗೂ ಯೋಗ್ಯ ಏರ್ಪಾಡಿದೆ. ಇಲ್ಲಿಂದಲೇ ಮುಂದೆ ಉಡುಪಿಗೆ ವಿದ್ಯುಚ್ಛಕ್ತಿಯೂ ಒದಗಿಸಲ್ಪಡಬಹುದು.

ವಿಹಾರಕ್ಷೇತ್ರಗಳಿಗೂ ಇಲ್ಲಿ ಕಡಿಮೆಯಿಲ್ಲ. ಪುರದ ಹೊರ ವಲಯದಲ್ಲಿ ಹೊತ್ತಾರೆ ಹಾಗೂ ಬೈಗಿನ ತಂಗಾಳಿಯ ಸೇವನೆಗಾಗಿ ಆನಂದದಿಂದ ಅಡ್ಡಾಡಲು ಯೋಗ್ಯವಾದ ಸ್ಥಳಗಳಿವೆ. ಐತಿಹಾಸಿಕ ಪ್ರಾಮುಖ್ಯತೆಯ ಸ್ಥಳಗಳೂ ಅನೇಕವಿವೆ. ಇಲ್ಲಿಂದ ಮಂಗಳೂರಿಗೂ, ಕುಂದಾಪುರಕ್ಕೂ, ಶಿವಮೊಗ್ಗಾ ಜಿಲ್ಲೆಗೂ, ಮೋಟಾರು ಬಸ್ಸಿನ ಅನುಕೂಲತೆಗಳಿವೆ. ಮಲ್ಪೆಯಿಂದ ಸ್ಟೀಮರು ಸೌಕರ್ಯವೂ ಇದೆ. ಪರಸ್ಥಳದವರಿಗಾಗಿ ಲೋಕಲ್ ಫಂಡ್ ಮುಸಾಫರಿ ಬಂಗ್ಲೆಯೂ ಸತ್ರವೂ, ಮೋಟಾರು ಕಂಪೆನಿಗಳ ಭವ್ಯವಾದ ಮಂದಿರಗಳೂ ಇವೆ. ಯಾತ್ರಿಕರೇ, ಪ್ರವಾಸಿಗಳೇ ಬನ್ನಿ ನಮ್ಮ ಉಡುಪಿಗೆ. ಪ್ರಕೃತಿ ಸೌಂದರ್ಯೋಪಾಸನೆಯನ್ನು ಮಾಡಿರಿ. ಸೃಷ್ಟಿವೈಚಿತ್ರ್ಯದ ಸೊಬಗನ್ನು ಸವಿಯಿರಿ. ಶ್ರೀಕೃಷ್ಣನ ದರ್ಶನ ಗೈದು ಪಾವನರಾಗಿರಿ.


## NOTICE

Applications are invited from young men who have passed S. S. L. C. examination with Co-operative training preferably for the post of a Clerk in the Mangalore Co-operative Town Bank Ltd., Mangalore, to reach the undersigned before 16—1—36 on a pay of Rupees 25—1—30—2—50 per month.

Mangalore Co-op: Town Bank Ltd. Mangalore. 3-1-36.

U. Srinivasa

ರಸಕರ್ಪೂರವಿಲ್ಲದೆ

## ನಿಮ್ಮ ಯಕೃತ್ತಿನ ಪಿತ್ತರಸವನ್ನು ಎಚ್ಚರಗೊಳಿಸಿರಿ.

ಆಗ ನೀವು ಒಂದು ಬಸ್ಸನ್ನಾದರೂ ದೂಡಬಲ್ಲೆವೆಂಬ ಅನುಭವ ಪಡೆದು, ನಿಮ್ಮ ಹಾಸಿಗೆಯಿಂದ ಹಾರುವಂತಾಗುವುದು.

ನಿಮ್ಮಲ್ಲಿ ಸಿಡುಕತನವೂ, ಜಿಗುಪ್ಸೆಯೂ, ಕಂಡು ಬಂದರೆ, ಪ್ರಪಂಚವು ನಿಸ್ಸಾರವಾಗಿ ತೋರಿದರೆ, ಧಾರಾಳವಾಗಿ ಲವಣಗಳನ್ನೂ ಪ್ರಪಸಾಧಕಗಳನ್ನೂ, ಅಸಾರ್ಥಕವಾದ ಪಾನೀಯಗಳನ್ನೂ ರುಚಿಕರವಾದ ಭೇದಿಯ ಔಷಧಗಳನ್ನೂ ಅಸಹ್ಯವಾದ ಜುಲಾಬಿನ ಮದ್ದುಗಳನ್ನೂ ಸೇವಿಸಿ, ಅವುಗಳು ನಿಮ್ಮನ್ನು ಸುಖಿಗಳನ್ನಾಗಿಯೂ ಉತ್ಸಾಹಿಗಳನ್ನಾಗಿಯೂ ಮಾಡುತ್ತವೆಂದೂ, ನವಶಕ್ತಿಯನ್ನು ತುಂಬುತ್ತಿವೆ ಎಂದೂ ತಿಳಿಯಬೇಡಿ.

ಏಕೆಂದರೆ ಅವು ನಿಮ್ಮನ್ನು ಹಾಗೆ ಮಾಡಲಾರವು. ಅವು ನಿಮ್ಮ ಕರುಳುಗಳನ್ನು ಮಾತ್ರ ಸಡಿಲಿಸಬಲ್ಲವು. ಆದರೆ ಅಷ್ಟು ಮಾತ್ರದಿಂದಲೇ ಇದರ ಮೂಲ ಮುರಿಯುವುದಿಲ್ಲ. ನಿಮ್ಮ ಜಿಗುಪ್ಸೆಗೆ ಮುಖ್ಯ ಕಾರಣವೆಂದರೆ ನಿಮ್ಮ ಯಕೃತ್ತ್ಯ. ಅದು ನಿತ್ಯವೂ ನಿಮ್ಮ ಕರುಳೊಳಗೆ ಎರಡು ಪೈಂಟ್ ಪಿತ್ತದ ದ್ರವವನ್ನು ಹೊರ ಸುರಿಯಬೇಕಾಗಿದೆ.

ಈ ಪಿತ್ತರಸವು ಸರಿಯಾಗಿ ಹೊರಸುರಿಯುವುದಿಲ್ಲವಾದರೆ, ನಿಮ್ಮ ಆಹಾರವು ಜೀರ್ಣವಾಗುವುದಿಲ್ಲ. ಅದು ಕರುಳಲ್ಲಿಯೇ ಹಾಳಾಗುತ್ತದೆ. ವಾಯುವು ನಿಮ್ಮ ಹೊಟ್ಟೆಯ ವರೆಗೆ ತುಂಬಿಕೊಳ್ಳುತ್ತದೆ. ನಿಮಗೆ ಸ್ಥೂಲವಾದ ಕೆಟ್ಟ ರುಚಿ ಇರುತ್ತದೆ. ನಿಮ್ಮ ಶ್ವಾಸೋಚ್ಛ್ವಾಸವು ಹೊಲಸಾಗಿರುತ್ತದೆ. ನಿಮ್ಮ ತಲೆ ನೋಯುತ್ತದೆ. ನಿಮಗೆ ಸ್ವಲ್ಪವೂ ದೇಹ ಶಾಂತಿ ಇಲ್ಲ. ನಿಮ್ಮ ಇಡೀ ಶರೀರವೇ ವಿಷಮಯವಾಗಿರುತ್ತದೆ.

ಸುಪ್ರಸಿದ್ಧವಾದ ಖಂಡಿತವಾಗಿಯೂ ಗುಣಕಾರಿಯಾದ ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸುವುದರಿಂದ, ಅವರಡು ಪೈಂಟ್ ಪಿತ್ತರಸವು ಸರಾಗವಾಗಿ ಹರಿಯುವಂತಾಗಿ, ನಿಮ್ಮ ಉತ್ಸಾಹವು ಹೆಚ್ಚುತ್ತದೆ. ಇದರಲ್ಲಿ ಆಶ್ಚರ್ಯಕರವಾದ, ಹಾನಿಕರವಲ್ಲದ, ಮೃದುವಾದ ಸಸ್ಯಾಹಾರವಿದೆ. ಸರಾಗವಾಗಿ ಪಿತ್ತರಸವನ್ನು ಹರಿಯುವಂತೆ ಇದು ಮಾಡುವಾಗ, ಆದ್ಭುತವೆನಿಸುತ್ತದೆ. ನಿಜವಾಗಿಯೂ ಆರೋಗ್ಯವನುಂಟು ಮಾಡುವ ಸುಪ್ರಸಿದ್ಧವಾದ ಈ ಕಾರ್ಟರರ ಗುಳಿಗೆಗಳನ್ನು ಉಪಯೋಗಿಸಿರಿ. ಪ್ಯಾಕೇಟಿನ ಮೇಲೆ 'ಕಾರ್ಟರ್'ರ ಹೆಸರನ್ನು ಹುಡುಕಿರಿ.

For all kinds of
NEAT AND ACCURATE PRINTING,
please consult
**The Saraswathi Printing Works, Ltd.,**
MANGALORE, S. K.

## ಸಿದ್ಧ ಮಂತ್ರ.

**ಇದೇ ಸಿದ್ಧ ವಶೀಕರಣ ಮಂತ್ರವಾಗಿದೆ.**

ಈ ಮಂತ್ರವನ್ನು ಉಚ್ಚರಿಸಿದ ಮಾತ್ರದಿಂದಲೇ ಅತ್ಯಂತ ಕಷ್ಟತರವಾದ ಉದ್ದೇಶವಾದರೂ ಸಫಲವಾಗುವುದು. ನಿಮಗೆ ಬೇಕಾದಾತನ ಬಹಳ ಕಠಿನ ಹೃದಯವೆಯೂ, ಗರ್ವಿಷ್ಠಳೂ ಆಗಿದ್ದರೂ ಕೂಡ, ಆತನ ಈ ಮಂತ್ರದಿಂದ ನಿಮ್ಮ ಒಳಿಗೆ ಬರುವಳು. ಈ ಮಂತ್ರಬಲದಿಂದ ನಿಮಗೆ ಪರೀಕ್ಷೆಗಳಲ್ಲಿ ಜಯ, ವ್ಯಾಪಾರದಲ್ಲಿ ಲಾಭ, ವ್ಯಾಜ್ಯ ವ್ಯವಹಾರಗಳಲ್ಲಿ ಯಶಸ್ಸು ಉಂಟಾಗುವದು ಮಾತ್ರವಲ್ಲದೆ, ನಿಮಗೆ ಆದರಿಂದ ಅಭಿವೃದ್ಧಿಯೂ, ಪುತ್ರ ಐಶ್ವರ್ಯಾದಿಗಳ ಪ್ರಾಪ್ತಿಯೂ ಲಭಿಸುತ್ತವೆ. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುತ್ತದೆ. ನೀವು ಒಂದು ರೂಪಾಯಿಯನ್ನು ವೆಚ್ಚಮಾಡಿ, ವಿಜಯವನ್ನು ಪಡೆಯಿರಿ; ಅಥವಾ ಇದು ಸುಳ್ಳೆಂದು ರುಜುಪಡಿಸಿ 50 ರೂಪಾಯಿಗಳ ಬಹುಮಾನಕ್ಕೆ ಪಾತ್ರರಾಗಿರಿ.

**Gupta Mantra Bhandar,**
No. 43, P. O. Katri Sarai (Gaya.)

ಎಚ್ಚರಿಕೆ! ಮೋಸಗಾರರ ವಿಷಯದಲ್ಲಿ ಎಚ್ಚರದಿಂದಿರಿ!!

**(100 ರೂಪಾಯಿಗಳ ಬಹುಮಾನ.)**

## ಗುಪ್ತ ವಶೀಕರಣ ಯಂತ್ರ.

ಈ 'ಯಂತ್ರ'ವನ್ನು ಒಬ್ಬನು ತನ್ನ ಸ್ವಾಧೀನವಿರಿಸಿಕೊಂಡ ಮಾತ್ರದಿಂದಲೇ, ಅತ್ಯಂತ ಕಷ್ಟತರವಾದ ಉದ್ದೇಶವಾದರೂ ನೆರವೇರುವುದು. ಇದರಿಂದ ಕೆಟ್ಟ ಗ್ರಹಗಳ ಬಾಧೆ ತೊಲಗುವುದು; ಶತ್ರುಗಳ ಮೇಲೆ ಜಯಲಾಭ ದೊರಕುವುದು; ನಿಮಗೆ ಬೇಕಾದಾತ ನಿಮ್ಮ ಹಿಡಿತದೊಳಗೆ ಬರುವಂತಾಗುವುದು. ಪರೀಕ್ಷೆ, ವ್ಯಾಪಾರ, ವ್ಯಾಜ್ಯ ಮೊಕದ್ದಮೆಗಳಲ್ಲಿಯೂ ಕುದುರೆಗಳ ಜೂಜು, ಸೋಡ್ತಿ, ನೌಕರಿಗಳಲ್ಲಿಯೂ, ಪುತ್ರ ಮತ್ತೂ ಅತುಳ ಸಂಪತ್ತಿನ ಪ್ರಾಪ್ತಿಯಲ್ಲಿಯೂ, ಋಣ ಪರಿಹಾರ, ಅಪಾಯಕಾರಕ ರೋಗನಿವಾರಣೆಯಲ್ಲಿಯೂ ನಿಮಗೆ ಜಯಲಾಭವು ಸಿಕ್ಕುವುದು. ಇದು ನಿಮ್ಮನ್ನು ಅದೃಷ್ಟಶಾಲಿಯಾಗಿ ಮಾಡುವುದು. ಯಾರು ಇದನ್ನು ಸುಳ್ಳೆಂದು ರುಜುವಾತು ಮಾಡಿಕೊಡುವರೋ ಅವರಿಗೆ ಬಹುಮಾನ ರೂ. 100. ಬೆಲೆ ರೂ. 2. ಜೆಳ್ಳಿಯ ಮುಚ್ಚಳದಕ್ಕೆ ರೂ. 8—4; ಚಿನ್ನದ ಮುಚ್ಚಳದಕ್ಕೆ ರೂ. 12.

**Mahashakti Mantra Ashram,**
No. 10, P. O. Parabalpore, Patna.

ಮನೋಹರವಾದ ಬಣ್ಣಕ್ಕಾಗಿ
ಕೇರಳ ವೆಪ್ ಸಾಬೂನನ್ನೇ
ಉಪಯೋಗಿಸಿ.

ಇದರಲ್ಲಿ ಆರೋಗ್ಯವನ್ನೂ ಸೌಂದರ್ಯವನ್ನೂ ಹೆಚ್ಚಿಸುವ ಗುಣವಿರುವಂತೆ, ಮಾರ್ಗೋಸಾ, ನೀಮ್ ಎಣ್ಣೆಗಳ ಸತ್ವವನ್ನು ಉಪಯೋಗಿಸಿದೆ. ಇದೇ ಸ್ನಾನದ ಆನಂದ.

**ಕೇರಳ ಸೋಪ್,**
**ಇನ್ಸ್ಟಿಟ್ಯೂಟ್, ಕಲ್ಲಿಕೋಟೆ.**

ಜೇಷ್ ರೆಪ್ರೆಸೆಂಟೇಟಿವ್:— ಆರ್. ಸಿ. ದಲಾಲ್, ಕಲ್ಲಿಕೋಟೆ.

## THE TRAVANCORE
# NATIONAL BANK, LIMITED.

INCORPORATED IN TRAVANCORE 1912.

### MANGALORE BRANCH.

We have pleasure in announcing starting of a new chit Fund at our office from the 11th January 1936 consisting of:—

| | | | | | | | |
|---|---|---|---|---|---|---|---|
| A | class tickets of Rs. | 2000/— | each at Rs. | 80/— | per ticket per mensem. | | |
| B | ... | ... | 1000/— | ... | 40/— | ... | ... |
| C | ... | ... | 500/— | ... | 20/— | ... | ... |
| D | ... | ... | 250/— | ... | 10/— | ... | ... |

Remittances towards chit Fund are received at par at all our 41 branches and the agencies mentioned below:—

Bezwada: In Andhra Bank Ltd.,
Calcutta: In National City Bank of New York,
Colombo: In Indian Bank Ltd.,
Erode: In Indo Commercial Bank Ltd.,
Tuticorin: In Indian Bank Ltd.,
LONDON: MIDLAND BANK LTD.

*Please apply for copies of rules and application forms to the Mangalore Branch or any of the other branches.*

## THE GENERAL INSURANCE BANK OF INDIA LIMITED.,

*OPPOSITE TALUK POLICE STATION,*

**MANGALORE.**

ESTD. 1933.

AS ON 31ST OCTOBER 1935.

BENEFIT AMOUNT PAID EXCEEDS RS. 13,250/—
RESERVE FUND EXCEEDS RS. 4,300/—

WE HAVE THREE SCHEMES FOR YOU.

**LIFE** **MARRIAGE** **BIRTH**

ADMISSION FEE RS. 5—8—0 ONLY. (By Instalments if required)
MONTHLY PREMIUM RUPEE ONE ONLY.

**WANTED Special Agents & Representatives on Liberal Terms.**

*For Full Prospectus & Agency Terms please call at or write to:—*

THE GENERAL INSURANCE BANK OF INDIA LIMITED., MANGALORE.

Mangalore.
Dated 5th November '35.

**P. K. MENON**
*Secretary.*

***MODERN PRINTING! AT MODERATE RATES***

CONSULT

## The Saraswathi Printing Works, Limited,

CANTONMENT, MANGALORE.

# ಉಡುಪಿಯ ಪರ್ಯಾಯ.

ಪರ್ಯಾಯವು ಉಡುಪಿಯಲ್ಲಿಯ, ಅದರಲ್ಲಿಯೂ, ಅಲ್ಲಿಯ ಶ್ರೀಕೃಷ್ಣದೇವಾಲಯದಲ್ಲಿಯ, ಒಂದು ವಿಶೇಷವಿಷಯ. ಅಲ್ಲಿಯ ಅಷ್ಟಮಠಾಧೀಶರಾದ ಎಂಟು ಮಂದಿ ಯತಿಗಳ ಕ್ರಮ ಪ್ರಾಪ್ತವಾದ ಶ್ರೀಕೃಷ್ಣಪ್ರತೀಕದ ಪೂಜಾರಾಧನೆಗಳನ್ನು ಅನತಿ ಪಾತವಿಲ್ಲದಂತೆ, ಅನುಪಾತ್ಯಯವನ್ನು ಮಾಡದೆ, ಅನುಕ್ರಮವಾಗಿ ಒಬ್ಬರಾದ ಮೇಲೊಬ್ಬರು ಅನುಪೂರ್ವಿಯಿಂದ ನೆರವೇರಿಸಿಕೊಂಡುಬರುವ ಪದ್ಧತಿ ಭಾರತಭೂಮಿಯ ಇನ್ನಾವ ಸ್ಥಾಪನೆಗಳಲ್ಲಿಯೂ ಕ್ಷೇತ್ರಗಳಲ್ಲಿಯೂ ತೋರಲಿಲ್ಲ; ಇದೊಂದು ಇಲ್ಲಿ ಮಾತ್ರ ವಿಶೇಷಪದ್ಧತಿ. ಈ ಪದ್ಧತಿಯಂತೆ ಎರಡು ವರ್ಷಗಳಿಗೆ ಒಮ್ಮೆ ಒಂದೊಂದು ಮಠದ ಒಬ್ಬೊಬ್ಬರು ಸನ್ಯಾಸಿಗಳು ಒಬ್ಬರ ಮೇಲೊಬ್ಬರು ಏತತ್ಕಾರ್ಯಕ್ಕಾಗಿ ಉಳಿದೇಳ್ವರು ಮಠಾಧಿಪತಿಗಳಿಂದ ಪಟ್ಟಾಭಿಷಿಕ್ತರಾಗಿ, ತಮ್ಮ ತಮ್ಮ ಪರ್ಯಾಯಕಾಲವಾದ ಆ ಎರಡು ವರ್ಷಗಳಲ್ಲಿ ದೇವಾಲಯದ ಆಡಳಿತವನ್ನೂ ಪ್ರತೀಕದ ಪೂಜಾರಾಧನಗಳನ್ನೂ ನಿಯಮಿತವಾಗಿ ನಡೆಯಿಸಿ ಬರುತ್ತಾರೆ.

ಇಂತಹ ಪರ್ಯಾಯವೂ ಅದರ ಅನುಕ್ರಮವಾದ ಆನುಪೂರ್ವಿಯೂ ಈ ನಮ್ಮ ಉಡುಪಿಯಲ್ಲಿ ಪ್ರಥಮತಃ ಏಕೆ, ಹೇಗೆ ಪ್ರಚಾರದಲ್ಲಿ ಬಂದುವೆಂಬುದನ್ನು ಇಲ್ಲಿ ನೋಡುವ! ದ್ವೈತ ಸಿದ್ಧಾಂತದ ಸ್ಥಾಪನಾಚಾರ್ಯರಾದ ಶ್ರೀ ಮಧ್ವಾಚಾರ್ಯರು ದ್ವಾರಕಾಧೀಶನಾದ ಆ ಶ್ರೀಕೃಷ್ಣಪರಮಾತ್ಮನ ಬಾಲಸುಂದರ ವಿಗ್ರಹವನ್ನು ಪರಶುರಾಮಕ್ಷೇತ್ರದ ಉಪಾಂಗವಾದ ಈ ನಮ್ಮ ಮಹಾಕ್ಷೇತ್ರದಲ್ಲಿ ಪ್ರತಿಷ್ಠಾಪಿಸುವಂದು, ವಿಗ್ರಹದ ಆರಾಧನಕ್ಕಾಗಿ ಎಂಟು ಮಂದಿ ಬಾಲಯತಿಗಳನ್ನೂ ಆರಿಸಿ ದೀಕ್ಷೆಗೊಟ್ಟು ನಿಲ್ಲಿಸಿ, ಈ ಎಣ್ಬರಿಗೂ ಅವರ ಪ್ರಶಿಷ್ಯಪರಂಪರೆಗೂ ಆ ಮಹತ್ಕಾರ್ಯವನ್ನು ವಹಿಸಿಕೊಟ್ಟು, ಅವರ ಆತ್ಮಪೂಜಾಪ್ರವಚನಗಳು ಸರಾಗವಾಗಿ ನಡೆವುದಕ್ಕೆ ಅಗತ್ಯವುಳ್ಳ ದ್ರವ್ಯಸಂಚಯವನ್ನು ಪರಸ್ಥಳಗಳಿಂದ ಸಂಚರಿಸಿ ತಂದು ಒದಗಿಸಿಕೊಡುವ ಸಹಾಯಾರ್ಥಕ್ಕೆ ಮೇಲಿನ ರಾಮಕ್ಷೇತ್ರದ ತಮ್ಮ ಇತರ ಯತಿಶಿಷ್ಯರ ಪ್ರಶಿಷ್ಯ ಪರಂಪರೆಯನ್ನು ನಿಯೋಜಿಸಿದ್ದರು. ಉಡುಪಿಯ ತಾತ್ಕಾಲಿಕ ಅಷ್ಟಮಠೀಯರಾದ ಈ ಶಿಷ್ಯರ ಸ್ವಾರ್ಚನೆಗಾಗಿ ತಮ್ಮ ಕರಾರ್ಚಿತ ಪ್ರತೀಕಗಳಲ್ಲಿ ಮುಖ್ಯವಾಗಿ ಒಂದೊಂದನ್ನು ಅವರವರಿಗೆ ಕೊಟ್ಟಿದ್ದರೂ, ಸಮುದಾಯಾರ್ಚನೆಗಾಗಿ ಆ ಶ್ರೀಕೃಷ್ಣನ ಪ್ರತೀಕವೇ ಪ್ರಧಾನವಾಗಿರಬೇಕೆಂದು - ತಮ್ಮ ಅಭಿಮತವಾದುದರಿಂದ ಶ್ರೀಮದಾಚಾರ್ಯರು ಈ ಎಂಟು ಮಂದಿಗೂ ಶ್ರೀಕೃಷ್ಣಮಂದಿರದ ಸುತ್ತಲಿನ ಪೌಳಿಗಳ ಎಂಟು ಕೊಟ್ಟಡಿಗಳಲ್ಲಿ ಅವರವರ ನಿವಾಸಗಳನ್ನು ಪರಿಕಲ್ಪಿಸಿಯೂ ಕೊಟ್ಟಿದ್ದರು. ಈ ಕೊಟ್ಟಡಿಗಳಲ್ಲಿಯೇ ಅವರವರು ಇದ್ದುಕೊಂಡು, ತಮ್ಮಲ್ಲಿ ಆಶ್ರಮಜ್ಯೇಷ್ಠರಿಗೆ ಮುಖ್ಯ ಪೂಜೆಗಳನ್ನು ವಹಿಸಿ, ಇತರರು ಅವರ ಸಹಾಯಕರಾಗಿ ಮಿಕ್ಕ ಪೂಜೆಗಳನ್ನೂ ತಮ್ಮತಮ್ಮ ಪ್ರವಚನಗಳನ್ನೂ ಒಂದೆಡೆಯಲ್ಲಿ ಏಕೀಭವಿಸಿ ನಡೆಯಿಸುತ್ತ ಬರುತ್ತಿದ್ದುದು ಬಹುಶಃ ಪೂರ್ವಪದ್ಧತಿಯಾಗಿರಬಹುದು. ಇದು ಹೀಗೇ ನಡೆವಲ್ಲಿ, ಮೇಲಿನ ಮಠೀಯರು ತಂದೊಪ್ಪಿಸುತ್ತಿದ್ದ ಸಹಾಯವೂ, ಯಾತ್ರಿಕರು ಸಮರ್ಪಿಸುತ್ತಿದ್ದ ಸೇವಾರೂಪವಾದ ಕಾಣಿಕೆಗಳೂ, ಸೇರುತ್ತ ಬಂದು,-ಶ್ರೀಕೃಷ್ಣಾರಾಧನೆ ಸರಾಗವಾಗಿ ನಡೆಯುತ್ತ ಬಂದುದಲ್ಲದೆ, ಅಷ್ಟಯತಿಗಳ ಭಿಕ್ಷಾಪಾತ್ರವೂ ತುಂಬುತ್ತ ಬಂದು, ಅವರವರಿಗೆ ಬೇಕಾದಂತೆ ಮಠಗಳೂ ಗ್ರಾಮಭೂಮಿಗಳೂ, ಶ್ರೀಕೃಷ್ಣದೇವಾಲಯಕ್ಕೂ ಅಲ್ಪಸ್ವಲ್ಪ ಆಢ್ಯತೆಯೂ, ಉಂಟಾಗುತ್ತ ಬಂದಿರಬೇಕು. ಮುಂದೆ ಕೆಲವು ಕಾಲದ ಮೇಲೆ, ಮೇಲಿನವರ ಸಹಾಯವು ಅಷ್ಟಾಗಿ ದೊರೆಯದೆ, ವೆಚ್ಚಕ್ಕೆ ಕಟ್ಟಾಗಿ, ಇಲ್ಲಿಯ ಅಷ್ಟಮಠಗಳ ಅಧಿಪತಿಗಳಲ್ಲಿಯೂ ಕೆಲವರು ವಿದ್ಯಾಸಂಪಾದನೆಗೂ ಹಲವರು ದ್ರವ್ಯಸಂಪಾದನೆಗೂ ಪರಸ್ಥಳಗಳಿಗೆ ಸಂಚಾರಮಾಡಬೇಕಾದ ಪ್ರಮೇಯವೊದಗಿದುದರಿಂದ, ಎಲ್ಲರೂ ಏಕೀಭವಿಸಿ ಇಲ್ಲಿ ನಡೆಯಿಸಬೇಕಾಗಿದ್ದ ಆ ಪೂಜಾಪ್ರವಚನಗಳ ಪೂರ್ವಪದ್ಧತಿ ತಪ್ಪುವ ಸಂಭವವುಂಟಾಗಿ, ಅನಂತರ ಮೇಲೆ ಹೇಳಿದ ಆ ಪೂಜಾಧಿಕಾರದ ಪರ್ಯಾಯದ ಪದ್ಧತಿ ಆಗಳಿನ ಕಾಲದಲ್ಲಿ ನಿರ್ವಾಹವಿಲ್ಲದೆ ನಿರ್ಮಿತವಾಗಬೇಕಾಯಿತು. ಈ ಪರ್ಯಾಯದ ಪದ್ಧತಿಯ ಪರಿಕಲ್ಪನೆ ತತ್ಕಾಲದಲ್ಲಿ ಶ್ರೀ ಸೋದೆಯ ಮಠದ ಅಧಿಪತಿಗಳಾಗಿದ್ದ ಗುರುರಾಜರೆನಿಸಿದ ಶ್ರೀ ವಾದಿರಾಜ ಸ್ವಾಮಿಗಳದೆಂದು ಬಲ್ಲವರು ಹೇಳುತ್ತಾರೆ. ಅದಕ್ಕೂ ಹಿಂದೆ ಎರಡು ತಿಂಗಳಿಗೊಮ್ಮೆ ಪರಿವರ್ತಿಸಬೇಕಾಗಿದ್ದುದೊಂದು ಇದೇ ರೀತಿಯ ಪರ್ಯಾಯ ಪದ್ಧತಿ ಆವ ಕಾಲದಲ್ಲಿಯೋ ಆರಿಂದಲೋ ಆರಂಭಿಸಲ್ಪಟ್ಟು ಆಗಳಿಗೂ ನಡೆದು ಬರುತ್ತಿದ್ದಿತೆಂದು ಆರದೋ ಪ್ರವಾದವಿದೆ. ಆದರೆ, ಇದಕ್ಕೆ ಆಧಾರವೇನೂ ದೊರೆದಿಲ್ಲ.

ಗುರುರಾಜರಾದ ಶ್ರೀ ವಾದಿರಾಜರ ಅಪೂರ್ವವಾದ ವಾಗ್ಮಿತೆಯೂ, ವಿದ್ಯೆಯೂ, ಪದೈಶ್ವರ್ಯಗೌರವವೂ ಅವರ ಕಾರ್ಯಕ್ಷೇತ್ರದ ವಿಶೇಷವಾದ ವಿಸ್ತೃತಿಗಾಗಿ ಇತರ ಎಲ್ಲರಿಗೂ ಮೊದಲು ಅವರನ್ನೇ ಪ್ರೇರೇಪಿಸಿರಬೇಕು. ಕೂಪಕೂರ್ಮದಂತೆ ಇದ್ದಲ್ಲಿಯೇ ಇದ್ದುಕೊಂಡಿರಲು ಅವರ ಮನಸ್ಸು ಕೇಳದೆ, ಮತಾರ್ಥ ಸಂಬಂಧವಾದ ಸ್ವಪರೋಪಕಾರದ ದಿಗ್ವಿಜಯಾಭಿಲಾಷೆಯನ್ನು ಅವರಲ್ಲಿ ಅತಿಶಯವಾಗಿಯೇ ಉಂಟುಮಾಡಿರಬೇಕು. ಅದಕ್ಕಾಗಿ ಪೂರ್ವಾಚಾರಕ್ಕೆ ವ್ಯತಿಕ್ರಮವು ವಿಶೇಷವಾಗಿಲ್ಲದಂತೆ ಪೂರ್ವ ಪದ್ಧತಿಯನ್ನು ಅಲ್ಪಸ್ವಲ್ಪ ಸುಧಾರಿಸಿ, ಸುವ್ಯವಸ್ಥಿತ ಸ್ಥಿತಿಗೆ ತರತಕ್ಕುದು ಯೋಗ್ಯವೂ ಅಗತ್ಯವೂ ಎಂದು ಇವರ ತಲೆಗೆ ಬಂದಿರಬೇಕು. ಮೇಲಾಗಿ, ಆಗಳಿನ ಕಾಲದಲ್ಲಿ ಅಷ್ಟಮಠೀಯ ಅಧಿಪತಿಗಳೊಳಗೆಲ್ಲ ಅವರೇ ಆಢ್ಯರೂ ಸರ್ವವಿಧದಿಂದಲೂ ಉತ್ಕೃಷ್ಟರೂ ಆಗಿದ್ದುದರಿಂದ, ಅವರೇ ಆ ಕಾರ್ಯವನ್ನು ಕೈಕೊಳ್ಳಲು ಅತ್ಯಂತ ಅರ್ಹರೂ, ಇತರ ಯತಿಗಳು ಅದನ್ನು ಅನುಸರಿಸಿ ತಮಗೂ ಅವರಿಗೂ ಎಲ್ಲರಿಗೂ ಗುಣಕರವಾದ ಅದನ್ನು ಆಕ್ಷೇಪಿಸದೆ ಆಚರಿಸಿ ಬರಲು ಬಲಾತ್ಕಾರವಿಲ್ಲದೆಯೇ ಬದ್ಧರೂ ಆಗಿರಬೇಕು. ಈ ಬಗೆಯಾಗಿ ಅಲ್ಲದಿದ್ದರೆ, ಇಂದಿನ ಈ ಪರ್ಯಾಯಾಧಿಕಾರದ ಪದ್ಧತಿಗೆ ಅವಕಾಶವೇ ಇರುತ್ತಿರಲಿಲ್ಲ. ಸರ್ವ ಪ್ರಕಾರದಿಂದಲೂ ಅತ್ಯುತ್ಕೃಷ್ಟವಾದ ಈ ಸುಧಾರಿತಕ್ರಮದ, ಅಚ್ಚುಕಟ್ಟಾದ ಇದರ ಕಟ್ಟುಕಟ್ಟಳೆಗಳ, ಕಲ್ಪನೆಗೆ ಕಾರಣರಾದೀ ಯತೀಶ್ವರರ ವಿವೇಕವೂ ದೂರದರ್ಶಿತ್ವವೂ ಕೇವಲವಾಗಿ ಕೊಂಡಾಡಲ್ಪಡತಕ್ಕುವೇ.

ಪರ್ಯಾಯದ ಈ ಪದ್ಧತಿಯನ್ನು ಹಿಂದೆ ವಿವರಿಸಿದುದಾಗಿದೆ. ಶ್ರೀ ಕೃಷ್ಣನ ದೇವಾಲಯದ ಎರಡು ವರ್ಷಗಳ ಪೂಜೆಯ ಮತ್ತೂ ಅಧಿಕಾರವನ್ನು ಅಷ್ಟಮಠಗಳ ಅಷ್ಟಯತಿಗಳೂ ಒಬ್ಬರಾದ ಮೇಲೊಬ್ಬರು ವಹಿಸಿಕೊಂಡು ನಡೆಯಿಸಿ ಬರುವುದೇ ಈ ಪದ್ಧತಿ. ಇದರ ವ್ಯಾಪ್ತಿ ಎರಡೇ ವರ್ಷಗಳು. ಈ ಎರಡು ವರ್ಷಗಳ ಅಧಿಕಾರಕ್ಕೆ ಪರ್ಯಾಯವೆಂದು ಹೆಸರಿರುವುದಾದರೂ, ಸಾಮಾನ್ಯವಾಗಿ ಅಂತಹ ಪರ್ಯಾಯದ ಪಟ್ಟವನ್ನು ಏರುವ ಆ ಪ್ರಥಮದಿನಕ್ಕೆ ಮಾತ್ರ ಈಗ ಅದರ ಅನ್ವಯವಾಗುತ್ತಿದೆ. ಪರ್ಯಾಯದ ಪಟ್ಟವನ್ನೇರುವ ಈ ಒಂದು ದಿನದ ಸಮಾರಂಭದ ಆಚರಣೆಯನ್ನು ಕುರಿತು ಈಗ ಆಲೋಚಿಸುವ.

ಮಹಾರಾಜ್ಯಾಧಿಪರ ಪ್ರಥಮ ಪಟ್ಟಾಭಿಷೇಕವು ರಾಜ್ಯಕೀಯ ವಿಷಯದಲ್ಲಿ ಹೇಗೋ ಹಾಗೆ, ಮತಧರ್ಮಸಾಮ್ರಾಜ್ಯದ ಅಧಿಕಾರವಿಷಯದಲ್ಲಿ ಇದೂ ಒಂದು ಪಟ್ಟಾಭಿಷೇಕವೆಂದು ಪರಿಗಣಿಸಲ್ಪಟ್ಟಿದೆ; ಪಡುತ್ತಿದೆ. ಅಂತೇ, ಅಂತಹ ಮಹಾಪಟ್ಟಾಭಿಷೇಕದ ಅಂಗಾಂಗಗಳಾದ ಎಲ್ಲ ಆಚರಣೆಗಳಿಗೂ ಇದರಲ್ಲಿ ಅವಕಾಶವು ಕೊಡಲ್ಪಟ್ಟಿದೆ. ಸಿಂಹಾಸನಾರೋಹಣವು ಹೇಗೋ ಹಾಗೆ ಇದೂ ಒಂದು ಸಿಂಹಾಸನಾರೋಹಣವೆಂಬುದಕ್ಕೆ ನಿದರ್ಶನವಾಗಿ, ಪರ್ಯಾಯಪಟ್ಟಾಂಚಿತರಾದ ಯತಿವರರ ಸ್ವಾರ್ಚಿತ ಮೂಲವಿಗ್ರಹದ ಆಲಯವು ಶ್ರೀಕೃಷ್ಣದೇವಾಲಯದಲ್ಲಿ 'ಸಿಂಹಾಸನ'ವೆಂದೇ ಈಗಲೂ ಕರೆಯಲ್ಪಡುತ್ತಿದೆ. ಅಲ್ಲದೆ, ಪರ್ಯಾಯಪ್ರಾರಂಭದ ಆ ಸುದಿನದಲ್ಲಿ ಮಠಾಧಿಪರೆಲ್ಲರೂ ಸೇರಿ ಕುಳಿತು ಪರ್ಯಾಯಿಗಳಾಗಲುಳ್ಳ ಯತಿಗಳನ್ನು ಪಟ್ಟಾಂಚಿತರಾಗಿ ಒಪ್ಪಿ ಕೈಕೊಳ್ಳುವ ಬಡಗುಮಾಳಿಗೆಯ ಆ ದರ್ಬಾರಿನ ಚಾವಡಿಯ ಅರಳುಗದ್ದುಗೆಯೂ ಸಿಂಹಾಸನವೇ.

ಪರ್ಯಾಯದ ಈ ಪಟ್ಟಬಂಧಮಹೋತ್ಸವವು ಅಂತರಂಗವಾಗಿ ಆಗುವುದಲ್ಲ; ಆಗುವ ಹಾಗೂ ಇಲ್ಲ. ಪರ್ಯಾಯಪ್ರವೇಶದ ಪೂರ್ವಸಿದ್ಧತೆ ಅದಕ್ಕೆ ಮೊದಲು ಏಳೆಂಟು ತಿಂಗಳ ಹಿಂದಿನಿಂದಲೂ ಆಗುತ್ತಿರುತ್ತಿದೆ. ಕ್ಷೇತ್ರದ ವಿಶೇಷಕಾರ್ಯವಾದ ಆ ಅನ್ನದಾನದ ಮುಖ್ಯೋಪಕರಣಗಳಾದ ಬಾಳೆಯೆಲೆಯ ಮತ್ತೂ ಸವುದೆಯ ಅನವರತಸಂಗ್ರಹಕ್ಕಾಗಿ ಬಾಳೆಯ ಮುಹೂರ್ತವೂ ಕಟ್ಟಿಗೆಯ ಮುಹೂರ್ತವೂ ಎಲ್ಲಕ್ಕೂ ಮೊದಲು ನಡೆವ ಕಾರ್ಯಗಳು. ಆ ಮೇಲೆ ಬತ್ತ ಮತ್ತೂ ಅಕ್ಕಿ ಮೊದಲಾದ ಅನೇಕ ಪದಾರ್ಥಗಳ ಸಂಗ್ರಹದ ಮುಹೂರ್ತಗಳೆಷ್ಟೋ ಆಗಲೇ ಬೇಕು. ಇವೆಲ್ಲ ಕಾರ್ಯಗಳೂ ನಿಯಮಿತರಾದ ಜ್ಯೋತಿಷ್ಕರು ನಿರ್ದೋಷವೆಂದು ತೋರಿಕೊಟ್ಟ ಸುಮುಹೂರ್ತಗಳಲ್ಲಿ ನವಗ್ರಹರ ಆರಾಧನದಾನಗಳೊಡನೆ ನೆರವೇರುತ್ತವೆ. ಪರ್ಯಾಯದಿನವು ಸವಿೂಪಿಸಿದಂತೆಲ್ಲ ಆ ಅನಂತಸಂಸಾರಕ್ಕೆ ಅಗತ್ಯವುಳ್ಳ ಉಪಕರಣಗಳ ಪೂರ್ವಸಿದ್ಧತೆಯೂ ಸಾಗುತ್ತ ಹೋಗುತ್ತಿರುವುದು. ಸ್ಥಳದಲ್ಲಿ, ಪರಸ್ಥಳಗಳಲ್ಲಿ ನಿಮಂತ್ರಣಯೋಗ್ಯರಿಗೆ ಆಮಂತ್ರಣಲೇಖಗಳು, ಅದಕ್ಕೂ ಉತ್ತಮರಿಗೆ ಮುಖತಃ ಆಮಂತ್ರಣಗಳು, ಅದಕ್ಕೂ ಮೇಲಿನ ತರಗತಿಯವರಿಗೆ ಗೃಹಾಗಮನಪೂರ್ವಕವಾದ ಆಮಂತ್ರಣಗಳು, ಈ ಮೇರೆಗೆ ದ್ವೈತಸಿದ್ಧಾಂತದ ತಾರತಮ್ಯವನ್ನು ವಿೂರಿಸುವ ಈ ಆಮಂತ್ರಣಗಳಿಗೇ ಎಷ್ಟೋ ದಿನಗಳು ಬೇಕಾಗುವುದು. ಭಾವಿ ಪರ್ಯಾಯಿಗಳಾದ, ಮಠಾಧಿಪತಿಗಳಿಗೆ ಇತರ ಮಠಾಧಿಪತಿಗಳು ತಮ್ಮತಮ್ಮ ಮಠಮಠಗಳಿಗೆ ಕರೆದುನೋಡುವ ಆದರ ಪಟ್ಟದ ದೇವರ ಪೂಜೆ, ಮಾಡುವ ಭಿಕ್ಷೆ, ಪಾದಪೂಜೆ ಮೊದಲಾದ ಪರಸ್ಪರಸಹಕಾರಪೂರ್ವಕವಾದ ಸತ್ಕಾರಗಳು ನಡೆಯಬೇಕಾದುದೂ ಈ ಕಾಲದಲ್ಲಿಯೇ. ಇವಿಷ್ಟೂ ಪರ್ಯಾಯಾರಂಭಕ್ಕೆ ಮೊದಲಾಗಿ ನಡೆವ ಪೂರ್ವಸಿದ್ಧತೆಗಳು.

ಪರ್ಯಾಯಾರಂಭದ ನಿಕಟದಿನಗಳಲ್ಲಿ ಗ್ರಾಮಪಶ್ಚಿಮಿಯಿಂದ ಪ್ರಸಿದ್ಧವಾದ ಪೂರ್ವಾಲಯ—ಪಶ್ಚಿಮಾಲಯಗಳಾದ ಚಿಟ್ಪಾಡಿ—ನಿಡಂಬೂರು ಬೀಡುಗಳನ್ನೂ, ಹತ್ತಿರವಿರುವ ಇತರ ಗೃಹಸ್ಥರಾದ ಗಣ್ಯವ್ಯಕ್ತಿಗಳ ಗೃಹಾರಾಮಗಳನ್ನೂ ಭಾವಿ ಪರ್ಯಾಯಿ ಯತಿವರ್ಯರು ಪಾದಧೂಳಿಯಿಂದ ಪವಿತ್ರೀಕರಿಸಿ ಪಾದಪೂಜೆಯನ್ನೂ ಕಾಣಿಕೆಯನ್ನೂ ಸ್ವೀಕರಿಸಿ, ಆಮಂತ್ರಿಸಿ ಬರುವ ಸಂಪ್ರದಾಯವುಂಟು. ಈ ಸಂಪ್ರದಾಯದಲ್ಲಿ ಜಾತಿ ಮತಗಳ ವ್ಯತ್ಯಾಸವಿಲ್ಲ. ಆಶ್ರಿತರೂ ಹಿತೈಷಿಗಳೂ ಆದ ಅನೇಕ ಸದ್ಗೃಹಸ್ಥರು ಈ ಮಹತ್ಕಾರ್ಯಕ್ಕೆ ತರಕಾರಿ ಮೊದಲಾದ ಪದಾರ್ಥಗಳ ಸಾಸಿರಗಟ್ಟಲೆಯ ಹೊರೆಗಳಿಂದ ಯಥಾಯೋಗ್ಯವಾಗಿ ತಮ್ಮತಮ್ಮ ಸೇವೆಗಳನ್ನು ಪರ್ಯಾಯ ಮಠೀಯರಿಗೆ ಸಮರ್ಪಿಸುವುದೂ ಅವರನ್ನಿವರು ಯಥೋಚಿತವಾಗಿ ಸನ್ಮಾನಿಸುವುದೂ ಈ ದಿನಗಳಲ್ಲಿಯೇ. ಇದರಿಂದ ಈ ಪರ್ಯಾಯದ ಉತ್ತಮಪದ್ಧತಿಯಲ್ಲಿ ಉತ್ಕೃಷ್ಟವಾದ ನೀತಿರೀತಿಗಳ ಪಾಠವೇ ಅಂತರ್ಗತವಾಗಿರುವುದನ್ನು ನಾವು ನೋಡಬಹುದು.

ಇದೆಲ್ಲವೂ ಪರ್ಯಾಯ ಪ್ರಾರಂಭದ ಪೂರ್ವದಿನಗಳ ಪೂರ್ವಸಿದ್ಧತೆಯಾಯಿತು. ಭಾವಿಪರ್ಯಾಯದ ಮಠಾಧೀಶರು ಇತರ ಮಠಾಧಿಪರಿಗೆ ಆಮಂತ್ರಣಪೂರ್ವಕವಾದ ರಾಯಸಗಳನ್ನು ಮೊದಲೇ ಕಳುಹಿದ್ದರೂ, ಪರ್ಯಾಯಪಟ್ಟಾಭಿಷೇಕದ ಮೊದಲದಿನ ಅವರಿಗಿವರು ಮಾಡತಕ್ಕ ಮಹತ್ತ್ವವುಳ್ಳ ಮರ್ಯಾದೆಯ ಕಾರ್ಯವು ಮತ್ತೊಂದುಂಟು. ಪಟ್ಟಾಂಚಿತರಾಗಲುಳ್ಳ ಯತಿಗಳು ಇತರ ಮಠಗಳ ಪೀಠಾರೂಢರನ್ನು ಅವರವರ ಮಠಗಳಿಗೆ ಹೋಗಿ ದರ್ಶನಮಾಡಿ, ನಾಳೆಯ ಮಹತ್ಕಾರ್ಯಕ್ಕೆ ಅವರನ್ನು ಪುನಃ ಸ್ವತಃ ಆಮಂತ್ರಿಸಿ, ಸರಾಗವಾದ ಅದರ ಪೂರಣದಲ್ಲಿ ಅವರಿಲ್ಲರ ಮತ್ತೂ ಅವರ ಆಶ್ರಿತಜನರ ಸಂಪೂರ್ಣ ಸಹಾಯವನ್ನೂ ಕೋರಿಬರುತ್ತಾರೆ. ಅಂತೆ, ಅವರೆಲ್ಲರೂ ಪಟ್ಟಬಂಧೋತ್ಸವಕ್ಕೆ ನಿರ್ಣಯಿಸಲ್ಪಟ್ಟ ಆ ಮಾರನೆಯ ದಿನದ ಮೆರವಣಿಗೆ, ಮಹಾಸಮಾರಾಧನೆ ಮೊದಲಾದ ಕಾರ್ಯಗಳನ್ನು ನೆರವೇರಿಸಿಕೊಡುವುದರಲ್ಲಿ ಆ ಮೊದಲ ರಾತ್ರಿಯಿಂದಲೂ ಒಟ್ಟುಗೂಡಿ ಸಹಕರಿಸುತ್ತಾರೆ. ಇದೊಂದು ಪರಸ್ಪರಸಹಕಾರದ ಮತ್ತೂ ಐಕ್ಯದ ಪಾಠವನ್ನು ನಾವೀ ಪದ್ಧತಿಯಲ್ಲಿ ಕಲಿಯತಕ್ಕುದಿದೆ.

ಮೊದಲ ರಾತ್ರಿಯಲ್ಲಿ ಮಠಾಧೀಶರೆಲ್ಲರ ಪರಸ್ಪರ ಸಹಕಾರದಿಂದ ನಡೆಯತಕ್ಕ ಪರ್ಯಾಯಪ್ರಯುಕ್ತವಾದ ಸಮಾರಂಭವೆಂದರೆ, ಮರುದಿನದ ಮಹಾಸಮಾರಾಧನೆಗಾಗಿ ಮಹಾಭೋಜನಶಾಲೆಯಾದ ಆ ರಾಜಾಂಗಣದಲ್ಲಿ ಅವರವರ ಮಠದ ಜನಗಳನ್ನೂ ಸಾಲುಕತ್ತಿಗಳನ್ನೂ ಅವರವರು ಸ್ವತಃ ಕರೆದು, ತಂದು, ಅಲ್ಲಿ ಅಲ್ಲಲ್ಲಿ ರಾಶಿರಾಶಿಯಾಗಿ ಒಟ್ಟಿರಿಸಿರುವ ತರಕಾರಿಯ ಕಾಯಿಪಲ್ಯಗಳನ್ನು ದೇವತಾಪ್ರಾರ್ಥನಪೂರ್ವಕವಾಗಿ

(೧೨ನೇ ಪುಟಕ್ಕೆ ಮುಂದರಿಸಿಯದೆ)

ವಜ್ರಗಳು ವಜ್ರಗಳು ವಜ್ರಗಳು

ನಮ್ಮಲ್ಲಿ ಆಂಟಖರ್ಪ ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದೂ ಕಲೆಗಳಿಲ್ಲದ ಉತ್ತಮ ವರ್ಗದ 'ಬ್ಲು ಜಾಗ್ಗರ' ವಜ್ರಗಳೂ, 'ಎಕ್ಸಟ್ರೊ ವ್ಹಾಯಿಟ್' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ. ಬೆಲೆಗೆ ತಕ್ಕ ಒಡವೆ ವದಗಿಸಿ ಕೊಡುವವರು—

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್—ರಥಬೀದಿ—ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ತರು.

# THE UDIPI BANK LIMITED

(ESTABLISHED 1925)

KALSANK UDIPI S. KANARA.

ಕಾಲಿಕ ಠೇವಣಾತಿ (ಟ್ರಾವಸ್ ಡಿಪೊಜಿಟು)ಗಳಿಗೆ ಪ್ರತಿನಿತ್ಯದ ಶಿಲ್ಕಿನ ಮೇಲೆ ಸಾ. ಶೇ. 3ರಂತೆ ವಿಶೇಷ ದರದ ಬಡ್ಡಿ! ಚಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯ; ಪಾಸು ಪುಸ್ತಕವನ್ನು ಹಾಜರು ಮಾಡಬೇಕೆಂಬುದಿಲ್ಲ! ಆಯಾ ಲೆಕ್ಕದಲ್ಲಿ ಜಮೆ ಇರುವ ಮೊತ್ತದ ಕಾಲಂಶವನ್ನು ನೋಟೀಸು ಕೊಡದೆಯೇ ವಾಪಾಸು ಪಡೆಯ ಬರುವ ದಲ್ಲದೆ, ಬರೀ 15 ದಿನಗಳ ನೋಟೀಸಿನಿಂದ ಎಷ್ಟನ್ನು ಬೇಕಾದರೂ ವಾಪಾಸು ಪಡೆಯಬರುತ್ತದೆ.

ಚಿನ್ನಾಭರಣ, ಸರಕು, ಸ್ಥಿರಾಸ್ತಿ ಇತ್ಯಾದಿಗಳ ಈಡಿನ ಮೇಲೆ ಸುಲಭ ಸಾಲಗಳು.
ಬೀಲು, ಹುಂಡಿ, ಚಕ್ಕು ವಗೈರೆ ವಟ್ಯಾಸಲಿಕ್ಕೆ ಅತ್ಯಲ್ಪ ಕವಿಶನ್.
ಎಲ್ಲಾ ತರದ ಬೇಂಕ್ ವಹಿವಾಟುಗಳೂ ನಡೆಸಲ್ಪಡುವವು.

ಸೇವಿಂಗ್ಸ್ ಬೇಂಕ್ ಠೇವಣಾತಿಗಳಿಗೆ ಪ್ರತಿನಿತ್ಯದ ಶಿಲ್ಕಿನ ಮೇಲೆ ಸಾ. ಶೇ. 3½ರ ಬಡ್ಡಿ! ವಾರಕ್ಕೆ ಎರಡಾವರ್ತಿ ಹಾಗೂ ಒಮ್ಮೆಗೆ ರೂ. 100ರ ವರೆಗೆ ಚಕ್ಕುಗಳ ಮೂಲಕ ಹಣ ವಾಪಾಸು ಪಡೆಯುವ ಸೌಕರ್ಯ!

ನಿರಖು ಠೇವಣಾತಿಗಳಿಗೆ ಒಂದು ವರ್ಷದ ವ್ಯಾದೆಗೆ ಸಾ. ಶೇ. 6ರ ಬಡ್ಡಿ!

ಚಾಲ್ತಿ ಠೇವಣಾತಿಗಳಿಗೆ ಪ್ರತಿನಿತ್ಯದ ಶಿಲ್ಕಿನ ಮೇಲೆ ಸಾ. ಶೇ. 2ರ ಬಡ್ಡಿ.

ಮಾಸಿಕ ಠೇವಣಾತಿಗಳ ಮೇಲೆ ಕೊಡುವ ಬಡ್ಡಿಯು ಸಾ. ಶೇ. 6¼ರಂತಾಗುವುದು.
ಹೆಚ್ಚಿನ ವಿವರಗಳು ನಮ್ಮ ನಿಯಮಗಳ ಪುಸ್ತಕದಲ್ಲಿ; ಬೇಕೆಂದು ಕೇಳು ವವರಿಗೆ ಇದು ಪುಕ್ಕಟೆಯಾಗಿ ಸಿಗುವುದು. ಬರೆದು ಕೇಳಿ.

ಆದ್ದರಿಂದಲೇ ಹೇಳುವೆವು—

ನಿಮ್ಮ ಯಾವತ್ತೂ ಬೇಂಕ್ ವಹಿವಾಟುಗಳಿಗೆ ನಮ್ಮಲ್ಲಿಗೆ ಬನ್ನಿರೆಂದು! ನಮ್ಮೊಡನೆ ವಿಚಾರಿಸಿರೆಂದು!!

# ದಿ ಉಡಿಪಿ ಬೇಂಕ್ ಲಿಮಿಟೆಡ್

(ಸ್ಥಾಪಿತವಾದುದು 1925)

ಕಲ್ಸಂಕ ಉಡುಪಿ ದ. ಕನ್ನಡ.

ಪರ್ಯಾಯ ಕಾಲವಿದು! ಯೋಗ್ಯ ದರ!!

## ಕಲ್ಮಂಜೆಯವರ ಉತ್ತಮ ದೇವಪೂಜಾ ಸಾಮುಗ್ರಿಗಳು.

ಬೆಳ್ಳೀ ತಾಮ್ರವೇ ಮೊದಲಾದ ನಾನಾ ಲೋಹಗಳಲ್ಲಿ!

ತುಳಸಿ ಹಾರಗಳು, ಆರತಿ ಗೆಳು, ಮೂರ್ತಿಗಳು— ಇತರ ಪೂಜಾ ಸಾಧನಗಳು!!

**ಬೇಕಾದ ಸೈಜಿನಲ್ಲಿವೆ!!**

ಬೆಳ್ಳಿಯ ಯಾವತ್ತು ಸಾಮುಗ್ರಿಗಳನ್ನೂ ಅಗತ್ಯ ವಿದ್ದಂತೆ ತಯಾರಿಸಿಯೂ ಕೊಡಬಲ್ಲೆವು.




ಈಗ ತಾನೇ ನಮ್ಮಲ್ಲಿಗೆ ಹೊಸದಾಗಿ ಬಂದಿರುವ ನವನವೀನ ಪಾತ್ರಸಾಧನ ಗಳನ್ನು ನೋಡಲು ಎಂದಿಗೂ ಮರೆಯಬೇಡಿ.

**ಈ ನವೀನ ಸಾಧನ ಗಳಿಗಾಗಿಯೇ ನಮ್ಮಲ್ಲೊಂದು "ಶೋ ರೂಮ್"ನ್ನು ಏರ್ಪಡಿಸಿದೆ.**

ಗಿರಾಕಿಗಳಿಗೆ ತುಂಬ ಸೌಕರ್ಯಗಳಿವೆ.

ಪುಕ್ಕಟೆಯಾಗಿ ನಿಮಗೆ ನಮ್ಮ ಕ್ಯಾಟಲಾಗು! ಬರೆಯಿರಿ!!

## ಕಲ್ಮಂಜೆ ವ್ಯಾಸಾಚಾರ್ಯ,
ಭಾಂಡೆ ವ್ಯಾಪಾರಿ, ಉಡುಪಿ, ದ. ಕ.

## Kalmanje Vyasacharya,
BRASS-WARE MERCHANT, UDIPI, S. K.

(೧೦ನೇ ಪುಟದಿಂದ)

ಹೆಚ್ಚಿಸುವುದೇ. ಈ ಕಾರ್ಯವು ಅಷ್ಟೊಂದು ಸಮರ್ಪಕವಾಗಿ, ಶೀಘ್ರವಾಗಿ, ಮಾಡಿ ಮುಗಿಸಲ್ಪಡುವುದನ್ನು ನೋಡಿದರೆ, ದೊಡ್ಡದೊಂದು ರಣಾಂಗಣದ ನೆನಪಾಗುವುದು. ಪ್ರೇಕ್ಷಣೀಯವಾದ ಈ ದೃಶ್ಯವು ಸರ್ವರಿಗೂ ಪ್ರೇಕ್ಷಣೀಯವೇ.

ಪರ್ಯಾಯಪ್ರವೇಶಕ್ಕೆ ತಕ್ಕ ದಿನಕ್ಕೂ ಮೊದಲೇ ನಿರ್ಣಯವಿದೆ. ಇದನ್ನು ಕಲ್ಪಿಸಿದವರು ಅದನ್ನೂ ನಿರ್ಧಾರ ಮಾಡಿದ್ದಾರೆ. ವಧತಾರೆಯೇ ಆಗಿರಲಿ, ವಿಪತ್ತಾರೆಯೇ ಆಗಿರಲಿ, ಏಕಾದಶಿಯೇ ಆಗಿರಲಿ, ಅಮಾವಾಸ್ಯೆಯೇ ಆಗಿರಲಿ, ಸಾಂವತ್ಸರಿಕ ಉತ್ಸವವಾದ ಮಕರ ಸಂಕ್ರಾಂತಿಯ ಮಹೋತ್ಸವದ ಅವಭೃತವಾದ ಮೂರನೆಯ ದಿನದಂದೇ ಈ ಮಹತ್ಕಾರ್ಯವು ತಪ್ಪದೆ ನಡೆಯಲೇ ಬೇಕಾಗಿದೆ. ಅದೆಂತಹ ದುರ್ದಿನವಾದರೂ, ಅದರಲ್ಲಿ ಆರಿಸಿ ನೋಡತಕ್ಕುದೆಂದರೆ, ಅದೊಂದು ನಿಷ್ಪ್ರಂಚಕವಾದ ಸುಮುಹೂರ್ತವನ್ನು. ಅವಭೃತವಾದ ಮೇಲಿನ ದಿನವನ್ನು ವಿರಾಮಕ್ಕಾಗಿ ನಿರ್ಣಯಿಸಿರುವುದೂ ಹಿಂದೆ ಆಗಿ ಹೋದ ಮಹೋತ್ಸವಗಳ ಶ್ರಮ ಪರಿಹಾರಕ್ಕೂ, ಮುಂದೆ ನಡೆಯಲಿರುವ ಪರ್ಯಾಯವನ್ನು ಬಿಟ್ಟೇಳುವ ಮಠಾಧಿಕಾರಿಗಳ ವಿದಾಯಸಮಾರಾಧನದ ಮತ್ತೂ ಭಾವಿಪರ್ಯಾಯಿಗಳ ಸ್ವಾಗತಸಮಾರಂಭದ ಮಧ್ಯೇ ಉಸಿರಾಡುವಷ್ಟು ಅನುಕೂಲ್ಯವನ್ನು ಮಾಡಿಕೊಳ್ಳುವುದಕ್ಕೂ ಆಗಿರುವುದರಿಂದ, ಅದೊಂದು ಅತಿ ಸೂಕ್ಷ್ಮಬುದ್ಧಿಯ ಏರ್ಪಾಡೇ ಆಗಿರುವುದೆನ್ನಬೇಡವೆ?

ಪರ್ಯಾಯಪಟ್ಟಾರೋಹಣದ ಆ ದಿನದಲ್ಲಿ ಬೆಳಗಿಂದ ಮಧ್ಯರಾತ್ರಿಯ ವರೆಗೂ ಪಟ್ಟಾಂಚಿತರಾಗಲುಳ್ಳ ಯತಿಗಳಿಗಾಗಲಿ, ಇತರ ಮಠಾಧಿಪತಿಗಳಿಗಾಗಲಿ, ಅಂತವರ ಅನುಯಾಯಿಗಳಿಗಾಗಲಿ, ಮಹೋತ್ಸವದ ಸನ್ನಾರಂಭವನ್ನು ನೋಡ ಬಂದ ಸಾಮಾನ್ಯ ಜನಸಮುದಾಯಕ್ಕಾಗಲಿ, ಯಾರಿಗೂ ಎಳ್ಳಷ್ಟೂ ಸಮಯವಿಲ್ಲ. ಶ್ರೀಮನ್ಮಧ್ವಾಚಾರ್ಯರ ದಂಡ ಸ್ಪರ್ಶದಿಂದ ಪವಿತ್ರೀಕೃತವಾದ ಆ ದಂಡತೀರ್ಥದಲ್ಲಿ ಅರುಣೋದಯದಲ್ಲಿ ಅವಗಾಹನಸ್ನಾನಮಾಡಿ, ಅಲ್ಲಿಂದ ಮುಂದೆ ಕನ್ನರ ಪಾಡಿಯೆಂಬಲ್ಲಿರುವ ಮೂಲದುರ್ಗೆಯ ಸಂದರ್ಶನವನ್ನೂ ತೀರಿಸಿ, ಉಡುಪಿಯ ಈಗಿನ ತಾಲೂಕುಕಚೇರಿಯ ನೈಋತ್ಯ ಕ್ಕಿರುವ ಜೋಡುಕ್ಕಟ್ಟೆಯ ಬಳಿ ತಮ್ಮ ಕರಾರ್ಚಿತವಾದ ಮೂಲ ಪ್ರತೀಕದೊಂದಿಗೆ ನಿಶ್ಚಿತವಾದ ಸುಮುಹೂರ್ತಕ್ಕೆ ಕೊಂಚ ಮೊದಲಾಗಿಯೇ ಪರ್ಯಾಯವನ್ನು ಮಾಡಲುಳ್ಳ ಯತಿಗಳು ಬಂದು ತಂಗುವರು. ಅಲ್ಲಿಗೆ ಅವರು ಬಂದಿಳಿದ ಸಮಾಚಾರ ಸೂಚಕವಾದ ಗುಂಡುಗಳ ಮಳೆಯಿಂದ ಜನಸಾಮಾನ್ಯಕ್ಕೂ, ಸಂಚೋದಿತವಾದ ಭೃತ್ಯವರ್ಗದಿಂದ ಇತರ ಮಠಾಧೀಶರಿಗೂ ಅದರ ಅರಿವಾಗಲು, ಪ್ರಕೃತಪರ್ಯಾಯಪೀಠವನ್ನು ಬಿಟ್ಟೇಳುವ ಮಠಾಧಿಪರನ್ನುಳಿದು, ಮಿಕ್ಕವರು ಒಬ್ಬೊಬ್ಬರಾಗಿ ದಂಡಿಗೆಯನ್ನೇರಿ, ಗುಂಡುಹಾರಿಸಿಕೊಂಡು ಬಂದು, ಆನೆ, ಅಂಬಾರಿ, ಕಟ್ಟಿಗೆಕೋಲು, ಮಕರತೋರಣ, ಮೊದಲಾದ ತಮ್ಮತಮ್ಮ ಬಿರುದುಬಾವಲಿಗಳೊಡನೆ ಪರ್ಯಾಯಸಿಂಹಾಸನಾರೋಹಣಕ್ಕೆ ಸಿದ್ಧರಾಗಿರುವ ಆ ಯತಿಗಳನ್ನು ವಾದ್ಯಘೋಷದಿಂದ ಇದಿರ್ಗೊಳ್ಳುವರು. ಈ ದೃಶ್ಯವನ್ನು ನೋಡಲು ಜನಸಂದೋಹವೇ ಅಲ್ಲಿ ನೆರೆಯುವುದು.

ಬಳಿಕ ಎಲ್ಲರೂ ಸೇರಿ ಯಥೋಚಿತಮರ್ಯಾದೆಯಿಂದ ಅವರ ಮೂಲದೇವರನ್ನು ಮುಂದುಮಾಡಿಕೊಂಡು, ಅವರೊಡನೆ ಮೆರವಣಿಗೆಯಾಗಿ ಹೊರಟು, ಕೋರ್ಟುರಸ್ತೆ, ಕೋಳಿದ ಪೇಟೆ, ಮತ್ತೂ ತೆಂಕಪೇಟೆಗಳ ಮಾರ್ಗವಾಗಿ, ರಥಬೀದಿಯ ಸಂಗಮವಾಗುವಲ್ಲಿ ದಂಡಿಗೆಗಳಿಂದಿಳಿದು, ನಡೆಮುಡಿಯನ್ನು ಹಾಸಿದ ಆ ರಥಬೀದಿಯಲ್ಲಿ ಆಶ್ರಮಜ್ಯೇಷ್ಠರ ಹಸ್ತಲಾಘವದೊಂದಿಗೆ ಪುಷ್ಪವೃಷ್ಟಿಯಂತೆ ಬುಟ್ಟಿಬುಟ್ಟಿ ಅರಳನ್ನು ಪಲ್ಲಕ್ಕಿಯಲ್ಲಿರುವ ಪರ್ಯಾಯಪೀಠದ ಮೂಲಪ್ರತೀಕದ ಮೇಲೆ ಚೆಲ್ಲಾಡುತ್ತ, ಶ್ರೀ ಅನಂತೇಶ್ವರ ದೇವಸ್ಥಾನಕ್ಕೆ ಪ್ರದಕ್ಷಿಣವಾಗಿ ಶ್ರೀಕೃಷ್ಣದೇವಾಲಯದ ಪಶ್ಚಿಮಜಾಲಂಧ್ರವಾದ ಕನಕನ ಕಿಂಡಿಯ ಬಳಿಯ ಗೋಪುರದಲ್ಲಿ ಬಂದು ನಿಲ್ಲುವರು. ಅಲ್ಲಿ ಗಳಿಗೆ ಬಟ್ಟಲನ್ನು ನೋಡಿ, ಸುಮುಹೂರ್ತವು ಸನ್ನಿಹಿತವಾಗುತ್ತಿರಲು, ಆರಾಧಿತರಾದ ಆ ನವಗ್ರಹರ ಪ್ರೀತ್ಯರ್ಥವಾಗಿ ದಾನಗಳನ್ನರ್ಪಿಸಿ, ಅಲ್ಲಿಂದ ಮುಂದೆ ಶ್ರೀ ಅನಂತೇಶ್ವರನನ್ನೂ ಶ್ರೀ ಚಂದ್ರಮೌಳೀಶ್ವರನನ್ನೂ ಸಂದರ್ಶಿಸಿ, ಅದೇ ರೀತಿಯಾಗಿ ಶ್ರೀಕೃಷ್ಣದೇವಸ್ಥಾನದ ದಕ್ಷಿಣ ಮಹಾದ್ವಾರವನ್ನು ಸವಿೂಪಿಸುವರು. ಅಲ್ಲಿ ಪರ್ಯಾಯವನ್ನು ಬಿಟ್ಟೇಳುವ ಮಠಾಧಿಪರು ಶ್ರೀಕೃಷ್ಣ ಪ್ರತೀಕದ ನಿರ್ಮಾಲ್ಯವನ್ನು ವಿಸರ್ಜಿಸಿ, ತುಲಸೀ ಮಾಲೆಯನ್ನು ಸಮರ್ಪಿಸಿ, ಹೊರಗೆ ಬಂದು, ಅವರನ್ನು ಇದಿರ್ಗೊಂಡು, ಹಸ್ತಲಾಘವವನ್ನು ಕೊಟ್ಟು, ಇತರ ಮಠಾಧಿಪರೊಂದಿಗೆ ಶ್ರೀ ಮಧ್ವಸರೋವರಕ್ಕಿಳಿದು, ತಮ್ಮತಮ್ಮ ಕಾಲುಗಳನ್ನು ತೊಳೆದುಕೊಂಡು, ಶುಚಿಯಾಗಿ ಶ್ರೀಕೃಷ್ಣಮಂದಿರವನ್ನು ಪ್ರವೇಶಿಸಿ, ಪ್ರದಕ್ಷಿಣಾಪೂರ್ವಕವಾಗಿ ಮುಖಮಂಟಪದಲ್ಲಿ ಮೂಲವಿಗ್ರಹವನ್ನಿಟ್ಟು, ಕೃಷ್ಣದರ್ಶನಮಾಡುವರು. ಆ ಮೇಲೆ, ಎಲ್ಲರೂ ಹೊರಟು, ದೇವಾಲಯದ ಗರ್ಭಗೃಹದ ಉತ್ತರದ್ವಾರಕ್ಕೆ, ಈಗ ಶ್ರೀಮನ್ಮಧ್ವಾಚಾರ್ಯರ ವಿಗ್ರಹವಿರುವಲ್ಲಿಗೆ, ಬರುವರು. ಅಲ್ಲಿ ಪರ್ಯಾಯಾಧಿಕಾರವನ್ನು ತ್ಯಜಿಸುವ ಕರ್ಮಾಂಗವಾಗಿ, ಹೊರಡುವ ಮಠಾಧಿಪತಿಗಳು, ಸರಕಾರೀ ಅಧಿಕಾರಿಗಳು ತಮ್ಮ ಚಾರ್ಜನ್ನು ಒಬ್ಬರಿಗೊಬ್ಬರು ಬಿಟ್ಟುಕೊಡುವಂತೆ, ಅದನ್ನು ವಹಿಸಿಕೊಳ್ಳುವ ಮುಠಾಧಿಪತಿಗಳ ಕೈಗೆ ಕೊಡುವ ಅಕ್ಷಯಪಾತ್ರೆಯೂ ದೇವಾಲಯದ ಗರ್ಭಗೃಹದ ಬೀಗದಕಯ್ಯೂ ಅವರಿವರ ಅಧಿಕಾರದ ಬದಲಾವಣೆಯನ್ನು ತಾತ್ಕಾಲಿಕವಾಗಿ ರುಜುಪಡಿಸುವುದು.

ಇಷ್ಟು ಕರ್ಮಾಂಗಗಳೂ ನಿರವೇರಿದ ಮೇಲೆ, ಪಟ್ಟವನ್ನು ಬಿಟ್ಟ ಪೀಠಾಧಿಪರನ್ನು ಬಿಟ್ಟು, ಉಳಿದವರೆಲ್ಲು ಮುಂದಿಯೂ ಶ್ರೀಕೃಷ್ಣಮಂದಿರದಿಂದ ಹೊರಬಿದ್ದು, ಪುನಃ ಆಶ್ರಮಜ್ಯೇಷ್ಠರ ಕೈಲಾಗಿನ ಪರ್ಯಾಯಪೀಠಾಧಿಪರು ಮುಂದೂ, ಉಳಿದವರು ಕನಿಷ್ಠತ್ವ ಕ್ರಮದಿಂದ ಹಿಂದೂ, ಆಗಿ, ನಿಮಂತ್ರಿತರಾದ ಸಭ್ಯ ಗೃಹಸ್ಥರೂ ಗೃಹಿಣಿಯರೂ ಅಧಿಕಾರಸ್ಥರೂ ಎಲ್ಲರೂ ಒಳಸೇರಿ ಕಿಕ್ಕಿರಿದು ನೆರೆದಿರುವ ಅಲಂಕೃತವಾದ ಆ ಬಡಗುಮಾಳಿಗೆಯ ಸಭಾಮಂದಿರವನ್ನು ಪ್ರವೇಶಿಸಿ, ಅಲ್ಲಿ ಮೇಲೆ ಚಾವಡಿಯಲ್ಲಿ ಸಿದ್ಧವಾಡಿರುವ, ಅರಳಿನ ರಾಶಿಯ ಮೇಲೆ ಶಾಲುಗಳನ್ನು ಹಾಸಿ ಲೋಡುತಿವಾಸಿಗೆಗಳನ್ನಿಟ್ಟ, ಗದ್ದಿಗೆಯನ್ನು ಪರ್ಯಾಯದ ಸ್ವಾಮಿಗಳನ್ನು ಮುಂದುಮಾಡಿಕೊಂಡು, ಅದೇ ಜ್ಯೇಷ್ಠ ಕನಿಷ್ಠತ್ವ ಕ್ರಮದಂತೆ ಎಲ್ಲರೂ ಆರೋಹಣಮಾಡಿ ಕುಳಿತುಕೊಳ್ಳುವರು.

ಪರ್ಯಾಯಪೀಠದವರ ಈ ಸರ್ವಜ್ಯೇಷ್ಠತ್ವದ ಸನ್ಮಾನವು ಶ್ರೀಕೃಷ್ಣದೇವಾಲಯದ ಸರ್ವಾಧಿಪತ್ಯದ ಗೌರವವಲ್ಲದೆ, ಕೇವಲ ಶ್ರೀಕೃಷ್ಣಪೂಜಾನಿಮಿತ್ತವಾಗಿ ಉಂಟಾದುದಲ್ಲವೆಂಬುದಕ್ಕೆ ಇದೊಂದು ಯೋಗ್ಯನಿದರ್ಶನವೇ ಆಗಿರುವುದೆನ್ನಬೇಕು. ಹಾಗೆ ಅದು ಅಲ್ಲದಿದ್ದರೆ, ಕೃಷ್ಣಪೂಜಾವ್ಯಾಜದಿಂದ ಪರ್ಯಾಯ ಸ್ವಾಮಿಗಳ ಚಿಕ್ಕಪಟ್ಟಕ್ಕೆ ಕುಳಿತು ಪೂಜೆಮಾಡುವ ಯತಿಗಳಿಗೂ ಇದೇ ರೀತಿಯಾಗಿ ಜ್ಯೇಷ್ಠತ್ವವನ್ನು ಕೊಡಬೇಕಾದೀತಲ್ಲ?

ಅನಂತರ ಪರ್ಯಾಯದ ದರ್ಬಾರಿನ ಆರಂಭವಾಗುವುದು. ಪಂಡಿತರು ಪದ್ಯಗಳನ್ನೂ, ವಾಗ್ಮಿಗಳು ಭಾಷಣವನ್ನೂ, ವೈದಿಕರು ವೇದಘೋಷಗಳನ್ನೂ, ಲೌಕಿಕರು ಪ್ರೇಕ್ಷಣವನ್ನೂ ಸಮಯೋಚಿತವಾಗಿ ಮಾಡುತ್ತ ಕುಳಿತ ಬಳಿಕ, ಇತರ ಮಠಾಧಿಪರು ಪರ್ಯಾಯಾಧಿಕಾರಿಗಳಿಗೆ ಅದೇ ಅನುಕ್ರಮದಿಂದ ಪಟ್ಟಾಭಿಷೇಕಪ್ರಯುಕ್ತವಾದ ಕಾಣಿಕೆಗಳನ್ನು ಸಮರ್ಪಿಸಿದ ಮೇಲೆ, ಬ್ರಿಟಿಷ ಸರಕಾರದ, ಮೈಸೂರ ಸರಕಾರದ ಮತ್ತೂ ಕೊಚ್ಚಿಯ ಸರಕಾರದ ನಿಯಮಿತವಾದ ಪಟ್ಟಕಾಣಿಕೆಗಳನ್ನು ಅವರವರ ಪ್ರತಿನಿಧಿಗಳಾದ ಉಚ್ಚಾಧಿಕಾರಿಗಳು ಮುಜರೆಮಾಡುವರು. ಅನಂತರ, ನೆರೆದಿರುವ ಸಭಾಸದರ ಯಥಾಶಕ್ತಿಯ ಕಾಣಿಕೆಗಳಾಗುವುವು. ಈ ಎಲ್ಲ ಕಾಣಿಕೆಗಳ ಸಮರ್ಪಣವಾದ ಬಳಿಕ, ಪರ್ಯಾಯಪಟ್ಟಾಂಚಿತರಿಂದ ಆಯಾ ಕಾರ್ಯಗಳಲ್ಲಿ ನಿಯೋಜಿಸಲ್ಪಟ್ಟ ಸರ್ವಾಧಿಕಾರಿಗಳು, ಆಸ್ಥಾನ ವಿದ್ವಾಂಸರು, ದೀಪದವರು, ಕೊಟ್ಟಾರಿಗಳು, ಭಂಡಾರಿಗಳು, ಮಹಾಪಾಕಿಗಳೇ ಮೊದಲಾದ ಅಧೀನಕಿಂಕರರ ನಾಮಧೇಯಗಳ ಉದ್ಘೋಷವಾಗುವುದು. ಭಟ್ಟಂಗಿಗಳಾದ ಭಾಗವತರ ಸಂಗೀತರೂಪವಾದ ಹೊಗಳಿಕೆಯೂ, ಅನಂತರ ಪರ್ಯಾಯಿಗಳಿಂದ ಇತರ ಮಠಾಧೀಶರೆಲ್ಲರಿಗೂ ಗಂಧಪುಷ್ಪಫಲಾದ್ಯುಪಚಾರವೂ, ಪರ್ಯಾಯಮಠದ ಸರ್ವಾಧಿಕಾರಿಗಳ ಮೂಲಕ ನೆರೆದ ಸದ್ಗೃಹಸ್ಥರೆಲ್ಲರಿಗೂ ಏತದುಪಚಾರವೂ ನಡೆದ ಮೇಲೆ ಈ ದರ್ಬಾರಿನ ಪರ್ಯವಸಾನವಾಗಿ, ಮಠಾಧಿಪತಿಗಳೆಲ್ಲರೂ ಎದ್ದು, ಪುನಃ ಶ್ರೀಕೃಷ್ಣಮಂದಿರವನ್ನು ಪ್ರವೇಶಿಸುವರು. ಸಭಾಸದರೂ ಆಗ ಚದರುವರು.

ಅಲ್ಲಿಂದ ಮುಂದೆ, ಪರ್ಯಾಯವನ್ನು ಬಿಟ್ಟುಕೊಟ್ಟೆದ್ದ ಸನ್ಯಾಸಿಗಳ ವಿದಾಯವನ್ನು ದಧ್ಯಕ್ಷತಪೂರ್ವವಾಗಿ ಎಲ್ಲರೂ ಬಯಸಿದ ಮೇಲೆ, ಸಿಂಹಾಸನದಿಂದ ಕದಲಿದ ಸ್ವಾರ್ಚಿತವಾದ ಮೂಲವಿಗ್ರಹವನ್ನು ತೆಗೆದುಕೊಂಡು ಹೊರಡುವ ಆ ಯತಿಗಳನ್ನು ಪರ್ಯಾಯಿಗಳನ್ನುಳಿದ ಯತಿಗಳೆಲ್ಲರೂ ಹಿಂಬಾಲಿಸಿ, ಅವರನ್ನು ಅವರ ಮಠಕ್ಕೆ ಸಾಗಕಳುಹಿ, ಅನಂತರ ತಮ್ಮತಮ್ಮ ಮಠಗಳನ್ನು ಸೇರಿಕೊಳ್ಳುವರು. ಆ ಬಳಿಕ, ನಿತ್ಯಕ್ರಮದಂತೆ ನಿರ್ಮಾಲ್ಯವಿಸರ್ಜನೆಯನ್ನುಳಿದ ಎಲ್ಲ ಪೂಜೆಗಳನ್ನೂ ಪರ್ಯಾಯ ಮಠಾಧೀಶರಿಂದ ನಿಯೋಜಿತರಾದ ಚಿಕ್ಕಪಟ್ಟದವರಿದ್ದರೆ ಅವರೂ ಮುಖ್ಯವಾದ ಪಂಚಾಮೃತ ಪೂಜೆಯನ್ನೂ ಮಹಾಪೂಜೆಯನ್ನೂ ಪರ್ಯಾಯದವರೂ ನೆರವೇರಿಸಿದ ಮೇಲೆ, ಸ್ಥಾಸಿರ ಗಟ್ಟಲೆಯ ಭೂರಿಬ್ರಾಹ್ಮಣರಿಗೆ ರಾಜಾಂಗಣದ ಪಂಙ್ತಿಯ ಮಹಾಸಮಾರಾಧನೆಯೂ, ಮಠಾಧಿಪತಿಗಳಿಗೂ ಮುಖಂಡರಿಗೂ ಚೌಕಿಯ ಪ್ರಸಾದವೂ ನಡೆದು ಮುಗಿಯುವುವು. ಅನಂತರ ರಾತ್ರಿ ಪೂಜಾದಿಗಳಾಗಿ ದೇವರಿಗೆ ಮಹೋತ್ಸವವಾಗುವುದು.

ಈ ಪರಿಯಾಗಿ ನಡೆವ ಈ ಸುದಿನದ ಉತ್ಸವಸಮಾರಂಭದ ಅನಂತರ ಎರಡು ವರ್ಷಗಳ ಕಾಲ ಶ್ರೀಕೃಷ್ಣದೇವಾಲಯದ ಏಕಮಾತ್ರಸ್ವಾಮಿತ್ವಕ್ಕೆ ಆಯಾ ಪರ್ಯಾಯಮಠಾಧೀಶರೇ ಪಾತ್ರರಾಗಿ ತಮ್ಮತಮ್ಮ ಅಧಿಕಾರವನ್ನು ಜಾರಿಗೆ ತರಬೇಕೆಂದು ಸಮಯೋಚಿತವಾಗಿ ಈ ಕಟ್ಟಳೆಯನ್ನು ಮಾಡುವಂದು, ಶ್ರೀ ವಾದಿರಾಜಗುರುವರ್ಯರು ಪರ್ಯಾಯಾಧಿಕಾರಿಗಳಾದ ಆಯ ಮಠಾಧೀಶರಾದರೂ ನಾಲ್ಕಕ್ಕೆ ಹೆಚ್ಚು ಪರ್ಯಾಯದ ಆವರ್ತನಗಳಿಗೆ ಅಧಿಕಾರಿಗಳಾಗಕೂಡದೆಂದೂ ಒಂದು ಕಟ್ಟನ್ನು ಪರಿಕಲ್ಪಿಸಿರುವುದಾಗಿ ಪ್ರವಾದವಿದೆ. ಅದನ್ನನುಸರಿಸಿ, ಪರೋಕ್ಷಜ್ಞಾನಿಗಳಾದ ಅದೇ ಸ್ವಾಮಿಗಳೇ ತಮ್ಮ ನಾಲ್ಕು ಪರ್ಯಾಯಗಳನ್ನು ಮುಗಿಯಿಸಿ ಆಯುರ್ಬಲದಿಂದ ಐದನೆಯದೊಂದನ್ನೂ ಮಾಡಬೇಕಾಗಿ ಬರಲು, ಅದನ್ನು ಉಡುಪಿಯಲ್ಲಿ ಮಾಡದೆ, ತಮ್ಮ ಮೂಲಮಠವಿರುವ ಉತ್ತರ ಕನ್ನಡದ ಸೋದಾಪುರದಲ್ಲಿ ಶ್ರೀಕೃಷ್ಣವಿಗ್ರಹವನ್ನುಂಟುಮಾಡಿ ಇಲ್ಲಿಯಂತೆ ಅಲ್ಲಿಯೇ ಮಾಡಿದರೆಂಬುದಾಗಿಯೂ ಬಲ್ಲವರು ಹೇಳುತ್ತಾರೆ. ಅವರ ಅನಂತರದವರಾರಿಗೂ ಈ ಸಂಭವವಿನ್ನೂ ಒದಗಿದುದಿಲ್ಲವಾಗಿ, ಈ ವಿಷಯವಾದ ಕಾರ್ಯಕಾರಣಗಳ ಯಥಾರ್ಥ ಶೋಧನವು ಇನ್ನೂ ಆಗತಕ್ಕುದಿದೆ.

ಎರಡು ವರ್ಷಗಳ ಈ ಪರ್ಯಾಯವೆಂಬುದು ಸಣ್ಣಾಟದ ಕೆಲಸವನಲ್ಲ. ಅದೊಂದು ದೊಡ್ಡ ಯಾಗವೇ ಆಗಿದೆ. ಶ್ರೀಕೃಷ್ಣದೇವಾಲಯಕ್ಕೆ ಅನೇಕ ಭಕ್ತಾದಿಗಳು ಅನೇಕ ಉದ್ದೇಶಗಳಿಗಾಗಿ ದತ್ತಿಯನ್ನು ಬಿಟ್ಟಿದ್ದಾರೆ. ಅವೆಲ್ಲವನ್ನೂ ನೆರವೇರಿಸುವುದಕ್ಕೆ ತಕ್ಕ ಸಿಬ್ಬಂದಿಯನ್ನು ಇಟ್ಟುಕೊಂಡು ಆಳುವುದೂ ಒಂದು ಬಹು ವ್ಯಯಸಾಧ್ಯವಾದ ಕೆಲಸವೇ. ಸೇವಕರೆಲ್ಲರೂ ಬರಾವರ್ದಿನಲ್ಲಿ ಸೇರಿದವರಾಗಿದ್ದು, ನಿಯಮಿತವಾದ ವೇತನಗಳಿಗೆ ನಿಶ್ಚಿತವಾದ ಹಕ್ಕುದಾರರಾಗಿ, ಆ ಹಕ್ಕನ್ನು ಚ್ಯುತಿಗೊಪ್ಪದೆ ಚಲಾಯಿಸುತ್ತಿರುವಲ್ಲಿ, ಅದರಲ್ಲಿಯೂ ಯಾವ ರೀತಿಯಲ್ಲಿಯೂ ಲೋಪಕ್ಕೆಡೆಯಿಲ್ಲ. ಮೇಲಾಗಿ, ಅನ್ನದಾನಾದಿ ಧರ್ಮಕಾರ್ಯಗಳಿಗಾಗಿ ಸರಕಾರದವರೂ ಸದ್ಭಕ್ತರೂ ಬಿಟ್ಟ ಆ ತಸದೀಕು-ದ್ರವ್ಯ ಸಹಾಯ ಮೊದಲಾದುವುಗಳು ಅವಕ್ಕಾಗಿ ಮೊದಲೇ ವಿನಿಯೋಗವಾಗಿದ್ದು, ಅನ್ನದಾನಕ್ಕಾಗಿ ಎಲ್ಲೆಲ್ಲಿಯೂ ಹೆಸರುಗೊಂಡಿರುವ ಈ ಉಡುಪೀಕ್ಷೇತ್ರದ ಶ್ರೀಕೃಷ್ಣದೇವಾಲಯದಲ್ಲಿ, ಅದನ್ನೂ ಲೋಪಿಸಲು, ಅಥವಾ ನಿಲ್ಲಿಸಲು, ಯಾರಿಗೂ ಸೇರದ ಅಥವಾ ಸಾಧ್ಯವಾಗದ ಕೆಲಸವೇ. ಇವೆಲ್ಲ ಕಾರ್ಯಗಳನ್ನೂ ನೆರವೇರಿಸುವಲ್ಲಿ ಶ್ರೀಕೃಷ್ಣದೇವಸ್ಥಾನದ ಎಲ್ಲ ವರ್ತಮಾನವನ್ನೂ ಎರಡು ವರ್ಷಗಳ ತಮ್ಮತಮ್ಮ ಮಠಗಳ ಎಲ್ಲ ಉತ್ಪತ್ತಿಯನ್ನೂ, ಭಕ್ತಾದಿಗಳು ತಂದೊಪ್ಪಗಿಸುವ ಹೇರಳ ಸೇವಾದ್ರವ್ಯವನ್ನೂ ಸಂಪೂರ್ಣವಾಗಿ ವಿನಿಯೋಗಿಸಿಯೂ ಸಾಲದೆ ಪರ್ಯಾಯವನ್ನು ಬಿಟ್ಟೇಳುವಾಗ ಪ್ರತಿಯೊಬ್ಬ ಮಠಾಧಿಪರೂ ಸಾಲಿಗರ ಗುಲಾಮರಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇದನ್ನು ಅಶ್ವಮೇಧವೆಂದಲ್ಲದೆ ಇನ್ನೇನೆನಬಹುದು? ಈ ಸಂದರ್ಭವಿರುವಲ್ಲಿ ಇನ್ನಾದರೂ ಜಾಗ್ರತರಾಗಿ, ಯಾರಾದರೂ ವಿವೇಕಶಾಲಿಗಳಾದ ಮಠಾಧಿಪತಿಗಳು ಮುಂದೆ ನಿಂತು, ಈ ಪರಿಸ್ಥಿತಿಯನ್ನು ತಾವೂ ನಿವಾರಿಸಿಕೊಂಡು, ಇತರರಿಗೂ ಈ ವಿಚಾರದಲ್ಲಿ ಮಾರ್ಗದರ್ಶಿಗಳಾಗಿ, ಈ ಕೆಡುಕಿನಲ್ಲಿ ತಮ್ಮನ್ನೂ ಎಲ್ಲರನ್ನೂ ಇನ್ನಷ್ಟು ಕೆಡಗೊಡುವುದರಿಂದಲೂ ಬಾಳಗೊಡುವುದುಚಿತ.

ಶ್ರೀ ವಿಲಾಸ,
ಕಡೇಕಾರು. ಎನ್. ರಾಜಗೋಪಾಲಕೃಷ್ಣರಾಯ

**Gordhandas Sandal Oil Distillery, Mangalore.**

*NOW READY!*
*CHEAPER-YET MORE EFFICIENT!*

MOSQUITO FUMIGATOR STICKS

3 ANNAS A PACKET!
(Sufficient for one week)

Use and enjoy sound and healthy sleep and protect from maleria, cholera etc., contageous diseases—

Stockists:—
**SHENOY BROTHERS,**
*CAR STREET, MANGALORE.*

COORG FOREST DEPARTMENT.

## SANDALWOOD AUCTION.

Mercara, the 5th December, 1935.

71 tons, more or less, of cleaned sandal wood will be sold by public auction at Fraserpet Koti on Thursday the 23rd January 1936 at 1 P. M.

For further particulars please apply to the Chief Forest Officer, Coorg, Mercara.

3, 24-12

# ಬಾಸೆಲ್ ಮಿಶನ್ ಬುಕ್ ಶೋಪ್

## POHOLATUM BALM.

ಪೊಹೊಲೇಟಮ್ ಬಾಮ್–ಇದು ಜರ್ಮನಿಯ ಖಾತ್ರಿ ಔಷಧಿ. ಸರ್ವ ಮನೆಗಳಿಗೆ ಇದೇ ಅಗತ್ಯ. ಎಲ್ಲಾ ತರದ ನೋವು, ಪಾತ, ಶೀತ, ತಲೆನೋವು, ಎದೆನೋವು, ಉಬ್ಬಸ, ಹೊಟ್ಟೆ ಅಕ್ರಮಗಳಲ್ಲಿ ಉಪಯೋಗಿಸಿದಲ್ಲಿ ಕೂಡಲೇ ಉಪಶಮನವಾಗುವುದು.

ಒಂದು ಸಣ್ಣ ಮಾದ್ರಿ ಟಿನ್ $\frac{1}{4}$ ಔನ್ಸ್, ಆಣಿ 0—3—0 ಮಾತ್ರ.

## MITHRA SOAPS.

ನೀವು ನಮ್ಮ "ಮಿತ್ರ ಟೋಯಿಲೆಟ್ ಸಾಬೂನ್" ಕಂಡಿದ್ದೀರೊ? ಒಮ್ಮೆ ಉಪಯೋಗಿಸಿದಲ್ಲಿ, ಇದೇ ಕೊಂಡುಕೊಳ್ಳುವಿರಿ. ಜರ್ಮನಿಯ ಪ್ರಖ್ಯಾತ ಖಾರಕಾನೆಯಲ್ಲಿ ಆರೋಗ್ಯದ ಕ್ರಮಕ್ಕನುಸಾರವಾಗಿ ತಯಾರಿಸಲ್ಪಟ್ಟಿದೆ.

ಮಿತ್ರಾ I ಆಣಿ 0—1—3. ಮಿತ್ರಾ II ಆಣಿ 0—2—6.

## POMONA SPRAYER.

ಪೊಮೊನ ಸ್ಪ್ರೆಯರ್–ಅಡಿಕೆ ತೋಟ, ಕಾಫಿ ತೋಟಗಳ ಬೆಳೆಯನ್ನು ಹಾಳುಮಾಡುವ ಎಲ್ಲಾ ತರದ ರೋಗಗಳ ನಿವಾರಣೆಗಾಗಿ ಇದನ್ನು ಜರ್ಮನಿಯಿಂದ ತರಿಸಿರುತ್ತೇವೆ.

ಉತ್ತಮ ಮ್ಯಾಲು! ಬಂದು ವಿಚಾರಿಸಿರಿ! ಬೆಲೆ ರೂ. 32 ಮಾತ್ರ.

## BASEL MISSION BOOK SHOP,
## MANGALORE, S. K.



# SLIGHTEST ERROR IN JUDGMENT!

If in the selection of a Life Office, you have slightly erred, it means you have unconsciously allowed your life's savings to be spent lavishly and the result is less and less returns for your money.

The more you know of the CANARA MUTUAL, the better you will be convinced that its 'Expenses of Management' are exceptionally low and the prospects are maximum returns for your money.

A well conducted Life Office on sound and scientific lines with ALL PROFITS TO POLICYHOLDERS. Field workers need not despair. There is always scope for business if you represent a really good Life Office and the CANARA MUTUAL has demonstrated this.

Join its Agency core; it is honourable and paying to represent CANARA MUTUAL, a purely POLICYHOLDERS' COMPANY.

## The Canara Mutual Assurance Co., Ltd.,
## UDIPI.

# ಶ್ರೀಮನ್ಮಧ್ವಾಚಾರ್ಯರ ಜೀವನ ಚರಿತ್ರೆ

(ಲೇಖಕ:—ಬ್ರಹ್ಮಶ್ರೀ ನಿಡ್ಡೋಡಿ ಅನಂತ ಉಪಾಧ್ಯಾಯ.)

ಶ್ರೀಮನ್ಮಧ್ವಾಚಾರ್ಯರು ಕ್ರೈಸ್ತ ಶಕದ ೧೧೯೯ನೆ ವಿಳಂಬಿ ಸಂವತ್ಸರದ ವಿಜಯದಶಮಿಯಲ್ಲಿ ದಕ್ಷಿಣ ಕನ್ನಡದ ಉಡುಪಿ ತಾಲೂಕಿಗೆ ಸೇರಿದ ಕುಂಜಾರು ಬೆಟ್ಟದ ಸಮೀಪ ಪಾಜಕಕ್ಷೇತ್ರ ವೆಂದು ಕರೆಯಲ್ಪಡುವ ಗ್ರಾಮದಲ್ಲಿ ಬಹಳ ನಿಷ್ಠಾವಂತರೂ ವಿದ್ವಾಂಸರೂ ಆಗಿದ್ದ ಮಧ್ಯಗೇಹ ಭಟ್ಟನೆಂಬ ಒಬ್ಬ ಶಿವಳ್ಳಿ ಬ್ರಾಹ್ಮಣನ ಮಗನಾಗಿ ಜನ್ಮವೆತ್ತಿದರು. ಇವರು ಹುಟ್ಟುವ ಮೊದಲು ತಾಯಿತಂದೆಗಳು ಅಪುತ್ರರಾಗಿದ್ದ ಕಾರಣ ಉಡುಪಿಯ ಅನಂತೇಶ್ವರ ಕ್ಷೇತ್ರದಲ್ಲಿ ಬಹಳ ಸಮಯದ ವರೆಗೆ ಶ್ರೀದೇವರ ಸೇವೆ ಮಾಡಿದ್ದರು. ಆ ಮೇಲೆ ಹುಟ್ಟಿದ ಈ ಮಗುವಿನಲ್ಲಿ ಅಸಾಧಾರಣ ಶೋಭೆ, ಚಟುವಟಿಕೆ ಮೊದಲಾದ ವಿಶೇಷ ಗುಣಗಳು ನೆಲೆಗೊಂಡಿದ್ದವು. ಆದಕಾರಣ ಅವರ ಅನುಯಾಯಿಗಳು ಈಗಲೂ ಅವರನ್ನು ವಾಯುದೇವರೆ ಅವತಾರವೆಂದು ನಂಬುವರು.

ಇವರ ಬಾಲ್ಯದ ಹೆಸರು ವಾಸುದೇವನೆಂದಾಗಿತ್ತು. ಇವರು ಜನ್ಮಕ್ಕೆ ಬರುವ ಸಮಯ, ಇವರ ತಾಯಿತಂದೆ ಮೊದಲಾದ ಪೆರು ಭಾಗವತ ಸಂಪ್ರದಾಯಕ್ಕೆ ಸೇರಿದವರಾದದ್ದರಿಂದ ಬಾಲ್ಯದ ವಿದ್ಯಾಭ್ಯಾಸ, ಉಪನಯನಾದಿ ಸಂಸ್ಕಾರ, ಮತಬೋಧನೆ, ಇವೆಲ್ಲವೂ ತಂದೆಯ ಸಮೀಪದಲ್ಲಿ ಅದ್ವೈತದ ಒಂದು ಶಾಖೆಯಾದ ಆ ಭಾಗವತ ಸಂಪ್ರದಾಯ ಪ್ರಕಾರವೇ ನಡೆಯಿತು.

ಈ ರೀತಿಯಲ್ಲಿ ತಂದೆಯ ಬಳಿಯಲ್ಲಿಯೇ ವೇದಶಾಸ್ತ್ರ ಮೊದಲಾದ ವಿದ್ಯಾಭ್ಯಾಸವನ್ನು ತೀರಿಸಿದ ಮೇಲೆ ತಾನು ಮಾಡಿದ ವಿದ್ಯಾಭ್ಯಾಸದಲ್ಲಿರುವ ನ್ಯೂನತೆಯನ್ನು ಸರಿಪಡಿಸಿ ಮತದ ಪರಿವರ್ತನೆಯನ್ನು ಮಾಡಬೇಕೆಂದು ಅವರಿಗೆ ತೋರಿದ ಕಾರಣ ಸನ್ಯಾಸದೀಕ್ಷೆಯನ್ನು ತೆಗೆದುಕೊಳ್ಳುವ ಆಲೋಚನೆ ಉಂಟಾಯಿತು. ಅದಕ್ಕಾಗಿ ಯೋಗ್ಯ ಗುರುಗಳನ್ನು ಹುಡುಕಿ ನಡೆಯುವಾಗ ಭೀಮನಕಟ್ಟೆಯ ಮಠಾಧೀಶರಾದ ಅಚ್ಯುತ ಪ್ರೇಕ್ಷರೆಂಬ ಯತಿವರ್ಯರು ಇವರಿಗೆ ಸನ್ಯಾಸದೀಕ್ಷೆಯನ್ನು ಮಾಡಿಸಿದರು. ಆದರೆ ಶಾಸ್ತ್ರಾಭ್ಯಾಸ ಮಾಡಿಸುವಾಗ ಇವರು ಯಾವಾಗಲೂ ಗುರುಗಳ ಅಭಿಪ್ರಾಯವನ್ನು ವಿಮರ್ಶೆ ಮಾಡುತ್ತಾ ಇದ್ದರು. ಒಂದು ದಿನ ಗುರುಗಳು ಇವರ ವಿಮರ್ಶಾ ರೀತಿಯನ್ನು ಸಹಿಸದೆ 'ಹಾಗಾದರೆ ನೀನೆ ಒಂದು ಹೊಸ ಸಂಪ್ರದಾಯವನ್ನು ಸ್ಥಾಪಿಸು' ಎಂದು ಹೇಳಿಬಿಟ್ಟರು.

ಇದೇ ಗುರುಗಳ ಆಜ್ಞೆಯೆಂದು ಭಾವಿಸಿ ಇವರು ಅದು ಮೊದಲು ಅನೇಕ ಶಿಷ್ಯಮಂಡಲಿಯನ್ನು ಏರ್ಪಡಿಸಿ ಆ ಶಿಷ್ಯರಿಂದ ಕೂಡಿಕೊಂಡು ದಕ್ಷಿಣ ಹಿಂದುಸ್ಥಾನದ ಅನೇಕ ಪ್ರಸಿದ್ಧ ಸ್ಥಳಗಳಿಗೆ ಹೋಗಿ ದೊಡ್ಡ ಪಂಡಿತರುಗಳೊಡನೆಯೂ ಮತ ಪ್ರಚಾರಕರೊಡನೆಯೂ ಶಾಸ್ತ್ರಚರ್ಚೆ ಮಾಡಿ ಬಹಳ ಖ್ಯಾತಿವಂತರಾದರು. ಈ ಪ್ರಕಾರ ಸಂಚಾರ ಮಾಡುತ್ತಾ ತಿರ್ವಾಂಕೂರಿನ ಅನಂತಶಯನ ಕ್ಷೇತ್ರಕ್ಕೆ ತೀರ್ಥಯಾತ್ರೆಗೋಸ್ಕರ ಹೋದಾಗ ಆ ಸಮಯದ ಶೃಂಗೇರಿ ಮಠಾಧೀಶರಾದ ವಿದ್ಯಾಶಂಕರರೆಂಬ ಯತಿಗಳು ರಾಮೇಶ್ವರ ಯಾತ್ರಾರ್ಥಿಗಳಾಗಿ ಅಲ್ಲಿಗೆ ಬಂದಿದ್ದರು. ಅವರೊಡನೆ ವಾದ ಮಾಡಿ ಶ್ರೀ ಶಂಕರಾಚಾರ್ಯರ ಬ್ರಹ್ಮಸೂತ್ರ ಭಾಷ್ಯವನ್ನು ವಿಮರ್ಶೆ ಮಾಡಲು 'ಅಂತಹ ಒಂದು ಭಾಷ್ಯವನ್ನು ಮಾಡಲು ಶಕ್ತನಾಗಿದ್ದವನು ಮಾತ್ರ ವಿಮರ್ಶೆ ಮಾಡಬಹುದಲ್ಲದೆ ಇತರರು ಕೂಡದೆ'ಂಬ ಮಾತು ಬಂದ ಕಾರಣ ಬ್ರಹ್ಮಸೂತ್ರ ಮೊದಲಾದ ಮೂಲ ಗ್ರಂಥಗಳಿಗೆ ಭಾಷ್ಯಗಳನ್ನು ಬರೆದು ಪೂರೈಸಿದರು.

ಇದ್ದಾದ ಮೇಲೆ ಉತ್ತರ ಹಿಂದುಸ್ಥಾನದ ಯಾತ್ರೆಯನ್ನಾರಂಭಿಸಿ ಮೊದಲಿನಂತೆ ಅನೇಕ ಕಡೆಗಳಲ್ಲಿ ಪಂಡಿತರೊಡನೆ ವಾದವನ್ನು ಮಾಡಿ ಕೀರ್ತಿಯನ್ನು ಪಡೆದರು. ಹೀಗೆ ಗೋದಾವರಿ ತೀರದ ಮಾರ್ಗವಾಗಿ ಯಾತ್ರೆಯನ್ನು ಮಾಡುತ್ತಾ ಆ ಕಾಲದ ವಿದ್ವಾಂಸರುಗಳಲ್ಲಿ ಪ್ರಖ್ಯಾತರಾದ ಶೋಭನ ಭಟ್ಟನೆಂಬ ಪಂಡಿತನನ್ನೂ ಕಳಿಂಗ ರಾಜನ ಆಸ್ಥಾನ ಪಂಡಿತನಾದ ನೌಮಿ ಶಾಸ್ತ್ರಿಯನ್ನೂ ತಾನು ಸ್ಥಾಪಿಸಿದ ದ್ವೈತ ಮತಕ್ಕೆ ಪರಿವರ್ತಿಸಿ ಶಿಷ್ಯರನ್ನಾಗಿ ಮಾಡಿದರು. ಇವರು ಯಥಾಕ್ರಮವಾಗಿ ಪದ್ಮನಾಭ ತೀರ್ಥರೆಂತಲೂ ಇನ್ನೊಬ್ಬರು ನರಹರಿ ತೀರ್ಥರೆಂತಲೂ ಪ್ರಖ್ಯಾತಿಯನ್ನು ಪಡೆದಿದ್ದರು. ಇವರಿಬ್ಬರ ಮತಪರಿವರ್ತನವು ಉತ್ತರ ಹಿಂದುಸ್ಥಾನದಲ್ಲಿ ಅನೇಕ ಶಿಷ್ಯರನ್ನುಂಟುಮಾಡುವದರಲ್ಲಿ ಪರ್ಯವಸಾನ ಹೊಂದಿತಲ್ಲದೆ ರಾಜರುಗಳನ್ನು ಸಹ ಶಿಷ್ಯರನ್ನಾಗಿ ಮಾಡಲು ಸಹಾಯಕವಾಯಿತು.

ಹೀಗೆಯೇ ಪ್ರಯಾಣ ಮಾಡುತ್ತಾ ಗಂಗಾ ತೀರಕ್ಕೆ ಹೋದಾಗ ಆಗಿನ ದಿಲ್ಲಿಯ ಅರಸನಾದ ಜಲಾಲವುದ್ದೀನನು ಗಂಗಾನದಿಯ ದಕ್ಷಿಣದಲ್ಲಿದ್ದ ಹಿಂದೂ ರಾಜರ ಉಪದ್ರವವನ್ನು ತಪ್ಪಿಸಲು ರಾತ್ರಿ ಸಮಯ ದೋಣಿಗಳನ್ನು ಇಡಕೂಡದೆಂದು ಅಪ್ಪಣೆ ಮಾಡಿದ್ದನು. ಶ್ರೀಮದಾಚಾರ್ಯರು ಶಿಷ್ಯಸಮೇತರಾಗಿ ನೋಡಿದಾಗ ದೋಣಿಯೊಂದೂ ಇರಲಿಲ್ಲ. ಆದರೆ ಇವರು ಮಹಾ ಯೋಗಿಗಳಾದ ಕಾರಣ ಶಿಷ್ಯಸಮೇತರಾಗಿ ನದಿಯ ಉತ್ತರ ದಡವನ್ನು ಲಾಘವಶಕ್ತಿಯಿಂದ ಸೇರಿದರು. ಇದನ್ನು ನೋಡಿ ಭಯಪಟ್ಟ ಮಹಮ್ಮದೀಯ ಭಟರು ಇವರನ್ನು ದಿಲ್ಲಿ ಸನ್ನಿಧಾನದ ಮುಂದೆ ನಿಲ್ಲಿಸಿದರು.

ಆಗ ಆ ಜಲಾಲವುದ್ದೀನನು ಇವರ ಸಾಹಸಕ್ಕೂ ಗಾಂಭೀರ್ಯ ಮೊದಲಾದ ಗುಣಗಳಿಗೂ ವಿಸ್ಮಯಪಟ್ಟು ಇವರ ಕೂಡೆ ಪಾರ್ಶಿ ಭಾಷೆಯಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದನು. ಅದಕ್ಕೆ ಅದೇ ಭಾಷೆಯಲ್ಲಿ ಉತ್ತರ ಕೊಟ್ಟು ಅವನನ್ನು ಸಮಾಧಾನ ಪಡಿಸಿದ್ದರಿಂದ ಇವರಿಗೆ ಬಹುಮಾನ ಕೊಟ್ಟು ಕಳುಹಿಸಿದನು. ಇದೇ ಮೇರೆಗೆ ಅನೇಕ ಹಿಂದೂ ರಾಜರುಗಳ ಮರ್ಯಾದೆಗೆ ಪಾತ್ರರಾಗಿ ಪುಣ್ಯತೀರ್ಥಕ್ಷೇತ್ರಗಳಲ್ಲಿ ವಾಸ ಮಾಡುತ್ತಲೂ ತನ್ನ ಸಿದ್ಧಾಂತದ ಕಡೆಗೆ ಜನರನ್ನು ಆಕರ್ಷಿಸುತ್ತಲೂ ಯಾತ್ರೆಯನ್ನು ಮುಂದರಿಸುತ್ತಾ ಕೊನೆಗೆ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ಅನೇಕ ವ್ರತೋಪವಾಸಗಳನ್ನಾಚರಿಸುತ್ತಾ ಶ್ರೀಮನ್ನಾರಾಯಣನ ಸೇವೆಯನ್ನು ಮಾಡಿದರು. ಅನಂತರ ಇನ್ನಷ್ಟು ಹೊಸ ಹುರುಪಿನಿಂದ ಗ್ರಂಥರಚನೆಯನ್ನು ಮಾಡುತ್ತಲೂ ಮತಪ್ರಚಾರವನ್ನೆಸಗುತ್ತಲೂ ಹಿಂತಿರುಗಿ ಜನ್ಮಭೂಮಿಯಾದ ಉಡುಪಿಗೆ ಬಂದು ಸೇರಿದರು.

ಇದಾದ ಮೇಲೆ ಹೆಚ್ಚಾಗಿ ತನ್ನ ವಾಸವನ್ನು ಕಾಸರಗೋಡು ತಾಲೂಕಿನ ಕುಂಬಳೆಯ ಸಮೀಪ ವಿಷ್ಣುಮಂಗಲ ಕ್ಷೇತ್ರದಲ್ಲಿ ಶಿಷ್ಯವರ್ಗಗಳಿಗೆ ವ್ಯಾಖ್ಯಾನ ಮೂಲಕ ಜ್ಞಾನದಾನ ಮಾಡುತ್ತಿದ್ದರು. ಮುಖ್ಯವಾಗಿ ಆ ಕಾಲದ ಕುಂಬಳೆಯ ಅರಸನಾದ ಜಯಸಿಂಹನನ್ನು ತನ್ನ ಶ್ರೇಷ್ಠ ಶಿಷ್ಯನನ್ನಾಗಿ ಮಾಡಿಕೊಂಡದ್ದಲ್ಲದೆ ಅವನ ಭಕ್ತಿಪಾಶದಿಂದ ಬದ್ಧರಾಗಿ ಅಲ್ಲಿ ನಿಲ್ಲಿಸಲ್ಪಟ್ಟರು. ಆಗ ಕಾವು ಮಠದ ಸುಬ್ರಹ್ಮಣ್ಯ ಪಂಡಿತನ ಮಗನಾದ ತ್ರಿವಿಕ್ರಮ ಪಂಡಿತಾಚಾರ್ಯನೆಂಬ ಮಹಾ ವಿದ್ವಾಂಸನು ಇವರೊಂದಿಗೆ ಸಂಪೂರ್ಣ ಹದಿನೈದು ದಿನಗಳಲ್ಲಿ ವಾದ ಮಾಡಿ ಕೊನೆಗೆ ಇವರ ಮತವನ್ನು ಒಪ್ಪಿಕೊಂಡು ಇವರ ಶಿಷ್ಯಶಿರೋಮಣಿಯಾದನು. ಈ ಪಂಡಿತನಿಂದ ಬರೆಯಲ್ಪಟ್ಟ 'ಉಷಾಹರಣ' 'ವಾಯುಸ್ತುತಿ' 'ತತ್ವಪ್ರದೀಪ' ಮೊದಲಾದ ಗ್ರಂಥಗಳು ಈಗಲೂ ಪ್ರಚಾರದಲ್ಲಿವೆ. ಇವನ ಮಗನೇ 'ಮಣಿಮಂಜರೀ' 'ಮಧ್ವ ವಿಜಯ'ಗಳ ಕರ್ತನಾದ ನಾರಾಯಣ ಪಂಡಿತಾಚಾರ್ಯನು. ಈ ತ್ರಿವಿಕ್ರಮ ಪಂಡಿತಾಚಾರ್ಯನ ತಮ್ಮನಾದ ಶಂಕರ ಪಂಡಿತಾಚಾರ್ಯನೆಂಬವನು ಶ್ರೀ ಮಧ್ವಾಚಾರ್ಯರ ಪುಸ್ತಕಭಂಡಾರದ ಅಧಿಪತಿಯಾಗಿದ್ದನು. ಇವರ ವಂಶಜರು ಈಗಲೂ ಕಾವು ಮಠದಲ್ಲಿ ಶ್ರೀ ಮಧ್ವಾಚಾರ್ಯರಿಂದ ದತ್ತವಾದ ಪ್ರತಿಮೆಯನ್ನು ಪೂಜಿಸುತ್ತಿದ್ದಾರೆ. ಮತ್ತು ಇವರ ಪೂರ್ವಜರನ್ನು ಜಯಿಸಿ ಶ್ರೀ ಮದಾಚಾರ್ಯರು ಪ್ರತಿಷ್ಠೆ ಮಾಡಿದ ಶಿಲಾಸ್ತಂಭವನ್ನು ತೋರಿಸುವರು. ಇದಲ್ಲದೆ ಶ್ರೀಮದಾಚಾರ್ಯರು ಮಂಜೇಶ್ವರದ ಸಮೀಪವಿರುವ ಕಣ್ವತೀರ್ಥವೆಂಬ ಸ್ಥಳವನ್ನೂ ಕೂಡ ತನ್ನ ಗ್ರಂಥರಚನೆಯ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು.

ಈ ಮಧ್ಯೆ ಇವರ ಒಬ್ಬನೇ ತಮ್ಮನು ತಾಯಿತಂದೆಗಳ ಮರಣವೃತ್ತಾಂತವನ್ನೂ ಅವರ ಆಸ್ತಿ ಮನೆ ಮೊದಲಾದ ಸರ್ವಸ್ವ ನಾಶದ ಸಂಗತಿಯನ್ನೂ ತಿಳಿಸಿ ಕುಂಬಳೆಯಲ್ಲಿದ್ದ ತನ್ನ ಅಗ್ರಜ ಶ್ರೀಮದಾಚಾರ್ಯರಿಂದ ಸನ್ಯಾಸವನ್ನು ತೆಗೆದುಕೊಂಡರು. ಆದರೆ ಇವರು ಗೃಹಸ್ಥಾಶ್ರಮದಲ್ಲಿದ್ದ ಪತ್ನಿಯು ಮರಣಾನಂತರ ಸನ್ಯಾಸಿಗಳಾದರೂ ಇವರೇ ಸೋದೆ ಮಠದ ಮೊದಲನೆಯ ಪೀಠಾಧೀಶರು. ಇದಕ್ಕೆ ಮೊದಲು ಉಡುಪಿಯಲ್ಲಿರುವಾಗ ಶ್ರೀಮದಾಚಾರ್ಯರು ಸ್ವಪ್ನದಲ್ಲಿ ಕಂಡ ಪ್ರಕಾರ ಒಬ್ಬ ವ್ಯಾಪಾರಿಯು ಸಮುದ್ರಮಾರ್ಗವಾಗಿ ಹಡಗದಲ್ಲಿ ಸಾಮಾನುಗಳನ್ನು ತರುವಾಗ ಗಾಳಿಯ ಅವಾಂತರದಿಂದ ಹಡಗವು ಅಪಾಯಕ್ಕೀಡಾಗಲು, ದ್ವಾರಕೆಯ ಬದಿಯಲ್ಲಿದ್ದ ಬಿಳಿ ಮಣ್ಣಿನ ಗಟ್ಟಿಗಳನ್ನು ತುಂಬಿಸಿ ಬಂದು ಮಲ್ಪೆಯ ಹತ್ತಿರ ನಿಲ್ಲಿಸಿದ್ದ ಆ ಮಣ್ಣಿನ ರಾಶಿಯಿಂದ ಶ್ರೀಕೃಷ್ಣನ ಪ್ರತಿಮೆಯನ್ನು ಅಲ್ಲಿಂದ ದ್ವಾದಶಸ್ತೋತ್ರವೆಂಬ ಗ್ರಂಥವನ್ನು ನಿರ್ಮಿಸುತ್ತಾ ಶ್ರೀಮದಾಚಾರ್ಯರು ಉಡುಪಿಗೆ ತಂದು ಅದನ್ನು ಅಲ್ಲಿ ತಾನೇ ಪ್ರತಿಷ್ಠೆ ಮಾಡಿದರು. ಅದಕ್ಕೋಸ್ಕರ ಎಂಟು ಮಠಗಳನ್ನು ನಿರ್ಮಿಸಿ ಎಂಟು ಜನ ಸ್ವಾಮಿಗಳನ್ನು ಸಹ ಸನ್ಯಾಸ ದೀಕ್ಷೆಯಿಂದ ತಯಾರಿಸಿದರು. ಇವರಲ್ಲಿ ಶ್ರೀಮದಾಚಾರ್ಯರ ಸಹೋದರ ವಿಷ್ಣುತೀರ್ಥರು ಸೋದೆ ಮಠಾಧೀಶರೆಂದು ಮೊದಲೇ ಉಕ್ತವಾಗಿದೆ. ಹೀಗೆಯೇ ಜನಾರ್ದನ ತೀರ್ಥ, ವಾಮನ ತೀರ್ಥ, ನರಸಿಂಹ ತೀರ್ಥ, ಉಪೇಂದ್ರ ತೀರ್ಥ, ರಾಮ ತೀರ್ಥ, ಹೃಷೀಕೇಶ ತೀರ್ಥ, ಅಕ್ಷೋಭ್ಯ ತೀರ್ಥರು ಕ್ರಮವಾಗಿ ಕೃಷ್ಣಾಪುರ, ಕಾಣೂರು, ಅಧಮಾರು, ಪುತ್ತಿಗೆ, ಸೀರೂರು, ಪಲಿಮಾರು, ಪೇಜಾವರ ಮಠಗಳ ಮೊದಲನೆಯ ಪೀಠಾಧೀಶರಾಗಿ ಶ್ರೀಮದಾಚಾರ್ಯರಿಂದಲೇ ಸ್ಥಾಪಿತರಾದರು.

(೧೬ನೇ ಪುಟಕ್ಕೆ ಮುಂದರಿಸಿಯಿದೆ)

"ವೆಸ್ಟ್ ಎಂಡ್ ಸಿಲ್ಲಿದಾರ್"

ಬಲವಾದ, ಕೀ ಇಲ್ಲದ ಲಿವರ್ ವಾಚು.

'ಸಿಲ್ಲಿದಾರ್' ವೆಸ್ಟ್ ಎಂಡಿನ ಗ್ಯಾರಂಟಿಯುಳ್ಳ ವಾಚು. ಅದು ಬಹಳ ಬಲವಾದ ವಿಶ್ವಾಸಕ್ಕೆ ಯೋಗ್ಯವಾದ ಸಮಯವನ್ನು ಕೊಡುವಂಥಾದ್ದು. ಅದು ಒಬ್ಬನ ಇಡೀ ಜೀವಕಾಲದ ವರೆಗೂ ಬಾಳಿಕೆ ಬರುವ ಹಾಗೆ ಅಷ್ಟು ಜಾಗ್ರತೆಯಿಂದ ಜಾಣತನದಿಂದ, ಅತ್ಯುತ್ಕೃಷ್ಟವಾದ ಸಾಮುಗ್ರಿಗಳೊಡನೆ ನಿರ್ಮಾಣ ಮಾಡಲ್ಪಟ್ಟಿದೆ. 'ವೆಸ್ಟ್ ಎಂಡ್ ವಾಚ್ ಕೊ, ಸಿಲ್ಲಿದಾರ್' ಎಂದು ಮುಖದ ಬಿಲ್ಲೆಯಲ್ಲಿ ಹೆಸರಿರುವದರೆ ಮಾತ್ರವೇ ಅದು ತಾಜಾ.

ಉಚಿತವಾದ ನಮ್ಮ ದೊಡ್ಡ ಕೆಟಲಾಗಿಗೆ ಬರೆಯಿರಿ.

| | | | | |
|---|---|---|---|---|
| ನಿಕ್ಕಲ್ ಸಿಲ್ವರ್ | ... | ... | ... | ರೂ. 28—0—0. |
| ಏವರ್‌ಬ್ಯಾಟ್ ಸ್ಟೀಲ್ | ... | ... | ... | ರೂ. 30—0—0. |
| ರೋಲ್ಡ್‌ಗೋಲ್ಡ್ | ... | ... | ... | ರೂ. 36—0—0. |

ವೆಸ್ಟ್ ಎಂಡ್ ವಾಚ್ ಕೊ., ಮುಂಬಾಯಿ ಮತ್ತು ಕಲ್ಕತ್ತಾ.

WEST END WATCH Co

BOMBAY 97 CALCUTTA

2, 14-25.

# ಶ್ರೀ ಮಧ್ವಗುರು ಪೀಳಿಗೆಯ ಗುರುರತ್ನದ್ವಯ.

(ಲೇಖಕ:—ಶ್ರೀ. ಪಿ. ಕುಪ್ಪಣ್ಣಾಚಾರ್ಯ, ವಿದ್ವಾನ್.)

ಭಗವತ್ಪ್ರೇರಣೆಯಂತೆ ೧೨ನೇ ಶತಮಾನದಲ್ಲಿ ಒಂದು ದಿವ್ಯ ವಿಭೂತಿಯ ಜನನವಾಯಿತು. ಆ ವಿಭೂತಿಯೇ ಶ್ರೀ ಮಧ್ವಾಚಾರ್ಯರು. ಮಧ್ವಾಚಾರ್ಯರು ಸ್ಥಾಪಿಸಿದ ದ್ವೈತಮತದ ತತ್ವಗಳನ್ನು ಆಚಾರ್ಯರ ಶಿಷ್ಯರು ಅಖಿಲ ಹಿಂದೂಸ್ಥಾನದಲ್ಲಿಯೂ ಪ್ರಚಾರ ಮಾಡಿದರು. ಮಧ್ವಗುರು ಪೀಳಿಗೆಯಲ್ಲಿ ಅನೇಕ ಪ್ರಸಿದ್ಧವ್ಯಕ್ತಿಗಳು ಜನ್ಮ ತಾಳಿ ಮಧ್ವಮತೋದ್ಧಾರವನ್ನು ಮಾಡಿದರು. ಅವರಲ್ಲಿ ಮುಖ್ಯರಾದ ಇಬ್ಬರು ಗುರುಗಳ ಚರಿತ್ರೆಯನ್ನು ಈ ಲೇಖನದಲ್ಲಿ ವಾಚಕರ ಮುಂದಿರಿಸಿರುತ್ತೇನೆ. ಇದರಲ್ಲಿ ವರ್ಣಿಸುವ ಗುರುಗಳೆಂಡರೆ ೧. ಶ್ರೀ ವ್ಯಾಸರಾಯರು. ೨. ಶ್ರೀ ವಾದಿರಾಜರು.

ಈ ಗುರುಗಳಿಬ್ಬರೂ ಸಮಕಾಲೀನರು. ೨ನೆಯವರು ನಮ್ಮ ಜಿಲ್ಲೆಯವರು. ೧ನೆಯವರು ಮೈಸೂರು ಜಿಲ್ಲೆಯವರು. ಇಬ್ಬರೂ ಗ್ರಂಥಕರ್ತರೆಂದು ಹೆಸರು ಪಡೆದವರು. ಇಬ್ಬರೂ ಕನ್ನಡದಲ್ಲಿಯೂ ಅನೇಕ ದೇವರ ನಾಮಗಳನ್ನೂ ಗ್ರಂಥಗಳನ್ನೂ ಬರೆದು ಪ್ರಚಾರಮಾಡಿರುವರು. ಮಾತ್ರವಲ್ಲದೆ ದೇಶಭಾಷೆಯಲ್ಲಿ ದಾಸಕೂಟವೆಂಬ ಸಂಘವನ್ನೇರ್ಪಡಿಸಿ ಪುರಂದರದಾಸ, ಕನಕದಾಸರಂತಹವರನ್ನೇ ಭಾಗವತ ಧರ್ಮಪ್ರಚಾರಕ್ಕಾಗಿ ಕಳುಹಿಸಿದವರು. ಇಬ್ಬರೂ ಮಧ್ವಗುರು ಪೀಳಿಗೆಯ ಯತಿವರ್ಯರು.

## ಶ್ರೀ ವ್ಯಾಸರಾಯರು.

ಮೈಸೂರು ಜಿಲ್ಲೆಯ ಕಾವೇರೀ ತೀರದ ಬನ್ನೂರೆಂಬ ಗ್ರಾಮದಲ್ಲಿ ಕಾಶ್ಯಪಗೋತ್ರೋದ್ಭವನಾದ ರಾಮಾಚಾರ್ಯನೆಂಬ ಬ್ರಾಹ್ಮಣನಿದ್ದನು. ಅವನಿಗೆ ಪತಿವ್ರತೆಯಾದ ಹೆಂಡತಿಯೊಬ್ಬಳಿದ್ದಳು. ಈ ದಂಪತಿಗಳಲ್ಲಿ ತಾ. ೨೨—೪—೧೪೪೬ನೇ ಪ್ರಭವ ಸಂದ ವೈಶಾಖ ಶುದ್ಧ ಸಪ್ತಮಿ ಭಾನುವಾರ ವ್ಯಾಸರಾಯರು ಜನ್ಮ ತಾಳಿದರು. ವಿಷ್ಣುಭಕ್ತನಾದ ಪ್ರಹ್ಲಾದನೇ ವ್ಯಾಸರಾಯರಾಗಿ ಅವತರಿಸಿದರೆಂಬ ವಿಷಯವು ವಿದ್ಯಾರತ್ನಾಕರ ತೀರ್ಥರು ಬರೆದ ವ್ಯಾಸಚರಿತೆಯಲ್ಲಿ ವರ್ಣಿತವಾಗಿದೆ. ಪುರಂದರದಾಸರು ಮೊದಲಾಗಿ ಎಲ್ಲಾ ದಾಸರೂ ವ್ಯಾಸರಾಯರು ಪ್ರಹ್ಲಾದಾವತಾರವೆಂದು ಸಾರಿರುತ್ತಾರೆ. ದಂಪತಿಗಳು ಬಾಲಕನಿಗೆ ಯತಿರಾಜನೆಂದು ನಾಮಕರಣಮಾಡಿದರು. ಬಾಲಕನಿಗೆ ೫ನೆ ವರ್ಷದಲ್ಲಿ ಉಪನಯನವೂ ೭ನೆ ವರ್ಷದಲ್ಲಿ ಸನ್ಯಾಸವೂ ಆಗಿ ತದನಂತರ ಶ್ರೀಪಾದರಾಯರಲ್ಲಿ ೧೨ ವರ್ಷ ವ್ಯಾಸರಾಯರ ವಿದ್ಯಾಭ್ಯಾಸವಾಯಿತು.

ಮಧ್ವಾಚಾರ್ಯರ ಮೂಲಪೀಠಸ್ಥರಾದ ಶ್ರೀ ಬ್ರಹ್ಮಣ್ಯತೀರ್ಥರು ವ್ಯಾಸರಾಯರಿಗೆ ಸನ್ಯಾಸಾಶ್ರಮವನ್ನು ಕೊಟ್ಟದ್ದಲ್ಲದೆ ತಮ್ಮ ವಿದ್ಯಾಸಿಂಹಾಸನದಲ್ಲಿ ಪಟ್ಟಾಭಿಷೇಕ ಮಾಡಿ ಮಹಾಮಂತ್ರಗಳನ್ನುಪದೇಶಿಸಿದರು. ವ್ಯಾಸರಾಯರು ಪುರುಷೋತ್ತಮತೀರ್ಥರ ಗುಹೆಯಲ್ಲಿ ತಪಶ್ಚರ್ಯೆ ಮಾಡಿ ಅಪರೋಕ್ಷಿಗಳಾದರು. ಬ್ರಹ್ಮಣ್ಯತೀರ್ಥರು ಕ್ರಿ. ಶಕ ೧೪೬೭ರಲ್ಲಿ ವೃಂದಾವನಸ್ಥರಾಗಲು ಶ್ರೀ ವ್ಯಾಸರಾಯರು ಗುರುಗಳ ಮಹಾಸಮಾರಾಧನೆ ಮಾಡಿ ತೀರ್ಥಾಟನೆಯ ವ್ಯಾಜದಿಂದ ದೇಶಸಂಚಾರಕ್ಕಾಗಿ ಹೊರಟರು. ಅಜೇಯರಾದ ಪಂಡಿತರನ್ನು ಸಮ್ಮತಗೊಳಿಸಿ ಭಕ್ತಿಪಂಥವನ್ನು ಪದೇಶಮಾಡಿದರು.

ವ್ಯಾಸರಾಯರಿಗೆ ಕಂಚಿಗೆ ಹೋದಾಗ ಯಾರೋ ದುರಾತ್ಮರು ವಿಷಪ್ರಯೋಗವನ್ನು ಮಾಡಿದರೂ ಅವರು ತಮ್ಮ ತಪಶ್ಶಕ್ತಿಯಿಂದ ಅದನ್ನು ಜೀರ್ಣಿಸಿಕೊಂಡರು.

'ಪಂಚಾಶದುತ್ತರ ಶತೇ ವಂಶಪೂರ್ತಿರ್ಭವಿಷ್ಯತಿ' ಎಂಬ ವಿದ್ಯಾರಣ್ಯರ ಕಾಲಜ್ಞಾನದಂತೆ ವಿರೂಪಾಕ್ಷ ಭೂಪತಿಯೊಡನೆ ವಿಜಯನಗರದ ಪ್ರಥಮ ರಾಜವಂಶ ಪೂರ್ತಿಯಾಯಿತು. ವೀರ ನರಸಿಂಹ ಭೂಪಾಲನು ಹೆಚ್ಚಿನ ರಾಜ್ಯಕಾಂತಿಗೆ ಅವಕಾಶ ಕೊಡದೆ ತಾನೇ ವಿಜಯನಗರದ ಸಮ್ರಾಟನಾದನು. ಶ್ರೀ ವ್ಯಾಸರಾಯರು ರಾಜಗುರುಗಳಾಗಿ ಸಾಮ್ರಾಜ್ಯರಕ್ಷಕರಾಗಿ ನಿಂತರು. ವೀರ ನರಸಿಂಹನಿಂದ ಅಚ್ಯುತರಾಯನ ಕಾಲದ ವರೆಗೆ ವಿಜಯನಗರವು ಮಹೋನ್ನತ ದೆಶೆಯಲ್ಲಿ ಬಾಳಿತು. ಧರ್ಮದ್ವೇಷಿಗಳಾದ ಮುಸಲ್ಮಾನರಡಗಿದರು. ಪುರಂದರದಾಸ, ಕನಕದಾಸರಂತಹವರು ಭಾಗವತ ಧರ್ಮೋಪದೇಶ ಮಾಡಿದರು. ಮತ್ತೆ ೭೫ ವರ್ಷ ಕಾಲ ಕರ್ನಾಟಕದಲ್ಲಿ ಶಾಂತಿ ನೆಲೆಗೊಂಡಿತು.

ವೀರ ನರಸಿಂಹನು ತಿರುಪತಿಯ ಅರ್ಚಕರ ಅನ್ಯಾಯಕ್ಕಾಗಿ ಅವರನ್ನು ನಿರ್ಮೂಲಗೊಳಿಸಿದ್ದರಿಂದ ತಿರುಪತಿಯ ಪೂಜೆಯ ವಿಷಯದಲ್ಲಿ ತಕ್ಕ ವ್ಯವಸ್ಥೆ ಮಾಡಬೇಕೆಂದು ವ್ಯಾಸರಾಯರೊಡನೆ ಹೇಳಿದಾಗ ಶ್ರೀ ವ್ಯಾಸರಾಯರು 'ಅರ್ಚಕರ ಕುಟುಂಬದಲ್ಲಿ ಬಾಲಕನೊಬ್ಬನು ಜನಿಸಿರುವನು. ಅವನಿಗೆ ಈ ಪೂಜೆಯನ್ನು ಬಿಟ್ಟುಕೊಡಬೇಕೆ'ಂದು ಹೇಳಿದರು. ಬಾಲಕನಿಗೆ ಪ್ರಾಯ ಬರುವ ವರೆಗೆ ೧೨ ವರ್ಷ ಕಾಲ ತಾನೇ ಮುಂದಾಳಾಗಿ ನಿಂತು ವೆಂಕಟಪತಿಯ ಪೂಜಾಕಾರ್ಯ ನೆರವೇರಿಸಿದರು. ಬಾಲಕನು ಉಪನೀತನಾದ ಕೂಡಲೇ ಅವನ ಅರ್ಹತೆಯನ್ನು ಪರೀಕ್ಷಿಸಿ ವೆಂಕಟಪತಿಯ ಪೂಜಾಕಾರ್ಯವನ್ನು ಅವನಿಗೇ ಅರ್ಪಿಸಿದರು. ವ್ಯಾಸರಾಯರು ೧೨ ವರ್ಷ ವೆಂಕಟಪತಿಯ ಪೂಜಾ ಮಾಡಿದ ಜ್ಞಾಪಕಾರ್ಥವಾಗಿ ಅವರ ಮಠಪತಿಗಳು ಯಾವಾಗ ತಿರುಪತಿಗೆ ಬಂದರೂ ಅಲ್ಲಿನ ಮಹಾಂತರು ಅರ್ಧಬೆಟ್ಟಕ್ಕೆ ದೇವಸ್ಥಾನದ ಸಕಲ ಬಿರುದಾವಳಿಗಳಿಂದ ಪೂರ್ಣಕುಂಭ ಸಹಿತರಾಗಿ ಇದಿರುಗೊಂಡು ಬೀಗಮುದ್ರೆಯನ್ನು ಒಪ್ಪಿಸುವ ಮರ್ಯಾದೆಯು ಆಚರಣೆಗೆ ಬಂದಿತು. ಈ ಕಾಲಧಲ್ಲಿ ಆ ಮಠಪತಿಗಳು ಆಗಾಗ ತಿರುಪತಿಗೆ ಹೋಗಿ ನಡೆಸಿಕೊಳ್ಳಿದ ಪ್ರಯುಕ್ತ ಆ ಮರ್ಯಾದೆಯು ಮರೆತು ಹೋದಂತೆ ಕಾಣುತ್ತದೆ.

ವ್ಯಾಸರಾಯರು ವಿಜಯನಗರದಲ್ಲಿದ್ದಾಗ ಕ್ರಿ. ೧೫೦೦ ರಲ್ಲು ಒಂದು ವರ್ಷದಲ್ಲಿಯೇ ೭೫೨ ಮಾರುತಿ ದೇವಸ್ಥಾನಗಳನ್ನು ಸ್ಥಾಪಿಸಿದರು. ಇದಕ್ಕೆ ತಕ್ಕ ಶ್ಲೋಕಾಧಾರವಿದೆ. ವಿಜಯನಗರದ ಕೃಷ್ಣದೇವರಾಯನು. ತನಗೊದಗಿದ ಕುಹೂ ಎಂಬ ಅರಿಷ್ಟಯೋಗನಾಶಕ್ಕಾಗಿ ವ್ಯಾಸರಾಯರಿಗೆ ಸಾಮ್ರಾಜ್ಯವನ್ನೇ ದಾನಮಾಡಿದನು. ವ್ಯಾಸರಾಯರು ಸಿಂಹಾಸನದ ಮೇಲೆ ಕುಳಿತು ರಾಜನ ಶ್ರೇಯಸ್ಸಿಗಾಗಿ ಬಲು ವಿಧ ದಾನಗಳನ್ನು ಮಾಡಿದರು. ಮಹಾರಾಜನು ಕೈಜೋಡಿಸಿಕೊಂಡು ಸಿಂಹಾಸನದ ಬಲಪಾರ್ಶ್ವದಲ್ಲಿ ನಿಂತಿದ್ದನು. ಕುಹೂ ಯೋಗವು ಜಾಜ್ವಲ್ಯಮಾನವಾಗಿ ಬಂದಿತು. ಜ್ವಾಲೆಯು ಸಿಂಹಾಸನದ ಸವಿಾಪಕ್ಕೆ ಬರಲು ವ್ಯಾಸರಾಯರು ತಮ್ಮ ಕಾವಿಶಾಠಿಯನ್ನು ತೆಗೆದೊಗೆದರು. ದಳ್ಳುರಿಯಿಂದ ಶಾಠಿಯು ದಗ್ಧವಾಗಿ ಜ್ವಾಲೆಯು ಶಾಂತವಾಯಿತು. ಸಂತೋಷದಿಂದ ಸ್ವಾಮಿಗಳು ಸಿಂಹಾಸನದಿಂದಿಳಿದರು. ಕುಹೂ ಯೋಗದಿಂದ ಮುಕ್ತನಾದ ಕೃಷ್ಣದೇವರಾಯನು ವ್ಯಾಸರಾಯರಿಗೆ ದಾನ ಮಾಡಿದ ಶಾಸನಗಳಿವೆ. ವಿಜಯನಗರದ ರಾಜರೊಬ್ಬರೆ ವ್ಯಾಸರಾಯ ಮಠಕ್ಕೆ ಕೊಟ್ಟ ಜಹಗೀರುಗಳನ್ನು ಇದುವರೆಗೆ ದೊರೆತಿರುವಷ್ಟು ಶಾಸನಗಳ ಆಧಾರದಿಂದಲೇ ಒಟ್ಟುಗೂಡಿಸಿದರೆ ಅದೊಂದು ಪ್ರತ್ಯೇಕ ರಾಷ್ಟ್ರವಾಗ ಬಹುದು.

ಶಾ. ಶ. ೧೪೬೧ನೇ ವಿಳಂಬಿ ಮಾಘಮಾಸವು ಸನ್ನಿಹಿತವಾಯಿತು. ವ್ಯಾಸರಾಯರು ಮಧ್ವನವಮಿಯುತ್ಸವವನ್ನು ಬಹು ವಿಭವದಿಂದ ನಡೆಸಿದರು. ಅದೇ ವರ್ಷ ಫಾ. ಬ. ೪ರಲ್ಲು ಪರಂಧಾಮವನ್ನೈದಿದರು.

ಶ್ರೀ ವ್ಯಾಸರಾಯರು ಪ್ರಬಲತರವಾದ ನ್ಯಾಯಾಮೃತ, ತರ್ಕಕಾಂಡವ, ಚಂದ್ರಿಕಾ ಎಂಬ ಗ್ರಂಥರತ್ನಗಳನ್ನು ರಚಿಸಿದರು.

ವ್ಯಾಸರಾಯರು ಕೇವಲ ಮಧ್ವಮತೋದ್ಧಾರಕರಷ್ಟೇ ಅಲ್ಲ; ಸಂಸ್ಕೃತದಲ್ಲಿ ಗ್ರಂಥಕರ್ತರಾಗಿ ಪ್ರಖ್ಯಾತಿ ಪಡೆದವರೆಂಬುದೂ ಅಲ್ಲ; ಮಧ್ವ, ಶಂಕರ, ರಾಮಾನುಜ, ಮೊದಲಾದ ಎಲ್ಲಾ ಮತಗಳಿಗೂ ಸಮಾನವಾದ ಭಕ್ತಿಪಂಥವೆನ್ನು, ಭರತ ಖಂಡಕ್ಕೆಲ್ಲಾ ಉಪದೇಶ ಮಾಡಿದರು. ನರಸಿಂಹರಾಜನ ಕಾಲದಿಂದ ಅಚ್ಚುತರಾಯನ ಕಾಲದ ವರೆಗೆ ೫೦ ವರ್ಷಗಳಷ್ಟು ಕಾಲ ಕರ್ನಾಟಕಸಾಮ್ರಾಜ್ಯರಕ್ಷಕರಾಗಿ ದೇವತಾಸ್ವರೂಪರೆಂದು ಹೊಗಳಿಸಿಕೊಂಡವರು. ಶತ್ರುಗಳನ್ನೂ ಮಿತ್ರರಂತೆ ಭಾವಿಸಿದವರು. ಕನ್ನಡ ವಾಙ್ಮಯಕ್ಕೆ ಪೂಜ್ಯತೆಯನ್ನುಂಟುಮಾಡಿದವರು. ಕನ್ನಡದಲ್ಲಿ ಭಗವಂತನನ್ನು ಹಾಡಿಪಾಡಿ ಕುಣಿದಾಡಿದವರು. ಇಂತಹ ಕರ್ನಾಟಕಾಚಾರ್ಯರನ್ನು ಮರೆಯುವುದೆಂತು?

## ಶ್ರೀ ವಾದಿರಾಜರು.

ಶ್ರೀ ಮಧ್ವಾಚಾರ್ಯರ ತಮ್ಮಂದಿರಾದ ವಿಷ್ಣುತೀರ್ಥರು ಉಡುಪಿಯ ಅಷ್ಟಮಠಗಳಲ್ಲಿ ಸ್ಪಾದಿ ಮಠದ ಪೀಳಿಗೆಗೆ ಮೂಲ ಪುರುಷರು. ಆ ಪೀಳಿಗೆಯು ವಾದಿರಾಜರ ಕಾಲಕ್ಕೆ ೧೬ ತಲೆಗಳು ಕಳೆದು ೧೭ನೆ ವಾಗೀಶರಿಂದ ಅಧಿಷ್ಠಿತವಾಗಿತ್ತು. ವಾಗೀಶರು ತಮ್ಮ ಪೀಠಕ್ಕೆ ತಕ್ಕ ಶಿಷ್ಯನೊಬ್ಬನನ್ನು ಆರಿಸುವ ಉದ್ಯೋಗದಲ್ಲಿದ್ದರು.

ದಕ್ಷಿಣ ಕನ್ನಡದ ಕುಂದಾಪುರ ತಾಲೋಕಿನ ಕುಂಭಾಸಿಯ ಬಳಿ ಪೂವಿನಕೆರೆ ಎಂಬುದೊಂದು ಚಿಕ್ಕ ಗ್ರಾಮವಿದೆ. ಅಲ್ಲಿ ದೇವರ ರಾಮಭಟ್ಟನೆಂಬ ಬ್ರಾಹ್ಮಣನಿದ್ದನು. ಅವನಿಗೆ ಗೌರೀದೇವಿಯೆಂಬ ಹೆಂಡತಿ. ಈ ದಂಪತಿಗಳಲ್ಲಿ ವಾದಿರಾಜರು ಕ್ರಿಸ್ತಾಬ್ದ ೧೪೮೦ರಲ್ಲು ಜನಿಸಿದರು. ರಾಜರು ಅವತಾರಮಾಡಿದ ಸ್ಥಳಕ್ಕೆ ಗೌರಿಗದ್ದೆಯೆಂಬ ಹೆಸರಿದೆ. ಜನನಸ್ಥಳವೆಂದು ತೋರಿಸಲು ಶಿಲಾಮಂಟಪವೊಂದು ನಿರ್ಮಾಣವಾಗಿದೆ. ಭಟ್ಟರ ಮನೆಯು ಈಗ ಸೋದೆ ಮಠಕ್ಕೆ ಸೇರಿದೆ. ಬಾಲಕನಿಗೆ ಶಾಸ್ತ್ರಮಾನದಂತೆ ಚೌಲೋಪನಯನಗಳಾದುವು. ಭೂವರನೆಂಬ ಹೆಸರಿಡಲ್ಪಟ್ಟಿತು. ಭೂವರನು ಸಾಮುವೇದದಲ್ಲೂ ಕಾವ್ಯದಲ್ಲೂ ಪಾರಂಗತನಾದನು. ವಿದ್ಯಾಪ್ರಾಪ್ತಿಗಾಗಿಯೂ ವಾಕ್ಪಟುತ್ವಕ್ಕಾಗಿಯೂ ವಾಗೀಶರಿಂದ ಹಯಗ್ರೀವ ಮಂತ್ರೋಪದೇಶ ಪಡೆದು ಕಠಿಣ ತಪಶ್ಚರ್ಯೆಯಿಂದ ಸಿದ್ಧಿಯನ್ನು ಪಡೆದನು. ವಾಗೀಶರು ಸ್ವಯಂ ಭೂವರನಿಗೆ ನ್ಯಾಯವೇದಾಂತಶಾಸ್ತ್ರಗಳನ್ನು ಪಾಠ ಮಾಡಿಸಿದರು. ಭೂವರನಿಗೆ ಸುಮುಹೂರ್ತದಲ್ಲಿ ಸನ್ಯಾಸವಾಯಿತು. ಗುರುಗಳು ವಾದಿರಾಜತೀರ್ಥರೆಂದು ಶಿಷ್ಯನಿಗೆ ಆಶ್ರಮನಾಮವಿತ್ತರು. ಈ ಸಮಕಾಲದಲ್ಲಿ ವಿಜಯನಗರದಲ್ಲಿ ವ್ಯಾಸರಾಯರು ಮಹಾಪ್ರಬಲರಾಗಿದ್ದರು. ಅವರ ಬಳಿ ಕೆಲವು ಕಾಲವಿದ್ದು ಪ್ರೌಢವಿದ್ಯಾಭ್ಯಾಸ ಮಾಡಬೇಕೆಂಬ ಅಭಿಲಾಷೆಯಿಂದ ವಾದಿರಾಜರು ವಿಜಯನಗರಕ್ಕೆ ಹೋಗಿ ವ್ಯಾಸರಾಯರಲ್ಲಿ ವ್ಯಾಸಂಗ ಮಾಡಿದರು. ವಾದಿರಾಜರ ಪ್ರೌಢಿಮೆಯನ್ನು ನೋಡಿ ವಿಜಯನಗರದ ಶ್ರೀ ಕೃಷ್ಣದೇವರಾಯನು ಅವರನ್ನು ಪ್ರಸಂಗಾಭರಣತೀರ್ಥರೆಂದು ಕರೆದನು.

ಉಡುಪಿಯ ಪೂಜಾಪದ್ಧತಿಯಲ್ಲಿ ತಕ್ಕ ಸುಧಾರಣೆಯು ಅವಶ್ಯವಾಗಿತ್ತು. ವಾದಿರಾಜರು ಮಿಕ್ಕ ಯತಿಗಳ ಅನುಮತಿಯಿಂದ ಎರಡು ತಿಂಗಳ ಪೂಜಾಪದ್ಧತಿಯನ್ನು ಎರಡು ವರ್ಷಗಳಿಗೇರಿಸಿದರು. ಒಂದೊಂದು ಮಠಕ್ಕೂ ಆ ಕಾಲದ ರಾಜರ ಸಹಾಯದಿಂದ ಭೂಸ್ಥಿತಿಯನ್ನೇರ್ಪಡಿಸಿದರು.

ವಾದಿರಾಜರು ಸಂಚರಿಸಿದ ಕ್ಷೇತ್ರಗಳ ಮಹಿಮೆಯನ್ನು ವರ್ಣಿಸುವ ತೀರ್ಥಪ್ರಬಂಧವೆಂಬ ಉತ್ತಮವಾದ ಕಾವ್ಯವನ್ನು ಬರೆದರು. ಪೂನಾ ಪಟ್ಟಣದ ವಿದ್ವತ್ಸಭೆಗೆ ವಾದಿರಾಜರು ನವರಸಭರಿತವಾದ 'ರುಕ್ಮಿಣೀಶ ವಿಜಯ'ವೆಂಬ ಉತ್ತಮ ಕಾವ್ಯವನ್ನು ಬರೆದು ಕಳುಹಿಸಿದರು. ಆ ಸಭೆಯ ಪಂಡಿತಮಂಡಲವು ಆ ಮಹಾಕಾವ್ಯವನ್ನು ಆನೆಯ ಮೇಲಿಟ್ಟು ಪೆರವಣಿಗೆ ಮಾಡಿ ಗ್ರಂಥಕರ್ತರಾದ ವಾದಿರಾಜರಿಗೆ ಉತ್ತಮ ಬಹುಮಾನವನ್ನು ಕಳುಹಿಸಿತು.

ವಾದಿರಾಜರು ಹಯಗ್ರೀವೋಪಾಸಕರಾಗಿದ್ದುದರಿಂದ ನಿತ್ಯವೂ ಒಂದು ಹರಿವಾಣ ತುಂಬ ಕಡಲೆಯ ಪೂರಣ ಮಾಡಿಸಿ ಅದನ್ನು ತಲೆಯ ಮೇಲಿಟ್ಟುಕೊಂಡು ಏಕಾಂತಸ್ಥಳದಲ್ಲಿ ಕುಳಿತು ಧ್ಯಾನಮಾಡುತ್ತಿದ್ದರು. ಪರಮಾತ್ಮನು ದಿವ್ಯ ಶ್ವೇತಾಶ್ವರೂಪದಿಂದ ದರ್ಶನವಿತ್ತು ತನ್ನೆರಡು ಖುರಗಳನ್ನು ವಾದಿರಾಜರ ಹೆಗಲ ಮೇಲೆ ಇಟ್ಟು ಹೂರಣವನ್ನು ಸ್ವೀಕರಿಸುತಿದ್ದನು.

ವಾದಿರಾಜರು ಅಯೋಧ್ಯೆಯಿಂದ ತಂದಿದ್ದ ಗರುಡಮಾರುತೀ ವಿಗ್ರಹಗಳನ್ನು ಶ್ರೀಕೃಷ್ಣದೇವರ ಮಠದ ನೈಋತ್ಯ ವಾಯವ್ಯ ಭಾಗಗಳಲ್ಲಿ ಪ್ರತಿಷ್ಠಿಸಿದರು. ಇದರಂತೆ ಕೃಷ್ಣ ದೇವರ ಮಠದ ಉತ್ತರದ್ವಾರದಲ್ಲಿಯೂ ಆಚಾರ್ಯರ ಜನ್ಮಸ್ಥಾನವಾದ ಪಾದುಕಾಕ್ಷೇತ್ರದಲ್ಲಿಯೂ ಮಧ್ವ ಪ್ರತೀಕಗಳನ್ನು ಪ್ರತಿಷ್ಠಿಸಿದರು. ವಾದಿರಾಜರು ತಿರುಪತಿಗೆ ಹೋದಾಗ ವೆಂಕಟಪತಿಗೆ ಭಂಗಾರದಿಂದ ಕಟ್ಟಿಸಿ ಸಮರ್ಪಿಸಿದ ವಾಸುದೇವಸಾಲಿಗ್ರಾಮಗಳಿಂದಲೇ ರಚಿತವಾದ ಸಾಲಿಗ್ರಾಮಸರವು ಅದ್ಯಾಪಿ ತಿರುಪತಿ ಶ್ರೀನಿವಾಸ ಮೂರ್ತಿಯ ಆಪಾದಮಸ್ತಕಪರ್ಯಂತ ಶೋಭಿಸುತ್ತಲಿದೆ.

ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಸೋದೆ ಗ್ರಾಮವು ಆಗ ಒಂದು ಸಂಸ್ಥಾನವಾಗಿತ್ತು. ಅರಸಪ್ಪ ನಾಯಕನು ರಾಜನಾಗಿದ್ದನು. ವಾದಿರಾಜರು ಅವನಿಗೆ ಶತ್ರುಗಳಿಂದುಂಟಾದ ಆಪತ್ತನ್ನು ಪರಿಹರಿಸಿದುದು ಮಾತ್ರವಲ್ಲದೆ ಸತ್ತು ಹೋದ ಅವನ ಅಳಿಯನನ್ನು ತಾನು ರಚಿಸಿದ ೧೦೮ ನುಡಿಗಳ ಲಕ್ಷ್ಮೀ ಶೋಭಾನೆ ಎಂಬ ಹಾಡನ್ನು ಹಾಡಿ ದೇವರನ್ನು ಸ್ತುತಿಸಿ ಬದುಕಿಸಿದರು. ಅಂದಿನಿಂದ ಲಕ್ಷ್ಮೀ ಶೋಭಾನೆಯು ವಧೂವರರ ವಿವಾಹಕಾಲದಲ್ಲಿ ಮುತ್ತೈದೆಯರು ಪರಮಭಕ್ತಿಯಿಂದ ಹಾಡುವುದು ವಾಡಿಕೆಯಾಗಿದೆ.

ವಾದಿರಾಜರು ಸೋದೆಯಲ್ಲಿ ಪೌರ್ಣಮೆಯ ಉತ್ಸವವಾದ ಮೇಲೆ ಅಂಗವಾದ ಅವಭೃತಸ್ನಾನವನ್ನು ನೆರವೇರಿಸಿ ಶಿಷ್ಯರಿಗೆಲ್ಲಾ ಫಲಮಂತ್ರಾಕ್ಷತೆಗಳನ್ನು ಕೊಟ್ಟು ಸ್ವಯಂ ವೃಂದಾವನದಲ್ಲಿ ಕುಳಿತು ಜಪಸರವನ್ನು ಹೊರಗೆ ಹಾಕುತ್ತಲೇ ಸಂಪುಟಶಿಲೆಯನ್ನು ಮುಚ್ಚಬೇಕೆಂದು ಆಜ್ಞೆಗೈದರು. ಕ್ರಿ. ಶ. ೧೬೦೦ ಶಾರ್ವರಿ ಸಂ. ಫಾ. ಬ. ೨ರಲ್ಲು ರಾಜರು ಹೇಳಿದಂತೆ ಜಪಸರವು ಕೆಳಗುರುಳಿತು. ಇದೇನೋ ಅತ್ಯಂತ ವಿಚಿತ್ರವಾಗಿದೆಯೆಂದು ಎದುರು ನೋಡುತ್ತಿರುವ ಜನರ ಮಧ್ಯದಲ್ಲಿ ವಿಮಾನಾರೂಢನಾಗಿ ಪ್ರಯಾಣಮಾಡುತ್ತಿರುವ ವಾದಿರಾಜರು ಸ್ವರ್ಣಪಾದುಕೆಗಳನ್ನೂ ಶೇಷವಸ್ತ್ರಗಳನ್ನೂ ಮೇಲಿಂದ ಅಭಯಸೂಚನೆಗೋ ಎಂಬಂತೆ ಅನುಗ್ರಹಿಸಿದರು. ಜನರು ಜಯಜಯವೆಂದು ಘೋಷಣ ಮಾಡಿದರು. ಭಾರತೀಯ ಯತಿಗಳ ಇತಿಹಾಸದಲ್ಲಿ ಸಶರೀರವಾಗಿ ವೃಂದಾವನ ಪ್ರವೇಶ ಮಾಡಿದವರಲ್ಲಿ ವಾದಿರಾಜರು ಮೊದಲನೆಯವರು.

೧೨೦ ವರ್ಷಗಳ ಜೀವಿತದಲ್ಲಿ ೧೦೦ ವರ್ಷಗಳಷ್ಟು ಕಾಲ ಆಡಿದ ಮಾತೆಲ್ಲಾ ಅತಿಮಾನುಷ, ಮಾಡಿದ ಕೆಲಸವೆಲ್ಲಾ ಅತಿಮಾನುಷವೆಂದು ಶತ್ರುಮಿತ್ರರಿಂದಲೂ ಹೊಗಳಿಸಿಕೊಂಡು ಭರತ ಭೂಮಿಯನ್ನು ಮೂರು ಮೂರು ಬಾರಿ ಸಂಚರಿಸಿ ಲಕ್ಷಾವಧಿ ಪಾಮರಜನರನ್ನುದ್ಧಾರಮಾಡಿದರು. ವಾದಿರಾಜರು ಉಡ್ಪಿಯಲ್ಲಿ ನಡೆಸಿದ ಪರ್ಯಾಯಗಳೆಂದರೆ ಕ್ರಿ. ೧೫೪೪-೧೫೬೪-೧೫೮೪-೧೬೦೪ ಎಂದು ವೆಂಕೋಬರಾಯರ ವ್ಯಾಸವಿಜಯದಿಂದ ಗೊತ್ತಾಗುತ್ತದೆ.

ವಿಜಯನಗರದ ಅಚ್ಯುತರಾಯನು ಉಡುಪಿ ಯಾತ್ರೆಯ ವ್ಯಾಜದಿಂದ ವಾದಿರಾಜರ ದರ್ಶನಕ್ಕೆ ಬಂದನು. ಮಧ್ವಸರೋವರಕ್ಕೆ ಸೋಪಾನರಚನೆ, ಉಡುಪಿಯ ದೇವಾಲಯಗಳ ವಿಸ್ತಾರವೆಲ್ಲಾ ಆ ಮಹಾರಾಯನಿಂದಾಯಿತು. ಈ ಕಾಲದಲ್ಲಿ ಶ್ರೀ ವ್ಯಾಸರಾಯರೂ ಉಡ್ಪಿಗೆ ಬಂದಿದ್ದಂತೆ ಗೊತ್ತಾಗುತ್ತದೆ. ಅಚ್ಯುತರಾಯನು (೧೫೨೨-೪೨) ಕೊಟ್ಟ ಅನರ್ಘ್ಯ ಆಭರಣಗಳು ಈಗಲೂ ಶ್ರೀಕೃಷ್ಣಮಠದಲ್ಲಿವೆ.

ಈವತ್ತಿಗೂ ಉಡುಪಿಯಲ್ಲಿ ಮಧ್ವಾಚಾರ್ಯರ ನಂತರ ವಾದಿರಾಜರ ಹೆಸರು ಸನ್ಯಾಸ್ಯವಾಗಿದೆ. ವಾದಿರಾಜರು ಹಾಕಿಕೊಟ್ಟ ಪೂಜಾಪರ್ಯಾಯಪದ್ಧತಿಗಳು ಅದೇ ತೂಕ ಅದೇ ಅಳತೆಯಿಂದ ನಡೆದುಬರುತ್ತದೆ. ಹೆಸರಿಗೆ ತಕ್ಕಂತೆ ವಾದಿರಾಜರು ವಾದಿನಿಗ್ರಹ ಮಾಡಿದ ಪಂಡಿತರು. ದೊಡ್ಡ ಗ್ರಂಥಕರ್ತರು, ಪಂಡಿತರ ದೃಷ್ಟಿಯಿಂದ ದೊಡ್ಡದಾದ ಗ್ರಂಥಗಳನ್ನು ರಚಿಸಿದವರು. ಮಾತ್ರವಲ್ಲದೆ ಕನ್ನಡದಲ್ಲಿಯೂ ಸಾವಿರಾರು ದೇವರ ನಾಮಗಳನ್ನು ಮಾಡಿ ಹಾಡಿದವರು.

ಇವರ ಸ್ವತಂತ್ರ ಗ್ರಂಥಗಳಲ್ಲಿ ಯುಕ್ತಿಮಲ್ಲಿಕೆಯು ವಿದ್ಯಾರಣ್ಯರ ಉದ್ದಾಮವೇದಾಂತವಾದ ಪಂಚದಶಿಗೆ ಸಮವಾಗಿದೆ. ಯುಕ್ತಿಬಲದಿಂದಲೂ ಸಿದ್ಧಾಂತಸ್ಥಾಪನೆ ಮಾಡುವುದರಲ್ಲಿ ಇವರಿಗೆ ಸದೃಶರು ಮತ್ತೊಬ್ಬರಿಲ್ಲ. ಭಾಷೆ, ಭಾವನೆಗೆ ತಕ್ಕ ಭಾವನೆ,

(೧೪ನೇ ಪುಟದಿಂದ)

ಇದು ಹೊರತು ನಡ್ಡಂತಾಡಿ, ಹಾಗೂ ಸುಬ್ರಹ್ಮಣ್ಯ, ಇವು ಗಳನ್ನು ತಾನು ಪೂಜಿಸುವ ಕ್ಷೇತ್ರಗಳನ್ನಾಗಿ ಮಾಡಿಕೊಂಡರು.

ಈ ರೀತಿಯಲ್ಲಿ ಶಿಷ್ಯಮಂಡಲಿಯನ್ನು ಸ್ಥಾಪಿಸಿ ಮೂವ ತ್ತಾರಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಬರೆದು 'ದ್ವೈತಮತ ಪ್ರತಿಷ್ಠಾಪನಾಚಾರ್ಯ'ರೆಂಬ ಬಿರುದನ್ನು ಸಕಲ ಭೂಭಾಗ ದಲ್ಲೆ ಆಚಂದ್ರಾರ್ಕವಾಗಿ ಸ್ಥಿರಗೊಳಿಸಿ ನಮ್ಮ ದೃಷ್ಟಿಯಿಂದ ಮರೆಯಾದರೂ ಕೀರ್ತಿಕಾಯದಲ್ಲಿ ಈಗಲೂ ಶ್ರೀಮನ್ಮಧ್ವಾ ಚಾರ್ಯರು ವಿರಾಜಿಸುತ್ತಿರುವರು.

## ಶ್ರೀಮನ್ಮಧ್ವಾಚಾರ್ಯರ ಮತಬೋಧನೆ.

### (೧) ಪರಮಾತ್ಮ ಮತ್ತು ಲಕ್ಷ್ಮೀ.

ಶ್ರೀಮನ್ನಾರಾಯಣನು ಸರ್ವೋತ್ತಮನೂ ವಿಷ್ಣು ಮೊದಲಾದ ಸರ್ವಶಬ್ದವಾಚ್ಯನೂ ಅನಂತಕಲ್ಯಾಣಗುಣಪರಿ ಪೂರ್ಣನೂ ಸಮಸ್ತ ದೋಷರಹಿತನೂ ಸಚ್ಚಿದಾನಂದಶರೀರನೂ ಸೃಷ್ಟಿ ಸ್ಥಿತಿ ಮೊದಲಾದ ಪ್ರಪಂಚವ್ಯಾಪಾರಗಳ ವ್ಯವಸ್ಥಾಪ ಕನೂ ಆಗಿರುತ್ತಾನೆ. ಈತನ ರಾಣಿಯಾದ ಲಕ್ಷ್ಮೀ ದೇವಿಯೂ ಕೂಡ ಗುಣಗಳ ಹೊರತು ಇತರ ವಿಷಯದಲ್ಲಿ ಶ್ರೀ ಪರಮಾತ್ಮ ನಿಗೆ ಸಮಾನಳು. ಆದರೆ ತದಧೀನಳು. ಇತರ ಬ್ರಹ್ಮಾದಿ ಚೇತನಗಳೆಲ್ಲವೂ ಚೇತನತ್ವಧರ್ಮದಲ್ಲಿ ಪರಮಾತ್ಮನಿಗೆ ಸಮಾನ ವಾದರೂ ಪಾರತಂತ್ರ್ಯಾದಿ ದೋಷಗಳಿಂದ ಕೂಡಿರುವುವು. ಆದಕಾರಣ ಚೇತನಗಳನ್ನು ಎರಡಾಗಿ ವಿಭಾಗಿಸಿದರೆ ವ್ಯಾಪ್ತ ಚೇತನ, ಮತ್ತು ಅವ್ಯಾಪ್ತ ಚೇತನವೆಂದಾಗುವುದು. ಪರಮಾತ್ಮ ಮತ್ತು ಲಕ್ಷ್ಮೀ ಇವರಿಬ್ಬರು ಸರ್ವತ್ರವ್ಯಾಪ್ತ ಚೇತನಗಳು. ಇತರ ಚೇತನಗಳಾದರೋ ಅವರ ತತ್ವಗಳ ಮಟ್ಟಿಗೆ ವ್ಯಾಪ್ತರು. ಹೇಗಂದರೆ, ಬ್ರಹ್ಮನ ಚೇತನವು ಇಡೀ ಬ್ರಹ್ಮಾಂಡದಲ್ಲಿ ವ್ಯಾಪ್ತ ವಾಗಿರುವದು. ಹೀಗೆಯೇ ಇತರರದು. ಇನ್ನು ಶ್ರೀಮನ್ನಾ ರಾಯಣನು ಸೃಷ್ಟಿಸಿಯಮೇಗಳನ್ನು ಮೀರಲು ಶಕ್ತನಾಗಿದ್ದರೂ ಸತ್ಯಸಂಕಲ್ಪನಾದ ಕಾರಣ ಹಾಗೆ ಮಾಡುವದಿಲ್ಲ. ಶ್ರೀ ಪರ ಮಾತ್ಮನು ಸಮಸ್ತ ಚೇತನಗಳಿಂದಲೂ ಅಚೇತನಗಳಿಂದಲೂ ಸರ್ವದಾ ಭಿನ್ನನಾಗಿಯೇ ಇರುವುದರಿಂದ ಸಾಯುಜ್ಯಮುಕ್ತಿ ಯಲ್ಲಿ ಸಹ ಮುಕ್ತಜೀವರು ಅವನ ವ್ಯಾಪ್ತವಾದ ಸಚ್ಚಿದಾ ನಂದ ಶರೀರದೊಳಗೆ ಪರಸ್ಪರ ಭೇದದಿಂದಲೇ ರಮಿಸುವರು. ಶ್ರೀ ಪರಮಾತ್ಮನು ರಾಮಕೃಷ್ಣಾದಿ ಅನೇಕ ಅವತಾರಗಳನ್ನು ಲೋಕೋದ್ಧಾರಕ್ಕಾಗಿ ಮಾಡುವನು. ಆದರೆ ಅವನಿಗೆ ಗರ್ಭವಾಸ ಮೊದಲಾದ ಯಾವ ದುಃಖವೂ ಇರುವುದಿಲ್ಲ. ರಾಮಾದಿ ರೂಪದಲ್ಲಿ ದುಃಖಿಯಂತೆ ನಟಿಸುವುದು ದುಷ್ಟರಿಗೆ ಜ್ಞಾನವನ್ನುಂಟುಮಾಡುವುದಕ್ಕಲ್ಲದೆ ಬೇರೆಯಲ್ಲ. ಹೀಗೆಯೇ ಶ್ರೀ ಲಕ್ಷ್ಮೀಯ ಸ್ಥಿತಿ. ಇವಳು ಸಹ ಅವನ ಅವತಾರ ಗಳಲ್ಲಿ ಸಹಧರ್ಮಿಣಿಯಾಗಿ ಅವತರಿಸುವಳು. ಉದಾಹರಣೆ: ರಾಮಾವತಾರದಲ್ಲಿ ಸೀತೆ, ಕೃಷ್ಣಾವತಾರದಲ್ಲಿ ರುಕ್ಮಿಣೀ—ಈ ಅವತಾರಗಳಲ್ಲಿ ಮೂಲರೂಪಕ್ಕೂ ಅವತಾರಕ್ಕೂ ಯಾವ ತರದ ಭೇದವಾಗಲೀ ಶಕ್ತಿಜ್ಞಾನತಾರತಮ್ಯವಾಗಲೀ ಇಲ್ಲವೇ ಇಲ್ಲ.

### (೨) ಜೀವಗಳು.

ಜೀವಗಳೆಲ್ಲವೂ ಚೇತನಗಳಾಗಿದ್ದರೂ ಸರ್ವಥಾ ಪರ ಮಾತ್ಮನಿಂದ ಭಿನ್ನಗಳೆಂದು ಹೇಳಿದೆಯಷ್ಟೆ. ಅಷ್ಟೇ ಅಲ್ಲ; ಪರಸ್ಪರ ಭಿನ್ನಗಳು, ಜಡದಿಂದಲೂ ಸರ್ವಥಾ ಭಿನ್ನಗಳು ಮತ್ತು ಅಣುಪ್ರಮಾಣದಿಂದಿರುವುವು. ಇವುಗಳಲ್ಲಿ ಮೂರು ಪ್ರಕಾರವಿದೆ. ಉತ್ತಮ ಜೀವ ಅಥವಾ ಸಾತ್ವಿಕ, ಮಧ್ಯಮ ವ ರಾಜಸ, ಅಧಮ ಯಾ ತಾಮಸ—ಇವರಲ್ಲಿ ಸಾತ್ವಿಕ ಜೀವರು ಮಾತ್ರ ಸ್ವರೂಪಾನಂದರೂಪವಾದ ಮುಕ್ತಿಯನ್ನು ಹೊಂದು ವರು. ಮುಕ್ತಿಯಲ್ಲಿಯೂ ಅಪಾರವಾದ ತಾರತಮ್ಯದಿಂದಿರು ವರು. ರಾಜಸರು ನಿತ್ಯಸಂಸಾರಿಗಳಾಗಿ ಸ್ವರ್ಗನರಕಾದಿ ಗಳಲ್ಲಿ ಸಂಚರಿಸುವರು. ತಾಮಸರು ಮುಕ್ತಿಯ ಬದಲು ಶಾಶ್ವತವಾದ ಅಂಧತಮಸ್ಸಿನಲ್ಲಿ ಬಿದ್ದು ಸ್ವರೂಪಭೂತವಾದ ನಿತ್ಯದುಃಖವನ್ನನುಭವಿಸುವರು. ಆದುದರಿಂದ ಮುಕ್ತಿಯಲ್ಲಿಯೂ ಅಂಧತಮಸ್ಸಿನಲ್ಲಿಯೂ ಪುನರಾವೃತ್ತಿ ಇರುವುದಿಲ್ಲ.

ಜೀವರೆಲ್ಲರೂ ಪೂರ್ವಕರ್ಮಾನುಸಾರವಾಗಿ ಸಂಸಾರ ದಲ್ಲಿ ಸಂಚರಿಸುವರು. ಪ್ರಾರಬ್ಧ ಕರ್ಮವು ಮುಗಿಯದೆ ಮುಕ್ತಿಯಾಗಲೀ ಅಂಧತಮಸ್ಸಾಗಲೀ ಬರಲಿಕ್ಕಿಲ್ಲ, ದೇವ, ಗಂಧರ್ವ ಮೊದಲಾದವರೂ ಋಷಿಗಳೂ ನಿಶ್ಚಯವಾಗಿ ಮುಕ್ತಿ ಯನ್ನು ಹೊಂದುವರು. ಹಾಗೆಯೇ ಎಲ್ಲಾ ಅಸುರರು ಅಂಧತಮಸ್ಸಿಗೆ ಹೋಗತಕ್ಕವರು. ಮಾನುಷ ಜೀವಿಗಳಲ್ಲಿ ಕೂಡ ಸಾತ್ವಿಕರು ಮುಕ್ತರಾಗಿಯೂ ರಾಜಸರು ನಿತ್ಯಸಂಸಾರಿ ಗಳಾಗಿಯೂ ತಾಮಸರು ತಮೋಯೋಗ್ಯರಾಗಿಯೂ ಇರುವರು. ಹೀಗಾಗಿ ಪಂಚಭೇದವೇ ದ್ವೈತ ಮತದ ಜೀವಾಳವಾಗಿರು ವುದು. ಅದು ಹೇಗಂದರೆ, ಜೀವೇಶ ಭೇದ, ಜೀವರೊಳಗೆ ಭೇದ, ಜಡೇಶ ಭೇದ, ಜಡ ಜೀವ ಭೇದ, ಜಡಗಳಲ್ಲಿ ಪರಸ್ಪರ ಭೇದ. ಈ ಭೇದವು ಸ್ವಾಭಾವಿಕವಾಗಿರುವುದರಿಂದ ಮುಕ್ತಿ ಯಲ್ಲಿ ಕೂಡ ಹೋಗುವಂತಿಲ್ಲ.

### (೩) ಪ್ರಕೃತಿ.

ಇದರ ಮೂಲವು ಲಕ್ಷ್ಮೀ, ಪರಮಾತ್ಮ, ಮತ್ತು ಜೀವ ಗಳ ಹಾಗೆ ಅನಾದ್ಯನಂತವಾಗಿರುತ್ತದೆ. ಇದು ಎಂದೂ ಪರ ಮಾತ್ಮನಿಂದ ಸೃಷ್ಟಿಸಲ್ಪಡಲಿಲ್ಲ. ಈ ಪ್ರಕೃತಿಯ ವಿಕಾರಗಳು ಮಾತ್ರ ಅನಿತ್ಯ. ಉದಾಹರಣೆ ನಮ್ಮ ದೇಹೇಂದ್ರಿಯ ಗಳೂ, ಘಟಪಟಾದಿಗಳೂ ಆಗಿವೆ, ಆದುದರಿಂದಲೇ ಈ ಪ್ರಪಂಚ ವೆಲ್ಲವೂ ಅಬಾಧಿತ ಸತ್ಯವಾಗಿರುವುದು. ಇದು ಯಾವ ಮಾಯೆಯೂ ಅಲ್ಲ. ಇದನ್ನು ವಿದ್ಯೆಯೆಂದು ತಿಳಿಯುವುದೂ ಜೀವೇಶರುಗಳಲ್ಲಿ ಅಭೇದವನ್ನು ಭಾವಿಸುವುದೂ ಕೂಡ ಪಾಪ ಗಳಲ್ಲಿ ಪರಿಗಣಿಸಲ್ಪಟ್ಟಿವೆ. ಇಂತಹ ಪ್ರಕೃತಿಯ ಬಂಧನದಿಂದ ಪಾರಾಗುವುದೇ ಮುಕ್ತಿ ಅಥವಾ ಅಂಧತಮಸ್ಸು. ಈ ಪ್ರಕೃತಿಯು ಸತ್ವ, ರಜಃ, ತಮಃಗಳೆಂಬ ಮೂರು ಗುಣಗಳ ರೂಪ ವಾಗಿರುವುದು. ಇದರಲ್ಲಿ ಸತ್ವಗುಣವು ಮುಕ್ತಿಗೆ ಸಾಧನ ವಾಗಿರುವುದರಿಂದ ಪ್ರಕೃತಿಯ ಸಹಾಯವಿಲ್ಲದೆ ಮುಕ್ತಿಯು ದೊರೆಯಲಾರದು.

### (೪) ಮೋಕ್ಷಸಾಧನ.

ಸತ್ಕರ್ಮ, ಪರಮಾತ್ಮಜ್ಞಾನ, ಭಕ್ತಿ, ದೇವನ ಪ್ರಸಾದ, ಇವು ಮುಕ್ತಿಗೆ ಮೆಟ್ಟಿಲುಗಳಂತಿರುವುವ. ಇವು ಹೊರತು ಬೇರೆ ಯಾವ ವಿಧದಿಂದಲೂ ಮುಕ್ತಿಯು ದೊರೆಯುವಂತಿಲ್ಲ. ವ್ರತೋಪವಾಸ, ತೀರ್ಥಯಾತ್ರೆ, ಯಾಗಾದಿ ಕರ್ಮಗಳೂ ಜ್ಞಾನಸಾಧನಗಳಲ್ಲದೆ ಸಾಕ್ಷಾತ್ ಮುಕ್ತಿಸಾಧನಗಳಲ್ಲ. ಜೀವ ಗಳೆಲ್ಲ ಲಿಂಗದೇಹವೆಂಬ ಅನಾದಿ ಸೂಕ್ಷ್ಮ ಶರೀರದಲ್ಲಿರುವ ಕಾರಣ ಜನ್ಮಮರಣಗಳಲ್ಲಿ ಅದೇ ಲಿಂಗದೇಹವನ್ನಾಶ್ರಯಿಸಿ ಕರ್ಮವಾಸನೆಗಳು ನೆಲೆಗೊಂಡಿರುತ್ತವೆ. ಆದುದರಿಂದ ಇಂತಹ ಲಿಂಗದೇಹದ ಭಂಗವೇ ಮುಕ್ತಿ. ಈ ವಿಷಯದಲ್ಲಿ ಶ್ರೀವಿಷ್ಣು ಭಕ್ತಿಯೇ ಪ್ರಮುಖ ಸಾಧನವು. ಅದಲ್ಲದೆ ಗುರುಭಕ್ತಿಯೂ ಕೂಡ ಹರಿಭಕ್ತಿಯಷ್ಟೇ ಮಹತ್ವವುಳ್ಳದ್ದು. ಶ್ರೀ ವಾಯು

## ಶ್ರೀಕೃಷ್ಣ ಸ್ತೋತ್ರ.

೧.

ಶ್ರೀಸರೋಜಸಂಭವಾದ್ಯುಪಾಸಿತಂ ದಯಾನ್ವಿತಂ ।
ಭಾಸಮಾನದಿವ್ಯರತ್ನಭೂಷಣಂ ಶುಭೇಕ್ಷಣಂ ॥
ದಾಸವರ್ಯಪಾಲಸೈಕತತ್ಪರಂ ಪರಾತ್ಪರಂ ।
ವಾಸುದೇವಮಂಬುಜಾಕ್ಷಮನ್ಮಹಂ ನತೋಸ್ಮ್ಯಯಂ॥

೨.

ನಮೋಮಿ ತೇ ಪದಾಂಬುಜಂ ರಮಾಪತೇ ದಯಾನಿಧೇ ।
ಸುಮಾಸ್ತ್ರಕೋಟಿ ಸುಂದರಾಪ್ರಮೇಯಸಾರ್ಥ
ಸಾರಥೇ ॥
ಸಮೋಧಿಕೋಪಿ ನಾಸ್ತಿ ತೇ ಸಮೋರಜಾಪ್ತಹೆ ಪ್ರಭೋ ।
ಹಿಮಾಂಶುಮೌಳಿಸನ್ನುತಾನಮಾಂಗತಿಸ್ತ್ವಮೇವ ಮೇ ॥

೩.

ವಿಕಸಿತವನಮಾಲಂ ವೀತದುರ್ಮೋಹಜಾಲಂ ।
ವಿಮಲಮೃದುಕಪೋಲಂ ವೇಣುಗಾನೈಕಲೋಲಂ ॥
ರುಚಿರಚಿಕುರಜಾಲಂ ರುಕ್ಮಿಣೀಚಿತ್ತಲೋಲಂ ।
ನತಜನಪರಿಪಾಲಂ ನೌಮಿ ಗೋಪಾಲಬಾಲಂ ॥

**ಸಂಗೀತಶಾಸ್ತ್ರರತ್ನ ಕೆ. ವಾಸುದೇವಾಚಾರ್ಯ,**
ಆಸ್ಥಾನ ವಿದ್ವಾನ್, ಮೈಸೂರು.

ದೇವರು ಶ್ರೀಹರಿಗೂ ಎಲ್ಲಾ ಸಾತ್ವಿಕ ಜೀವಗಳಿಗೂ ಮಧ್ಯಸ್ಥ ರಾಗಿರುವ ಕಾರಣ ಅವರ ಭಕ್ತಿಯೂ ಕೂಡ ಪ್ರಧಾನ ಸಾಧನ ಗಳಲ್ಲಿ ಒಂದಾಗಿದೆ. ಆದುದರಿಂದಲೇ ಸರ್ವ ಮಾಧ್ವರು ತಮ್ಮ ಸಂಕಲ್ಪಾದಿಗಳಲ್ಲಿ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತನಾದ ಲಕ್ಷ್ಮೀಪತಿಯನ್ನು ತೆಗೆದುಕೊಳ್ಳುವರು. ಶ್ರೀ ವಾಯುದೇವರೇ ಭಾವಿ ಬ್ರಹ್ಮಪದವಿಯನ್ನೇರುವರು. ಇವರೇ ಪರಮಗುರುಗಳು.

ಕರ್ಮಗಳಲ್ಲಿ ವಿಷ್ಣುಮುದ್ರಾಧಾರಣ, ಏಕಾದಶೀ ವ್ರತ, ಸಾಲಗ್ರಾಮಾರ್ಚನೆಗಳೇ ಪ್ರಧಾನಗಳಾಗಿ ಪರಿಗಣಿಸಲ್ಪಟ್ಟಿವೆ. ಪ್ರತಿಮಾ ಪೂಜೆಯು ಅಪ್ರಬುದ್ಧರಿಗೋಸ್ಕರವಿರುವುದು. ಯಾಗ ಕರ್ಮಗಳಲ್ಲಿ ಪ್ರಾಣಿಹಿಂಸೆಯು ಸರ್ವಥಾ ನಿಷೇಧಿಸಲ್ಪ ಟ್ಟಿರುವುದು.

### (೫) ಪ್ರಮಾಣಗಳು.

ನಾಲ್ಕು ವೇದಗಳೂ, ಇವುಗಳ ಉಪನಿಷತ್ತುಗಳೂ, ಮಹಾಭಾರತ, ಪಂಚರಾತ್ರಾಗಮ, ಮೂಲರಾಮಾಯಣ, ಇವಿಷ್ಟೇ ಪ್ರಮಾಣಗಳೆಂದು ಪರಿಗಣಿಸಲ್ಪಟ್ಟಿವೆ. ಬಾದರಾಯಣ ವಿರಚಿತ ಬ್ರಹ್ಮಸೂತ್ರವೂ ಕೂಡ ಇವುಗಳೊಂದಿಗೆ ಸೇರುವುದು. ಆದರೆ ಇತರ ಸ್ಮೃತಿ, ಪುರಾಣ, ಮೊದಲಾದ ಪ್ರಾಚೀನ ಗ್ರಂಥ ಗಳು ಮೊದಲು ಹೇಳಿದ ಪ್ರಮಾಣಗಳಿಗೆ ವಿರೋಧವಾಗದಿದ್ದಲ್ಲಿ ಮಾತ್ರ ಪ್ರಮಾಣವಾಗಲು ಅಡ್ಡಿ ಇರುವುದಿಲ್ಲ. ವೇದವ್ಯಾಸ ಪ್ರಣೀತಗಳಾದ ಪುರಾಣಗಳಲ್ಲಿ ಕೂಡ ಸಾತ್ವಿಕಾದಿ ಭೇದವಿರು ವುದರಿಂದ ರಾಜಸ, ತಾಮಸ ಪುರಾಣಗಳ ಮಹತ್ವವು ಅಷ್ಟೇ. ಆದರೆ ಇದರ ನಿರ್ಮಾಣದ ಉದ್ದೇಶವು ಅಯೋಗ್ಯರನ್ನು ಮೋಹ ಗೊಳಿಸುವುದು ಮಾತ್ರ.

ಇನ್ನು ಅಬಾಧಿತ ಪ್ರತ್ಯಕ್ಷವೂ ಪ್ರತ್ಯಕ್ಷದ ಸಹಾಯವಿರುವ ಅನುಮಾನವೂ ಪ್ರಮಾಣಗಳೆಂದು ಒಪ್ಪಿಕೊಳ್ಳೋಣಾಗಿಯಭ್ಥೆ.

ಹೀಗಾಗಿ ಪ್ರತ್ಯಕ್ಷ, ಅನುಮಾನ, ಆಗಮ, ಈ ಮೂರು ಪ್ರಮಾಣಗಳೇ ಅಂಗೀಕರಿಸಲ್ಪಟ್ಟಿವೆ. ಇವುಗಳ ಸಹಾಯದಿಂದ ಅಧಿಕಾರಿ ಜೀವಿಗಳು ಪರಮಾತ್ಮಸಾಕ್ಷಾತ್ಕಾರವನ್ನು ಮಾಡಿ ಮುಕ್ತಿಯನ್ನು ಪಡೆಯುವರಲ್ಲದೆ, ಅನಧಿಕಾರಿಗಳು ಸರ್ವಥಾ ಮುಕ್ತಿಯನ್ನು ಹೊಂದುವಂತಿಲ್ಲ.

### (೬) ದೇವತೆಗಳ ತಾರತಮ್ಯ.

ವಿಷ್ಣುವು ಸರ್ವೋತ್ತಮನು. ಬ್ರಹ್ಮ, ವಾಯು, ಶೇಷ, ಗರುಡ, ರುದ್ರ, ಇಂದ್ರ, ಕಾಮ, ಸ್ಕಂದ, ಗಣಪತಿ ಈ ಮೇರೆಗೆ ಪುರುಷ ದೇವತೆಗಳು.

### ಲಕ್ಷ್ಮಿಯು ಸರ್ವೋತ್ಕೃಷ್ಟಳು.

ಸರಸ್ವತೀ, ಭಾರತೀ, ವಾರುಣೀ, ಸೌಪರ್ಣೀ, ಪಾರ್ವತೀ, ರತಿ ಈ ಮೇರೆಗೆ ಸ್ತ್ರೀದೇವತೆಯರ ತಾರತಮ್ಯವಿರುವುದು. ವಾಯುದೇವನು ಬ್ರಹ್ಮಪದವಿಯನ್ನು ಸಪತ್ನೀಕನಾಗಿ ಹೊಂದುವ ಹಾಗೆ ರುದ್ರದೇವನು ಸಪತ್ನೀಕನಾಗಿ ಶೇಷ ಪದವಿಯನ್ನೇರುವನು. ಆದಕಾರಣ ಸಪತ್ನೀಕರಾದ ಅವರಿಬ್ಬರಿಗೆ ಆ ಜನ್ಮದಲ್ಲಿ ಮುಕ್ತಿಯಿರದು. ಮುಂದಿನ ಪದವಿಯಲ್ಲಿ ಮುಕ್ತಿ.

### (೭) ಉಪಸಂಹಾರ.

ಹೀಗೆ ಸಕಲ ವೇದಶಾಸ್ತ್ರಗಳಿಂದಲೂ ಸಕಲ ದೇವತೆ ಗಳಿಂದಲೂ ಸ್ತುತಿಸಲ್ಪಡುವ ಶ್ರೀ ಲಕ್ಷ್ಮೀಪತಿಯೇ ಮುಕ್ತಿ ದಾತನು.

ಅನೇಕ ಜನ್ಮಗಳಲ್ಲಿ ನಿಷ್ಕಾಮ ಕರ್ಮ, ಭಕ್ತಿಗಳಿಂದ ಸೇವಿಸುವ ಸಜ್ಜೀವಿಗಳು ಮುಕ್ತಿಯ ನಿತ್ಯಾನಂದವನ್ನು ಶ್ವೇತ ದ್ವೀಪ, ಅನಂತಾಸನ, ವೈಕುಂಠಗಳೆಂಬ ಮೂರು ಸ್ಥಾನಗಳಲ್ಲಿ ಪಡೆದು ಶಾಶ್ವತವಾಗಿ ವಿರಾಜಿಸುವರು.

ಇದೇ ಶ್ರೀಮದಾಚಾರ್ಯರ ಉಪದೇಶದ ಸಾರವು.


POHOLATUM

An ideal Balm for all pains, sprains, headaches, colds etc.

SOLE AGENTS FOR INDIA

*Basel Mission Book Depot,*
MANGALORE.

Agents and stockists wanted from all parts.

Equitable Policy

*STANDS FOR:*

Easy Revival Schemes:
Quickness in Claim Settlement:
Uninterrupted Declaration of Bonus:
Indian Office—cent per cent:
Testimony of Satisfaction from 1000s:
A-1. Investments:
Benefits of Permanent Disability:
Liberal Policy Conditions:
Equity to Policyholders.

INDIA EQUITABLE INSURANCE COMPANY, LIMITED,
CALCUTTA.
(ESTD: 1908).

*For Agency Terms Apply to:—*
The Controller, West Coast Agencies,
TELLICHERRY.

## ಕರ್ನಾಟಕ ವಿಮಾಮಂಡಲದ ಕೀರ್ತಿಜ್ಯೋತಿ!

**ಪ್ರಥಮ ವರ್ಷದಲ್ಲೇ ಆದರ್ಶ ಉದ್ಯಮ!! ನಿಖಿಲ ಕರ್ನಾಟಕಕ್ಕೇ ಪ್ರಥಮ ಸ್ಥಾನ!!!**

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯ ನಡೆಸಿಲ್ಲ.

**ಕನ್ನಡಿಗರ ಒಲವಿನ ಬೆಳಕು ಯಾವುದು?**

# ಮೈಸೂರು ಜೀವವಿಮಾ ಕಂಪೆನಿ, ಬೆಂಗಳೂರು.

ಇದು ಕನ್ನಡನಾಡಿನ ಕೌತುಕ! ಕನ್ನಡಿಗರ ಸಾಹಸದ ಕನ್ನಡಿ!! ಕನ್ನಡಿಗರ ಭಾಗ್ಯದ ನಿಧಿ!!!

ಮುಂಬೆಳಗೇ ದಿನದ ಕುರುಹು!
ಇಂದಿನ ಪ್ರಗತಿಯೇ ಮುಂದಿನ ಭದ್ರತೆಯ ಹೆಗ್ಗುರುತು!!

**1 ಲಕ್ಷ ರೂ.ಗಳ ಷೇರುಗಳು ಮುಗಿದು ಹೋದುವು. 6½ ಲಕ್ಷ ರೂ.ಗಳ ವಿಮಾ ದರಖಾಸ್ತುಗಳು ಬಂದಿವೆ.**

ನಮ್ಮ ವೈದ್ಯಪರೀಕ್ಷೆಯಿಲ್ಲದ ಪದ್ಧತಿಗಳು ವಿಮಾಲೋಕಕ್ಕೇ ನೂತನ ಆದರ್ಶ!
ಸರ್ವರ ಅನುಕೂಲ, ಆವಶ್ಯಕತೆಗಳಿಗೆ ಸರಿಹೊಂದುವ ಮತ್ತು ನವೀನ ವೈದ್ಯಪರೀಕ್ಷೆಯಿರುವ ವೈದ್ಯಪರೀಕ್ಷೆಯಿಲ್ಲದಿರುವ ವಿಮಾಪದ್ಧತಿಗಳು.

**ಸ್ತ್ರೀಯರೂ ವಿಮೆ ಮಾಡಬಹುದು!**

ತಿಂಗಳಿಗೆ 200 ರೂಪಾಯಿಗಳನ್ನು ಸಂಪಾದಿಸಬೇಕೆಂಬ ಆಶೆ ನಿಮಗಿದೆಯೇ?

ಹಾಗಾದರೆ ನಮ್ಮ ಏಜಂಟರಾಗಿ! ವೇತನದ ಮೇಲೂ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ಮಾಹಿತಿಗೆ:—

**ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,**
ಶ್ರೀ ನರಸಿಂಹರಾಜ ರೋಡು, ಬೆಂಗಳೂರು ಸಿಟಿ.

ಕಂತೀರವ ಮತ್ತು ಕಂಪೆನಿ,
**ಮ್ಯಾನೇಜಿಂಗ್ ಏಜಂಟ್ಸ್.**



# MESSRS. RAJULU & CO.,

***DISTRICT DEALERS FOR ADDISON & CO. LTD., MADRAS,***

**MANGALORE.**

**For Morris, Plymouth, Airflow—Chrysler & De Soto Cars, Dodge Trucks, Ariel & Triumph Motor Cycles.**

**"Announcing a remarkable Car, THE NEW MORRIS EIGHT"**
**Outstanding road performance with exceptional economy in maintenance costs.**

DODGE Trucks furnish more service. It will deliver more work with less loss of time and with greater profits.

**MR. L. SEQUEIRA,**
*Sales Representative,*
**Messrs. Rajulu & Co.**

## ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. ಮಸ್ಕ್ ಲನೆಂಡರ್—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. ಅನಂಸ್ ಸ್ನೋ—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. ಬ್ರಿಲಿಯಂಟಾಯಿನ್—ಕೂದಲಿನ ಸೌಂದರ್ಯಕ್ಕೋಸ್ಕರ ಆರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. ಬ್ರಾಹ್ಮೀ ತೈಲ—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಆದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. ದ್ರಾಕ್ಷಾಸವ—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. ಆರಾಮೇತಿಹಾಲ್—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. ವೆಜಿಟೇಬಲ್ ಪೈನ್-ಹಂಟರ್—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕುಡಿಯತಕ್ಕ ಔಷಧ.

೯. ರತ್ನಾಂಜನ ಹೇನ್ ಬಾವ್ಮ್—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ

೧೦. ಕ್ರೀಸೋರಿಂಗಾ—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. ಓಟ್ಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

**ಕೋಹಿನೂರ್ ವರ್ಕ್ಸ್,**
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
**ಬೊಂಬಾಯಿ, 3.**

**KOHINOOR WORKS,**
60 Abdul Rehiman Street,
**BOMBAY, No. 3.**



## THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

**FIXED DEPOSITS.**

| | | | |
|---|---|---|---|
| For 2 years | 7% | For 6 months | 5 % |
| 1 year | 6% | 3 months | 4½% |

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

*Apply for particulars:—*

**K. R. GURU,** *Managing Director*



## ತೊನ್ನಿಗೆ ಅದ್ಭುತ ಔಷಧಿ

(ರಿಜಿಸ್ಟರ್ಡ್)

**ಗುಣ ದೊರಕದಿದ್ದರೆ ರೂ. [illegible] ಮಾನ!**

18 ಪ್ರಕಾರಗಳ ಎಲ್ಲಾ **ಕುಷ್ಠ ತೊನ್ನು, ಚರ್ಮವ್ಯಾಧಿಗಳೂ** ಮತ್ತು [illegible] **ರೋಗಗಳೂ,** ಬುಡ ಸಮೇತ ಕಿತ್ತು ಹೋಗಿ, ಖಚಿತ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಕೈನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಠ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:—
ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಠರೋಗ ನಿರ್ಮೂಲಿನಿ** ಯನ್ನು ಇಬ್ಬರು ಕುಷ್ಠರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿಯವರ** ಸಿದ್ಧೌಷಧದಿಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ [illegible] ಪರೀಕ್ಷಿಸಿದಲ್ಲಿ, ಆದು ಕುಷ್ಠ ರೋಗದ ಮೊಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇಸಾ [illegible] ನಾನು ಕಂಡಿರುತ್ತೇನೆ.

ಯಾವತ್ತೂ ಮಾಹಿತಿಗಾಗಿ ಮತ್ತು ಕಟಲಾಗಿಗೆ ಬರೆಯುವರೆ ವಿಳಾಸ:—

**ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),**
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಟೇರ್, ಆರ್. ಎಸ್. ಪೋಸ್ಟ್.



## ಗುಪ್ತ ಮಂತ್ರ

100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸದ ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಆದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಆದು ಒಳ್ಳೆಯ ಫಲ ಕೊಡುವುದು. ಆಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಆವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಆದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು; ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಮ್ಮ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7

ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

**Siddha Manthra Ashram,**
*No. 174, P. O. Katri Sarai, (GAYA).*



## ಶಾಸ್ತ್ರೀಯ ಅಮೂಲ್ಯ ಔಷಧಗಳು.

**ಅಮೃತಾಕುಂಕುಮ ತೈಲ:**—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—6—0. ಅಂಚೆಯ ವೆಚ್ಚ ಬೇರೆ.

**ಚ್ಯವನಪ್ರಾಶ:**—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—12—0. ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ!

**ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.**

ಇದರ ಶೋಧನ, ರಸಾಯನ, ಸುಖಸೇವನ ಎಂಬ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಕಂಜನ್ನು ಹೊರಗೆ ಹಾಕಿ ಪ್ರಸನದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ.

ಯುವಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರೋಡ್,
ಶೇಷಪುರಮ್, ಪೋ. ಬೆಂಗಳೂರು.

## ಸಮಾಚಾರ

**ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಶಾಖೆಯೊಂದು,—**

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ತೆರೆದಾಗ, ಆ ಸಂಸ್ಥೆಯ ಡೈರೆಕ್ಟರ್ ಮಂಡಲದ ಚೆಯರ್‌ಮ್ಯಾನರಾದ ಡಾ॥ ಟಿ. ಮಾಧವ ಪೈಗಳವರು ಆ ಬ್ಯಾಂಕಿನ ವಿವಿಧ ಚಳವಳಿಗಳ ಕುರಿತು ಒಂದು ಸವಿಾಚೀನವಾದ ಭಾಷಣ ಮಾಡಿದರು. 'ಸಂಸ್ಥೆಯ ಸ್ಥಾಪನೆ ೧೯೨೫ರಲ್ಲಿ; ಅದರ ಚಾಲ್ತಿ ವ್ಯವಹಾರ ನೈವು ಸುಮಾರು ೨೦ ಲಕ್ಷ; ಗ್ರಾಹಕರು ಸುಮಾರು ೯ ವೃದ್ಧಿ ಇದಕ್ಕೆ ಪೂರಿಲ್ಲೆಗಳಲ್ಲಿ ೧೯ ಆಫೀಸುಗಳಿವೆ; ಇದರ ಬಹು ತೃಪ್ತಿಕರವಾಗಿದೆ' ಎಂದು ಈ ಸಂಸ್ಥೆಯ ಗ್ರಾಹಕರಿಗೆ ಸೊರೆಯುವ ಹಲವು ಬಗೆಯ ಸೌಕರ್ಯಗಳನ್ನೂ, ಹೊಸ ಶಾಖೆಗಳನ್ನು ತೆರೆವ ಉದ್ದೇಶ ಉಪಯುಕ್ತತೆಗಳನ್ನೂ ಬಿಡಿಸಿ ಹೇಳುವುದರೊಂದಿಗೆ, ಈ ಸಂಸ್ಥೆಯ 'ಏಜೆಂಟ್, ಟ್ರಸ್ಟಿ ಮತ್ತೂ ಎಗ್ಸಿಕ್ಯೂಟರ್ ಶಿಪ್ಪುಗಳ ಶಾಖೆ'ಗಳ ಕಾರ್ಯಕಲಾಪಗಳನ್ನೂ ವಿವರಿಸಿದರು. '೫೦ ಸಾವಿರ ವಾರ್ಷಿಕ ಉತ್ಪನ್ನ ಬರತಕ್ಕ 'ಟ್ರಸ್ಟಿ' ಆಸ್ತಿಸ್ವಾಸ್ಥ್ಯಗಳು ಈ ಶಾಖೆಯ ವಶದಲ್ಲಿದೆ. ಕೆನರಾ ಲ್ಯಾಂಡ್ ಇನ್‌ವೆಸ್ಟ್‌ಮೆಂಟ್, ಲಿಮಿಟೆಡ್ ಎಂಬೀ ಸಂಸ್ಥೆಯ ಮತ್ತೂ ಕೆನರಾ ಮ್ಯುಚುವಲ್ ಎಶ್ಯುರೆನ್ಸ್, ಲಿಮಿಟೆಡ್, ಎಂಬೀ ಸಂಸ್ಥೆಯ ಆಡಳಿತವೂ ಈ ಸಂಸ್ಥೆಯ ವಶದಲ್ಲಿದೆ. ಇದರಲ್ಲಿ ಮೊದಲಿನ ಸಂಸ್ಥೆಯ ಮೂಲಧನ ೧,೨೫,೦೦೦ ರೂಪಾಯಿಗಳಾಗಿವೆ. ಈ ಹಣವು ಮನೆಗಳು, ತೋಟಗಳು, ಹೊಲಗದ್ದೆಗಳಿರುವ ನೆಲದ ಮೇಲೆ ವಿನಿಯೋಗಿಸಲಾಗಿದೆ. ಮಣಿಪಾಲದಲ್ಲಿ ಒಂದು ಹಂಚಿನ ಕಾರ್ಖಾನೆಯನ್ನು ಸ್ಥಾಪಿಸಿರುವುದು ಈ ಸಂಸ್ಥೆಯೇ. ಇಲ್ಲಿಯ ಹಂಚುಗಳು ಉತ್ತಮವಾಗಿದ್ದೂ ಎಲ್ಲೆಲ್ಲಿಯೂ ಇದಕ್ಕೆ ಗಿರಾಕಿಗಳಿವೆ. ಹಾಗೆಯೇ ಆ ಎರಡನೆಯ ಯಾದ ಜೀವವಿಮಾ ಕಂಪೆನಿಯೂ ಸ್ಥಾಪಿತವಾದ ಎರಡೇ ವರ್ಷದಲ್ಲಿ ಲಕ್ಷದ ಉತ್ತಮ ವ್ಯವಹಾರ ನಡೆಸಿ ಕೃತಾರ್ಥವಾಗಿದೆ' ಎಂದರು. ಈ ಸಮಾರಂಭಕ್ಕೆ ಬಹು ಸಂಖ್ಯೆಯ ವರ್ತಕರೂ ಅಧಿಕಾರಿಗಳೂ ಬಂದಿದ್ದು ಈ ಆರಂಭೋತ್ಸವವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಆ ಊರಲ್ಲಿ ಇಷ್ಟು ಶಾಖೆಗಳುಳ್ಳ ಒಂದೇ ಒಂದಾದ ಈ ವರ್ಗದ ಬ್ಯಾಂಕು ಬೇಗನೇ ವೃದ್ಧಿಗೊಂಡೀತೆಂಬುದಕ್ಕೆ, ಅಂದೇ ೫೬ ಎಕೌಂಟುಗಳು ಅಲ್ಲಿ ಆರಂಭಿಸಲ್ಪಟ್ಟುದೇ ಒಂದು ಸಲ್ಲಕ್ಷಣ. ಬಡವರಿಗೂ ಇದಿಷ್ಟು ಅನುಕೂಲವಾಗಿದೆ ಎಂದು ನಿದರ್ಶನಕ್ಕೆ ತಂದುಕೊಟ್ಟ ನಮ್ಮ ಡಾಕ್ಟರರ ವಿಚಕ್ಷಣತೆಯು ಆಡಳಿತದಲ್ಲಿ, ಈ ಶಾಖೆ ಅಲ್ಲಿ ತೀವ್ರಗತಿಯಿಂದ ವೃದ್ಧಿಗೊಳ್ಳದಿರದೆಂದು ನಮ್ಮ ನಂಬಿಕೆ.

* * * * *

**ಉಡುಪಿಯ ಶ್ರೀ ಕಾಣೂರು ಶ್ರೀ ಶ್ರೀಗಳವರ ಪರ್ಯಾಯ**

ಕೆಲವು ಇದೇ ೧೮ಕ್ಕೆ ಮುಗಿದು ಶ್ರೀ ಪೇಜಾವರ ಶ್ರೀಗಳವರು ಅಂದು ಪರ್ಯಾಯಪೀಠವನ್ನೇರುವರು. ಶ್ರೀ ಕಾಣೂರು ಶ್ರೀಗಳವರು ಬಹು ಯೋಗ್ಯರೂ, ತಪೋನಿಷ್ಠರೂ ಎನಿಸಿ ಶ್ರೀ ಕೃಷ್ಣನ ನಿತ್ಯಪೂಜಾದಿಗಳನ್ನೂ, ಹಲವು ವಿನಿಯೋಗಗಳನ್ನೂ ಹತ್ತುಗಟ್ಟಲೆಯ ಕಟ್ಟಕಟ್ಟಳೆಯಂತೆ ನಡೆಸಿಕೊಂಡು ಬಂದವರು. ಇನ್ನು ಇವರ ಬಳಿಕ ಪಟ್ಟಕ್ಕೆ ಬರುವ ಪೇಜಾವರ ಶ್ರೀ ಶ್ರೀಗಳಾದರೂ, ಇದುವರೆಗೆ, ಹಲವು ದೇಶಗಳ ಸಂಚಾರದಿಂದ ತುಂಬ ಲೌಕಿಕ ಅನುಭವವನ್ನು ಸಂಪಾದಿಸಿದವರು. ಸಾರ್ವಜನಿಕ ಹಿತಾಹಿತಗಳ ರುಚಿಯನ್ನು ಬಲ್ಲವರು. ಇವರ ಪರ್ಯಾಯಕಾಲದಲ್ಲಿ ಏನಾದರೂ ಹೊಸ ಸುಧಾರಣೆಗಳು ಆಗುವುದೇನೋ ಹೇಳಕೂಡದಾದರೂ, ಹಾಗಾದರೂ ಅದೊಂದು ಆಶ್ಚರ್ಯವಲ್ಲವೆನ್ನಬಹುದು. ದುಡ್ಡಿನ ಮುಗ್ಗಟ್ಟಿನ ಈ ದಿನಗಳಲ್ಲಿ, ಶ್ರೀಕೃಷ್ಣದೇವಸ್ಥಾನದ ನಿತ್ಯದ ವಿನಿಯೋಗಗಳನ್ನು ನಡೆಯಿಸುವುದು ತುಂಬ ಪ್ರಯಾಸಕ್ಕಿಟ್ಟಿದೆ. ಈ ವಿಷಮ ಸ್ಥಿತಿಯಲ್ಲಿ ಮಠಸಂಸ್ಥೆಗಳು 'ಹಾಸಿಗೆ ಇದ್ದಷ್ಟು ಕಾಲು ನೀಡುವುದು' ಯುಕ್ತ. ಈ ದೃಷ್ಟಿಯಿಂದ ಯಾವ ರೀತಿಯ 'ರಿಟ್ರೆಂಚ್‌ಮೆಂಟ್' ಆಗಬೇಕೆಂದು ಸೂಚಿಸುವುದು ವಿಹಿತವಲ್ಲವಾದರೂ, ಯೋಗ್ಯಾಧಿಕಾರವರ ಒಂದು ಬೋರ್ಡನ್ನು ಸ್ಥಾಪಿಸಿ, ಅದರ ಹಿತಸೂಚನೆಗಳಂತೆ ಮುನ್ನಡೆದರೆ, ಸಾಲಮೂಲದ ಭಯ ತಪ್ಪಿ, ಮಠ ಸಂಸ್ಥೆಯು ಸುರಕ್ಷಿತವಾಗಬಹುದೆಂದು ನಮ್ಮ ಭರವಸೆ.

ಈ ದಿನಗಳಲ್ಲಿ ಬಡೋದೆಯಲ್ಲಿ 'ವಜ್ರೋತ್ಸವ' ಸಮಾರಂಭದ ಅನಾದ ಕೋಲಾಹಲ! ನಮ್ಮ ವಿಕ್ಟೋರಿಯಾ ಮಹಾರಾಜ್ಞಿಯವರ 'ಡೈಮಂಡ್ ಜುಬಿಲಿ'ಯ ಮಹೋತ್ಸವವನ್ನು ಆಂದು ಕಂಡ ನಮ್ಮ ಭಾರತವರ್ಷವು ಗೇಕವಾಡರ ವಜ್ರೋತ್ಸವವನ್ನು ಇಂದು ಕಾಣುವಂತಾಯಿತು. ಮಹಾರಾಜರವರು, ಈ ಜುಬಿಲಿಯ ಸ್ಮಾರಕಕ್ಕಾಗಿ ಒಂದು ಕೋಟಿ ರೂಪಾಯಿಗಳ ಟ್ರಸ್ಟನ್ನು ಗ್ರಾಮೋನ್ನತಿಯ ಸಲುವಾಗಿ ಏರ್ಪಡಿಸಿಟ್ಟಿರುವದು ಸ್ವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಇತಿಹಾಸಪ್ರಸಿದ್ಧವಾದ ಸಂಗತಿ.


TR 214.

ಕರ್ನಾಟಕ ನಾಟಕ ಮಂಡಲಿಯವರ
ಸರ್ವಾಂಗ ಸುಂದರವಾದ
ಭಾರತ ನಾಟಕ

ಕರ್ಣ: ಶ್ರೀಯುತ ಕೊಟ್ಟೂರಪ್ಪನವರು.

"ದಾನಶೂರಕರ್ಣ"

ಟ್ವಿನ್ ರಿಕಾರ್ಡುಗಳಲ್ಲಿ 16 ಭಾಗಗಳಲ್ಲಿ
ಈಗಲೆ ಪ್ರಕಟಿಸಲ್ಪಟ್ಟಿರುವದು.

ಶ್ರೀ ಚಾಮುಂಡೇಶ್ವರಿ ನಾಟಕ ಸಭೆಯಲ್ಲಿ ಮುಖ್ಯ ಪಾತ್ರಗಳನ್ನು ವಹಿಸುವ ಕೆಲವು ಸುಪ್ರಸಿದ್ಧ ನಟರೇ ಅಲ್ಲದೆ,
ಮೈಸೂರು ದೇಶದಲ್ಲೆಲ್ಲಾ ಪ್ರಖ್ಯಾತಿ ಪಡೆದ
ನಟೀಮಣಿಯರು ಈ ನಾಟಕದ ಸೆಟ್ಟಿನಲ್ಲಿ
ಪಾಲು ಹೊಂದಿರುವರು.

ಶ್ರೀಯುತ ಕೊಟ್ಟೂರಪ್ಪನವರು—ಕರ್ಣ.

ಅವೋಘವಾದ ಈ ನಾಟಕದ ಸೆಟ್ಟನ್ನೀಗಲೆ ಕೇಳಿ
ಆನಂದಿಸುವಿರಿ.

ಈ ಸೆಟ್ಟು ಪುಸ್ತಕ ಎಲ್ಲರಿಗೂ ಉಚಿತವಾಗಿ ಕೊಡಲ್ಪಡುತ್ತದೆ!

ದಿ ಟ್ವಿನ್ ರಿಕಾರ್ಡ್ ಕಂಪೆನಿ, ಲಿಮಿಟೆಡ್.
45, ಸೌತ್‌ಪೆರೇಡ್ಸ್, ಬೆಂಗಳೂರು.

# ಶ್ರೀ ಮನ್ಮಧ್ವಾಚಾರ್ಯರೂ,
# ಉಡುಪಿಯ ಈಗಿನ ಅಷ್ಟಮಠಾಧೀಶರೂ.



ಶ್ರೀ ಪುತ್ತಿಗೆಮಠದ ಶ್ರೀಸುಧೀಂದ್ರತೀರ್ಥ ಶ್ರೀಪಾದಂಗಳವರು.

ಶ್ರೀ ಮನ್ಮಧ್ವಾಚಾರ್ಯರು

ಶ್ರೀ ಕೃಷ್ಣಾಪುರಮಠದ ಶ್ರೀ ವಿದ್ಯಾರತ್ನತೀ

ಶ್ರೀ ಸೋದೆಮಠದ ಶ್ರೀವಿಶ್ವೇಂದ್ರತೀರ್ಥ ಶ್ರೀಪಾದಂಗಳವರು.

ಶ್ರೀ ಕಾಣೂರುಮಠದ ಶ್ರೀವಿದ್ಯಾಸಮುದ್ರತೀರ್ಥ ಶ್ರೀಪಾದಂಗಳವರು.

ಶ್ರೀ ಶೀರೂರುಮಠದ ಶ್ರೀಲಕ್ಷ್ಮೀಂದ್ರತೀರ್ಥ ಶ್ರೀಪಾದ



ಶ್ರೀರಘುವರ್ಯತೀರ್ಥ ಶ್ರೀಪಾದಂಗಳವರು.

ಪೇಜಾವರಮಠದ ಶ್ರೀವಿಶ್ವವರ್ಯತೀರ್ಥ ಶ್ರೀಪಾದಂಗಳವರು.

# ಮಂಗಳೂರು

ಅನೇಕ ರಾಜಾಸ್ಥಾನಗಳಲ್ಲಿ, ಅನೇಕ ಪ್ರಸಿದ್ಧ ಗಾಯನ ಸಭೆ, ಸಮಾಜಗಳಲ್ಲಿ ತಮ್ಮ ವಿದ್ವತ್ಪಾಂಡಿತ್ಯವನ್ನು ಪ್ರದರ್ಶಿಸಿ ಕೀರ್ತಿ ಪಡೆದಿರುವ, ಅನೇಕ ಬಹುಮಾನಗಳನ್ನೂ ಸಂಪಾದಿಸಿರುವ, ನಮ್ಮ ಜಿಲ್ಲೆಯವರಾದ ಶ್ರೀ. ಜಿ. ಆನಂದರಾಯರು, ಕಳೆದ ಆದಿತ್ಯವಾರ ಸಂಜೆ ಗಂಟೆ ೬-೩೦ಕ್ಕೆ ಇಲ್ಲಿನ ಗಣಪತಿ ಹೈಸ್ಕೂಲ್ ಕಟ್ಟಡದಲ್ಲಿ, ಮಾಜಿ ಸಬ್ ಜಡ್ಜರಾದ ಶ್ರೀ. ಬೈಲ್ ಗೋಪಾಲಕೃಷ್ಣಯ್ಯ, ಬಿ. ಏ., ಬಿ. ಎಲ್., ಇವರ ಉದಾರಾಶ್ರಯದಲ್ಲಿ, ಉತ್ತಮವಾದ ಹಿಮ್ಮೇಳದೊಡನೆ, ಸುರಮ್ಯವೂ ಕಲಾಪೂರ್ಣವೂ ಆದ ಒಂದು ಕೊಳಲು ವಾದನದ ಕಚ್ಚೇರಿಯನ್ನು ಯಶಸ್ವಿಯಾಗಿ ನಡೆಸಿದರು. ಸಾರ್ವಜನಿಕ ಪ್ರೋತ್ಸಾಹವು ಚೆನ್ನಾಗಿತ್ತು.

ಪುತ್ತೂರಿನಲ್ಲಿ ಆಧುನಿಕ ಶಿಕ್ಷಣಪದ್ಧತಿಗಳಂತೆ ಮಕ್ಕಳ ವಿದ್ಯಾಭ್ಯಾಸವನ್ನು ನಡೆಯಿಸುವ ಉದ್ದೇಶವನ್ನಿಟ್ಟುಕೊಂಡು ಹೊರಟಿರುವ 'ಬಾಲವನ' ಸಂಸ್ಥೆಯ ಆರಂಭೋತ್ಸವವು, ನಿನ್ನೆ ಬೆಳಗ್ಗೆ, ಗಂಟೆ ೧೦ಕ್ಕೆ ಜರುಗಿತು.

ಇದೇ ಬರುವ ಜನವರಿ ತಾ. ೧೭ನೇ ಶುಕ್ರವಾರ ಸಂಜೆ ಗಂಟೆ ೫-೩೦ಕ್ಕೆ ಇಲ್ಲಿಯ ಮುನ್ಸಿಪಲ್ ವಿಟಿಂಗು ಮುನ್ಸಿಪಲ್ ಆಫೀಸಿನಲ್ಲಿ ಜರುಗುವುದು.

'ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವವು (ಸ್ಕೂಲ್ ಡೇ) ಇದೇ ಬರುವ ಫೆಬ್ರವರಿ ತಿಂಗಳ ೧ನೇ ತಾರೀಕು ಶನಿವಾರ ಮಂಗಳೂರಿನ ಲೋಡ್ಜ ಬಿಶೋಪರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು. ಶಾಲೆಯ ಹಳೇ ವಿದ್ಯಾರ್ಥಿಗಳೆಲ್ಲರೂ ಈ ಉತ್ಸವಕ್ಕೆ ದಯಮಾಡಿ ಬಂದು ಎಲ್ಲಾ ವಿಧದಲ್ಲಿಯೂ ಸಹಕರಿಸಬೇಕಾ'ಗಿ ಹೆಡ್ಮಾಸ್ಟರರು ವಿನಂತಿಸುತ್ತಾರೆ.

ಸ್ವಾಮಿ ಶ್ರೀ ಸತ್ಯದೇವಜೀಯವರು ಯಾವದೋ ಒಂದು ದೊಡ್ಡ ಕಾರಣದಿಂದ ಈ ತಿಂಗಳಲ್ಲಿ ದಕ್ಷಿಣ ಹಿಂದೂಸ್ಥಾನಕ್ಕೆ ಬರಲು ತನಗೆ ಸಾಧ್ಯವಿಲ್ಲವೆಂದು ಅಕಸ್ಮಾತ್ತಾಗಿ ತಿಳಿಸಿರುವರು.

ಹೈದರಾಬಾದು ನಿಜಾಂ ಸರಕಾರದ ಎಕೌಂಟ್ಸ್ ಇಲಾಖೆಯ ಅಸಿಸ್ಟಾಂಟ್ ಸುಪರಿಂಟೆಂಡೆಂಟರಾದ ಮಿಸ್ಟರ್ ಯೆಸ್. ಡಿ. ಕ್ರಾಜ್ ಎಂಬ ಒಬ್ಬ ಜನ್ಮಕ್ರೈಸ್ತ ಗೃಹಸ್ಥರ ಶುದ್ಧಿ ಸಂಸ್ಕಾರವು ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಕಳೆದ ಬುಧವಾರ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀ. ಮೋಹನಪ್ಪ ತಿಂಗಳಾಯರು ಸಂಸ್ಕಾರವನ್ನು ಜರಗಿಸಿ, ಗಾಯತ್ರೀ ಮಂತ್ರೋಪದೇಶವನ್ನು ಮಾಡಿ ಯಜ್ಞೋಪವೀತವನ್ನು ಕೊಟ್ಟರು, ಮತ್ತು ಅನಂತನ್ ಎಂಬ ನಾಮಕರಣವನ್ನು ಮಾಡಿ ಆಶೀರ್ವದಿಸಿದರು.

೧೮೭೨ನೆಯ ಇಸವಿಯ ಇಂಡಿಯನ್ ಕ್ರೈಸ್ತ ವಿವಾಹದ ಕಾಯಿದೆಯ ಏಳನೆಯ ಪ್ರಕರಣದ ಮೇರೆಗೆ ಮಂಗಳೂರು ಮಿ. ಜೋಜ್ಫ್ ಎಡ್ವರ್ಡ್ ಐಮನರವರು ಮಾನ್ಯ ಮದ್ರಾಸು ಸರಕಾರದಿಂದ ಈ ಜಿಲ್ಲೆಯ ವಿವಾಹ ರಿಜಿಸ್ತ್ರಾರರಾಗಿ ನೇಮಕ ಹೊಂದಿ ಈ ತಿಂಗಳ ತಾರೀಕು ೧೧ನೆಯ ಶನಿವಾರ ಚಾರ್ಜನ್ನು ವಹಿಸಿರುವರು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಚುನಾಯಿಸಲ್ಪಟ್ಟಿರುವ ಮೆಂಬರರ ಪ್ರಥಮ ಜನರಲ್ ವಿಟಿಂಗು, ಇದೇ ಬರುವ ಜನವರಿ ತಾರೀಕು ೨೧ನೇ ಮಂಗಳವಾರ ಅಪರಾಹ್ನ ಗಂಟೆ ೨-೩೦ಕ್ಕೆ ಡಿಸ್ಟ್ರಿ ಬೋರ್ಡ್ ಆಫೀಸಿನಲ್ಲಿ ಡಿಸ್ಟ್ರಿ ಬೋರ್ಡ್ ಪ್ರೆಸಿಡೆಂಟ್ (ಎಕ್ಸ್-ಒಫೀಶಿಯೋ) ಮಿ. ಇ. ಎಂ. ಗೋನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗುವುದು.

ತಿರುಪತಿ ಯಾತ್ರೆ ಮಾಡಿ ಬಂದವರಲ್ಲಿ ಕೆಲವರ ಮೂಲಕ ಉಡ್ಪಿ ತಾಲೂಕಿನಲ್ಲಿ ಕಾಲರಾ ಬೀಜವು ಬಿತ್ತಲ್ಪಟ್ಟಿರುವುದಾಗಿಯೂ, ಉಡ್ಪಿಗೆ ಉತ್ಸವಕ್ಕಾಗಿ ತೆರಳುವ ಯಾತ್ರಿಕರು 'ಇನಾಕ್ಯುಲೇಶನ್' ಮಾಡಿಸಿಕೊಳ್ಳುವುದೊಳ್ಳೆದೆಂದೂ ನಮ್ಮ ಡಿಸ್ಟ್ರಿ ಹೆಲ್ತ್ ಆಫೀಸರರ ಪ್ರಕಟಣೆ.

ಉಡ್ಪಿ ಸಿಂಡಿಕೇಟ್ ಬ್ಯಾಂಕಿನ ಮತ್ತೂ ಅಲ್ಲಿನ ಮ್ಯುಚುವಲ್ ಇನ್ಯೂರೆನ್ಸ್ ಕಂಪೆನಿಯೇ ನೊದಲಾದ ಹಲವೊಂದು ಪ್ರಸಿದ್ಧ ಸಂಸ್ಥೆಗಳ ಸ್ಥಾಪಕರೂ, ಮುಖ್ಯ ಚಾಲಕರೂ ಆದ ಡಾಕ್ಟರ್ ಟಿ. ಮಾಧವ ಪೈಗಳವರು ಮಣಿಪಾಲದಲ್ಲಿ ಮನೋಹರವಾದ ಒಂದು ಆರೋಗ್ಯವಿಹಾರ ಮಂದಿರವನ್ನು (ಸೆನಿಟೋರಿಯಮ್) ಕ್ಷಯರೋಗಿಗಳ ಉಪಯೋಗಾರ್ಥವಾಗಿ ಕಟ್ಟಿಸಿಕೊಟ್ಟು ಅದನ್ನು ಒಂದು ದಾನಪತ್ರದ ಮೂಲಕ ಸಾರ್ವಜನಿಕರ ಉಪಯೋಗಕ್ಕಾಗಿ ಬಿಟ್ಟುಕೊಡುವ ಹಾಗೂ ಅದರ ಪ್ರವೇಶೋತ್ಸವವನ್ನು ಸಂಭ್ರಮ ಪೂರ್ವಕವಾಗಿ--ಆಮಂತ್ರಿತರಾದ ನೂರಾರು ಮಂದಿ ಅಧ್ಯ ಮಹನೀಯರ ಮುಂದೆ--ನೆರವೇರಿಸುವ ಈ ಸಂತೋಷ ಸಮಾರಂಭವು, ಯಥೋಚಿತ ಭಾಷಣಾದಿ ಹಲವು ಸಮಾಚೀನವಾದ ಕಾರ್ಯಕ್ರಮಗಳೊಡನೆ, ಕಳೆದ ತಾ. ೯ನೇ ಗುರುವಾರ ಸಂಜೆ ೫ ಗಂಟೆಗೆ ಮಣಿಪಾಲದಲ್ಲಿ, ವೈಭವಪೂರ್ವಕವಾಗಿ ಜರುಗಿತು. ಉಡುಪಿ ಶ್ರೀಕೃಷ್ಣಮಠದ ಪರ್ಯಾಯಪೀಠವೇರುವ ಶ್ರೀ ಪೇಜಾವರ ಮಠದ ಶ್ರೀಶ್ರೀ ವಿಶ್ವಮಾನ್ಯತೀರ್ಥ ಶ್ರೀಪಾದಂಗಳವರು ಈ ಕಟ್ಟಡದ ಪ್ರವೇಶೋತ್ಸವವನ್ನು ನೆರವೇರಿಸಿದರು.

ಇಲ್ಲಿಯ ಹೆಡ್ ಪೋಸ್ಟಾಫೀಸನ್ನೂ, ಟೆಲಿಗ್ರಾಫ್ ಆಫೀಸನ್ನೂ ಒಂದೇ ಕಟ್ಟೋಣದಲ್ಲಿ ವ್ಯವಸ್ಥೆಗೊಳಿಸುವ ಏರ್ಪಾಡು ಇನ್ನೊಂದು ವರ್ಷದ ವರೆಗೆ ಬಾಕಿಯಿಡಲಾಗಿದೆಯೆಂದು ತಿಳಿದುಬರುತ್ತದೆ.

ಟ್ರಂಕ್ ಟೆಲಿಫೋನಿನ ಕೆಲಸವು ಭರದಿಂದ ಸಾಗುತ್ತಿದೆ. ಇನ್ನು ಕೆಲವೇ ದಿನಗಳೊಳಗಾಗಿ ಪೂರ್ತಿಯಾಗುವದು.

### ಮಂಗಳೂರು ಬಂದರಿನಲ್ಲಿ ಸ್ಟೀಮರುಗಳು.

ಬಿ. ಎಸ್. ಎನ್. ಕಂಪೆನಿಯ ಎಸ್. ಎಸ್. ಭದ್ರಾವತಿಯು ಸೋಮವಾರ ಪ್ರಾತಃಕಾಲ ಮುಂಬಾಯಿಯಿಂದ ಬಂದು ಈ ದಿನ ಪ್ರಾತಃಕಾಲ ೯ ಘಂಟೆಗೆ ಹಿಂತೆರಳಿತು. ಎಸ್. ಎಸ್. ನೇತ್ರಾವತಿಯು ಬೃಹಸ್ಪತಿವಾರ ಪ್ರಾತಃಕಾಲ ಮುಂಬಾಯಿಯಿಂದ ಬಂದು ಅಂದೇ ರಾತ್ರಿ ಕಲ್ಲಿಕೋಟೆಗೆ ತೆರಳಿ, ಶುಕ್ರವಾರ ರಾತ್ರಿ ಅಲ್ಲಿಂದ ಮರಳಿ, ಶನಿವಾರ ಪ್ರಾತಃಕಾಲ ೧೦ ಘಂಟೆಗೆ ಮುಂಬಾಯಿಗೆ ಹಿಂತೆರಳುವದು.

ಟಿ. ಎಮ್. ಐ. ಎಸ್. ಇಂಡಸ್ ಸ್ಟೀಮರು ಆದಿತ್ಯವಾರ ದಿನ ಇಲ್ಲಿಗೆ ಬಂದಿರುತ್ತದೆ.

# ಹಿಂದೂದೇಶ

ಮದ್ರಾಸಿನ ಆಂಧ್ರ ನಿವಾಸಿಗಳು ಶ್ರೀಮತಿ ಉಭಯಭಾಷಾ ಪ್ರವೀಣ ಬಾತುಲ ಕಾಮಾಕ್ಷಮ್ಮ ಎಂಬಾಕೆಯು ಆಂಧ್ರ ವಿಶ್ವವಿದ್ಯಾಲಯದ ಸೆನೇಟಿಗೆ ಒಬ್ಬ ಮೆಂಬರಾಗಿ ಆರಿಸಲ್ಪಟ್ಟ ಸಂಬಂಧ ಶ್ರೀಮಾನ್ ಕೆ. ನಾಗೇಶ್ವರ ರಾವ್ ಪಂತುಲುಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆಂಧ್ರ ಪತ್ರಿಕಾ ಕಾರ್ಯಾಲಯದಲ್ಲಿ ಅಕೆಗೊಂದು ಮಾನಪತ್ರವನ್ನು ಸಮರ್ಪಿಸಿದರು.

ಅಲಹಾಬಾದಿನ ಮಾಘಮೇಳದಲ್ಲಿ ತಾ. ೧೦ರಲ್ಲು ಬೆಂಕಿಯಿದ್ದು, ಕೆಲವು ಸೊತ್ತುಗಳೂ, ಒಂದು ಮೋಟಾರು ಕಾರೂ, ಆಡೊಂದೂ ಆಗ್ನಿಪಾಲಾಯವು.

ರಿಜರ್ವ ಬ್ಯಾಂಕಿನವರು ತಮ್ಮ ಸ್ವಂತ ಕಟ್ಟಡವನ್ನು ಮುಂಬಾಯಿಯಲ್ಲಿ ಕಟ್ಟಲಿರುವರು. ಇದಕ್ಕಾಗಿ ಮುಂಬಾಯಿ ಸೆಂಟ್ರಲ್ ಟೆಲಿಗ್ರಾಫ್ ಆಫೀಸಿನ ಕಟ್ಟಡದ ಒಂದು ಭಾಗವನ್ನು ಕೊಳ್ಳಲಿರುವರು.

ಕಾಕಿನಾಡಿನಲ್ಲಿ ತಾ. ೨೫ರಲ್ಲು ಜರಗುವ ಆಂಧ್ರ ಪ್ರಾಂತಿಕ ಸಮ್ಮೇಳನಕ್ಕೆ ಶ್ರೀ. ಕೆ. ನಾಗೇಶ್ವರ ರಾವ್ ಪಂತುಲುರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಹೈದರಾಬಾದಿನ ನಿಜಾಮರವರು ಮಾರ್ಚಿ ತಿಂಗಳಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯವನ್ನು ಸಂದರ್ಶಿಸಲಿರುವರು.

ಕಲ್ಕತ್ತಾ ಕಾರ್ಪೊರೇಶನಿನ ಸುಮಾರು ನಾಲ್ವತ್ತು, ನಾಲ್ವತ್ತೈದು ಲಕ್ಷ ರೂಪಾಯಿಗಳಷ್ಟು ತೆರಿಗೆಯು ವಸೂಲಾಗಲು ಬಾಕಿ ಬಿದ್ದಿದೆ. ಬಂಗಾಳ ಸರಕಾರದವರು ಕಲ್ಕತ್ತಾ ಕಾರ್ಪೊರೇಶನಿನವರು ಶೇಕಡಾ ೪॥ಯ ಬಡ್ಡಿಯ ೬,೬೮,೪೦೦ ರೂಪಾಯಿಗಳ ಡಿಬೆಂಚರ್ ಸಾಲವನ್ನೆತ್ತಲು ಮಂಜೂರಾತಿಯನ್ನು ಕೊಟ್ಟಿರುವರು. ಈ ಸಾಲಕ್ಕೆ ಇದೇ ಜನವರಿ ತಾ. ೧೫ರಿಂದ ೧೬ ವರ್ಷಗಳ ಅವಧಿಯಿದೆ.

ಅಖಿಲ ಭಾರತ ಗೀತಾ ಸಮ್ಮೇಳನವು ತಾ. ೩೧ರಲ್ಲು ಅಲಹಾಬಾದಿನಲ್ಲಿ ಗೀತಾಧರ್ಮ ಮಂಡಲದ ಆಶ್ರಯದಲ್ಲಿ ಜರಗುವದು.

ಸನಾತನ ಧರ್ಮ ಮಹಾಸಭೆಯು ಇದೇ ತಾ. ೨೩, ೨೪, ೨೫ರಲ್ಲು ಅಲಹಾಬಾದಿನ ಮೇಳಾ ವಠಾರದಲ್ಲಿ ಕೂಡುವದು.

ಮಿ. ಪಿ. ವಿ. ಕೃಷ್ಣಯ್ಯ ಚೌಧುರಿಯವರನ್ನು ಗುಂಟೂರು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿಗೆ ಅಧ್ಯಕ್ಷರಾಗಿ ಮಾಡಿದ ಚುನಾವಣೆಯನ್ನು ರದ್ದುಪಡಿಸಬೇಕೆಂದು ಕೆಲವು ಮೆಂಬರರು ಸರಕಾರಕ್ಕೆ ಮನವಿ ಮಾಡಿಕೊಂಡಿರುವರು.

ಮಿ. ರಹಿಮತ್ತುಲ್ಲಾ ಚಿನೋಯಿ ಮತ್ತು ಮಿ. ಎ. ಡಿ. ಶ್ರೋಫ್ ರವರು ಇಂಡಿಯನ್ ಮರ್ಚೆಂಟ್ಸ್ ಚೇಂಬರಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಈ ವರ್ಷಕ್ಕಾಗಿ ಆರಿಸಲ್ಪಟ್ಟಿರುವರು.

ಅಹಮದಾಬಾದಿನಲ್ಲಿ ಮೆನಿಂಜ್ಯಾಟಿಸ್ ರೋಗವು ತಲೆದೋರಿದೆ. ಮುನಿಸಿಪಾಲಿಟಿಯವರು ಇದಕ್ಕೋಸುಗ ಒಬ್ಬ ಪ್ರತ್ಯೇಕ ವೈದ್ಯಕೀಯ ಉದ್ಯೋಗಸ್ಥರನ್ನು ನೇಮಿಸಿರುವರು.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಹಿಂದಿಯಲ್ಲಿಯೇ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಠರಾವು ಕರಾಚಿ ಮುನಿಸಿಪಾಲಿಟಿಯಲ್ಲಿ ಮಂಜೂರಾಗಿದೆ.

ಹಿಂದೂ ಮಹಾಸಭೆಯ ವಿಶೇಷ ಸಭೆಯೊಂದು ಅಲಹಾಬಾದಿನ ಮಾಘಮೇಳ ಮಂಡಪದಲ್ಲಿ ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಇದೇ ತಾ. ೨೫ ಮತ್ತು ೨೬ರಲ್ಲು ಕೂಡುವದು.

ತಾಶಿ ಲಾಮಾರವರು ಫೆಬ್ರವರಿ ತಾ. ೨೩ರ ವರೆಗೆ ಲ್ಹಾಸಾಕ್ಕೆ ಹಿಂತಿರುಗಲಾರರೆಂದು ತಿಳಿದುಬರುತ್ತದೆ.

ನೆಲಕಂದಾಯ ರಿಯಾಯಿತಿಯ ಸಂಬಂಧದ ಹುಕುಂಗಳು ಪ್ರಾಯಶಃ ಈ ತಿಂಗಳ ಅಂತ್ಯದ ವರೆಗೆ ಹೊರಬೀಳಲಿಕ್ಕಿಲ್ಲ.

ಮದ್ರಾಸು ಮೋಟರ್ ವೆಹಿಕಲ್ಸ್ ಆಕ್ಟಿನಲ್ಲಿ ಅರ್ಧ ವರ್ಷ, ಒಂದು ವರ್ಷ ಮತ್ತು ಅಲ್ಪ ಅವಧಿ ಅಂದರೆ ಒಂದು ತಿಂಗಳ ಬಗ್ಗೆ ಲ್ಯಾಸನ್ಸು ಕೊಡುವ ತಿದ್ದುಪಡಿಯು ಪ್ರಕಟವಾಗತಕ್ಕುದೆಂದು ಗವರ್ನರರವರು ಆಜ್ಞಾಪನೆಯನ್ನಿತ್ತಿರುವರು.

ಇಂಡಿಯನ್ ರೋಡ್ ಕಾಂಗ್ರೆಸಿನ ಅಧ್ಯಕ್ಷರಾಗಿ ರ್ಯಾ ಬಹದೂರ್ ಚುಟ್ಟನ್ ಲಾಲ್‌ರವರೂ ಉಪಾಧ್ಯಕ್ಷರುಗಳಾಗಿ ದಿವಾನ್ ಬಹದೂರ್ ಎನ್. ಎನ್. ಐಯಂಗಾರ್, ಮಿ. ಸ್ಟಬ್ಸ್ ಮತ್ತು ಬ್ರಿಗೇಡಿಯರ್ ವಾಕರ್‌ರವರು ಆರಿಸಲ್ಪಟ್ಟಿರುವರು.

ವಿಶಾಖಪಟ್ಟಣದ ಮಂಡಪೇಟೆಯಿಂದ ರಾಮಚಂದ್ರಪುರಕ್ಕೆ ಬರುತ್ತಿದ್ದ ಜಟ್ಕವೊಂದು ಕಾಲಿವೆಗೆ ಮಗುಚಿಬಿದ್ದು ಒಂದು ಹುಡುಗಿಯೂ, ಜಟ್ಕಾದ ಕುದುರೆಯೂ ನೀರುಪಾಲಾದುವು.

ಜುನಾಗಾಡಿನ 'ವಿಲ್ಲಿಂಗ್‌ಡನ್ ಡ್ಯಾಮು' ವ್ಯಾಸರಾಯಿಯವರಿಂದ ತಾ. ೧೦ರಲ್ಲು ತೆರೆಯಲ್ಪಟ್ಟಿತು.

ಲೋಕಲ್ ಬೋರ್ಡುಗಳ ವಿಷಯವಾದ ಮಂತ್ರಿಮಂಡಲದ ಧೋರಣೆಯನ್ನು ಖಂಡಿಸಲು ಮದ್ರಾಸಿನ ಗೋಖಲೆ ಹಾಲಿನಲ್ಲಿ ಸಾರ್ವಜನಿಕ ಮಹಾಸಭೆಯೊಂದು ತಾ. ೧೦ರಲ್ಲಿ ನೆರೆದಿದ್ದಾಗ ಶ್ರೀ. ಸಿ. ಆರ್. ರೆಡ್ಡಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ.ಗಳಾದ ಎಸ್. ಸತ್ಯಮೂರ್ತಿ, ಡಾ. ಪಿ. ಸುಬ್ಬರಾಯನ್, ಸಿ. ಎನ್. ಮುತ್ತುರಂಗ ಮುದಲಿಯಾರ್, ಮತ್ತು ದಾವೂದ್ ಶಾ ಸಾಹೇಬ್ ಇವರುಗಳ ತೀವ್ರ ಭಾಷಣಗಳಾದುವು.

ಮಿ. ವಿ. ಎನ್. ಚಂದಾವರ್ಕಾರ್‌ರವರು ಮುಂಬಾಯಿ ಮಿಲ್ ಓನರ್ಸ್ ಆಸೋಸಿಯೇಶನಿನ ಅಧ್ಯಕ್ಷರಾಗಿ ೧೯೩೬ನೇ ವರ್ಷಕ್ಕೆ ಆರಿಸಲ್ಪಟ್ಟಿರುವರು.

ರಾಜಕೋಟೆಯ ಆರ್ಟ್ಸ್ ಕಾಲೇಜಿನ ಶಂಕುಸ್ಥಾಪನೆಯು ರಾಯರವರಿಂದ ನಡೆಸಲ್ಪಟ್ಟಿತು.

ಅನಂತಶಯನದ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದಲ್ಲಿ ಮಾರುಜಪಂ ಉತ್ಸವದ ಲಕ್ಷದೀಪ ಉತ್ಸವವು ಜರುಗಿತು.

ಗುಂಟೂರು ಮತ್ತು ಒಂಗೋಲೆ ಮಧ್ಯದ ರೈಲ್ವೆಯು ಫೆಬ್ರವರಿ ತಾ. ೭ರಲ್ಲು ಪ್ರಾರಂಭವಾಗುವದು.

ಕಲ್ಕತ್ತಾ ನಗರದ ಅನೇಕ ಭಾಗಗಳಲ್ಲಿ ಒಂದು ವಿಚಿತ್ರ ರೋಗವು ಹರಡುತ್ತಿದೆ.

ದಿಲ್ಲಿ ಪಟ್ಟಣದಲ್ಲಿ ಬೆಂಡ್ರೋಲ್ ಇಲ್ಲದ ೫ ಅಧಿಕಾರಿಗಳು ಹಿಡಿದಿರುವರು.

ಡಾ. ಜೆ. ಮತ್ತಾಯರವರು ಇಂಡಿಯನ್ ಇಕೊನೊಮಿಯೇಶನಿನ ಮುಂದಿನ ವರ್ಷದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ಕಲ್ಕತ್ತಾ ಕಾರ್ಪೊರೇಶನಿನ ಎಲ್ಲಾ ಚುನಾಯಿತ ಕೌನ್ಸಿಲರರು ತಮ್ಮ ಸ್ಥಾನಗಳಿಗೆ ರಾಜಿನಾಮೆಯನ್ನಿತ್ತಿರುವರು.

ಮುಂಬಾಯಿ ಕಾಂಗ್ರೆಸು ಚುನಾವಣೆಯಲ್ಲಿ ಮಿಸ್. ಮಿಸ್. ಸೋಫಿಯಾ ಸೋವಿಟ್ಜಿಯವರು ಸೋತು ಹೋದ ಕಾರಣ ಈಗ ದಿಲ್ಲಿಯಲ್ಲಿರುವ ಗಡಿನಾಡಿನ ಮುಖಂಡ ತುಲ್ಲಾರವರ ಮೇಲೆ ಅವರು ಗಡಿನಾಡನ್ನು ಪ್ರವೇಶಿಸಲು ಅಪ್ಪಣೆಯಾಗಿದೆ.

ಜಿಲ್ಲಾ ಬೋರ್ಡುಗಳ ಅಧ್ಯಕ್ಷರುಗಳ ಮತ್ತು ಉಪಾಧ್ಯಕ್ಷರುಗಳ ಸಭೆಯೊಂದು ತಾ. ೨೧ರಲ್ಲು ಮದ್ರಾಸಿನಲ್ಲಿ ಕೂಡುವದಾಗಿಯೂ, ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಡುವುವೆಂದೂ ತಿಳಿದುಬರುತ್ತದೆ.

ಇಂಡಿಯನ್ ಸಾಯನ್ಸ್ ಕಾಂಗ್ರೆಸಿನ ೨೩ನೇ ಅಧಿವೇಶನವು ಇಂಡೋರಿನಲ್ಲಿ ಅಲ್ಲಿಯ ಮಹಾರಾಜರವರಿಂದ ತೆರೆಯಲ್ಪಟ್ಟಿತು.

ಪೊಂಡಿಚೇರಿಯ ಆರವಿಂದ ಆಶ್ರಮದವರು ಒಂದು ಕಚೇರಿಯನ್ನು ಏರ್ಪಡಿಸಿದ್ದು ಅದಕ್ಕೆ ಫ್ರೆಂಚ್ ಇಂಡಿಯಾ ಗಳನ್ನೂ ಆಮಂತ್ರಿಸಿದ್ದರು.

ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗೌರವ ಸ್ಥಿರ ಆಗರ್ನ್ಯಾಜರುಗಳನ್ನು ಮಂಜೂರಾಗಿದೆ.

ಮಿ. ಮಿಝಾ ಮಹಮದ್ ರಫಿ, ಬಿ. ಎಸ್. ರಂಗೂನು ಕಾರ್ಪೊರೇಶನಿನ ಮೇಯರರಾಗಿ ಚುನಾಯಿಸಲ್ಪಟ್ಟಿರುವರು.

ಬಂಗಾಳ ಸರಕಾರದವರು ತಮ್ಮ ಅಡಳಿತೆಯ ವರದಿಯಲ್ಲಿ ಪಂಡಿತ ಜವಾಹರಲಾಲರ ವಿಷಯವಾಗಿ ಮಾಡಿದ ಟೀಕೆಗಳಿಗಾಗಿ ಕ್ಷಮೆಯನ್ನು ಕೇಳಿರುವರು.

ದಿವಾನ್ ಬಹದೂರ್ ಸಿ. ಗೋವಿಂದನ್ ನಾಯರ್‌ರವರು ಹೊಸ ಒರಿಸ್ಸಾ ಪ್ರಾಂತದ ಲೀಗಲ್ ರಿಮೆಂಬ್ರೆನ್ಸರರಾಗಿ ನೇಮಕ ಬಹುದು.

ಕಾಂಗ್ರೆಸು ಪಕ್ಷದ ಮಿ. ಪಿ. ರತ್ನವೇಲು ಚೆಟ್ಟಿಯಾರ್ ಎಮ್. ಸಿ.ಯವರು ತಿರುಚಿನಾಪಳ್ಳಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವರು.

ಭೋಪಾಲದ ಇಬ್ಬರು ಸಾಹುಕಾರರಿಗೆ ೫೦೦ ರೂಪಾಯಿ ಕೊಡಬೇಕೆಂದೂ ಇಲ್ಲವಾದಲ್ಲಿ ಕೊಲ್ಲಲಾಗುತ್ತಿದೆಂದೂ ಗದರಿಸಿ ಬರಲು, ಅವರು ಅದನ್ನು ಪೋಲೀಸರ ವಶಕ್ಕೆ ಒಪ್ಪಿಸಿದರು. ಆಯತರು ನಡುಹಗಲಲ್ಲೇ ಅವರ ಮನೆಗೆ ನುಗ್ಗಿ ಗುಂಡಿಕ್ಕಿ ಕೊಲೆ ಪರಾರಿಯಾಗಿರುವರು.

ಮದ್ರಾಸು ಸರಕಾರದವರು ಕಳೆದ ಫಸಲಿಯಲ್ಲಿ ನೆಲಕಂದಾಯದಲ್ಲಿ ತೋರಿಸಿದ ರಿಯಾಯಿತಿಯನ್ನು ಚಾಲ್ತಿ ಮತ್ತು ಮುಂದಿನ ಫಸಲುಗಳಲ್ಲೂ ತೋರಿಸಬಹುದಾಗಿ ಊಹಿಸಲಾಗಿದೆ.

ಲಾಹೋರಿನಲ್ಲಿ ಸಿಕ್ ಜಾಥಾಗಳ ಸತ್ಯಾಗ್ರಹವು ನಡೆಯುತ್ತಾ ಇದ್ದು ಇಪ್ಪತ್ತರ ವರೆಗಿನ ಕೈದುಗಳು ೬೦ಕ್ಕೆ ಮಿಕ್ಕಿವೆ.

ಶೇಕಪುರಾ ಮುನಿಸಿಪಾಲಿಟಿಯ ೮ ಮಂದಿ ಕೌನ್ಸಿಲರರು ಕಾಂಗ್ರೆಸು ಜುಬಿಲಿಯಲ್ಲಿ ಭಾಗ ವಹಿಸಬೇಕೆಂಬ ಠರಾವನ್ನು ಸಮರ್ಥಿಸಿದುದಕ್ಕಾಗಿ, ಕೌನ್ಸಿಲರ್ ಸ್ಥಾನದಿಂದ ಅವರನ್ನು ಏಕೆ ತೆಗೆದುಹಾಕಬಾರದಾಗಿ ನೋಟೀಸು ಹೊರಟಿದೆ.

ಪಂಡಿತ ಜವಾಹರಲಾಲರು ಫೆಬ್ರವರಿ ತಿಂಗಳಲ್ಲಿ ತಾನು ಸ್ವದೇಶಕ್ಕೆ ಹಿಂತಿರುಗಬಹುದೆಂದೂ, ಆಮಂತ್ರಿಸಿದಲ್ಲಿ ರಾಷ್ಟ್ರಸಭೆಯ ಅಧ್ಯಕ್ಷತೆನವನ್ನು ವಹಿಸಬಹುದೆಂದೂ ಒಬ್ಬ ಮಿತ್ರನಿಗೆ ತಿಳಿಸಿರುವರು.

ಜನವರಿ ತಾ. ೨೬ರಲ್ಲು ಪೂರ್ಣ ಸ್ವರಾಜ್ಯದಿನಾಚರಣೆಯನ್ನು ನಡೆಸಬೇಕಾಗಿ ಬಾಬು ರಾಜೇಂದ್ರ ಪ್ರಸಾದರ ಹೇಳಿಕೆ.

ಶಿಕ್ಷಣಸಪ್ತಾಹಕ್ಕೆ ಲೋಕಲ್ ಬೋರ್ಡ್ ಸಂಸ್ಥೆಗಳು ಸ್ಥಳೀಯ ತಮ್ಮ ಫಂಡಿನಿಂದ ವ್ಯಯವನ್ನು ಸರಕಾರದವರು ಮಾಡಬಾರದಾಗಿ ತಿಳಿಸಿರುವರು.

ಮಹಾತ್ಮಾಜಿಯವರು ನಿಧಾನವಾಗಿ ಗುಣಹೊಂದುತ್ತಿರುವರು. ಅವರ ಎರಡ

# ವರ್ತಮಾನ.

ಸಿ:—ಇಲ್ಲಿಯ ಎಲಿಮೆಂಟರಿ ಶಾಲೆಯ ಸಪ್ತಮ
ತ್ಯುತ್ಸವವು ಉಡ್ರಿ ರೇಂಜ್ ಶಾಲಾ ಡಿಪ್ಟಿ ಇನ್ಸ್‌ಪೆಕ್ಟರ
ಮ್. ಮಾರ್ಟಿಸ್ (ಬಿ. ಎ. ಎಲ್. ಟಿ.,) ಇವರ ಅಧ್ಯ
ತು. ಮಕ್ಕಳು ಗಾಯನ, ಕೋಲಾಟ, ಜಡೆ ಹೆಣೆಯುವ
ನ್, ಕಥಾ ನಟನೆ, ಇತ್ಯಾದಿ ವಿನೋದಗಳಿಂದ ಸಭಿಕ
ಳಿಸಿದರು.

ಳೆ:—ಹೊಸತಾಗಿ ಚುನಾವಣೆಯಾದ ನಮ್ಮ ಕಾರ್ಕಳ
ಬೋರ್ಡಿಗೆ ಜನಾಬ್ ಯಜ್. ಯಸ್. ಹುಸ್ಸೇನ
ಅಧ್ಯಕ್ಷರಾಗಿಯೂ, ಮಿಯಾರ ಜನಾರ್ಧನ ಕಮ್ತಿ
ಾಗಿಯೂ ಸರ್ವಸಮ್ಮತಿಯಿಂದ ಆರಿಸಲ್ಪಟ್ಟಿರು

ಾನೆ ನಾಡವರ ವಿದ್ಯಾರ್ಥಿ ಭವನದಲ್ಲಿ ರಾಷ್ಟ್ರಸಭೆಯ
ವದಂದು ಮೈಸೂರಿನ ಯೋಗಶಾಲೆಯ ವಿದ್ಯಾರ್ಥಿಗಳಾದ
ಸಹಾದೇವ ಭಟ್ಟ ಮತ್ತು ಶ್ರೀ ರಂಗನಾಥ ಶರ್ಮ ಎಂಬವ
ನುಷ್ಯೋನ್ನತಿಗೂ ಯೋಗಸಾಧನೆಗೂ ಇರುವ ಸಂಬಂಧ
ಸಿ ಬೋಧಯುಕ್ತವಾದ ಭಾಷಣ ಮಾಡಿದರು. ಮಾತ್ರವಲ್ಲದೆ,
ೀಗಾಸನಗಳನ್ನೂ ಶರೀರಸಾಧನೆಯ ಕ್ರಮಗಳನ್ನೂ ಮಾಡಿ
).

ಸುಕೃತೀಂದ್ರ ತೀರ್ಥ ಸ್ವಾಮಿಯವರು ಕಾರ್ಕಳಕ್ಕೆ
ರ್ಭದಲ್ಲಿ ಅವರಿಗೆ ಸಂಭ್ರಮದ ಸ್ವಾಗತವನ್ನು ಕೊಡುವದ
ನಸಂಗ್ರಹವಾಗುತ್ತಲಿರುವದು. ಈ ಕಾರ್ಯಕ್ಕೆ ಒಂದು
ಸ್ಟು ಬೇಕಾಗಿರುವದೆಂದು ಅಂದಾಜಾಗಿದ್ದು ಈ
ಚೆನ್ನಾಗಿರುವುದು.

ಸೋಗೆ ನಿವಾರಣಾ ಮಂಡಳಿಯವರು ಕುಷ್ಠ
ಗೆ — ಸ್ಪತ್ರೆಯನ್ನು ಕಟ್ಟಿಸುವ ಉದ್ದಿಶ್ಯ ಧನಸಂಗ್ರಹ
ಕ್ಕೆ ಧರ್ಮರಾಜ ರಾಜಸೂಯ ಎಂಬ ನಾಟಕವನ್ನು ಎರಡು
ಅಭಿನಯಿಸಿ ತೋರಿಸಿದರು. ಅದರ ಟಿಕೇಟು ಮಾರಾಟದಿಂದ
ಸಂಗ್ರಹವು ಬಹು ಕಡಿಮೆಯಾದುದು ದುಃಖದ ಸಂಗತಿಯಾಗಿದೆ.

**ಬೆಳ್ತಂಗಡಿ:**—ಸ್ಥಳೀಯ ಪಂಚಾಯತ ಬೋರ್ಡಿನ ಅಧ್ಯಕ್ಷ ಪ
ಅಧ್ಯಕ್ಷರ ಚುನಾವಣೆಯು ಇದೇ ಕಳೆದ ತಾರೀಕು ೨—೧—'೩೬ನೆ
ಗಂಟೆಗೆ ಪಂಚಾಯತ ಕಟ್ಟಡದಲ್ಲಿ ನಡೆದು ರಾ॥ ಪಡೀಲ್
ಾಮನಾಥ ಅವರು ಅಧ್ಯಕ್ಷರಾಗಿಯೂ, ರಾ॥ ತೋಮಸ್
ಮತ್ತು ಉಪಾಧ್ಯಕ್ಷರಾಗಿಯೂ, ಪ್ರತಿಸ್ಪರ್ಧಿಗಳಿಲ್ಲದೆ ಚುನ್ಯಾಸ
ತ್ಯವೇ. ಚುನಾವಣೆಯ ನಂತರ ಶ್ರೀಮಾನ್ ಭೀಡೆ
ಭಟ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಣ್ಣ ಉಪಹಾರ
ಏರ್ಪಡಿಯಿತು.

**ಮಂಗಳಾಪುರ:**—ಕರ್ಣಾಟಕ ಸಾಹಿತ್ಯ ಸಂಘದ ಕಲನೆ ಸಭೆಯು
೧೬ರಲ್ಲು ಸ್ಥಳೀಯ ಹಿಂದೀ ಪಾಠಶಾಲೆಯಲ್ಲಿ ಕುಂಡಾ
ಹ್ಯೆ. ಸ್ಕೂಲಿನ ಅಧ್ಯಾಪಕರಾದ ಶ್ರೀ. ಟಿ. ದತ್ತಾತ್ರೇಯ
ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಚಕ್ರಪಾಣಿ ನರಶಿಂಹಯ್ಯ
'ಕನ್ನಡ ಕವಿತೆ' ಎಂಬ ವಿಷಯದಲ್ಲಿ ಭಾಷಣ ಮಾಡಿದರು.
ಸಭೆ ತಾ. ೧೯—೧—'೩೬ಕ್ಕೆ. ವೇಥಾಂತ ವಿಚಾರದಲ್ಲಿ ಬ್ರಹ್ಮ
ಎಮ್. ಪದ್ಮನಾಭ ಅಡಿಗರು ಉಪನ್ಯಾಸ ಮಾಡುವರು. ಸರ್ವ
ಸ್ವಾಗತವಿದೆ ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಈಗ ಡಿಸ್ಟ್ರಿಕ್ಟ್ ಎಜುಕೇಶನ್ ಕೌನ್ಸಿಲಿನಲ್ಲಿ ಖಾಲಿ ಇರುವ
ಒಂದು ಮೆಂಬರಿಕೆಯ ಸ್ಥಾನಕ್ಕೆ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ
ಯುತ ಎಸ್. ಅಂತಯ್ಯ ಶೆಟ್ರು ಉಮೇದ್ವಾರರಾಗಲಿರುವರೆಂದು
ಾಪಡುತ್ತದೆ.

ಸೌಕೂರು ದಶಾವತಾರ ಮೇಳದ ನಟವರ್ಗದವರು ತಮಗೆ ತಲಬು
ಜೀವಿಕೆಂದು ಹಟ ತೊಟ್ಟಿದ್ದರಿಂದ ಸದ್ರಿ ದೇವಸ್ಥಾನದ ಆಡಳ್ತೆ
ಸ್ತೀಸರರಾದ ಶ್ರೀ. ಸೌಕೂರು ಅಂತಯ್ಯ ಶೆಟ್ರು ಮೇಳವನ್ನು
ಯೇ ಬಿಡುವದಾಗಿ ಆಲೋಚಿಸಿರುವರು. ಮೇಲಿನ ದೇವಸ್ಥಾನಕ್ಕೆ
ಂದರೆ ಸಾವಿರಾರು ರೂಪಾಯಿ ಸಪ್ಪ ಉಂಟುಮಾಡುವ ಈ ಮೇಳವು
ರುವುದು ಕೇಳಿ ಅನೇಕರು ಸಂತೋಷಪಡುತ್ತಾರೆ.

**ಪುತ್ತೂರು:**—ಇದೇ ೧೯೩೬ನೆ ಇಸವಿ ಎಪ್ರಿಲ್ ತಾ. ೧ನೆಗೆ
ಂಭವಾಗಿ ೧೯೩೬ನೆ ಇಸವಿ ಮಾರ್ಚ ತಾ. ೩೧ನೆ ತಾರೀಕಿಗೆ
ಕ್ಕೆವಾಗುವ ವರುಷದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಶರಾಬು
ಜಾ ಆಫೀಸು ಮತ್ತು ಬೀರ್ ಅಂಗಡಿಗಳು ಆಯಾಯ ಡಿವಿಜನಿನ
ಸರರಿಂದ ಏಲಂ ಆಗುತ್ತವೆ. ಮುಂಗಳೂರು ತಾಲೂಕು ಬಾಬ್ತು
ಳೂರು ತಾಲೂಕು ಕಚೇರಿಯಲ್ಲಿ ಇದೇ ಫೆಬ್ರುವರಿ ತಾ. ೪ರಲ್ಲು;
ತ್ತರು ತಾಲೂಕು ಬಾಬ್ತು ಬೆಳ್ತಂಗಡಿ ಸೆಂಟರ ಬೆಳ್ತಂಗಡಿ ತಹಶೀ
ರವರ ಕಚೇರಿಯಲ್ಲಿ ಫೆಬ್ರುವರಿ ತಾ. ೫ರಲ್ಲು; ಕುಂದಾಪುರ
ೂಕು ಬಾಬ್ತು ಕುಂದಾಪುರ ತಾಲೂಕು ಕಚೇರಿಯಲ್ಲಿ ತಾ.
ಲ್ಲು; ಪುತ್ತೂರು ತಾಲೂಕು ಕಚೇರಿಯಲ್ಲಿ ತಾ. ೭ರಲ್ಲು; ಉಡ್ಪಿ
ೂಕು ಕಚೇರಿಯಲ್ಲಿ ತಾ. ೮ರಲ್ಲು; ಕಾಸರಗೋಡು ತಾಲೂಕು
ರಿಯಲ್ಲಿ ತಾ. ೧೦ರಲ್ಲು; ಮತ್ತು ಕಾರ್ಕಳ ತಾಲೂಕು ಕಚೇರಿ
, ತಾ. ೧೧ರಲ್ಲು ಏಲಂ ಮಾಡುವದೆಂದು ಪ್ರಕಟಣೆ.

೧೩೪೫ನೇ ಫಸಲಿಯ ವರುಷಾವಧಿ ಜಮಾಬಂದಿಯು ಕಾರ್ಕಳ
ೂಕು ಬಾಬ್ತು ಜಿಲ್ಲಾ ಕಲೆಕ್ಟರರವರಿಂದ ಫೆಬ್ರುವರಿ ತಾ. ೨೪, ೨೮,
ಮಾರ್ಚ ತಾ. ೩, ೪, ೬, ೭ರ ವರೆಗೆ ಪುತ್ತೂರು ತಾಲೂಕು ವ
ೆಗೋಡು ತಾಲೂಕು ಬಾಬ್ತು ಪುತ್ತೂರು ರೆವಿನ್ಯೂ ಡಿವಿಜನಲ್
ಸರರವರಿಂದ ಕಾಸರಗೋಡು ತಾಲೂಕು ಹೆಡ್‌ಕ್ವಾರ್ಟರಿನಲ್ಲಿ
ನೇ ಇಸವಿ ಜನವರಿ ೨೧ರಿಂದ ೨೫ರ ವರೆಗೆ ಮತ್ತು ತಾ. ೩೦ರಿಂದ
ುತ್ತು ಫೆಬ್ರುವರಿ ೧ ನೆ ೧೫ರ ವರೆಗೆ ಮತ್ತು ಪುತ್ತೂರು
ಕು ಬಾ[illegible] ತಾ. ೨೯ ಮತ್ತು ೩೦ ತಾ. ೩
ಹೆ ಸ್ಕೂಲುಗಳಲ್ಲಿದ್ದಂತೆ ತಾ. ೨೫ರ ವರೆಗೆ, ಮುಂದಕ್ಕೆ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

# ಇಟೆಲಿ-ಅಬಿಸೀನಿಯಗಳ ಪ್ರಕರಣ.

ಜನರಲ್ ಕೌಟ್ಸ್ಬರ್! ಇವರು ಸೇನಾಶಾಖೆಯಲ್ಲಿ ೫೦ ವರ್ಷಗಳ ಸರ್ವೀಸಿರುವ ಒಬ್ಬ ಇಟೆಲಿಯ ದಳಪತಿಗಳು. ಸೆಟಿಮತ್ತೂ ಗ್ಯಾಸ್‌ನ ನಡುವಣ ಮೈದಾನಿನಲ್ಲಿ ಇಟೆಲಿ ಸೈನ್ಯವನ್ನು ನಡೆಯಿಸುವರು. ಅವರು ಅನ್ನುವುದೇನೆಂದರೆ—'ಈ ಯುದ್ಧದ ಜಯಾಪಜಯಗಳ ನಿರ್ಧಾರವು ಮುಖ್ಯವಾಗಿ ಒಂಟೆಗಳಿಂದಲೂ, ಅದನ್ನು ನಡೆಸುವವರಿಂದಲೂ ಆಗಬೇಕಾಗಿದೆ. ಯಾಂತ್ರಿಕ ಶ್ರೇಷ್ಠತೆಯು ಅಬಿಸೀನಿಯದಲ್ಲಿ ಹೆಚ್ಚಿನ ಉಪಯೋಗಕ್ಕೆ ಬರುವುದಿಲ್ಲ. ದೇಶವನ್ನು ಆಕ್ರಮಿಸುವಲ್ಲಿ ವಿಮಾನಗಳು ಹೆಚ್ಚು ಫಲಕಾರಿಯಲ್ಲ. ಟ್ಯಾಂಕುಗಳು ಚಲಿಸಲಾರದ, ಕುದುರೆಗಳು ದಣಿದು ಬೀಳುವ, ಹೇಸರಕತ್ತೆಗಳು ನಡೆಯಲೊಲ್ಲದ ಪ್ರದೇಶಗಳು ಅಬಿಸೀನಿಯದಲ್ಲಿ ಹೇರಳವಾಗಿವೆ.'

ಇಂತಹ ವಿಲಕ್ಷಣ ಪ್ರಾಂತದಲ್ಲಿ ಇಟೆಲಿಯವರ ಕೈ ಈಚಿಗೆ ಸಾಗುತ್ತಿಲ್ಲ. ಶತ್ರುಗಳಿಲ್ಲದಾಗ, ಅವರ ಎದುರಾಟವು ಕಂಡು ಬಾರದಾಗ, ಇಟೆಲಿಯವರು ಮುನ್ನಡೆದರು. ದಿಗ್ವಿಜಯವಾಯಿತೆಂದು ಜಯಭೇರಿ ಹೊಡೆದರು. ಈಗ ಜಯಭೇರಿ ನಿಂತಿದೆ. ಇಟೆಲಿಯವರು ಆಕ್ರಮಿಸಿದ ಪ್ರಾಂತಗಳನ್ನು ಅಬಿಸೀನಿಯದವರು ಒಂದೊಂದಾಗಿ ಕಿತ್ತುಕೊಳ್ಳುತ್ತಿದ್ದಾರೆ.

ಕಳೆದ ಚಂದ್ರಗ್ರಹಣವು ಅವಶಕುನವೆಂದು ಅಬಿಸೀನಿಯದವರು ನಂಬಿ ಅದಕ್ಕಾಗಿ ದೇವರ ಪ್ರಾರ್ಥನೆ ನಡೆಸಿದರು. ಅವರಲ್ಲಿಯೇ ಕೆಲವರು ಇದು ಇಟೆಲಿಯವರಿಗೇ ಅಪಾಯ ಸೂಚನೆ ಎಂದು ಸಂತೋಷದಿಂದ ಕುಣಿದಾಡಿದರು.

ಕಳೆದ ವಾರದ ಮುಖ್ಯ ವಾರ್ತೆ ಎಂದರೆ, ಅಬಿಸೀನಿಯದವರು ಇಟೆಲಿಯವರಿಂದ ತೇಂಬಿಯನ್ ಪ್ರಾಂತವನ್ನು ಕೈವಶ ಮಾಡಿಕೊಂಡುದು. ಇಟೆಲಿಯವರು ಕಾದಾಡಲು ನಿಲ್ಲದೆ, ಟ್ಯಾಂಕುಗಳನ್ನೂ, ಲಾರಿಗಳನ್ನೂ ಅಲ್ಲಲ್ಲಿಯೇ ಬಿಟ್ಟು ಪಲಾಯನ ಮಾಡಿದರು!

ಇನ್ನು ಹವೆಯು ಅನುಕೂಲವಾಗಿದ್ದರೆ, ಅಬಿಸೀನಿಯದವರು ಮೇಕಲೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿದಾರೆ. ಅದಲ್ಲದಿದ್ದರೆ ಕೆಸರಾಗಿ ಹೋಗಿರುವ ಅಕ್ಸ್‌ವಮ್ ಮತ್ತೂ ಎಡೋವಾವನ್ನು ಪುನಃ ಆಕ್ರಮಿಸುವ ಯೋಚನೆ ಅವರಿಗೆ.

ಉತ್ತರ ಭಾಗದಲ್ಲಿ ಮಳೆ; ವಿಪರೀತ. ಇಟೆಲಿಯವರು ಟ್ಯಾಂಕುಗಳನ್ನು ಸಾಗಿಸಲು ಸಾಧ್ಯವಿಲ್ಲ. ಅಲ್ಲದೆ, ವಿಮಾನಗಳ ಗುಟ್ಟನ್ನು ಆಗಲೇ ಇತಿಯೋಪಿಯದವರು ತಿಳಿದುಕೊಂಡಿರುವುದರಿಂದ, ಬಾಂಬುಗಳ ತೀವ್ರವಾದ ಎಸೆದಾಟವೂ ನಿರೀಕ್ಷಿಸಿದ ಫಲ ಕೊಟ್ಟಿಲ್ಲ.

ಮೂರು ವಾರಗಳಿರುವ ಒಂದು ಚಿಕ್ಕ ಮಳೆಗಾಲವು ಅಬಿಸೀನಿಯದಲ್ಲಿ ಆರಂಭವಾಗಿದೆ. ಇದರಿಂದ ವಿಮಾನಗಳ ಕೆಲಸವು ಅರ್ಧ ಜೀವವಾಗಿದೆ. ಮೋಟರುಗಳ ಚಲಾವಣೆಗೆ ಆತಂಕವಾಗಿದೆ. ಆದರೆ ಇಟೆಲಿಯವರು ಈ ಮಳೆಗಾಲದಲ್ಲಿ ಅಬಿಸೀನಿಯದಲ್ಲಿಯೇ ವಾಸಿಸುವರು.

ಒಗೆಡನ್ ಪ್ರಾಂತದಲ್ಲಿ ಚಿಕ್ಕ ಪುಟ್ಟ 'ಚಿಲ್ಲರೆ' ಕಾಳಗಗಳಾಗಾಗ ಆಗುತ್ತಿವೆ. ದೊಡ್ಡದಾದ ಯುದ್ಧ ಮಾಡಲು ಎರಡು ಪಂಗಡದವರೂ ಮುಂದೆ ಬರುತ್ತಿಲ್ಲ. ಅಬಿಸೀನಿಯದವರು ಹೊರ ಬರಲೆಂದು ಇಟೆಲಿಯವರಿಲ್ಲಿ ಹಲವು ಬಗೆಯಿಂದ ಕೆಣಕುತ್ತಿದ್ದರೂ, ಅಬಿಸೀನಿಯದವರು ಕೊಂಚಕ್ಕೆ ಎದುರು ಬೀಳುವಂತೆ ತೋರಲಿಲ್ಲ.

ಇಟೆಲಿಯ ಸರ್ವಸೇನಾಪತಿಗಳು ಏಕೆ 'ತ್ರಿಶಂಕು ಸ್ವರ್ಗ'ದಲ್ಲಿದ್ದಾರೆ? ಮುಂಬರಿಯುತ್ತಿಲ್ಲ? ನೋಡಿ—ಎಣ್ಣೆಯ ಸ್ಯಾಂಕ್ಶನುಗಳ ಮುಂದಿನ ಸ್ಥಿತಿ ಏನೆಂದು ಯಾರಿಗೂ ತಿಳಿದುದಲ್ಲ. ಇತ್ತ ಇಟೆಲಿಯವರು ಮುಂಬರಿದರೆ, ಅತ್ತ ಎಣ್ಣೆಯ ಬಹಿಷ್ಕಾರ ಜಾರಿಗೆ ಬಂದರೆ, ಇಟೆಲಿಯವರು ಕೆಟ್ಟರು. ಸರ್ವಸೇನಾಪತಿಗಳ ಸಂದಿಗ್ಧಾವಸ್ಥೆಗೆ ಇದೇ ಕಾರಣವೇನೋ!

---

**ಕಾಸರಗೋಡು:**—ಪುತ್ತೂರಿನ ಶ್ರೀಮತಿ ಭೂದೇವಿ ಎಂಬ ಆರು ವರುಷದ ಬಾಲಿಕೆಯು ಆಲ್ಲಲ್ಲಿ ಹರಿಕಥೆಗಳನ್ನು ಮಾಡುತ್ತಿರುವಳು. ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿಯೂ ಒಂದು ಹರಿಕಥೆ ಇತ್ತು. ಹರಿಕೀರ್ತನೆಯ ಆರಂಭಕಾಲದಲ್ಲಿದ್ದ ದೇವಸ್ಥಾನದ ಆಡಳ್ತೆದಾರರು ಅಂತ್ಯವಾಗುತ್ತಾ ಬರುವಾಗ ಅಲ್ಲಿರಲಿಲ್ಲ. ಕೊನೆಗೆ ಮಹನೀಯರೊಬ್ಬರು ದೇವಸ್ಥಾನದ ಆಡಳ್ತೆದಾರರು ಇಲ್ಲಿರದ್ದರಿಂದ ಭಂಡಾರದಿಂದ ಯಾವ ವಿಧದ ಸಹಾಯವನ್ನೂ ಶ್ರೀಮತಿಗೆ ಮಾಡಲು ಅಸಾಧ್ಯವೆಂದು ಹೇಳಿ ಸಭಿಕರು ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡರು.

ತಾ. ೧೧ರಲ್ಲು ಈ ಸೆಂಟರಿನ ಅಧ್ಯಾಪಕ ಅಧ್ಯಾಪಕಿಯರ ಸಭೆಯು ಬೋ. ಎ. ಶಾಲೆಯಲ್ಲಿ ಅಲ್ಲಿಯ ಉಪಾಧ್ಯಾಯರಾದ ಶ್ರೀ. ಬಿ. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಲ್ಲಿದ್ದ ಎಲ್ಲಾ ವಿಷಯಗಳು ಯಥೋಚಿತವಾಗಿ ನಡೆದುವಲ್ಲದೆ ಡಿ. ಬಿ. ಇ. ಒ.ರವರಿಂದ ಬಂದ ಇತ್ತೀಚೆಗಿನ ಸರ್ಕಿಲಾರಿನಲ್ಲಿದ್ದ ಶಾಲಾ ಮಕ್ಕಳ ಫೀಸನ್ನು ತಾ. ೧೫ರ ಒಳಗೆ ವಸೂಲು ಮಾಡಬೇಕೆಂಬ ವಾಯಿದೆ [illegible] ಹೆ ಸ್ಕೂಲುಗಳಲ್ಲಿದ್ದಂತೆ ತಾ. ೨೫ರ ವರೆಗೆ, ಮುಂದಕ್ಕೆ ಸರ್ವಸಮ್ಮತದಿಂದ ನಿರ್ಣಯಿಸಲಾಯಿತು.

ಯುದ್ಧಾರಂಭವಾದಾಗ, ಎಡಿಸ್ ಅಬಾಬವನ್ನು ಅವಸರದಿಂದ ಬಿಟ್ಟು ತೆರಳಿದ್ದ ವರ್ತಕರೆಲ್ಲ ಅಲ್ಲಿಗೀಗ ಹಿಂದಿರುಗುತ್ತಿದ್ದಾರೆ. ಟ್ರಾಫಿಕ್ ಹೆಚ್ಚುತ್ತಿದೆ. ಅಬಿಸೀನಿಯದವರಿಗೆ ಯುದ್ಧದ ಭಯ ತಪ್ಪಿದೆ. ವಿಜಯದ ವಿಶ್ವಾಸ ಹುಟ್ಟಿದೆ.

ಡೆಗ್ಸ್‌ಬೂರನ ಸಮೋಪದ ಈಜಿಪ್ಟಿನ ಎಂಬುಲೆನ್ಸಿನ ಮೇಲೆ, ಇಟೆಲಿಯ ವಿಮಾನಗಳು ಬಾಂಬ್ ಹಾರಿಸಿದುವೆಂದು ದೂರು ಎದ್ದಿದೆ. ಅಬಿಸೀನಿಯದ ಚಕ್ರವರ್ತಿಗಳು ಮಾಜೀ ಚಕ್ರವರ್ತಿಗಳ ಮರಣಕ್ಕೆ ಕಾರಣರೆಂದು, ಇಟೆಲಿಯವರು ಎಲ್ಲೆಲ್ಲಿಯೂ ಕೂಗಾಡುತ್ತಿದ್ದಾರೆ.

ಬಲಿ ಪ್ರಾಂತದ ಗವರ್ನರರ ಸೈನ್ಯಕ್ಕೂ ಒಂದು ಇಟೆಲಿ ಸೈನ್ಯದ ತುಕ್ಕಡಿಗೂ, ಗೋರಾಹೆಗೆ ಪಶ್ಚಿಮದ ೬೦ ಮೈಲುಗಳ ದೂರದಲ್ಲಿ ಕಾಳಗವಾಗಿ ಅಬಿಸೀನಿಯದವರು ೬ ಟ್ಯಾಂಕುಗಳನ್ನೂ ೯ ಮೆಷಿನ್ ಗನ್ನುಗಳನ್ನೂ, ಹೇರಳವಾದ ಮದ್ದು ಗುಂಡಿನ ರಾಶಿಯನ್ನೂ ಕೈವಶಮಾಡಿಕೊಂಡಿರುವದಲ್ಲದೆ, ಇಟೆಲಿಯವರ ಸೀನಿಯರ್ ಆಫೀಸರನೂ, ನೂರಾರು ಮಂದಿ ನೇಟಿವ್ ಸಿಪಾಯಿಗಳೂ ಮಡಿದಿರುವರೆಂದೂ ಅಬಿಸೀನಿಯದವರೆನ್ನುತ್ತಾರೆ.

ಕೊಳಲು ವಿದ್ವಾನ್ ಶ್ರೀ। ಜಿ. ಆನಂದರಾವ್.

# ವಿದೇಶ

ಇಂಡಿಯನ್ ಸಿವಿಲ್ ಸರ್ವಿಸಿನ ಪರೀಕ್ಷೆಯೊಂದು ಲಂಡನಿನಲ್ಲಿ ಬರುವ ಜುಲಾಯಿ ಮತ್ತು ಅಗೋಸ್ತು ತಿಂಗಳುಗಳಲ್ಲಿ ನಡೆಯುವದು.

ಯುನ್ಯಾಟೆಡ್ ಸ್ಟೇಟ್ಸಿನ ಸುಪ್ರೀಮ್ ಕೋರ್ಟು 'ಎ. ಎ. ಎ.' ಎಂಬ ಕೃಷಿ ಸಂಬಂಧದ ಕಾನೂನು ಸಿಂಧುವಲ್ಲವೆಂದು ನಿರ್ಧರಿಸಿದೆ.

ಫ್ರಾನ್ಸಿನ ಮತ್ತು ಸೋವಿಯಟ್‌ನವರ ವ್ಯಾಪಾರೀ ಒಪ್ಪಂದವು ಮುಂದುವರಿಯುವ ಹಾಗಿದ್ದು ಫ್ರಾನ್ಸಿನವರು ಅವರಿಗೆ ೬೦೦ ಮಿಲಿಯ ಫ್ರಾಂಕುಗಳ ಸಾಲವನ್ನು ಕೊಡಲಿರುವರು.

ಅಮೇರಿಕವು ವ್ಯಾಕ್ಸಿಕೊದೊಡನೆ ಬೆಳ್ಳಿಯನ್ನು ಕೊಳ್ಳುವ ಕರಾರು ಮಾಡಿಕೊಂಡಿದೆ.

ಮಿ. ಏಂಟನಿ ಏಡನ್‌ರವರು ನೌಕಾ ಕಾನ್ಫರೆನ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಬ್ರಿಟಿಷ್ ಸರಕಾರದವರು ಈಜಿಪ್ತಿನವರೊಡನೆ ೧೯೩೦ರ ಒಪ್ಪಂದದ ವಿಷಯವಾಗಿ ಮಾತುಕಥೆಗಳನ್ನು ನಡೆಸುತ್ತಿದ್ದಾರೆ.

ಪ್ರಧಾನರಾದ ಮಿ. ಸ್ಟಾನ್ಲಿ ಬಾಲ್ಡ್ವಿನ್‌ರವರು ತಮ್ಮ ಕ್ರಿಸ್ಮಸ್ ರಜಾ ದಿನಗಳನ್ನು ಕಳೆದು ಲಂಡನಿಗೆ ಹಿಂತಿರುಗಿರುವರು.

ಇತಿಯೋಪಿಯದ ರೆಡ್ ಕ್ರಾಸಿನ ಸಹಾಯಾರ್ಥವಾಗಿ ಕೇಳಿಕೊಂಡ ಹಣಕ್ಕಾಗಿ ಲಂಡನಿನಲ್ಲಿ ಇಪ್ಪರಲ್ಲೆ ೩,೫೦೦ ಪವನುಗಳು ಕೂಡಿವೆ.

ಕೊಂಗ್ರೆಸಿನ ಜುಬಿಲಿಯ ಉತ್ಸವವು ಲಂಡನಿನ ಕ್ವೊಡ್ರೆಂಟ್ ರೆಸ್ಟೋರೆಂಟಿನಲ್ಲಿ ಆಚರಿಸಲ್ಪಟ್ಟಿತು. ಸುಮಾರು ೨೫೦ ಮಂದಿ ಹಿಂದೀಯರೂ, ಐರೋಪ್ಯರೂ ಹಾಜರಿದ್ದರು.

ಆರ್ಮಮೆಂಟ್ಸ್ ಕಾನ್ಫರೆನ್ಸಿನಲ್ಲಿ ವಿಕ್ಕರ್ಸ್ ಕಂಪೆನಿಯವರು ಹೊಸತೊಂದು ಏಂಟಿಏಯರ್ ಕ್ರಾಫ್ಟ್ ಗನ್ನನ್ನು ಕಂಡುಹಿಡಿದಿರುವರೆಂದು ಹೊರಬಿದ್ದಿದೆ. ಇದಕ್ಕೆ ಈಗಾಗಲೇ ಅನೇಕ ರಾಜ್ಯಗಳಿಂದ ಸಹಸ್ರಾರು ಪೌಂಡುಗಳ ಆರ್ಡರುಗಳು ಬಂದಿವೆಯಂತೆ.

ಚಮನ್‌ನಲ್ಲಿ ಕೆಲವು ದಿನಗಳ ಕೆಳಗೆ ಭೂಮಿಯ ಕಂಪನವಾಯಿತಂತೆ.

# ಬೋರ್ಡಿನ ಆಡಳಿತೆಯಲ್ಲಿ ಅವ್ಯವಸ್ಥೆ.

(ಎಸ್. ಎ. ಇವರಿಂದ.)

'ಅವ್ಯವಸ್ಥೆ' ಎಂದೊಡನೆ ನವಯುಗದವರು 'ಸೊಂ' ಎಂದು ಉರಿದುಬೀಳುವರು. ಅವ್ಯವಸ್ಥೆಯ ಮಾತೆತ್ತಿದರೆ ಅದು ಶ್ರೀ। ಶೆಟ್ಟರ ಆಡಳಿತೆಯ ಮೇಲಣ ಟೀಕೆ ಎಂದು ಅವರ ಅಭಿಪ್ರಾಯ. ಆದರೆ ಅವ್ಯವಸ್ಥೆಯಲ್ಲಿ ಎರಡು ವಿಧ. ಅನಿರೀಕ್ಷಿತ ಕಾರಣಗಳ ಫಲಿತಾಂಶವಾಗಿ ಬರುವ ಅವ್ಯವಸ್ಥೆಯೊಂದು; ತಾನು ತಿಳಿದೂ ಮಾಡಿದ ಕೆಲಸಗಳ ಪರಿಣಾಮವಾಗಿ ಬರುವ ಅವ್ಯವಸ್ಥೆಯೊಂದು. ಈ ಎರಡರಲ್ಲಿ ಮೊದಲನೆಯದಕ್ಕೆ ಯಾರನ್ನೂ ದೂರಲು ಸಾಧ್ಯವಿಲ್ಲ. ಆದರೆ ಅಂಥ ಅವ್ಯವಸ್ಥೆಯನ್ನು ಹೋಗಲಾಡಿಸಲು ಮಾಡುವ ಪ್ರಯತ್ನವು ಯಶಸ್ವಿಯಾಗಲು ಸಾಧಿಸುವುದೇ ಕರ್ತವ್ಯದಕ್ಷತೆಯ ಲಕ್ಷಣ. ಈಗ ಅವ್ಯವಸ್ಥೆಯ ಒಂದೊಂದೇ ವಿಷಯವನ್ನು ಎತ್ತಿ ಮಾತಾಡೋಣ.

೧೯೫೧ನೆ ಇಸವಿಯಲ್ಲಿ ಮೋಟರ್ ವೆಹಿಕಲ್ಸ್ ಟೇಕ್ಸೇಶನ್ ಎಕ್ಟು ಜಾರಿಗೆ ಬಂದೊಡನೆ ಬೋರ್ಡುಗಳಿಗೆ ಟೋಲುಗೇಟುಗಳ ಆದಾಯವು ಕೈತಪ್ಪಿ ಹೋಯಿತು. ಈ ನಷ್ಟದ ಭರ್ತಿಗೆ ಮೋಟರ್ ಬಂಡಿಗಳ ಟೇಕ್ಸಿನಿಂದ ಭರ್ತಿಮಾಡಲಾಗುತ್ತದೆಂದು ಪ್ರಾಂತಿಕ ಸರಕಾರದವರು ಆಶ್ವಾಸನ ಕೊಟ್ಟರು. ಆದರೆ ಈ ಹಣವೆನ್ನು ಮದ್ರಾಸಿನಲ್ಲಿ ಸಂಗ್ರಹಿಸಿ ಅದನ್ನು ಬೇರೆ ಬೇರೆ ಜಿಲ್ಲೆಗಳಿಗೆ ಹಂಚುವಾಗ ನಮ್ಮ ಜಿಲ್ಲೆಗೆ ಬೇರೆ ಜಿಲ್ಲೆಗಳ ದಾಮಾಶಾಯದಲ್ಲಿ ಸಿಗಲಿಲ್ಲ. ಇದು ಈ ಗ್ರೇಂಟಿನದೊಂದೆ ಅವಸ್ಥೆಯಲ್ಲ. ಪ್ರತಿಯೊಂದೂ ಜಿಲ್ಲೆಗೆ ಹಂಚಿ ನಮ್ಮ ಜಿಲ್ಲೆಗೆ ಬರುವಾಗ ಚೌಕಿ ಊಟದವರಿಗೆ ಮೊಸರಿಕ್ಕಿ, ಭೂರಿಜನಕ್ಕೆ ಮಜ್ಜಿಗೆನೀರು [illegible] ಇದು ಅನಿರೀಕ್ಷಿತ ನಷ್ಟ. ಇದರೊಂದಿಗೆ ಹಲವು ಟೇಕ್ಸಿಗಳು [illegible] ಹೇಳಿ ವರ್ಷಕ್ಕೆ ಬರೆ ೫ ರೂಪ್ಯಾ ಟೇಕ್ಸ್ ಕೊಟ್ಟು, ಬಸ್ಸುಗಳ ದಾರಿಯಲ್ಲಿ [illegible] ಹಣ ಮಾಡಿದುವು. ಇವು 'ಪಬ್ಲಿಕ್' ಆದರೆ ೪ ತಿಂಗಳಿಗೆ ಒಂದು ಸೀಟಿಗೆ ೭॥ ರೂಪ್ಯಾಗಳಂತೆ ತೆರಬೇಕಿತ್ತು. ಈ ರೀತಿಯ ಮೋಸ ಕೃತ್ಯಗಳ ಪರಿಣಾಮವಾಗಿ ಬೋರ್ಡಿಗೆ ಹೇರಳ ಹಣ ನಷ್ಟವಾಯಿತು. ಮ್ಯುನ್ಸಿಪಾಲಿಟಿಯಲ್ಲಿ ಟೆಕ್ಸ್ ಕೊಡದೆ ತಿರುಗುವ ಸೈಕಲುಗಳನ್ನು ಹಿಡಿಯುವುದಕ್ಕೆ ವರ್ಷಾರಂಭದಲ್ಲಿ ಹಲವು ಮುನ್ಸಿಪಲ್ ನವುಕರರು ಹೊಂಚುಹಾಕಿಕೊಂಡು ಲೈಸನ್ಸ್ ತನಖಿ ಮಾಡುತ್ತಾರೆ. ಈ ಬಗೆಯ ಸಿಬಂದಿಯು ಬೋರ್ಡಿನಲ್ಲಿ ಇಲ್ಲ. ಪರೀಕ್ಷಾರ್ಥವಾಗಿ ಸಿಬಂದಿಯನ್ನು ಕೆಲವು ತಿಂಗಳಿಗೆ ಏತಕ್ಕೆ ಇಡಬಾರದಿತ್ತು? ಅಥವಾ ಈ ಅಧಿಕಾರ ರಸ್ತೆಯ ಮೇಲೆ ಆಗಾಗ ಸಂಚರಿಸುವ ಇಂಜಿನಿಯರ್ ಇಲಾಖೆಯವರಿಗೆ ಹಂಗಾಮಿಯಾಗಿ ಏತಕ್ಕೆ ಕೊಡಬಾರದು! ಪರಊರಿನಿಂದ ಕಾರುಗಳೂ ಟೆಕ್ಸಿಗಳೂ ಲೋರ್ರಿಗಳೂ ಫಕ್ಕನೆ ಇಲ್ಲಿಗೆ ಬಂದು ಹಿಂತಿರುಗುತ್ತವೆ. ಅವುಗಳಿಂದ ನಮಗೆ ಸಿಗಬೇಕಾದ ಲೈಸನ್ಸ್ ಫೀಸಿಗೆ ನಾವು ಬೀಳುತ್ತದೆ. ಇದರ ವ್ಯವಸ್ಥೆ ಮಾಡುವುದಕ್ಕೆ ಯಾರೂ ಇಲ್ಲ.

ಮೋಟರ್ ಬಸ್ಸು ಕಂಪೆನಿಗಳ ಪರಸ್ಪರ ಪೋಟಾಪೋಟಿಯಿಂದ ಒಂದೆರಡು ಕಂಪೆನಿಗಳು ಕೈಕಾಲುಬಿಡಲಿಕ್ಕೆ ತಯಾರಾಗಿದ್ದವು. ಶ್ರೀ। ಸೆಟ್ಟರು ಆಡಳಿತವನ್ನು ವಹಿಸಿದ ಪ್ರಥಮ ತಿಂಗಳಲ್ಲೆ ಎಲ್ಲಾ ಕಂಪೆನಿಗಳ ಪ್ರತಿನಿಧಿಗಳನ್ನು ಕರೆಯಿಸಿ, ಅವರನ್ನೆಲ್ಲಾ ಕೆಲವು ಕಟ್ಟುಗಳಿಂದ ಬಿಗಿದು ಬರೇ ಮೂರು ದೊಡ್ಡ ಲಿಮಿಟೆಡ್ ಕಂಪೆನಿಗಳನ್ನು ಮಾತ್ರ 'ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ'ಯಾಗುವಂತೆ ಮಾಡಿದುದು ನಿಜವಾಗಿಯೂ ದೇಶಹಿತದ ದೃಷ್ಟಿಯಿಂದ ಮಾಡಿದ ಮಹತ್ಕಾರ್ಯ. ಈ ಮೂರು ಕಂಪೆನಿಗಳ ಡೈರೆಕ್ಟರರಲ್ಲನೇಕರು ಡಿ. ಬೋ. ಮೆಂಬರರೆಂದೂ, ಇವರು ಅಧ್ಯಕ್ಷತನದ ಚುನಾವಣೆಯಲ್ಲಿ ಶ್ರೀ। ಸೆಟ್ಟರಿಗೇ ಓಟು ಕೊಟ್ಟವರೆಂದೂ ಸೂಚಿಸದಿರಲಾರೆ. ಆದರೆ ಈ 'ಕಂಬೈನಿಗೆ' ಕೆಲವು ಸ್ವತಂತ್ರ ಮೂಲಕರು ಸೇರಲಿಲ್ಲ. ದ್ರವ್ಯ ಬಲವು ಹೆಚ್ಚುಳ್ಳ ಒಂದು ಕಂಪೆನಿಯ ಕೈಯಲ್ಲಿಯೇ ಈ ಕಂಬೈನಿನ ಸೂತ್ರಗಳಿರುವುದು ಅವರಿಗೆ ಅಷ್ಟು ಪ್ರಶಸ್ತವಾಗಿ ಕಾಣಲಿಲ್ಲ. ಇತರ ಕಂಪೆನಿಗಳ ಬೆನ್ನು ಮುರಿಯಲಿಕ್ಕೆ ಈ ಕಂಪೆನಿಯೇ ಬಹಳ ಮುಟ್ಟಿಗೆ ಕಾರಣವೆಂದು ಈ ಸ್ವತಂತ್ರ ಮೂಲಕರ ಭಾವನೆ. 'ಇಲ್ಲವಾದರೆ ನಮ್ಮ ಪಳ್ಳಿಗೆ ಬನ್ನಿ, ಇಲ್ಲವಾದರೆ ನಿಮ್ಮ ದೇವಸ್ಥಾನಕ್ಕೆ ನಾವು ಬರುತ್ತೇವೆ' ಎಂಬ ಈ ಕಂಬೈನಿನ ವಾದವೆಂದು ಈ ಸ್ವತಂತ್ರ ಮೂಲಕರ ಅಭಿಪ್ರಾಯ. ಹೀಗಾಗಿ ಅವರು ಈ ಗಾಳಕ್ಕೆ ಬಲಿಬೀಳಲಿಲ್ಲ. ಆಗ ಈ ಕಂಬೈನಿನವರು ದರಗಳನ್ನು ಭಯಂಕರವಾಗಿ ತಗ್ಗಿಸ ತೊಡಗಿದರು. ಇದರಿಂದ ಜನತೆಗೆ ಪ್ರಯೋಜನವೆಂದರೂ ಜನತೆಯೂ ಈ ಬಲೆಗೆ ಬೀಳಲಿಲ್ಲ. ಅದು ಆದಷ್ಟುನುಟ್ಟಿಗೆ ಈ ಸ್ವತಂತ್ರ ಮೂಲಕರನ್ನೇ ಪ್ರೋತ್ಸಾಹಿಸಿತು. ಆದರೆ ಇವರಿಗೆ ಹೊಸ ರೈನುಗಳಿಗೆ ಲೈಸನ್ಸು ಸಿಗಲಿಲ್ಲ. 'ನಿಮ್ಮ ಹಿತಕ್ಕಾಗಿ ಮಾಡಿದ ಕಟ್ಟನ್ನು ಮುರಿಯಲಿರುವ ನಿಮಗೆ ನಾನು ಬೆಂಬಲವಾಗಿರಲಾರೆನು' ಎಂದು ಶ್ರೀ। ಸೆಟ್ಟರೇ ಹಟತೊಟ್ಟರು. ನ್ಯಾಯ! ತಮ್ಮ ಹಿತವನ್ನೇ ತಿಳಿಯಲರಿಯದೆ ಒಕ್ಕಟ್ಟಿಗೆ ಸೇರದವರಿಗೆ ಇದು ನಿಜವಾದ ಶಿಕ್ಷೆ! ಆದರೆ ಮಾಡುವುದೇನು? ಕಂಬೈನಿನವರಿಂದ ಪ್ರಯಾಣಿಕರಿಗೆ ಅನೇಕಾನೇಕ ಅಡಚಣಿಗಳು ಉಂಟಾದುವು. 'ನಿಮಗೆ ಇಂಥ ಬಸ್ಸು ಇದೆ' ಎಂದಿಷ್ಟರವರೆಗೆ ಜನತೆಯನ್ನೆ ಕೆಣಕಿಸಿ ಅವರಿಗೆ ಸ್ಥಾನಕೊಡದೆ ಓಡಾಡಿಸುವ ಅವಸ್ಥೆ ಬಂತು. ಜಾತಿ ಪರಜಾತಿಯವರೆನ್ನದೆ ಜನಗಳ ದೂರು ಸೆಟ್ಟರ ಬಳಿಗೆ ಹೋಯಿತು. ಅಸರು ಬಗ್ಗಲಿಲ್ಲ. ಕೊನೆಗೆ ಕಲೆಕ್ಟರರು ಮೂಲಕರಿಗೆ ಲೈಸನ್ಸು ಕೊಟ್ಟರು. ಬಬ್ಬು ಮೂಲಕರು ಬೋರ್ಡಿಗೆ ಹಣ ಕ್ಲುಪ್ತಕಾಲಕ್ಕೆ ಕಟ್ಟಿ ಹೊಸ ಲೈನ್ ತೆರೆದು ನಾಲ್ಕೈದು ತಿಂಗಳುಗಳ ವರೆಗೆ ಬಸ್ಸುಗಳನ್ನು ಓಡಿಸಿದರೂ ಅವರಿಗೆ ಲೈಸನ್ಸಿಲ್ಲ. ಆ ಮೆಂಬರ, ಈ ಮೆಂಬರರ ಬೆನ್ನು ಹಿಡಿದರು. ಹೇಗೂ ಹೊಸ ಬಸ್ಸು ಹಾಕಿದರೆ ಬೋರ್ಡಿನ ಆದಾಯ ಹೆಚ್ಚುತ್ತದೆಂದು ಯುಕ್ತಿವಾದ ಮಾಡಿದ ಮೇಲೆ, ಮತ್ತು ಕಲೆಕ್ಟರರು ಪರ್ಮಿಟು ಕೊಟ್ಟ ನಂತರ ಕೆಲವು ಕಾಲದ ಮೇಲೆ ಲೈಸನ್ಸ್ ಸಿಕ್ಕಿತು. ಆದರೆ ಈ ಕಂಬೈನಿನವರಿಂದ ಜನತೆಗೆ ಆದ ಅಡಚಣಿಗಳೇನು, ಅದರ ಪರಿಹಾರ ಹೇಗೆ ಎಂಬ ವಿಚಾರವು ನಡೆಯಲಿಲ್ಲ. ಒಂದು ವೇಳೆ ನಡೆದರೂ ಕಂಬೈನಿನವರ ಉತ್ತರಕ್ಕೆನೆ ಪ್ರಾಶಸ್ತ್ಯ ಬಂತು. ಹೀಗನ್ನುವಾಗ ಇಷ್ಟು ಪೋಟಾಪೋಟಿ ಇನ್ನೂ ಆಗುತಿದ್ದರೂ ಈ ಸ್ವತಂತ್ರ ಮೂಲಕರು ಜನತೆಯ ಬೆಂಬಲದಿಂದಲೇ ತಮ್ಮ ಬಸ್ಸುಗಳನ್ನು ಓಡಾಡಿಸುತ್ತಲೇ ಇದ್ದಾರೆ. ಹಾಗಿದ್ದರೆ ಜನತೆಗೆ ಶ್ರೀ। ಸೆಟ್ಟರ ಮೇಲಣ ಅಭಿಮಾನದ ಮಿತಿಯು ತಗ್ಗಿದರೆ ತಪ್ಪೇನು? ಆಗ ಜನರಿಗೆ ಬೇಕು ಬೇಕಾದಂತೆ ಬಾಯಾಡಿಸುವುದಕ್ಕೆ ಸಂದರ್ಭ ಸಿಕ್ಕಿದಂತಾಗುತ್ತದೆ. ಯಾವಾಗ ಅವರ ಪಕ್ಷವಾಗಿ ವಿಂಟಿಂಗಿನಲ್ಲಿ ಕಾದಾಡುವವರು ಇಲ್ಲವೊ, ಎಷ್ಟರ ವರೆಗೆ ಕಂಬೈನಿನವರಿಗೆ ಅಧಿಕಾಂಶ ಧನಿಕ ಮೆಂಬರರ ಮತ್ತು ಡಿರೆಕ್ಟರರ ಬೆಂಬಲವು ಇವೆಯೋ ಅಷ್ಟರ ವರೆಗೆ 'ನಮ್ಮ ತೋಟದಲ್ಲಿ ನಾವು ಹ್ಯಾಂಗೆ ಕೈ ಬೀಸಿದರೇನು?' ಎಂಬ ಕಂಬೈನಿನ ವರ್ತನದ ಮೇಲೆ ಜನತೆಯು ರೇಗುವುದಕ್ಕೂ, ಪತ್ರಿಕೆಗಳಲ್ಲಿ ಮತ್ತು ನಾಲ್ವರು ಸೇರಿದ್ದಲ್ಲಿ ಮನಸ್ವಿಯಾಗಿ ಬಯ್ಯುಡೆ ಬಿಡಲಿಕ್ಕೂ ಆಸ್ಪದ ಕೊಟ್ಟಂತಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಾದರೆ ಇಂಥವುಗಳ ತೀರ್ಮಾನವು ಹೇಗಾಗುತ್ತಿತ್ತೊ ಹೇಳಲಾರೆ. ಆದರೆ ನಮಗೆ ಬಾಯಿಯೇ ಗತಿಯಾದ್ದರಿಂದ ಸುಳ್ಳುಪಳ್ಳು ವರ್ತಮಾನಗಳನ್ನು ಸತ್ಯದೊಂದಿಗೆ ಒಗ್ಗರಣೆ ಹಾಕಿ ಪರಿಮಳ ಬರುವಂತೆ ಮಾಡುತ್ತಾರೆ. ಇಷ್ಟೇ ಅಲ್ಲ. ಈ ರೀತಿ ಕಾರ್ಕಳ ದಾರಿಯಾಗಿ ಉಡುಪಿಗೆ ಹೋಗುವ ಬಸ್ಸುಗಳ ಟಿಕೇಟು ದರ ಕಡಿಮೆಯಾದ್ದರಿಂದ ಕರಾವಳಿಗಾಗಿ ಆಮದು-ರಫ್ತಾಗುವ ಜನರ ಸಂಖ್ಯೆ ಕಡಿಮೆಯಾಗಿ ಹಲವು ಕಡವುಗಳಿಗೆ ಮುಂದಿನ ವರ್ಷಕ್ಕೆ ವಾರಿನ ಹಣವು ಕಡಿಮೆಯಾಗಿದೆಯಂತೆ. ಹೀಗಾಗಿ ಟೋಲು ಗೇಟಿನ ಆದಾಯ ಹೋಯ್ತು, ಬಸ್ಸುಗಳ ಲೈನುಗಳ ಸಂಖ್ಯೆ ಕಡಿಮೆ ಮಾಡಿದುದರಿಂದ ಆದಾಯ ತಪ್ಪಿತು, ಕಡವುಗಳಿಂದ ಸಿಗಬೇಕಾದ ಹಣ ತಗ್ಗಿತು. ಶೇಂದಿ ಶಂಕಿನ ಗುತ್ತಿ ಏಲಮಿನ ಕಾಲದಲ್ಲಿ ಜನಗಳಿಗೆ ಹುರಿದುಂಬಿಸುವ ಹಾಗೆ ಇಲ್ಲಿ ಜನರನ್ನು ಪ್ರೋತ್ಸಾಹಿಸುವವರು ಯಾರು? ಮೆಂಬರರು ಕೂಡಾ ತಮಗೆ ಬೇಕಾದವರಿಗೆ ಆದಾಯ ಸಿಗುವಂತಿದ್ದರೆ ಅದನ್ನು ತಪ್ಪಿಸಲಿಕ್ಕೆ ಮತ್ತು ಬೋರ್ಡಿಗೆ ಆದಾಯ ಹೆಚ್ಚಿಸಲಿಕ್ಕೆ ಹೇಗೆ ಮುಂದರಿಸ್ಯಾರು?

ಶ್ರೀ। ಶೆಟ್ಟರು ಅಧ್ಯಕ್ಷರ ಗದ್ದುಗೆಯನ್ನೇರಿದ ಪ್ರಥಮ ವರ್ಷದ ಬಜೆಟು ಅಂದಾಜು ಪಟ್ಟಿಯನ್ನು ತಯಾರಿಸುವಾಗ ಶ್ರೀ। ಮೊಳಹಳ್ಳಿ ಶಿವರಾಯರು ಬೋರ್ಡಿನ ಆದಾಯವು ಖರ್ಚಿನ ಮಿತಿಗೆ ಸರಿಯಾಗಿ ಹೆಚ್ಚುವುದಿಲ್ಲ. ಆದ್ದರಿಂದ 'ಚಾಪೆಗೆ ಸರಿಯಾಗಿ ಕಾಲು ಚಾಚಬೇಕು' ಎಂದು ಬಹಳ ಪ್ರಯತ್ನಪಟ್ಟು ಒಂದು 'ನೋಟ'ನ್ನು ತಯಾರಿಸಿದ್ದರು. ಆದರೆ ಹೊಸ ಮೆಂಬರರಿಗೆ ತಾರುಣ್ಯ ಮತ್ತು ಉತ್ಸಾಹ, ತಮ್ಮ ವಾಗ್ಜಾಲದ ಮೇಲೆ ತಮಗೇ ಇರುವ ಅಭಿಮಾನ, ತಮ್ಮ ಊರುಗಳ ತಾಲೂಕುಗಳ ಮೆಚ್ಚಿಗೆಗೆ ಪಾತ್ರರಾಗಬೇಕು ಎಂಬ ಲವಲವಿಕೆಯಲ್ಲಿ ಮೊಳಹಳ್ಳಿ ಶಿವರಾಯರ ಮಾತು 'ಎಡೆಯಲ್ಲಿ ಹೋಯಿತು.' ಪ್ರತಿಯೊಬ್ಬರ ಠರಾವುಗಳು ಖರ್ಚು ಹೆಚ್ಚಿಸಲಿಕ್ಕೆನೆ ದಾರಿಯಾದುವು. ಇಂಥ ಕೆಲವು ಸೂಚನೆಗಳು ಬಂದಾಗ ಮೊತ್ತಮೊದಲು ಶಿವರಾಯರು ಎದುರಿಸಿದರು. 'ಶಿವರಾಯರು ತಾನೇ ಬೋರ್ಡು, ಬೋರ್ಡು ಎಂಬದು ತಾನೆ' ಎಂದು ಕೆ. ಸರ್ವೋತ್ತಮ ಶೆಟ್ಟರು ತಮ್ಮ ಉತ್ಕೃಷ್ಟ ಚಿತ್ರದಲ್ಲಿ ಶಿವರಾಯರನ್ನು [illegible] ಕಾಶ ಕೊಟ್ಟದ್ದು ಇವೇ. ಯಾವ ಪ್ರಶ್ನೆಗೂ 'ಹಣವಿಲ್ಲ, ವಿಲ್ಲ' ಎಂದು ಶಿವರಾಯರು ಹೇಳಿದರೆ ಕೇಳುವವರೇನ ಗೇಡಿಗಳೆ? ಠರಾವುಗಳು ಒಂದೊಂದಾಗಿ ಪಾಸಾದುವು. ಬೇಸರದಿಂದ ಶಿವರಾಯರು ತನ್ನ ಬಳಿ ಅಥವಾ ಎದಕುಳಿತವರಿಗೆ 'ನಿಮ್ಮ ಠರಾವುಗಳನ್ನು ಏತಕ್ಕೆ ಬಚ್ಚಿಡು. ನನ್ನ ಬೆಂಬಲವು ನಿಮಗೆ ಇವೆ, ಈಗಲೆ ಹೇಳಿಬಿಡಿ' ಎಂದ ಇದರ ವ್ಯಂಗ್ಯಾರ್ಥವನ್ನು ತಿಳಿಯುವ ಗೋಜಿಗೆ ಹೋಗದೆ ಹಲ ಠರಾವುಗಳು ಪಾಸಾದವು. ಶಿವರಾಯರ ಮಾತಿನ ಆರ್ಥವನ್ನು ತಿಳಿದ ಕೆಲವರು ಮಾತ್ರ ತಮ್ಮ ಕೈವಸ್ತ್ರವನ್ನು ಬಾ ಕೊಂಡು ಕಿರುನಗೆಯನ್ನು ಮರೆಮಾಡಿದರು. ಶ್ರೀ 'ವಿದೂಷಕ'ನಂತೆ ವರ್ತಿಸುತ್ತಾರೆ ಎಂಬದು ದಲ್ಲಿಯೇ. ಇದು ಮೆಂಬರರನ್ನು ನಗಿಸ ಕೈಕೊಂಡ ವರ್ತನವಲ್ಲ. 'ಅವಿಚಾರದಿಂ ಸಹಿಸಲಾರದ ಹೊರೆಯನ್ನು ಹೊರಿಸಿ ಈಗಲಿ, ನುರಿತವರಾಗಲಿ ಬೋರ್ಡಿಗೆ ವೆಚ್ಚನುಡಿಸುತ್ತಾರಲ್ಲ! ಇವರ ಬುದ್ಧಿ ದುಃಖದಿಂದ ಕೈಕೊಂಡ ವರ್ತನವಿದು ದೊಡನೆ ಅವರು ಬರುವಾಗ ದಾರಿಯ[illegible] ಯವಾಗಿ ಮರುಗುತ್ತಿದ್ದರು' ಎಂಬದನ್ನು ಅವರೊಂದಿಗೆ ಮಾತಾಡಿದವರು ಬಲ್ಲರು. ನವಯುಗದವರಾಗಲಿ, ಶ್ರೀ। ಸರ್ವೋತ್ತಮ ಶೆಟ್ಟರಾಗಲಿ ಈ ಹವ್ಯಾಸಕ್ಕೆ ಹೋಗಲಿಲ್ಲವೇನೋ! ಹೀಗಾಗಿ ಅವರಿಗೆ ಶ್ರೀ। ಶಿವರಾಯರು ವಿದೂಷಕರಾಗಿ ಕಂಡರು. ಈ ವಕ್ರದೃಷ್ಟಿಗೆ ಏನು ಹೇಳಲಿ! ಹೀಗೆನ್ನುವಾಗ ಶಿವರಾಯರ ವಕಾಲತು ನಾನು ನಡೆಸುತ್ತೇನೆಂದು ಸರ್ವಥಾ ತಿಳಿಯಲಾಗದು. ಶಿವರಾಯರು ನನ್ನ ಬಳಿಯಲ್ಲಿ ಕೇಳಿದರೆ 'ನೀವು ಸ್ವಸ್ಥವಾಗಿ ನಿಮ್ಮ ವಕೀಲಿ ವೃತ್ತಿಯನ್ನು ನಡಿಸಿ ಇರಿ. ನಿಮ್ಮ ಬಳಿಯಲ್ಲಿ ಹಣವೂ ಇಲ್ಲ. ಆಸ್ತಿಯೂ ಇಲ್ಲ. ಆದ್ದರಿಂದ ನಿಮ್ಮ ಮಾತುಗಳನ್ನು ವಿದೂಷಕನ ಮಾತಿನ ತಾಲಿಗೆ ನಿಲ್ಲಿಸುವರು. ನೀವು ಇಷ್ಟು ವೇಚಾಪಮಾಡುವುದೇಕೆ? ಎಂಭತ್ತು ಶಾಲಿಗಳೂ ತಮಣೋತ್ಸಾಹಿಗಳೂ ದೊಡ್ಡ ದೊಡ್ಡ ಏರ್ಗಾಡರರೂ ಬೋರ್ಡಿನ ಕರ್ಣಧಾರರಾಗಿರುವಾಗ ನಿಮಗೆ ಸುಮ್ಮಗಿರಲು ಅಡಚಣಿಯೇನು? ಈಗಿನಂತೆ, ಇನ್ನೂ ಮುಂದೆ ಅವರು ಹಾರೈಸುವಂತೆ ಹಡಗನ್ನು ನಡಿಸಲು ಅವರು ಸನ್ನರ್ಥರಿರುವಾಗ ಆತ್ಮರಕ್ಷಣೆಯ ಪಾಠವನ್ನು ನೀವು ಪಠಿಸುತ್ತ ಸುಮ್ಮನಿರುವುದು ಒಳ್ಳೇದಲ್ಲವೆ?' ಎಂದು ಎರಡು ಬಿರುನುಡಿಗಳನ್ನು ಅಂದೇನು. ಆದರೆ 'ಅವೆಲ್ಲ ಫೋರ್ಕಲ್ಲ ಮೇಲೆ ಹೊಯ್ದ ಮಳೆ!' ಇದಕ್ಕಾಗಿಯೇ ಸುಮ್ಮನಿದ್ದೇನೆ.

ಈಗ ಶ್ರೀ। ಶಿವರಾಯರು ಕೊಟ್ಟ ಸೂಚನೆಗಳನ್ನು ಒಂದೊಂದಾಗಿ ವಿಮರ್ಶಿಸೋಣ. 'ಉಡುಪಿಯ ಹೈಸ್ಕೂಲನ್ನೆ ಮುಚ್ಚಿರಿ, ಅದಕ್ಕೆ ಸರಿಯಾದ ಕಟ್ಟೋಣವಿಲ್ಲ, ಶಾಲೆಯನ್ನು ಇನ್ನು ನಾವಿಟ್ಟುಕೊಂಡರೆ ಅದೊಂದು ಐರಾನತವಾದೀತು, ಒಂದು ಕಡೆಯಲ್ಲಿ ಮಿಶ್ಶನ್ ಶಾಲೆ ಇದೆ, ಇನ್ನೊಂದು ಕಡೆ ಕಲ್ಯಾಣಪುರದಲ್ಲಿ ಕ್ರೈಸ್ತ ಶಾಲೆ ಇದೆ, ಇವೆರಡರಿಂದ ಉಡುಪಿಯ ಮಕ್ಕಳ ಸೆಕೆಂಡರಿ ವಿದ್ಯಾಭ್ಯಾಸ ಸಾಗಬಹುದು' ಎಂದರು. ಜಾತಿ ಪರ ಜಾತಿಯವರು ಅವರಿಗೆ ಬೈದು ಹೀಯಾಳಿಸಿ, ಶ್ರೀ। ಸೆಟ್ಟರು ಅವರ ಮಾತಿಗೆ ಯಾಕೆ ಪ್ರಾಶಸ್ತ್ಯ ಕೊಡಬೇಕು ಎಂದರು. ಅಷ್ಟರಲ್ಲಿ

(೨ನೇ ಪುಟಕ್ಕೆ ಮುಂದರಿಯಿದೆ)



ಉಡುಪಿಯಲ್ಲಿ ಈಗ ಕಟ್ಟಲಾಗುತ್ತಿರುವ ಬೊಂಬಯಿ ಲ್ಯಾಫ್ ಇನ್ಷೂರೆನ್ಸ್ ಕಂಪೆನಿ, ಲಿಮಿಟೆಡ್ ಎಂಬೀ ಎಮಾಸಂಸ್ಥೆಯ ಸುಂದರವೂ, ನವೀನ ರೀತಿಯದೂ ಆಗಿರು [illegible] ಈ ಕಟ್ಟಡವು ಪೂರ್ಣವಾದಾಗ, ಹೇಗೆ ಅದು ತೋರುವ

(೨೩ನೇ ಪುಟದಿಂದ ಮುಂದುವರಿಸಿದುದು)

ಕಾರಣಾಂತರಗಳಿಂದ ಈ ಕಾರಣಗಳು ಇಲ್ಲಿ ಅಗತ್ಯವಿಲ್ಲ. ಉಡುಪಿಯ ಹೈಸ್ಕೂಲು ಮಕ್ಕಳ ಸಂಖ್ಯೆಯು ಕಾರಂಜಿಯ ನೀರಿನಂತೆ ಮೇಲಕ್ಕೆ ಹಾರಿತು. ಮಿಶ್ಶನ್ ಸ್ಕೂಲು ಕುಗ್ಗಿ ಬಡವಾಗಿದೆ. 'ಕಟ್ಟೋಣಕ್ಕೆ ಹಣವಾಗಬೇಕು, ಸಂಖ್ಯೆಗೆ ಸರಿ ಕಟ್ಟಿಸ್ಯಾಯರ ಸಂಖ್ಯೆ ಏರಬೇಕು. ಇದಕ್ಕೆ ಉಡುಪರ ಪೂರ್ಣ ಬೆಂಬಲ. ಈಗ ಮುನ್ಸಿಪಾಲಿಟಿಗೆ ಆ ಹೈಸ್ಕೂಲನ್ನು ಒಪ್ಪಿಸಿಕೊಡುವಂತಿದ್ದರೆ ಆಗ ಈ ತರುಣ ಉತ್ಸಾಹಿಗಳಲ್ಲಿದಲಿನ ಉತ್ಸಾಹವೇ ಬರಬಹುದೇ? ಮುನ್ಸಿಪಾಲಿಟಿಗೊಂದು ಗೌರವ, ಪಂಚಾಯತ್ತು ಎಂದರೆ ತಮ್ಮ ಗೆ ಹಾನಿ ಎಂದು, ಆಗುವುದಾದರೆ ಮುನ್ಸಿಪಾಲಿಟಿಯೆ ಆ, ಇಲ್ಲವಾದರೆ ಬೇಡ' ಎಂದು ಕಂಠಶೋಷಣೆ ಮಾಡಿದರು ತಮ್ಮ ಊರಿನ ಸೌಕರ್ಯಕ್ಕೆ ಹೈಸ್ಕೂಲು ಬೇಕಾಗಿ ಬಂದ ವಿಸ್ತರಣದ ಖರ್ಚನ್ನು ತಾವೇ ಸಹಿಸುತ್ತೇವೆ'ನವರು ಏಕೆ ಮುಂದರಿಸಿ ದುಡ್ಡು ಚೆಲ್ಲಿ

ವಿಡ್ಲ್ ಸ್ಕೂಲಿನಲ್ಲಿ ದೊಡ್ಡದೊಂದು
ರಿ ಸ್ಕೂಲಿನಷ್ಟು ಮಕ್ಕಳಿಲ್ಲ, ಅದು
ಲಿಗಳೊಳಗೆ ಇದೆ, ಮೂಡಬಿದ್ರೆಯಲ್ಲಿ
ಂಟರಿ ಶಾಲೆಗೆ ಅಗತ್ಯವಿದ್ದರೆ ಹಾಯರ್
ನ್ನು ಹಚ್ಚೋಣ' ಎಂದು ಶ್ರೀ। ಶಿವ
ಜನೆ. ಇದಕ್ಕೂ ಗಲಭೆಯುಂಟಾಗಿ
ಲ್ಕಿ ಬೋರ್ಡ್ ಶಾಲೆಗೆ ಸಾಕಷ್ಟು
ಮುಂದರಿಸಿ ಇಡೋಣ ಎಂದರೆ ಸ್ವತಃ
ಸ್ರಗೂ ಶ್ರೀ। ರಾಮಕೃಷ್ಣ ಪೂಂಜರಿಗೂ ಇಷ್ಟವಿಲ್ಲ. ಹಾಲಿ
ಇದ್ದ ಹೈಸ್ಕೂಲುಗಳಲ್ಲಿರುವ ಒಬ್ಬಿಬ್ಬರು ಉಪಾಧ್ಯಾಯರನ್ನು
ತೆಗೆದು ಮೂಲ್ಕಿಗೆ ವಿಂಗಡಿಸೋಣ ಎಂದರೆ ಆ ಅಭಿಪ್ರಾಯ
ಹೊರಬೀಳುವಷ್ಟರಲ್ಲಿ ಪ್ರತಿಯೊಂದು ಶಾಲೆಯ ಕೆಲವು ಕ್ಲಾಸು
ಗಳಲ್ಲಿ ಳಿಕ್ಕೆ ವಿುಕ್ಕಿ ದಾಖಲಾಗುವುದಕ್ಕೆ ಮಕ್ಕಳು ಬರುತ್ತಾರೆ!
ಇದ್ದರಿಂದ ಕ್ಲಾಸುಗಳ ವಿಭಜನೆಯಾಗದೆ ನಿರ್ವಾಹವೇ ಇಲ್ಲ,
ತಮಗೆ ಬೇಕಾಗದ ಉಪಾಧ್ಯಾಯರಿಗೆ ನೇಮಕವಾಗುವುದಿದ್ದರೆ
ಹೆಚ್ಚಿನ ಉಪಾಧ್ಯಾಯರ ಅಗತ್ಯವಿಲ್ಲ, ಬೇಕಾದವರಿಗೆ ಕೆಲಸ
ಸಿಗಬೇಕೆಂದಿದ್ದರೆ ಇನ್ನೊಬ್ಬ ಉಪಾಧ್ಯಾಯರ ಅಗತ್ಯವೇ ಇದೆ,
ಮುಖ್ಯ ಉಪಾಧ್ಯಾಯರಿಗೆ ವಾರ್ಷಿಕ ೨೦ ಪೀರಿಯಡುಗಳಿಗಿಂತ
ಮಾಡಲು ಸಾಧ್ಯವೇ ಇಲ್ಲ, ಕೆಲವು ಮುಖ್ಯೋಪಾಧ್ಯಾಯರು ೧೬ ಪೀರಿಯಡುಗಳ ವರೆಗೆ ಕೆಲಸ ಮಾಡುವು
ದಿದ್ದರೆ ಅವರಿಗೆ ಮೇಲ್ವಿಚಾರ (supervision) ಮತ್ತು
ಒಫೀಸ್ ವರ್ಕ್ ಹೆಚ್ಚಿಲ್ಲವೊ ಏನೊ, ಇತರ (Extra-curricular activities) ಚಟುವಟಿಕೆಗಳಿಗೆ ಸೆಕೆಂಡರಿ
ಶಾಲೆಗಳಲ್ಲಿ ಸಮಯವೇ ಇಲ್ಲ, ಹಳ್ಳಿಯ ಹಾಯರ್ ಎಲಿಮೆಂಟರಿ ಶಾಲೆಗಳ ಸೆಕೆಂಡರಿ ಉಪಾಧ್ಯಾಯರು ಹೆಚ್ಚಿಗೆ
ಪೀರಿಯಡ್ ಕೆಲಸ ಮಾಡುತ್ತಾರೆಂಬದು ವಿಶ್ವಾಸಾರ್ಹವಲ್ಲ,
ಅನೇಕ ಹೊಸ ಚಟುವಟಿಕೆಗಳಿಂಬದು ಮಕ್ಕಳ ಸಮಯ
ದುರ್ವ್ಯಯ ಮಾಡುವುದು, ಅಥವಾ ಹಾಯರ್ ಎಲಿಮೆಂಟರಿ
ಶಾಲೆಗಳ ಉಪಾಧ್ಯಾಯರು ಏನೊ ಕಣ್ಕಟ್ಟು ಮಾಡುತ್ತಾರೆ—
ಅವರಿಗೆ ಹೈಸ್ಕೂಲುಗಳ ಉಪಾಧ್ಯಾಯರಷ್ಟು ಸಂಬಳ ಸಿಗದ್ದ
ರಿಂದ ಹೊಟ್ಟೆತುಂಬ ಊಟ ಮಾಡಲಾದೆ ಅವರಿಗೆ ನಿದ್ದೆಯೆ
ಬರುವುದಿಲ್ಲವೇನೋ—ಇತ್ಯಾದಿ ಯುಕ್ತಿಪ್ರಯುಕ್ತಿಗಳ ಪ್ರದರ್ಶನವೇ ಆಯಿತು. ಶ್ರೀ। ಶಿವರಾಯರು ಹತಾಶರಾದರು. ಇತರ ಶಾಲೆಗಳಲ್ಲಿ ಉಳಿದುವು. ಮೂಲ್ಕಿ ಹೈಸ್ಕೂಲು ತಲೆ ಎತ್ತಿತು. ಡೈರೆಕ್ಟರರನ್ನು ಆನೆಯ ಅಂಬಾರಿ ಬೇಂಡು ವಾದ್ಯ ದೊಡನೆ ಮೂಲ್ಕಿಗೆ ಕರತಂದರು. ಅನೇಕ ರೀತಿಯಲ್ಲಿ ಊರ ಜನರ ವಾಗ್ದತ್ತಗಳು ಆದವು. ಆದರೆ ಅವು ರೂಪಿತಕ್ಕೆ ಬರಲಿಲ್ಲವೆಂಬದರಿಂದ Vನೆ ಫೊರ್ಮಿಗೆ ಮಂಜೂರಾತಿ ದೊರಕಲಿಲ್ಲ. ಸರಕಾರಕ್ಕೆ ಮನವಿ ಹೋಗಿದೆ. ಹೇಗೂ ಈ ವರ್ಷ ಕ್ಕಾದರೂ ಹಂಗಾಮಿ ಮಂಜೂರಾತಿ ದೊರಕದಿದ್ದರೆ Vನೆ ಫೊರ್ಮಿನಲ್ಲಿ ಕಲಿತವರ ಒಂದು ವರ್ಷ ಹಾಳಾದೀತೆಂಬದರಿಂದ ಸರಕಾರವು ಕನಿಕರವಿಟ್ಟಿತು ಅನ್ನೋಣ. ಮಂಜೂರಾತಿ ಸಿಗದಿದ್ದರೆ ಆ ಹುಡುಗರಿಗೆ ದೇವರೇ ಗತಿ. ಅಂತೂ ಮೂಲ್ಕಿಗೊಂದು ಹೈಸ್ಕೂಲು ದೊರೆಯಿತು. ಹಣವಿಲ್ಲದ ಬೋರ್ಡಿಗೊಂದು ಖರ್ಚಿನ ಕಾಯಂ ಧಕ್ಕೆ ತಗಲಿತು.

ಮುಖ್ಯ ಉಪಾಧ್ಯಾಯರ ಮನೆಯಲ್ಲಿ ಹೆರಿಗೆಯಾದಂತೆ ಪುಸ್ತಕಗಳ ಹೆರಿಗೆಯ ವಿಶೂಚಿಗೃಹವೊಂದು ಬೋರ್ಡು ಹೈಸ್ಕೂಲಿನಲ್ಲಿ ಇದೆ. ಇವರಿಗೆ ಮನೆ ತಾಪತ್ರಯದಿಂದ ರಜೆ ಪಡೆಯಬೇಕಾಗಿತ್ತದೆ. ಆದರೆ ಈ ಹೆರಿಗೆ ಕೆಲಸಕ್ಕೆ ಮತ್ತಷ್ಟು ಅನುಕೂಲವೇ. ಇದು ಮಕ್ಕಳಿಗೆ ಅತ್ಯಗತ್ಯದ ಸಾಹಿತ್ಯ, ಇದು ತಯಾರಾಗದಿದ್ದರೆ ಶಿಕ್ಷಣ ಕಾರ್ಯಕ್ಕೆ ತುಂಬಾ ಅಡಚಣಿ, ಉಪಾಧ್ಯಾಯರು ಪುಸ್ತಕ ಬರೆಯಬೇಕಾದರೆ ವಿಷಯಸಂಗ್ರಹಕ್ಕೆ ಹಲವು ಪುಸ್ತಕಗಳನ್ನು ಓದಬೇಕಾಗುತ್ತದೆ. ಹೀಗಾದ್ದರಿಂದ ಅವರ ಅನುಭವದ ವ್ಯಾಪ್ತಿಯೂ ಹೆಚ್ಚುತ್ತದೆ; ಅವರ ಜೀವನವೂ ತುಂಬುತ್ತದೆ. ಇದಕ್ಕೆ ಸರಕಾರ [illegible] ಸಿಡೆಂಟರ ಅನುಜ್ಞೆ ಪಡೆಯಬೇಕೇ, ಇವುಗಳ [illegible] ಧ್ಯಾಯನಿಗೆ ಬರುವ ಆದಾಯದ ಮಿತಿ ಏನು ಎಂಬುದನ್ನು ವಿಚಾರಿಸುವ ನಿರ್ಬಂಧವಿದೆಯೇ ಎಂಬ ಮಾತು ಬೇರೆ. ಅಂತೂ ಈ ಕೊಳೆ ರೋಗ ಸಾರ್ವತ್ರಿಕವಾಗಿ ಹಬ್ಬದಂತೆ ನೋಡಬೇಕಾದೀತು. ಇರಲಿ.

ಪ್ರಾಥಮಿಕ ಶಾಲೆಗಳಿಗೆ ಸಂಬಳದ ಕಡಿತ ಬಂದರೂ ಇತರರಿಗೆ ಬರಲಿಲ್ಲ. ಸೆಕೆಂಡರಿ ಶಾಲೆಗಳಿಗೂ ಇತರ ಇಲಾಖೆಗಳಿಗೂ ಕಡಿತವ್ಯಾಕಯಿಲ್ಲವೆಂದು ಪುತ್ತೂರಲ್ಲಿ 'ಪ್ರಾಥಮಿಕ ಉಪಾಧ್ಯಾಯರ ಸಮ್ಮೇಲನದಲ್ಲಿ ಉಪಾಧ್ಯಾಯರು ವಾದಿಸಿದರು. ಆಗ ಹಾಜರಿದ್ದ ಶ್ರೀ। ಪೂಂಜರು 'ನಿಮ್ಮ ಶಾಲೆಗಳಿಂದ ವಸೂಲಾಗುವ ಫೀಸಿನ ಎಷ್ಟು ಪಾಲಷ್ಟು ಸೆಕೆಂಡರಿ ಶಾಲೆಗಳಿಂದ ವಸೂಲಾಗುತ್ತದೆ ಎಂದು ಬಲ್ಲಿರಾ?' ಎಂದು ಕಣ್ಣು ಕೆರಳಿಸಿದರು. ಆಗ ಒಬ್ಬ ದಿಟ್ಟ ಉಪಾಧ್ಯಾಯರು 'ಪ್ರಾಥಮಿಕ ಶಾಲೆಯ ಒಂದೊಂದು ಮಗುವಿನ ವಿದ್ಯಾಭ್ಯಾಸಕ್ಕೆ ಎಷ್ಟು ಬೀಳುತ್ತದೆ, ಸೆಕೆಂಡರಿ ಶಾಲೆಯ ಮಗುವಿನ ವಿದ್ಯಾಭ್ಯಾಸಕ್ಕೆ ಎಷ್ಟು ಬೀಳುತ್ತದೆ ಎಂದೂ ಬಲ್ಲೆವು,' ಎಂದರು. ಅವರು ಒಳಸ್ವರದಿಂದ ಮಾತನಾಡಿದ್ದರಿಂದ ಸ್ವತಃ ಪ್ರಸಿಡೆಂಟರಾಗಿದ್ದ ಕಾರಣ ಅವರಿಗೆ ಗಟ್ಟಿಯಾಗಿ ಮಾತನಾಡಲು ಧೈರ್ಯ ಬಾರದೆ ಈ ವಿಷಯವು ಹೆಚ್ಚಿನವರ ಗಮನಕ್ಕೆ ಬರಲಿಲ್ಲ.

(ಮುಂದರಿಸಲಾಗುವುದು.)


MR. J. GIBSON JARVIS,

*Chairman of the United Dominions Trust Ltd., in a message to the Advertising Association, London says:—*

*"I spend money in advertising, which simply means selling because it pays me to do so. And when business slackens, off I spend more than usual in advertising because it pays to do so.*

*Modern methods of production, finance, transport, selling and advertising linked together in effective and efficient combination carry us always forward to better and ever better material standards of living. The team is not complete when anyone of them is missing."*



ಉಚಿತ! ಉಚಿತ!!

**ಕಾಂಗ್ರೆಸ್ ಸುವರ್ಣಮಹೋತ್ಸವ ಸಂಚಿಕೆ.**

'ವಿಶ್ವಕರ್ಣಾಟಕ' ದಿನಪತ್ರಿಕೆ ಅಥವಾ ವಾರಪತ್ರಿಕೆಗೆ ಈ ತಿಂಗಳಲ್ಲಿ ಚಂದಾದಾರರಾಗುವವರಿಗೆ ಈ ಸಂಚಿಕೆಯು ಉಚಿತವಾಗಿ ಕಳುಹಿಸಲಾಗುವುದು. ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ!

**'ವಿಶ್ವಕರ್ಣಾಟಕ', ಬೆಂಗಳೂರು ನಗರ.**

2, 14-1.


## ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P./1935.

ಶ್ರೀಮತಿ — **ಅರ್ಜಿದಾರಳು.**

ಜಿನ್ನಪ್ಪ ಆರಿಗ ಕೂಡಾ — **ಎದ್ರಿರು.**

ಪುತ್ತೂರು ತಾಲೂಕು ಪುತ್ತಿಲ ಗ್ರಾಮದ ಅಗರಿ ಅಪ್ಪು ಹೆಗ್ಡೆರ ಮಗ ಬಿ. ಜಿನರಾಜ ಆರಿಗನು ಹಾಲಿ ಮೃತಪಟ್ಟಿರುವುದರಿಂದ ಅವನಿಗೆ The South India Co-Operative Insurance Society, Ltd., Policy No. 407ರ ಪ್ರಕಾರ ಬಹಾ ರೂಪ್ಯಾ 500—0—0ನ್ನು ಹೊಂದುವರೆ ಆತನ ತಾಯಿ ಅರ್ಜಿದಾರಳು ಶ್ರೀಮತಿಯು ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಮೇಲಿನ ಅರ್ಜಿ ದಾಖಲು ಮಾಡಿರುವುದರಿಂದ ಆಕ್ಷೇಪಣೆ ಉಳ್ಳವರು ಸದ್ರಿ ಅರ್ಜಿಯನ್ನು ತನ್ನಿಗಿಟ್ಟಿರುವ ತಾ. 23—1—1936ರ ಒಳಗೆ ಮೇಲ್ತೋರುವ ಕೋರ್ಟಿನಲ್ಲಿ ಆಕ್ಷೇಪಣೆಯನ್ನು ಹೇಳಿಕೊಳ್ಳುವುದು. ತಪ್ಪಿದಲ್ಲಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಪುತ್ತೂರು, ತಾ. 10—1—'36. } **H. P. A. Jain,** ಅರ್ಜಿದಾರಳ ಕಡೆ ವಕೀಲ್.

# ಕರ್ಣಾಟಕ.

ಎರಡನೇ ಇಂಡಿಯನ್ ರೋಡ್ ಕಾಂಗ್ರೆಸು ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಟೌನ್ ಹಾಲಿನಲ್ಲಿ ದಿವಾನರವರಿಂದ ಆರಂಭಿಸಲ್ಪಟ್ಟಿತು.

ಮೈಸೂರು ಪತ್ರಿಕಾಕರ್ತರ ಸಂಘದವರು ಒರಿಯಂಟಲ್ ಕಾನ್ಫರೆನ್ಸಿನ ಅಧಿಕಾರಿಗಳು ಕನ್ನಡ ಪತ್ರಿಕಾಪ್ರತಿನಿಧಿಗಳಿಗೆ ತಕ್ಕ ಸತ್ಕಾರವನ್ನೀಯದುದಕ್ಕಾಗಿ ನಿಷೇಧಿಸಿ ಠರಾವನ್ನು ಮುಂಜೂರು ಮಾಡಿರುವರು.

ತುಂಕೂರು ಜಿಲ್ಲಾ ಸ್ಕೌಟ್ ರ್ಯಾಲಿಯು ತಾ ೧೭ ಮತ್ತು ೧೮ರಲ್ಲು ಅಲ್ಲಿಯ ಶ್ರೀ ಕೃಷ್ಣರಾಜೇಂದ್ರ ಟೌನ್ ಹಾಲ್ ವಠಾರದಲ್ಲಿ ಜರಗುವದು. ಜಸ್ಟೀಸ್ ಕೆ. ಶಂಕರನಾರಾಯಣರಾಯರು ಇದನ್ನು ಆರಂಭಿಸುವರು. ಎನ್. ಎಸ್. ಸುಬ್ಬರಾಯರು ಅಧ್ಯಕ್ಷತನವನ್ನು ವಹಿಸುವರು.

ಬಳ್ಳಾರಿ ಸೆನಿಟರಿ ಇನ್ಸ್‌ಪೆಕ್ಟರರ ಮನೆಯಲ್ಲಿ ಪೆಟ್ರೊಮ್ಯಾಕ್ಸ್ ದೀಪದ ಸಮೊಪವಿದ್ದ ಸ್ಪಿರಿಟ್ ಬಾಟ್ಲಿಗೆ ಬೆಂಕಿ ತಗಲಿದುದರಿಂದಾಗಿ ಒಂದು ಮಗುವಿಗೆ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತಿದೆ.

ಬಳ್ಳಾರಿಯ ಉಡೆಗೊಳ್ಳರನಲ್ಲಿ ಕಳೆದ ಆಗೋಸ್ತು ತಿಂಗಳಲ್ಲಿ ನಡೆದ ಹಿಂದೂ-ಮುಸ್ಲಿಂ ಗಲಾಟೆಯು ಸಂಬಂಧವಾಗಿ ಸಾಂಬನ ಗೌಡ ಮತ್ತಿತರ ೧೩ ಮಂದಿಯ ವಿಚಾರಣೆಯು ಶಿರಗುಪ್ಪ ತಾಲೂಕು ಮ್ಯಾಜಿಸ್ಟ್ರೇಟರಲ್ಲಿ ಆರಂಭವಾಗಿದೆ.

ಬಳ್ಳಾರಿಯಲ್ಲಿ ಇನ್ನೂ ಖೂನಿಗಳು ನಡೆಯುತ್ತಿವೆ, ಪೋಲೀಸಿನವರು ಕೆಲವರನ್ನು ಕೈದುಮಾಡಿರುವರು.

ಘಾಟಿ ಸುಬ್ರಹ್ಮಣ್ಯದ 'ಕೆಟಲ್ ಶೊ' ಜಾತ್ರೆಯ ಉತ್ತಮ ರಾಸುಗಳಿಗೆ ಬಹುಮಾನವು ಮೈಸೂರು ಸರಕಾರದ ಚೀಫ್ ಸೆಕ್ರೆಟರಿಯವರಾದ ಮಿ. ಏ. ವಿ. ರಾಮನಾಥನ್‌ರವರಿಂದ ಹಂಚಲ್ಪಟ್ಟಿತು.

ಸೊಂಡೂರು ಸರಕಾರದವರ ರಹಿತರ ಸಾಲದ ವಾಯಿದೆಯನ್ನು ತಾ. ೧೫ರ ವರೆಗೆ ಮುಂದರಿಸಿರುವರು.

ಮೈಸೂರು ಸರಕಾರದ ಚೀಫ್ [illegible]ಕಲ್ ಇಂಜಿನಿಯರರಾದ ರಾಜಸೇವಾಸಕ್ತ [illegible]. ಕಾರ್ಯಪ್ಪನವರು ಇದೇ ತಾ. ೧೫ರಿಂದ ನಿವೃತ್ತರಾಗುವ ಮುಂಚಿತವಾಗಿ ಮೂರು ತಿಂಗಳ ರಜೆಯನ್ನು ಪಡೆಕೊಂಡಿರುವರು.

ಸೊಂಡೂರು ಚೀಫ್ ಕೋರ್ಟಿನ ಸನದನ್ನು ಪಡೆದ ಹೊರತು ಯಾವ ವಕೀಲರೂ ಅಲ್ಲಿಯ ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂ ಕೋರ್ಟುಗಳಲ್ಲಿ ವ್ಯವಹರಿಸಕೂಡದಾಗಿ ಅಲ್ಲಿಯ ಸರಕಾರದ ಇಸ್ತಿಹಾರು ಹೊರಟಿದೆ.

ಚಿಕ್ಕಮಗಳೂರಿನ ಕಾಫಿ ಪ್ಲಾಂಟರರಾದ ಮೈಸೂರು ಲಚ್ಚಯ್ಯ ಶೆಟ್ಟರು ದೈವಾಧೀನರಾದರು.

ಶಿವಮೊಗ್ಗಾ ರಿಪನ್ ಪೇಟೆಯಲ್ಲಿ ಹೊಸತೊಂದು ಸಂತೆಯು ಡಿಪ್ಯುಟಿ ಕಮಿಶನರವರಿಂದ ತೆರೆಯಲಾಗಿದೆ.

ಕೋಲಾರ ಚಿನ್ನದ ಗನಿಗಳ, ಲಂಡನಿನ ಜೋನ್ ಟೇಲರ್ ಎಂಡ್ ಸನ್ಸ್ ಕಂಪೆನಿಯ ಪ್ರತಿನಿಧಿಗಳಾದ ಮಿ. ಥೋಮಸ್ ಪ್ರಯರ್‌ರವರು ಗನಿಗಳನ್ನೆಲ್ಲಾ ಸಂದರ್ಶಿಸಿ ವಿಲಾಯತಿಗೆ ಹಿಂತಿರುಗಿದರು.

# ವಾರದ ಭವಿಷ್ಯ

(ನಮ್ಮ ಜೋಯಿಸರಿಂದ)

**ಅಕ್ಕಿ:**—ತಾರೀಕು 14ರ ನಂತರ ಈ ಮಾರ್ಕೆಟು ದೃಢವಾಗಿಯೂ, ಸ್ಥಿರವಾಗಿಯೂ ಇರುವುದು. **ಬೆಳ್ಳಿ:**—ತಾರೀಕು 15ರ ನಂತರ ಸ್ವಲ್ಪ ಮಟ್ಟಿಗೆ ತೇಜಿಯು ಹೊಂದಿ ತಾ. 20ರ ನಂತರ ಕುಸಿಯುವ ಸಂಭವ. **ಚಿನ್ನ:**—ಮಾರ್ಕೆಟು ಸ್ಥಿರವಾಗಿದ್ದರೂ, ನಿರಾಶಾಜನಕವಾಗಿರುವುದು. **ಕಾಫಿ:**—ತಾ. 16ರ ನಂತರ ತೀವ್ರವಾದ ತೇಜಿಯು ತೋರಿಬರುವುದು. **ಏಲಕ್ಕಿ:**—ಸ್ಥಿರವಾದ ಮತ್ತು ಬಲವತ್ತಾದ ಮಾರ್ಕೆಟು. ಆದರೆ ಬೆಲೆಯು ಕೊಂಚ ಮಾತ್ರ ಏರುವುದು. **ತೆಂಗಿನೆಣ್ಣೆ:**—ಈ ವಾರದಲ್ಲಿ ಬೆಲೆಯು ವೃದ್ಧಿಯಾಗುವ ಸಂಭವ. **ಗೇರುಬೀಜ:**—ತಾ. 15ರ ನಂತರ ಸ್ವಲ್ಪಮಟ್ಟಿಗೆ ಕುಸಿದು ದುಬಾರಲತೆಯೂ ನಿರಾಶೆಯೂ ಹುಟ್ಟುವುದು. **ಹತ್ತಿ:**—ತಾ. 14ರ ನಂತರ ತೇಜಿಯು ಖಂಡಿತ ತೋರುತ್ತದೆ. **ಸಾಮಾನ್ಯ ವಿಚಾರ:**—ನಮ್ಮ ಜಿಲ್ಲೆಯ ಆರೋಗ್ಯವು ಸ್ವಲ್ಪ ಮಟ್ಟಿಗೆ ಹಾಳಾಗುವ ಸಂಭವವಿದ್ದರೂ ಹತೋಟಿಯಲ್ಲಿರುವುದು. ಈ ವಾರದಲ್ಲಿ ಯುವಕರಲ್ಲಿ ಅನಿರೀಕ್ಷಿತ ಮರಣಗಳೂ, ಹೆಂಗಸರಲ್ಲಿ ಹೆಚ್ಚಿನ ಅನಾರೋಗ್ಯತೆಯೂ, ಉಚ್ಚ ವರ್ಗದಲ್ಲಿ ಕೀರ್ತಿರಹಿತವಾದ ಕೆಟ್ಟ ಪರಿಣಾಮಯುಕ್ತವಾದ ಜಗಳಗಳಾಟವೂ ಕಾಣುತ್ತದೆ. ಆರ್ಥಿಕ ದೃಷ್ಟಿಯಿಂದ ನಮ್ಮ ಊರಿಗೆ ಈ ವಾರದಲ್ಲಿ ಸ್ವಲ್ಪ ನಷ್ಟ ತೋರುತ್ತದೆ. ನಮ್ಮ ಊರಿನ ಕೈಗಾರಿಕೆಗಳು ತಮ್ಮೊಳಗಿನ ಭುಜಸ್ಪರ್ಧೆಗಳಿಂದ ಕಂಪಿಸುವವು.

## ಕನ್ನಡ ವಾಚನಾಲಯ, ಬೊಂಬಾಯಿ.

ಕರ್ಣಾಟಕ ನೂತನ ಸಂಗೀತ ಸಭೆಯ ಆಶ್ರಯದಿಂದ ಈ ವಾಚನಾಲಯದ ಉದ್ಘಾಟನ ಸಮಾರಂಭೋತ್ಸವವು ತಾ. ೫—೧—'೩೬ನೆ ರವಿವಾರ ಪೂರ್ವಾಹ್ನ ಘಂಟೆ ೯-೩೦ಕ್ಕೆ ಶ್ರೀಮಾನ್ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಸನ್ಮಾನ್ಯ ಅಧ್ಯಕ್ಷರು ವಾಚನಾಲಯವನ್ನು ಕೈಮುಟ್ಟಿ ತೆರೆದು ಆದಕ್ಕೆ "ಮುದ್ದಣ್ಣ ವಾಚನಾಲಯ" ಎಂಬ ನಾಮವನ್ನಿತ್ತರು. ಮುಂಬಾಯಿಯಲ್ಲಿ ಕನ್ನಡ ವಾಚನಾಲಯದ ಅವಶ್ಯಕತೆಯ ಕುರಿತು ಭಾವಗರ್ಭಿತವಾದ ಭಾಷಣವನಿತ್ತು ಈ ವಾಚನಾಲಯವು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹರಸಿದರು. ಕಡೆಗೆ ಸಭೆಯ ಶಿಲ್ಪಕರಾದ ಶ್ರೀಯುತ ಭಾಸ್ಕರ್ ಕೋಟಿಯವರು ಪುಷ್ಪಮಾಲೆಗಳಿಂದ ಅಧ್ಯಕ್ಷರನ್ನು ಅಭಿನಂದಿಸಿದರು.

**ಕಾರ್ಯದರ್ಶಿ,**

ಕರ್ಣಾಟಕ ನೂತನ ಸಂಗೀತ ಸಭಾ, ಮುಂಬಾಯಿ

# "ಸಿಂದೆ ಗಡವನ ರುಂಜು"

ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಆರಿಸುವ ಕಾಲ. ಮುಮ್ಮನುಷ್ಯರು ಕೈಯಲ್ಲಿ ತಮ್ಮ ಹೆಸರಿನ ಟಿಕೇಟುಗಳನ್ನು ಹಿಡಿದು ಓಟರುಗಳಿಗೆ ಹಂಚುತ್ತಲೂ, ಹಲ್ಲುಕಿರಿದು ಬೇಡುತ್ತಲೂ ಇದ್ದರು. ಅವರ ಕಡೆ ಏಜಂಟರುಗಳು ಓಟರುಗಳಿಗೆ ಬೆನ್ನು ತಟ್ಟಿ 'ನಮ್ಮವರಿಗೆ ಕೊಡಿ'ರೆಂದೂ 'ಇಂಥ ಗೌಡರಿಗೆ ಕೊಡಿ'ರೆಂದೂ 'ನಮ್ಮ ಜಾತಿಯ ಅಭಿಮಾನ'ವಿರಲೆಂದೂ ಹುಷಾರು ಕೊಡುತ್ತಿದ್ದರು. ಪಾಪ! ಏನೂ ಅರಿಯದ ಗೌಡರುಗಳು ಒಕ್ಕಲು ಮಕ್ಕಳು—ಇಲ್ಲ ಸೋವಿಾ. ನಮ್ಮ ಗರುಡಪ್ಪನವರಿಗೆ ಮಾತು ಕೊಟ್ಟಿದ್ದೀವಿ. ಅವರು ಈಳ್ಕ ಕೊಟ್ಟವರೆ. ಅವರಿಗೆ ತಪ್ಪಿಸಾಕಾದೀತ? ಮುಂದಿನ ವರುಷ ನಮ್ಮವರಿಗೆ ಕೊಡ್ತೀವಿ—ಎಂತ ಹೇಳುತ್ತಿದ್ದರು.

ಒಬ್ಬಿಬ್ಬರು ಅಣ್ಣಾ ಹುಸೆನ್‌ತು ಮುಂದೆ ಬಂದು—ಏನ್ರಿ, ನಮ್ಮವರು ಹಿಂದೆ ನಂಬರಾಗಿದ್ದರಲ್ಲ. ಏನೇನ ಮಾಡವ್ರಿ ಹೇಳಿಯಪ್ಪ?-ಅಂದ ಕೂಡಲೆ ಏಜಂಟರು ನಗುತ್ತಾ-ಅಲ್ಲ, ಗೌಡರೇ ಕಾವೇರಿ ಕಾಲುವೆ ಮಾಡ್ಸೇಕೂ ಅಂತ ಹೊಡೆದಾಡಿದವರು ಯಾರಪ್ಪ? ಮೂರೀ ಕಣಿವೆ ಕೆರೆ ಕಟ್ಟಬೇಕೂ ಅಂತ ಮನಸ್ಸು ಮಾಡಿ ಓಟು ಮಾಡಿದವರ್ಯಾರಪ್ಪ? ಅದು ಹೋಗಲಿ. ನಮ್ಮ ದೇಶದ್ಯಾಗೆ ರೈಲು ಬರಬೇಕೂ ಅಂತ ರೈಲು ಬರಸ್ದವರು ಯಾರಪ್ಪ? ಆ ಮೇಗೆ ಮೈಸೂರು ದೊರೆಗ್ಳೋಳ ಅರಮನೆಗೆ ಪ್ಲಾನ್ ಹಾಕಿಕೊಟ್ಟು, ಹಾಂಗೆ ಕಟ್ಟಬೇಕು; ಹೀಂಗೆ ಕಟ್ಟಬೇಕು ಅಂತ ಹೇಳ್ದೋರು ಯಾರಪ್ಪ? ಕಂದಾಯ ಕೌಳಿಗೆ ಕಮ್ಮಿ ಹಾಕ್ಸಿ ಕೊಟ್ರೋರು ಯಾರೂ ಅಂತಪ್ಪ? ಊರೆಲ್ಲ ಡಿಸ್ಪೆನಸರಿ ಆಗಬೇಕು, ಹೈಸ್ಕೂಲಾಗ್ಬೇಕು ಅಂತ ಓಡಾಡಿದವರ್ಯಾರಪ್ಪ? ಎಂದು ಜಂಭಕೊಚ್ಚಿ ವಿಾಸೆ ಹುರಿಮಾಡುತ್ತಿದ್ದರು.

ಆ ಊರ ಗೌಡ್ರು ಲೇವಾದೇವಿ ಮಾಡುತ್ತಿದ್ದರು. ಅವರು ಸಿದ್ದೇ ಗೌಡರಾದರೂ ಅನರಿಗೆ ಊರಲ್ಲಿ ಬಾಲ್ಯದಿಂದ ಅಡ್ಡದಲೆ ಸಿದ್ದೇ ಗೌಡರೆಂದು ಕರೆಯುವ ವಾಡಿಕೆ. ಅವರು ಹುಟ್ಟಿದ ಮನೆಯಲ್ಲಿ ಬಡತನವಿದ್ದರೂ, ಹೆಂಡತಿ ಮನೆಯ ಆಸ್ತಿ ಸೇರಿಹೋಗಿತ್ತು. ಇವರ ಮಾವನಿಗೆ ಒಬ್ಬನೇ ಮಗನಿದ್ದರೂ ಅವನು ಮೃತಪಡುವಾಗ ಮೈನರಾಗಿದ್ದದ್ದರಿಂದ ಲೇವಾದೇವಿ, ಆಸ್ತಿ ಮ್ಯಾನೇಜುಮೆಂಟು ಜೀತದಾಳುಗಳ ವಿಚಾರಣೆ, ಕಂದಾಯ ಕೌಳಿಗೆ ಕಟ್ಟುವುದು, ಊರಿಗೆ ಬಂದ ಸರ್ಕಾರಿ ಅಧಿಕಾರಿಗಳಿಗೆ ಸರಬರ್ಜಿ ಮಾಡುವುದು ಹೀಗೆ ಮುಂದಾಳಾಗಿದ್ದನು. ಮೈನರಾಗಿದ್ದಾಗಲೇ ಇವರ ಮಾವನ ಮಗನು ಸತ್ತುಹೋಗಿದ್ದರಿಂದ ಆಸ್ತಿ ಎಲ್ಲಾ ಇವರ ಹೆಂಡತಿಗೆ ಸಿಕ್ಕಿ ವ್ಯವಸ್ಥೆಯೆಲ್ಲಾ ಈ ಗೌಡರಿಗೆ ಬಂತು.

ಗೌಡರು ಲೇವಾದೇವಿ ಮಾಡಿದರೆ ಹೆಂಡತಿ ಬೀರಕ್ಕನು ಬಡ್ಡಿ ನಿಷ್ಕರ್ಷೆ ಮಾಡಬೇಕು. ಗೌಡರು ಬೆಳೆದು ತುಂಬಿದರೆ ಬೀರಕ್ಕನು ಮುದ್ದೆ ಎಣಿಸಿ ಆಳುಗಳಿಗೆ ಹಾಕಬೇಕು. ಗೌಡರು ಸರಬರೈಗೆ ಧಾರಾಳವಾಗಿ ಹೇಳಿದರೆ ಹಾಲಿಗೆ ನೀರು ಹಾಕಿ ಕೊಡಬೇಕಲ್ಲದೆ ನೀರುಮಜ್ಜಿಗೆ ಕಳುಹಿಸಬೇಕು. ಸಾಸಿವೆಗೆ ರಾಗಿ ಬೆರಸಿ ಕೊಡಬೇಕು. ಊರಿನ ಹೆಂಗಸರಿಗೆ 'ನನ್ನ ಸವತಿ' 'ನನ್ನ ಹಳೆಯನ ಮಗಳು', ಸಮಯ ಬಂದಾಗ ರಂಡೆ-ಮುಂಡೆ-ಮೂದೇವಿ ಎಂದು ಕರೆಯುವವೇ ವಾಡಿಕೆ. ಗೌಡ್ರ ಹೆಂಡತಿ; ಸಾಹುಕಾತಿಯಾದ್ದರಿಂದ ಯಾರೂ ಮಾತನಾಡುವಂತಿಲ್ಲ. ಅಂತೂ ಗೌಡನು ಗ್ರಾಮದಲ್ಲಿ ಹೆಗ್ಗಡೆಯಾಗಿ ಪಂಚಾಯತಿಗೆ ಮುಖ್ಯಸ್ಥನಾಗಿದ್ದರೆ ಬೀರಕ್ಕನು ಹೆಮ್ಮಕ್ಕಳ ಕೂಟದಲ್ಲಿ ಮೊದಲನೆಯವಳೇ.

ಓಟಿನ ಬೆಟ್ಟೆ ಬಂತಪ್ಪೆ! ಸಿದ್ದೇ ಗೌಡರ ಬಳಿ ಕಾರಡು ಬಂತು. ಅವರಿಗೆ ಓದು ಬಾರದು. ಬರಹ ಮಾತ್ರ ಸ್ವಲ್ಪ ಬರುತ್ತಿತ್ತು. ಬೀರಕ್ಕನು ಬಂದು 'ಏನೂ-ಯಾರ್ಯಾರೋ—ಮನ್ಯಾಗೆ ಬಂದು ಗೌಡ್ರಿಗೆ ಹೇಳಿ. ನಮ್ಮ ಅಯ್ನೋರಿಗೆ ಏಟು ಕೊಡಬೇಕೂ ಅಂತ ಹೇಳಿ' ಎಂದು ನನ್ನ ಕೈ ತುಂಬಾ ಕಾಜಗ ಕೊಟ್ಟು ಹೋದರು. ಇನ್ಯಾರೋ ಬಂದು ರಾಯರಿಗೆ ಏಟು ಕೊಡಬೇಕೂ; ಅಡ್ವೇಕಟ್ಯೋರಿಗೆ ಏಟು ಕೊಡಬೇಕೂ ಅಂತ ಹೇಳಿ ಕಾಜಗ ಕೊಟ್ರು. ಅವೆಲ್ಲಾ ಒಲೆ ಹತ್ತಿಸೋಕೆ ಹಾಕ್ಬಟ್ಟಿ ಮಾರಾಯರೇ. ಅದೇಕೆ ಅವರಿಗೆಲ್ಲಾ ಏಟು ಕೊಡೋದು?-ಎಂದಾಗ ಗೌಡ್ರು-ಏಟಲ್ಲ ಕಾಣೆ ಓಟು ಅಂತ ತಿದ್ದಿದರು. ನಂಬರಾಗೋಕೆ, ದೊರೆಗಳ ಮನೇಗೆ ಹೋಗೋಕೆ ಅದೆಲ್ಲಾ ರೂಲೀಸು ಅಂದರು.

ಅಷ್ಟು ಹೊತ್ತಿಗೆ ಆ ಊರ ಶ್ಯಾನುಭೋಗರ ಮಕ್ಕಳು, ಆಗ ತಾನೇ ಬಿ. ಯೆ. ಬಿ. ಯಲ್. ಪ್ಯಾಸು ಮಾಡಿಕೊಂಡು ಬಂದ ರಮಣರಾಯರು, ಗೌಡ್ರ ಬಳಿ ಬಂದರು. 'ಬಣ್ಣಿ ಬುದ್ಧಿ ಬಣ್ಣಿ'.

ರಮಣ:—ಏನು ಸಿದ್ದೆ ಗೌಡ? ಆರೋಗ್ಯವೇನಯ್ಯ?

ಗೌಡ:—ಬಣ್ಣಿ ಬುದ್ಧಿ ಬಣ್ಣಿ. ಆರೋಗ್ಯನಲ್ಲದೆ ನನ ಗ್ಯಾಕೆ

ರಮಣ:—ಏನು? ಗೌಡತಿ ಹೇಗಿದ್ದಾಳಪ್ಪ?

ಗೌಡ:—ಚೆಂದಾಗವಳೆ ಬುದ್ಧಿ—ಎಮ್ಮೆ ತಪ್ಪಿಸಿಕೊಂಡು ಹೋಗದೆ. ಹೋಗವೈ ಹುಡುಕ್ಕೊಂಡು.

ರಮಣ:—ಕರಾವು ಹೆಚ್ಚೊ?

ಗೌಡ:—ಏಕರಾವು ಅಂದರೇನಾ ಬುದ್ಧಿ? ಎಲ್ಲೋ ಮನೆ ಬಳಿಕೆಗೆ ಒಂದಿಷ್ಟು ಆಯ್ತದೆ. ಅದಿರಲಿ ಬುದ್ಧಿ. ನೀವ್ಯಾನ ಆಡ್ದೊಕೇಟರಂತಲ್ಲ?

ರಮಣ:—ಹೌದಪ್ಪ.

ಗೌಡ:—ಇನ್ನೇನು ಬುಡಿ ಶ್ಯಾನುಭೋಗರಿಗೆ. ತಿಂಗಳು ಬಂತೂ ಅಂದರೆ ಸಾವಿರ ರೂಪಾಯಿ ಗಂಟು.

ರಮಣ:—ಆಗಲಯ್ಯ. ನೀನು ಮುಖಂಡನಾಗಿ ಮೆಂಬರಾಗೋಕೆ ನಿಲ್ಲಲಿಲ್ಲವೇಕೆ?

ಗೌಡ:—ನಂಗೆ ಓದುಬರಹಾನೇ ಇಲ್ಲ. ಸಭೇಲಿ ಮಾತಾಡು ಅಂದ್ರೆ ಭಯ. ನೆಂಬರಾಗೋಕೆ ಎಷ್ಟೋ ಕರ್ಚು! ನಂಗೆ ಬೇಡಪ್ಪ ಆ ಸುದ್ದಿ.

ರಮಣರಾಯರು, ಮೆಂಬರಾದರೆ ಗೌರವವುಂಟೆಂದೂ, ರಾಜಾಸ್ಥಾನ ಪ್ರವೇಶವೂ ಉಂಟೆಂದೂ ಪ್ರೋತ್ಸಾಹಿಸಿ ನಿಲ್ಲಿಸಿದರು. ಓಟುಗಳ ಬೇಟೆ—ಕಾಪಿ ತಿಂಡಿಗಳ ಸಂಭ್ರಮ—ಮೋಟಾರುಗಳ ಓಡಾಟ, ಹಲ್ಲು ಕಿರಿದಾಟ ಇವುಗಳಿಂದ ಗೌಡರಿಗೆ ಚುನಾವಣೆಯೂ ಬಂತು. ರಮಣ ರಾಯರ ಸಹಾಯಕ್ಕೆ ಗೌಡ-ಗೌಡತಿಯರಿಂದ ಎಮ್ಮೆ ಮೊಸರೂ ಸಿಕ್ಕಿತು.

ಹೊಸದಾಗಿ ಮೆಂಬರಾದ ಗೌಡರು ಹೊಸ ಬಟ್ಟೆ ಹೊಲಿಸಿ ಮೈಸೂರಿಗೆ ಹೊರಡಬೇಕಾದ ಕಾಲವನ್ನು ಕಾದಿದ್ದರು. ಸಭೆಯಲ್ಲಿ ಮಾತಾಡಿದರೆ ಸಾಕೆಂಬ ಸಮಯವನ್ನೂ ನಿರೀಕ್ಷಿಸುತ್ತಿದ್ದರು ಮೈಸೂರಿನ ನೋಟ, ಖಾಸಾ ಬಂಗಲೆ, ಅರಮನೆ, ವೃಗಾಲಯಗಳಿಗೆಲ್ಲಾ ಹೋಗಬೇಕೆಂಬ ಆಶೆಯಿಂದ ಇದ್ದರು. ಗೌಡತಿಯನ್ನು ಮುಂದಿನ ವರುಷ ಕರೆದುಕೊಂಡು ಹೋಗಬೇಕೆಂದು ಹೇಳಿ ಆಶೆ ಹುಟ್ಟಿಸಿದ್ದರು. ಅಷ್ಟರಲ್ಲಿಯೇ ದಿವಾನರಿಂದ ಅಸ್ಸೆಂಬ್ಲಿಗೆ ಸಬಜೆಕ್ಟುಗಳನ್ನು ಕಳುಹಿಸಬೇಕೆಂದೂ ಎರಡು ದಿನಗಳಲ್ಲಿ ಬರಬೇಕೆಂದೂ ಲಕೋಟೆಯೊಂದು ಬಂದಿತು. ರಮಣ ರಾಯರು ಇರಲಿಲ್ಲ. ವಾಯಿದೆಯಲ್ಲಿ ಹೋಗಬೇಕು. ಆ ಊರ ಉಪಾಧ್ಯಾಯರನ್ನು ಕರೆಸಿ, ಈ ಕಾಗದವನ್ನು ತೋರಿಸಿ ಸಬ್ಜೆಕ್ಟುಗಳನ್ನು ಬರೆಸಿದರು.

1. ನಮ್ಮೂರಿನ ತಿಮ್ಮಯ್ಯನ ಬೇಲಿ ಓಣಿಗೆ ಒತ್ತರಿಸಿ ಬಂದಿದೆ. ಕಡಿಸಿಕೊಡಬೇಕು.

2. ಶ್ಯಾನುಭೋಗರು ಮಸೀಕಾಣಿಕೆ ವಸೂಲು ಮಾಡುವುದನ್ನು ನಿಲ್ಲಿಸಿಕೊಡಬೇಕು.

3. ಕೆರೆಯಲ್ಲಿ ಜೊಂಡು ಬೆಳೆಯುತ್ತಿರುವುದನ್ನು ನಿಲ್ಲಿಸಿ ಕೊಡಬೇಕು.

4. ಮೈಸೂರಂಥ ನಲ್ಲಿ ಹಾಕಿಸಿಕೊಡಬೇಕು.

5. ಬೀರಕ್ಕ ಮೈಸೂರಿಗೆ ಬಂದರೆ ರೈಲು ಟಿಕೇಟು ಮಾಪು ಮಾಡಿಸಬೇಕು.

ಎಂದು ಬರೆಸಿ ಕೆಳಗೆ 'ಸಿಂದೆಗಡವನರುಂಜು' ಎಂದು ಸಹಿ ಹಾಕಿದರು. ಉಪಾಧ್ಯರು 'ಸಿದ್ದೆ ಗೌಡನ ರುಜು' ಎಂದು ಮಗ್ಗಲಲ್ಲಿ ಬರೆದು ಟಪ್ಪಾಲಿಗೆ ಹಾಕಿದರು.

'ರಾಜಧಾನಿ' 2, 14-1.



## "ಪರ್ಯಾಯದ ಮೂರ್ತಿ"

(ಶ್ರೀ. ಮುಳಿಯ ತಿಮ್ಮಪ್ಪಯ್ಯ, ವಿದ್ವಾನ್.)

॥ ಉ. ಮಾ. ॥

ದೇವರೆನಿತ್ತು ಮುಂದಿ ಯಿಹರೋ ಸಲೆ ದೊಡ್ಡಿದರಾಗುತೇಂ ಫಲಂ।
ಜೀವನರಂಗಕೊಡ್ಡುತೆರ್ದಿಯಳ್ಕೆ ನರಂಗೆ ಸುಮಾರ್ಗ ಬೋಧೆಯಿಂ ।
ತೀವಿದ ಗೀತೆಯಂ ತಿಳುಪಿ ಕಜ್ಜಕೊಡರ್ಚಿದನಾವನಾತನೇ ।
ದೇವರ ದೇವನೆಂಬೆನುಳಿದಾವನೆದೇವರ ದೇಕೆ ದೇವರೋ ॥ ೧ ॥

ಗೀತೆಯನೋದಿ ನೀಂ ನರನನೊರ್ವನನುದ್ಧೃತಿ ಗೆಯ್ದೆ ಯೆಂದು ಕೋ ।
ಪಾತುರರಾಗುತಂ ಮಗುಳೆ ಪುಟ್ಟಿ ತದುದ್ಧತ ವಂಶವೀ ನರ ।
ವ್ರಾತವ ನಳ್ಕಿಕುಂ ಸಲಹು ಕೃಷ್ಣ ಭವನ್ಮಹಿಮಾತಿರೇಕದಾ ।
ಜ್ಯೋತಿಯದುಣ್ಮೆ ಬಿತ್ತರಿಸು ಕಣ್ಣುರುಡರ್ಗರಿವಂತು ಟಾಲಿಯಂ ॥ ೨ ।

ವಿೂಸಲೆನಿಪ್ಪ ಕೌರವರೆನಿತ್ತೊ ಮದಾಂಧತೆಯಿಂ ಪೊಡರ್ವ ದು
ಶ್ಶಾಸನವರ್ಗವಿನ್ನೆನಿತೊ ಸೈಂಧವರೆಂಬರೆನಿತ್ತು ಮುಂದಿಯೋ ।
ಆ ಶಕುನಿ ಕ್ರಮುಂಬಿಡಿದು ಸೊನ್ನೆಯೊಳೇ ಕವಿದುಂಬಿ ಲೋಕಮುಂ ।
ಕೈಸೆರೆಗೊಳ್ಳಲಾಶಿಪರೆನಿತ್ತೊ ಇದಲ್ತೆ ವಿಶಿಷ್ಟ ಭಾರತಂ ॥ ೩ ।

ಜ್ಞಾನದ ಬಿತ್ತು ಪುಸ್ತಕದೊಳಿಂದೊಣಗುತ್ತಿದೆ ಮುಸ್ತಕಾಗ್ರಮಂ ।
ತಾನೆಣೆಗೊಂಡು ಪಲ್ಲವಿಸಲೀಯದೆ ಹಬ್ಬಿದೆ ಪೆರ್ಮೆವೆತ್ತವಿ ।
ಜ್ಞಾನದ ಕಾನನಂ ಸುಳಿಯುತಿರ್ಪುದು ಹೆಬ್ಬುಲಿ ವಂದಿ ಸಿಂಗದೊ ।
ಡ್ಡಾನೆಯೆನುತ್ತದಂ ಕಡಿಯುತಂಜಿಕೆಯಂ ತಡೆದೊಲ್ದು ಪಾಲಿಸೈ ॥ ೪ ।

ಮಾಯೆಯ ನೂಂಕಿ ಕಂದೆರೆದು ನೋಳ್ಪುದು ಲೋಕಮನೇಳ್ಗೆ ಗೊಂಡ ಪ ।
ರ್ಯಾಯದ ಮೂರ್ತಿಯಾಂತು ನೆರೆ ಧರ್ಮಕೆ ಬಲ್ಮೆಯ ನೀವು ದೆಳ್ದು ಲೋ
ಕಾಯತವಾಗಿ ಮಾರ್ಮಲೆವಧರ್ಮವ ಖಂಡಿಪ ವಿೂಸಲಾದ ನಿ ।
ನ್ಯಾಯವನೆತ್ತಲುಂ ಬೆಳಗುತಾ ಶಶಿಸೂರ್ಯರ ಕಣ್ಣೊಳೀಕ್ಷಿಸೈ ॥ ೫


## WANTED

A private teacher. Apply with particulars stating the minimum pay required, to Mr Kanjarpane Gopalkrishnaya.

Sullia Post, S. Kanara

## ಕೊಮನ್‌ವೆಲ್ತ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ—ಪೂನಾ.

ತನ್ನ ಮೊದಲನೆಯ ತ್ರೈವಾರ್ಷಿಕ ಸಾಂಪತ್ತಿಕ ಪರಿಶೋಧನೆಯಿಂದಲೇ ತ್ರೈವಾರ್ಷಿಕ ಬೋನಸ್ಸು (ಲಾಭಾಂಶ) ರೂ. 30 ಮತ್ತು ರೂ. 36 ಕೊಟ್ಟು ಪ್ರಥಮ ಸ್ಥಾನವನ್ನು ಹೊಂದಿದ ದೇಶೀಯ ಕಂಪೆನಿ.

ದಕ್ಷಿಣ ಕನ್ನಡಾ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಏಜಂಟರಾಗಲು ಬಯಸುವ ಸದ್ಗೃಹಸ್ಥರೂ ಮಹಿಳೆಯರೂ ಬೇಕಾಗಿದ್ದಾರೆ.

ವಿಶೇಷ ಔದಾರ್ಯದ ಕವಿಶನ್ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಎಮ್. ಯೆಸ್. ರಂಗನಾಥ ರಾವ್,
ನಂ. 2, ಕೊಯಿಲೋ ರಸ್ತೆ,
ಕೊಡಿಯಾಲಬೈಲು, ಮಂಗಳೂರು.

4, 14-1.

# ಪತ್ರವ್ಯವಹಾರ

**ಸೂಚನೆ:**—[ಬಾತಮಿದಾರರ ಅಭಿಪ್ರಾಯಗಳು ಕಂಠೀರವದ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ವಿಳಾಸ ಕೊಡಬೇಕಾಗಿದೆ—ಸಂ]

## ಡಿ. ಬೋ. ಎಕ್ಸ್ಸು-ಒಫೀಶಿಯೋ ಪ್ರೆಸಿಡೆಂಟರ ಅವಗಾಹನೆಯ ಬಗ್ಗೆ.

ಡಿ॥ ಬೋರ್ಡ್ ಅಡಳಿತವು ಶ್ರೀ. ಸೆಟ್ಟರ ಕಾಲದಲ್ಲಿ ಬಹಳ ಚನ್ನಾಗಿ ನಡೆದಿದೆ ಎಂತ ಹಲವು ಮಂದಿ ಅವರ ಸ್ನೇಹಿತರೂ ಅವರ ಪತ್ರಿಕೆಯೂ ಹೊಗಳುತ್ತಾ ಇವೆಯಷ್ಟೆ. ಈಗ ಈ ಕೆಲವು ವಿಷಯಗಳಲ್ಲಿ ನಮ್ಮ ಈಗಿನ ಪ್ರೆಸಿಡೆಂಟ್ ಕ್ಷಲೆಕ್ಟರರು ಅಗತ್ಯವಾಗಿ ವಿಚಾರ ನಡೆಸಬೇಕಾಗಿ ನನ್ನ ವಿನಯಪೂರ್ವಕವಾದ ಸೂಚನೆ.

ಮೊದಲಾಗಿ ನಾನು ನಮ್ಮ ಜಿಲ್ಲೆಯ ಕಂಟ್ರಾಕ್ಟರುಗಳ ವಿಷಯವನ್ನು ಪ್ರಸ್ತಾವಿಸುತ್ತೇನೆ. ಬಹಳ ಕಾಲದಿಂದ ಡಿ॥ ಬೋರ್ಡ್ ಕಂಟ್ರಾಕ್ಟ್ ಕೆಲಸ ವಹಿಸಿಕೊಂಡು, ಪ್ರಮಾಣಿಕತೆಯಿಂದ ಒಳ್ಳೇ ಕೆಲಸ ಮಾಡಿ, ಒಳ್ಳೇ ಹೆಸರನ್ನು ಸಂಪಾದಿಸಿದ್ದ ಹಲವು ಮಂದಿ ಹಳೆಯ ಕಂಟ್ರಾಕ್ಟರುಗಳು, ಈ ಕಳೆದ ೩ ಮೂರು ವರ್ಷಗಳಲ್ಲಿ, ದೂರಕ್ಕೆ ಎಸೆಯಲ್ಪಟ್ಟು ಅವರ ಬದಲಿಗೆ ಹೊಸ ಕಂಟ್ರಾಕ್ಟರುಗಳನ್ನು ಬೋರ್ಡಿನ ಕೆಲಸಕ್ಕೆ ಅರಿಸಿಕೊಂಡದ್ದಾಯಿತು. ಆದರೆ ಇವರು ಯಾರು? ದೊಡ್ಡ ದೊಡ್ಡ ಶ್ರೀಮಂತ ವರ್ಗದಾರರು; ಪಟೇಲರು; ಇವರಿಗೆ ಕಂಟ್ರಾಕ್ಟಿನ ಕೆಲಸದ ಮಾಹಿತಿ ಇಲ್ಲ. ಇವರಿಗಿರುವ ದೊಡ್ಡ ಯೋಗ್ಯತೆ ಎಂದರೆ, ಚುನಾವಣೆ ಸಮಯದಲ್ಲಿ 'ಓಟು'ಗಳನ್ನು ಸಂಗ್ರಹಿಸಿ ಕೊಡುವಂಥಾದ್ದೇ. ಆ ವೋಟಿನ ಕಂಟ್ರಾಕ್ಟಿನ ವಾಗ್ದಾನದ ಮೇಲೆಯೇ ಇವರಿಗೆ ಬೋರ್ಡಿನ ಕಂಟ್ರಾಕ್ಟ್ ಕೆಲಸ ಸಿಕ್ಕಿದ್ದೆಂಬ ಪುಕಾರೂ ಊರಲ್ಲಿ ತುಂಬಾ ಉಂಟು. ಇವರೇ ಕಳೆದ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷದ ಉಮೇದುವಾರರೆಂಬವರಿಗೆ ವಿಶೇಷ ಸಹಾಯ ಮಾಡಿರುವರು. ಇದನ್ನು ದಯವಿಟ್ಟು ಪ್ರೆಸಿಡೆಂಟ್ ಕಲೆಕ್ಟರರು ವಿಚಾರಿಸಬೇಕು. ೫—೬ ವರ್ಷಗಳ ಕಂಟ್ರಾಕ್ಟಿನ ಚರಿತ್ರೆಯನ್ನು ಸರಿಹೋಲಿಸಿದಲ್ಲಿ ಎಲ್ಲವೂ ವೇದ್ಯವಾಗುವುದು.

ಡಿ॥ ಬೋರ್ಡ್ ಮೆಂಬರುಗಳ ಆಳಿಯಂದಿರೋ, ಮೊಮ್ಮಕ್ಕಳೋ, ಅಣ್ಣತಮ್ಮಂದಿರೋ, ಅಂತೂ ಸಂಬಂಧಿಕರಾಗಿ ಎಷ್ಟು ಮಂದಿ ಕಂಟ್ರಾಕ್ಟರರು ಇದ್ದಾರೆ? ಇದನ್ನು ಪ್ರೆಸಿಡೆಂಟ್ ಕಲೆಕ್ಟರರು ದಯವಿಟ್ಟು ವಿಚಾರಿಸಬೇಕು. ಏಕೆಂದರೆ, ಈ ಕುರಿತು ಜಿಲ್ಲೆಯ ಹಲವು ಕಡೆಗಳಲ್ಲಿ ಮಾತಿಗೆ, ಅಪಹಾಸ್ಯಕ್ಕೆ ಕೂಡ ಅವಕಾಶವಾಗಿದೆ.

ಈ ಕಂಟ್ರಾಕ್ಟ್ ಕೆಲಸವೆಂಬುದು ಬಡವರಿಂದ, ಹೆಚ್ಚಾಗಿ ಮಧ್ಯಮ ವರ್ಗದ ಜನರಿಂದ ವಹಿಸಿಕೊಳ್ಳಲ್ಪಡುತಿತ್ತು. ಈಗ ಶ್ರೀಮಂತ ವರ್ಗದಾರರು, ಪಟೇಲರು—ಮುಖ್ಯವಾಗಿ ಹೆಚ್ಚು ಓಟುಗಳ ಸ್ವಾಧೀನವಿರುವವರು—ಕಂಟ್ರಾಕ್ಟ್ ಕೆಲಸದ ಅನುಭವವಿರುವವರಲ್ಲ—ಇವರಿಗೆ ಡಿ॥ ಬೋರ್ಡ್ ಕಂಟ್ರಾಕ್ಟು ಕೊಡಲ್ಪಡುತ್ತಿರುವದರಿಂದ ನ್ಯಾಯವಾದ ಬಡ ಕಂಟ್ರಾಕ್ಟದಾರರಿಗೆ ಕೆಲಸ ಸಿಕ್ಕದೆ ಅನ್ಯಾಯವಾಗಿದೆ. ಇದನ್ನು ಕಲೆಕ್ಟರರವರು ದಯವಿಟ್ಟು ವಿಚಾರಿಸಲಿ!

ಅತ್ಯಂತ ಕಡಿಮೆ ಮೊಬಲಗಿನ ಟೆಂಡರುಗಳನ್ನೇ ಸ್ವೀಕರಿಸಬೇಕೆಂಬ ರೂಲು ಬಂದಿರುವದಾಗಿಯೂ, ಆ ಕಾರಣದಿಂದಲೂ, ಪ್ರೆಸಿಡೆಂಟರು ಕಲೆಕ್ಟರರಾಗಿದ್ದು, ಅವರೊಡನೆ ಈ ಕುರಿತು ಮಾತಾಡಲು ಧೈರ್ಯವಿಲ್ಲದಿರುವದರಿಂದಲೂ, ಕೈಗೆ ಸಿಕ್ಕ ಬೋರ್ಡ್ ಕಂಟ್ರಾಕ್ಟನ್ನು ಹ್ಯಾಗಾದರೂ ಮಾಡಿ ಉಳಿಸಿಕೊಳ್ಳಲೇ ಬೇಕೆಂಬುದರಿಂದಲೂ ಈ ವರ್ಷ, ಪ್ರತ್ಯೇಕವಾಗಿ, ನ್ಯಾಯವಾದ ಎಸ್ಟಿಮೇಟಿಗಿಂತಲೂ ಸುಮಾರು ಸೇಕಡಾ ೩೦, ೪೦ರಷ್ಟು ಕಡಿಮೆ ಮಾಡಿ ಟೆಂಡರುಗಳನ್ನು ಹಲವರು ಕಳುಹಿಸಿ ಕೊಟ್ಟಿರುವದಾಗಿ ಸುದ್ದಿ. ಇದರಂತೆ ನೋಡಿದರೆ ಯಾವ ಕಂಟ್ರಾಕ್ಟರನೂ, ಇಷ್ಟು ಕಡಿಮೆ ದರದಲ್ಲಿ, ನ್ಯಾಯವಾದ ಕಂಟ್ರಾಕ್ಟ್ ಕೆಲಸ ಮಾಡಲಾರನು. ಮಾಡುವ ಕೆಲಸವೆಲ್ಲ ಮೇಲಿಂದ ಮೇಲಿಸದಾಗಿ ಅಸಮರ್ಪಕವಾಗುವದು. ಅದ್ದರಿಂದ ಜಿಲ್ಲೆಯ ಕಾಮಗಾರಿಗಳ ಹಿತ ದೃಷ್ಟಿಯಿಂದ, ಅಗತ್ಯವಿದ್ದಲ್ಲಿ, ಕಲೆಕ್ಟರರು 'ಕಡಿಮೆ ದರದ ಟೆಂಡರುಗಳನ್ನೇ ಸ್ವೀಕರಿಸುವ ಕುರಿತು' ಸರಕಾರಕ್ಕೆ ಬರೆದು, ಆ ರೂಲು ಜಾರಿಗೆ ಬಾರದಂತೆ, ಅವರಿಂದ ವಿನಾಯಿತಿ ಪಡೆಯುವುದು ಒಳ್ಳೆಯದು. ಇಲ್ಲದಿದ್ದರೆ, ರಸ್ತೆಗಳ, ಸೇತುವೆಗಳ ಕೆಲಸವೆಲ್ಲ ಹಾಳಾಗುವುದು. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯಾಗುವುದು. ಕಂಟ್ರಾಕ್ಟರರು ಕೈಯಿಂದ ಹಾಕುವುದಿಲ್ಲ. ಇಂಥಾ ಕಡಿಮೆ ಟೆಂಡರುಗಳಿಂದ ಕೆಲಸ ಒಳ್ಳೆಯದಾಗುವುದಿಲ್ಲ. ಪ್ರೆಸಿಡೆಂಟ್—ಕಲೆಕ್ಟರರು ಈ ಕಡೆ ಗಮನವಿರಿಸಲಿ!

ನಿಡ್ಡೋಡಿ ಕಡೆಯ ಪಟೇಲರೊಬ್ಬರು ಮೂಲ್ಕಿ—ಮೂಡಬಿದರೆ ರಸ್ತೆಯ ಕಂಟ್ರಾಕ್ಟ್ ವಹಿಸಿಕೊಳ್ಳದಂತೆ ಇತರರ ಮೇಲೆ ಯುಕ್ತಿ ಹೂಡಿರುವರೆಂದೂ, ಅದ್ದರಿಂದ ಇತರರ ಟೆಂಡರು ಬಾರದೆ ಇವರದೊಬ್ಬರದೇ ಟೆಂಡರ್ ಹೋಗಿದೆ ಎಂದೂ ಸುದ್ದಿ. ಇದರ ವಿಚಾರವಾಗಬೇಕು.

ಕಲ್ಲಮುಂಡ್ಕೂರು ಹಾ॥ ಎ॥ ಶಾಲೆಯ ಕಟ್ಟೋಣ ಯಾರದು? ಅದಕ್ಕೆ ಬಾಡಿಗೆ ಎಷ್ಟು? ಕಟೀಲ್ ಮೊದಲಾದ ಸಮೀಪ ಸ್ಥಳಗಳಲ್ಲಿ ಹಾ॥ ಎ॥ ಶಾಲೆಗಳಿರುತ್ತ ಈ ಶಾಲೆಯ ಅಗತ್ಯವಿದೆಯೇ? ಪಟೇಲರೂ ಕಂಟ್ರಾಕ್ಟರರೂ ಆದ ನಿಡ್ಡೋಡಿ ಶ್ರೀ. ನಾರಾಯಣ ಸೆಟ್ಟರಿಗೂ ಈ ಶಾಲೆಗೂ ಏನು ಸಂಬಂಧ? ಈ ಶಾಲೆಯ ಹುಡುಗರ ಸಂಖ್ಯೆ ಎಷ್ಟು? ವಿಚಾರವಾಗಬೇಕು.

ಇದೇ ನಮೂನೆ ಹಾ॥ ಎ॥ ಶಾಲೆಯೊಂದು ಹೆಬ್ರಿಯಲ್ಲಿದೆಯೇ? ಆ ಕಟ್ಟೋಣದ ಭಾಡಿಗೆ ತಿಂಗಳಿಗೆ ೧೫ ರೂಪಾಯಿಗಳೆಂದರೆ ಅಲ್ಲಿ ಹೆಚ್ಚಲ್ಲವೇ? ಈ ಕಟ್ಟೋಣ ಡಿ॥ ಬೋ॥ ಮೆಂಬರ್ ರಾ॥ ಭುಜಂಗ ಬಲ್ಲಾಳರದೇ? ಮೇಲಿನ ತರಗತಿಗಳಲ್ಲಿ ಸುಮಾರು ೧೫ ಮಂದಿ ವಿದ್ಯಾರ್ಥಿಗಳು, ೩ ಮಂದಿ ಉಪಾಧ್ಯಾಯರೆಂಬುದು ನಿಜವೇ? ಇಂತಹ ಹಾ॥ ಎ॥ ಶಾಲೆಯೂ ಅಗತ್ಯವೇ? ವಿಚಾರಿಸಲಾಗಬೇಕು.

ಈ ಶಾಲೆಯ ಹಿಂದಿನ ಉಪಾಧ್ಯಾಯರಾದ ಶ್ರೀ. ಸೀನಪ್ಪ ತೋಳಾರರನ್ನೆ ಮಳೆಗಾಲದಲ್ಲಿ, ಸಂಬಳ ಬಾಕಿ ಇರುತ್ತ, ಪ್ರಯಾಣದ ಖರ್ಚು ಕೊಡದೆ, ಎಷ್ಟು ಕಡೆಗೆ ವರ್ಗಮಾಡಿದ್ದಾಯಿತು? ಯಾವ ಕಾರಣದಿಂದ? ವಿಚಾರವಾಗಬೇಕು.

ವೃತ್ತಿ ತೆರಿಗೆ ಸುಮಾರು ರೂ. ೧೫ ಸಾವಿರದ ಸಂಬಂಧ, ಕಳೆದ ಸಪ್ಟೆಂಬರದಲ್ಲಿ ನೋಟೀಸುಗಳು ಹೊರಡಬೇಕಾಗಿದ್ದುದು ಹೊರಟಿಲ್ಲ ವೇಕೆ? ಚುನಾವಣೆಯ ಸಂಬಂಧ ಈ ನಿಷ್ಕೂರ ಬೇಡವೆಂದು ತ ಹಂಚಿಕೆಯೇ? ನೋಟೀಸು, ವೃತ್ತಿ ತೆರಿಗೆಗಳ ವಿಚಾರವಾಗಬೇಕು. ವೃತ್ತಿ ತೆರಿಗೆ ಬಾಕಿ ಎಷ್ಟು?

ಮೂರು ವರ್ಷಗಳಿಂದ ಟೆಂಡರುಗಳ ಡಿಪೋಜಿಟ್ ಪಾವತಿ ಆಗಿಲ್ಲವೇ? ಆಗಿಲ್ಲವಾದರೆ ಏಕೆ? ವಿಚಾರ ನಡೆಯಲಿ.

ಬೋರ್ಡ್ ಪ್ರೊಸಿಡಿಂಗ್ಸ್ ಬುಕ್ಕಿನಲ್ಲಿ ಬಹಳ ಸ್ಥಳ ಖಾಲಿ ಇಟ್ಟು, ಪ್ರೆಸಿಡೆಂಟರ ದಸ್ಕತಿರುವುದು ನಿಜವೇ? ಇದು ಯಾವ ಹೊಸ ಕ್ರಮ?

ಸ್ಕೂಲ್ ಮಾಸ್ಟರ್ ಪಿ. ಶ್ರೀ. ಸುಂದರ ಸೆಟ್ಟರಿಗೆ ಪ್ರೆಸಿಡೆಂಟ್ ಕಲೆಕ್ಟರರಿಂದ ಕೆಲಸ ಪುನಃ ದೊರಕಿದೆ. ಅವರಿಗೆ ಮಾಜಿ ಪ್ರೆಸಿಡೆಂಟರ ಅಪ್ಪಣೆ ಬಾಯ್ದೆರೆಯಂತೆ. ದಾಖಲೆಯಲ್ಲಿಲ್ಲ. ಇದು ಯಾವ ಮರ್ಜಿ? ಯಾವ ಹೊಸ ಕ್ರಮ?

ಈಗ ಬೋರ್ಡ್ ಮೆಂಬರರಲ್ಲದವರೊಬ್ಬರು, ಮೊನ್ನೆಯ ಗವರ್ನರರ ಸಂಬಂಧದ ಮೆಮೋರಿಯಲಿಗಾಗಿ ದಸ್ಕತ್ತು ಹಾಕಿಸಲು ಓಡಾಡುತ್ತಿದ್ದರು ಅವಸರದಿಂದ. ಅವರ ಸಂಬಂಧಿಕರ ಬೋರ್ಡ್ ಉದ್ಯೋಗಕ್ಕೆ ಸಂಚಕಾರ ಬಂದೀತೆಂಬ ಉರಿಯೇ ಈ ಉತ್ಸಾಹವೋ?

ಕಳೆದ ಸಲದ ಚುನಾವಣೆಯಲ್ಲಿ ಡಿ. ಸಿ. ಮಿಶನಿನ ಕಡೆಯಿಂದ ಡಿ॥ ಎಜ್ಯುಕೇಶನ್ ಕೌನ್ಸಿಲಿನ ಮೆಂಬರರೂ, ಮೆಟ್ರಿಕಿನ ವರೆಗೋದಿದವರೂ ಚುನಾಯಿಸಲ್ಪಡಲಿಲ್ಲ. ಚುನಾಯಿಸಲ್ಪಟ್ಟ ಒಬ್ಬ ಮೆಂಬರರೆಂದರೆ, ಕಾಸರಗೋಡು ವಕೀಲರೊಬ್ಬರಲ್ಲಿರುವ ಅವರ ಮನೆಯವನಷ್ಟಕರರು. ಚುನಾವಣೆಯ ಉದ್ದೇಶ ಹ್ಯಾಗೆ ಸಾರ್ಥಕವಾಗಿದೆ!

ನಮ್ಮ ಡಿ॥ ಎಜ್ಯುಕೇಶನ್ ಆಫೀಸರರು ಒಂದು ಡಿ॥ ಬೋ॥ ಶಾಲೆ (ಎಲಿಮೆಂಟರಿ)ಯನ್ನು ಸಂದರ್ಶಿಸಿದಾಗ, ಆ ಸಾಲೆಯ ಮಾಸ್ತರರು ಕುಂಭಕರ್ಣನ ಪುರಾಣ ಬಿಚ್ಚಿ ಓದುತ್ತಿದ್ದರೆಂಬದು ನಿಜವೋ? ಆ ಡಿ. ಈ. ಓ. ರವರು ಈ ಕುರಿತು ಬರೆದ 'ಪರಾ'ಗಳ ಓಲೆಯ ಮೂಲ ಪ್ರತಿ ಮತ್ತು ನೆನವರಿಕೆಯ 'ರಿ'ಮೈಂಡರುಗಳು 'ಕಾಣೆ' ಆಫೀಸಿನಲ್ಲಿ ದಾಖಲಾಗಲು ಡಿ॥ ಬೋರ್ಡ್ ಆಫೀಸಿನವರು ಆ ಮೂಲಪ್ರತಿಯನ್ನು ಡಿ. ಇ. ಓ. ಆಫೀಸಿನಿಂದ ದಯವಿಟ್ಟು ತರಿಸಿಕೊಂಡು, ಆ ಕುಂಭಕರ್ಣ ಮಾಸ್ತರರಿಗೆ ೫ ರುಪಾಯಿಗಳ 'ಫರ್ಸ್ಟ್ ಪ್ರೈಜಿನ' ಜುಲ್ಮಾನೆ ಸಂಭಾವನೆ ಮಾಡಿಯೂ ಆ ರೂಪಾಯಿ ೫ ಬೋರ್ಡಿನ ಭಂಡಾರಕ್ಕೆ ವಸೂಲಾದದ್ದು ಉಂಟೇ?

ಡಿ॥ ಬೋ॥ ಎಜ್ಯುಕೇಶನ್ ಆಫೀಸರರೊಬ್ಬರು ಹಾಲೀ ಇರುವಂಥಾ ಸಮಯದಲ್ಲಿ ಅವರು ಕೊಡುವಂಥಾ ಹಿತಸೂಚನೆಗಳನ್ನು ಮೂಲೆಗೆ ಬಿಸಾಡಿ, ಕೆಲವು ಡಿ॥ ಬೋ॥ ಮೆಂಬರರ ಸೂಚನೆಗಳಿಗೇ ಮಾನ್ಯತೆಯ ಮಣಿ ದೊರಕುತ್ತಿರುವುದು ನಿಜವೇ?

ಇವೆಲ್ಲಾ ಇರಲಿ. ಸದ್ಯ, ಇಪ್ಪೆಲ್ಲ ಕುಂದುಕೊರತೆಗಳಿರುವ ಅಡಳಿತವನ್ನು ನಡೆಸಿದ ಹಿಂದಿನ ಪ್ರೆಸಿಡೆಂಟರನ್ನೇ ಮುಂದೆಯೂ ಅರಿಸುವಲ್ಲಿ ಪುರುಷಾರ್ಥವೇನೆಂದು ಡಿ॥ ಬೋ॥ ಮೆಂಬರರು ಜೆನ್ನಾಗಿ ಆಲೋಚಿಸಲಿ!

"ಗುಟ್ಟು ಬಲ್ಲವ".


# Gordhandas Sandal-Oil Distillery
## MANGALORE.

*Three of the most reliable and unavoidable necessities of Life.*

**Genuine Sandal-wood Oil**
(Best for medicine & perfume)

**Sandal-wood Ointment**
The most effective remedy for Scabies, chronic Ulcers, Ring-worm and all kinds of skin diseases.
**As. 4 per tin.**

**Mosquito Fumigator Sticks**
Enjoy sound and healthy sleep and free from Malaria, Cholera etc.
**As. 3 per packet of 7 sticks.**
One stick for a night (½ an hour burning)
***Our trade mark your guarantee!***

GORDHANDAS SANDAL-OIL DISTILLERY MANGALORE
**Trade Mark**

ಜೀವನದ ಅತ್ಯಂತ ವಿಶ್ವಾಸಾರ್ಹವಾದ ಅನಿವಾರ್ಯವಾದ
3 ಆವಶ್ಯಕವಾದ ಸಾಧನಗಳು.

ಶುದ್ಧವಾದ ಗಂಧದೆಣ್ಣೆ
(ಔಷಧಿಗಳಿಗೂ ಪರಿಮಳ ದ್ರವ್ಯಗಳಿಗೂ ಅತ್ಯುತ್ಕೃಷ್ಟ)

ಗಂಧದ ಮುಲಾಮು
ಇದು ದೀರ್ಘಕಾಲದ ವ್ರಣ, ಹುಣ್ಣು, ಹುಳಕಡ್ಡಿ, ಮತ್ತೂ ಯಾವತ್ತು ಬಗೆಯ ಚರ್ಮವ್ಯಾಧಿಗಳಿಗೂ ರಾಮಬಾಣ. ಡಬ್ಬಿಯೊಂದರ ಬೆಲೆ ಆ. 4.

ಮೊಸ್ಕಿಟೊ ಫ್ಯುಮಿಗೇಟರ್ ಸ್ಟಿಕ್ಸ್.
ಈ ನುಸಿಕಡ್ಡಿಗಳನ್ನುಪಯೋಗಿಸಿ ಸುಖವಾದ ಗಾಢನಿದ್ರೆಯನ್ನನುಭವಿಸಿ, ಮಲೇರಿಯಾ, ಕೊಲೇರಾ ಮೊದಲಾದವುಗಳ ಬಾಧೆ ತಗಲದಂತೆ ಎಚ್ಚರವಾಗಿರಿ.
7 ಕಡ್ಡಿಗಳ ಒಂದು ಪ್ಯಾಕೆಟಿಗೆ 3 ಆಣೆ.
ರಾತ್ರೆಗೊಂದು ಕಡ್ಡಿ (ಅರ್ಧ ಗಂಟೆ ಉರಿಯುತ್ತದೆ)
ನಮ್ಮ ಟ್ರೇಡ್ ಮಾರ್ಕೇ ನಿಮ್ಮ ಗ್ಯಾರಂಟಿ.

# ಗೋರ್ಧನ್‌ದಾಸ್ ಸೇಂಡಲ್ ಆಯಿಲ್ ಡಿಸ್ಟಿಲರಿ, ಮಂಗಳೂರು.

# ಶ್ರೀ ನವೀನ ತುಲಾಭಾರೋಪಾಖ್ಯಾನಂ.

ಮಹನೀಯರೇ!

ದಾಸಯ್ಯನು 'ಹರಿಕಥೆ'ಗಾಗಿ ಬಂದು ಬಹಳ ದಿನಗಳಾದವು. ಸ್ವಸ್ಥಳ--ಪರಸ್ಥಳಗಳಲ್ಲಿ ಅಲೆದು ಮಾನವರ ಕಿವಿಗಳಲ್ಲಿ ಭಗವನ್ನಾಮಗಳನ್ನು ಹೊಗಿಸಿ ನರಕಕ್ಕೆ ಹೋಗುವವರನ್ನು ಸ್ವರ್ಗಕ್ಕೆ ವರ್ಗಮಾಡಿ ಪಾಪಿಗಳನ್ನು ಕೂಪದಿಂದ ಎತ್ತಿ ಇಂದು ತಮ್ಮ ಸನ್ನಿಧಾನಕ್ಕೆ ಬಂದಿರುತ್ತೇನೆ. ಮುಖ್ಯ ತಮ್ಮ ಗಳ ಅಭಿಮಾನವೇ ದಾಸಯ್ಯನ ತಲೆ ಹೊರೆ. ತಮ್ಮ ಸೇವೆಯೇ ದಾಸಯ್ಯನ ಗುರಿ. ತಮ್ಮಗಳ ಅನುರಾಗವೇ ದಾಸಯ್ಯನಿಗೆ ಸರಾಗವಾದ ದಾರಿ. ಬಹು ಕಾಲಕ್ಕೊಮ್ಮೆ ಪರುಶನವಾಗಿದೆ. ಕ್ಷಮಿಸಬೇಕು. ದಾಸಾನುದಾಸನಾದ ನನ್ನ ವೇಷಭೂಷಣಗಳನ್ನು ನೋಡಿ, ದೋಷಗಳಿದ್ದರೆ ಬಿಟ್ಟು, ಈಶಾನುಗ್ರಹಕ್ಕಾಗಿ ತಾವೆಲ್ಲರೂ ಅನುಗ್ರಹಿಸಬೇಕು ಸ್ವಾಮಿಾ.

ರಾಗ— ಅನುರಾಗ— ಬಾಯಿತಾಳ.

ಭಜರೇ ಭಜ ಗೋವಿಂದಂ ॥ ಪ ॥
ಸುಜನಜನಾನಂದಂ ಗೋವಿಂದಂ ॥ ಅ ॥
ಅಜಗಜಮುಖ ಸಾರಸೇವಿತ ಪಾದಂ ।
ನಿಜರೂಪಂ ಉಡುಪಿಯ ಶ್ರೀರಾಜಂ ॥ ೧ ॥
ಹಲವು ರೂಪದೊಳು ಮೆರೆಯುವ ಶ್ಯಾಮಂ ।
ಪಲವಿಧವೇಷದ ಗಣಿಕಾ ರಾಮಂ ।
ಜಲಜನಾಭ ಹರಿ ಯತಿಗಳ ರೂಪಂ ।
ಸುಲಭದಿ ಪರುಶನವೀವ ಪ್ರತಾಪಂ ॥ ೨ ॥

ಬಹಳ ದಿನಗಳಿಗೊಮ್ಮೆ ಉಡುಪಿ ಪರಿಯಾಯ ಮಹೋತ್ಸವಂ, ಭಕ್ತಾಗ್ರಣಿಗಳು ಸೇರಿ ಶ್ರೀಕೃಷ್ಣಪರಮಾತ್ಮನ—ಪ್ರತ್ಯಕ್ಷ ಶ್ರೀಕೃಷ್ಣ ರೂಪಿನ ಮಹನೀಯರ ಸೇವೆಯನ್ನು ಮಾಡುವ ಕಾಲ. ಅದರಲ್ಲೂ ಬಹು ದಿನ ಸಂಚಾರದಲ್ಲಿದ್ದ ದಾಸಯ್ಯನ ಹರಿ ಕಥಾ ಪ್ರಸಂಗದ ವೈಭವ ಕಾಲ. ಇದರಲ್ಲಿ ಯಾವ ಕಥೆಯಾಗ ಬೇಕೆಂಬುದನ್ನು ಅಪ್ಪಣೆಕೊಡಿಸಬೇಕು.

**ಸಭಿಕರು:**—ದಾಸರೇ! ತಮಗೆ ಬರುವಂಥ ಹರಿಕಥೆ, ಹರಕಥೆಗಳನ್ನು ಹೇಳುವಂಥವರಾಗಿ.

**ದಾಸಯ್ಯ:**—ನನಗೆ ಎಲ್ಲ ಕಥೆಗಳೂ ಬರುತ್ತವೆ. ದ್ರೌಪದೀವಸ್ತ್ರವಿವರ್ಜನಂ, ಶೆತಪಾಂಡವ ಕಲ್ಯಾಣಂ, ಶ್ರೀ ಕಾಮಾಭ್ಯುದಯಂ, ಗಣಿಕಾನಿವಾಸೋಪಾಖ್ಯಾನಂ—ಯತಿಜಲ ಕ್ರೀಡಾ ಮಹೋತ್ಸವಂ, ನವೀನ ತುಲಾಭಾರೋಪಾಖ್ಯಾನಂ ಇತ್ಯಾದಿ ಹರಿಕಥೆಗಳೂ ಗಜಮುಖವಿಚ್ಛೇದನಂ, ಹರಿಹರ ವಿರೋಧಾಖ್ಯಾನಂ, ಗೌರೀ ಗಾಂಧಾರೀಸ್ವಯಂವರಂ ಇತ್ಯಾದಿ ಹರಿಕಥೆಗಳೂ ಬರುತ್ತವೆ. ಅಪ್ಪಣೆಯಾಗಲಿ.

ಸಭೆಯಲ್ಲಿದ್ದ ಅಧಿಕಾರಿ ವರ್ಗದ ಜಿಲ್ಲಾಧಿಕಾರಿಗಳು:—ಆಗಲಿ. ನವೀನ ತುಲಾಭಾರೋಪಾಖ್ಯಾನವಾಗಲಿ ದಾಸರೆ.

ದಾ:—ಆಗಬಹುದು. ಮಹಾಸ್ವಾಮಿಾ.

## ಪೀಠಿಕಾಪ್ರಕರಣ.

ರಾಗ—ಸರಾಗ—ತಾಳ. ಛೇತಾಳ

ರಾಮನಾಮವ ಪಾಡಿರೋ। ಈ ಜಗವೆಲ್ಲ
ರಾಮನಾಮವ ಪಾಡಿರೋ ॥
ರಾಮನಾಮವ ಪಾಡಿ। ಕಾಮುಗಳನು ನೋಡಿ।
ಭಾಮೆಯರೊಡಗೂಡಿ। ಕಾನಿತಾರ್ಥವ ಪೊಂದಿ ॥
ಭೂಮಿಯೊಳಗೆ ಕೃಷ್ಣ। ಕಾಮಿನಿಯರ ಗೃಹದಿ।
ಪ್ರೇಮಾಲಿಂಗನ ಸುಖದಿ। ಕಾಲ ಕಳೆಯುತಿರಲು ॥

ಮುಖ್ಯವಾಗಿ ಮನುಷ್ಯನಾದ ಮೇಲೆ ತಾನು ಬಂದು ಹೇಗೆ ಪರಲೋಕಸಾಧನಮಾಡಬೇಕೆಂಬ ಚಿಂತೆಯನ್ನು ಮಾಡಬೇಕು. ಧನಕನಕಕಾಮಿನೀ ರೂಪಿನ ಶತ್ರುಗಳನ್ನು ಗೆಲ್ಲಬೇಕು. ಅದಿಲ್ಲದಿದ್ದರೆ ಅನುಭವಿಸಿ ಸಾಯಬೇಕು. ದಾಸರು ಹೀಗೆ ಅಂದಿದ್ದಾರೆ. ಏನೆಂದು?

॥ ಹಾಡು ॥

ಈಸಬೇಕು। ಇದ್ದು। ಜೈಸಬೇಕು ॥
ಈ ಸಂಸಾರ ವಾರಿಧಿ ॥ ಅ ॥
ಕೆರೆಯಲಿ ಬಿದ್ದರೆ ಈಜಬೇಕು। ಬಾರದಿದ್ದರೆ ಮುಳುಗಬೇಕು।
ಬಂದರೆ ಮೇಲಕ್ಕೇಳಬೇಕು। ಎದ್ದರೆ ಒರಸಿಕೊಳ್ಳಬೇಕು ॥ ೧ ॥
ನಾರಿಯು ಬಂದರೆ ಬಿಡಬೇಕು। ಬಾರದಿದರೆ ಹಿಡಿಬೇಕು।
ಹಿಡಿದರೆ ಅವಳನು ಜೈಸಬೇಕು। ಜೈಸದಿದ್ದರೆ ಅಳಬೇಕು ॥

ಆದ್ದರಿಂದ ಕಾಮಿನೀ ಕಾಂಚನಾದಿಗಳನ್ನು ಬಿಡಬೇಕು. ತಪ್ಪಿದರೆ ಅನುಭವಿಸಿ ಜೈಸಬೇಕು. ಈ ದೇಹ ಶಾಶ್ವತವಲ್ಲ. ನಶ್ವರವಾದ್ದು. ದಾನಧರ್ಮಪರೋಪಕಾರಾದಿಗಳನ್ನು ನಡೆಸಿ ಒಂದು ದಿನ ಗೋತಾ ಹಾಕಬೇಕು. ಸಾಯುವುದೇ ನಿಜ. ಸತ್ತರೆ ಹುಟ್ಟುವುದೇ ನಿಜ. ಹುಟ್ಟದಿದ್ದರೆ ಹುಟ್ಟಿಸಬೇಕು. ಹಣವು ಶಾಶ್ವತವಲ್ಲ. ಪ್ರಾಯವು ಶಾಶ್ವತವಲ್ಲ. ಹಣವಿದ್ದಾಗ ಪ್ರಾಯದ ಕತೆಯನ್ನು ನಡೆಸಿ, ಮುಪ್ಪಿನಲ್ಲಿ ದಾನಧರ್ಮ ಮಾಡಿಬಿಡಬೇಕು.

ಕಾಯವದು ನಿಲ್ಲದು। ಕಡು ಬ್ರಹ್ಮಗಾದರೂ।
ಪ್ರಾಯವಥು ನಿಲ್ಲುವದೆ। ಬರಿ ಭ್ರಾಂತಿ ಮನುಜ।
ಲಕ್ಷಾಧಿಕಾರಿಗೂ। ಲವಣವನ್ನವೆ ಕ್ಷೇಳು।
ಬಂದಾಗ ಬಿಡಬೇಡ। ಸಿಕ್ಕಿದುದನು।

ಎಂದು ದೊಡ್ಡವರು ಹೇಳಿದ್ದಾರೆ. ಆದ್ದರಿಂದ ಜನರು ಎಷ್ಟೇ ದೊಡ್ಡವರಾಗಲಿ, ಚಿಕ್ಕವರಾಗಲಿ, ಅತಿ ಬುದ್ಧಿವಂತರಾಗಲಿ, ಯತಿಭೂಪತಿಗಳಾಗಲಿ, ದೇಹವು ಶಾಶ್ವತವಲ್ಲವಾದ್ದರಿಂದ ಅನುಕೂಲವಾದಾಗ ಭೇಕಾದ್ದನ್ನು ಮಾಡಿ ಉತ್ತರಕ್ಷಣದಲ್ಲಿಯೇ ಶ್ರೀಕೃಷ್ಣದರ್ಶನ ಮಾಡಿದರೆ ಸಮಸ್ತವೂ ಪರಿಹಾರವಾಗುವದು. ಆದ್ದರಿಂದ ತಾವುಗಳು, ಇಲ್ಲಿ ನೆರೆದಿರುವ ಮುಕಾನುಭಾವರುಗಳು, ಅಧಿಕಾರಿಗಳು, ಲಾಯರುಗಳು, ಭಕ್ತರುಗಳು, ಭುಕ್ತರುಗಳು ಏನು ಮಾಡಿದರೂ ಒಮ್ಮೆ ಶ್ರೀಹರಿನಾಮಸ್ಮರಣೆ ಮಾಡಬೇಕು.

ಶ್ರೀ ರುಕ್ಮಿಣೀರಮಣ ಗೋವಿಂದ—ಗೋಽಽಽವಿಂದ.

ಶ್ರೀಕೃಷ್ಣಪರಮಾತ್ಮನು ತನ್ನ ಲೀಲೆಯನ್ನು ಭೂಮಿಯಲ್ಲಿ ತೋರಿಸಲು ಯತಿ ವೇಷನನ್ನು ಧರಿಸಿ ತನ್ನ ಸತಿಯರಾದ ರುಕ್ಮಿಣಿಸತ್ಯಭಾಮೆಯರನ್ನು, ಗೌರಿ, ಗಾಂಧಾರೀ ಎಂಬ ಕನ್ಯಾಮಣಿಯರಾಗಿ ಅವತರಿಸಬೇಕೆಂದು ಅಪ್ಪಣೆ ಮಾಡಿ ಭೂಲೋಕದಲ್ಲಿ ಇಳಿದು ಸಮುದ್ರತೀರದಲ್ಲಿರುವ ಮರಳು ಗುಡ್ಡೆಯಲ್ಲಿ ತಿರುಗಾಡುತ್ತಿದ್ದನು.

ಅಂದು ಆ ದೇಶದ ಅರಸಾದ ರಸನರ್ಮನು ತನ್ನ ಸತೀ ಜನರಿಂದೊಡಗೂಡಿ ಸಮುದ್ರಸ್ನಾನಕ್ಕೆ ಬಂದಿರಲು, ಈ ಯುವಕ ಯತೀಶ್ವರನನ್ನು ನೋಡಿ ಆನಂದಪಟ್ಟು, ಆತನಿಗೆ ಅರ್ಘ್ಯ ಪಾದ್ಯಾಚಮನೀಯವನ್ನು ಕೊಟ್ಟು ಉಪಚಾರ ಮಾಡಿ, ಯೋಗಕ್ಷೇಮಾನಂತರ ಸುಭೋಜನವನ್ನು ಮಾಡಿಸಿ ತನ್ನೂರಿಗೆ ಬಿಜಯಂ ಗೈಯುವಂತೆ ಕೇಳಿಕೊಂಡನು.

ಯತಿ॥ ಕಂ॥ ನಮಗೆಲ್ಲಿಯದೀ ಕಾಟಂ
ಸುಮನೋಹರ ರಾಜ ನನಗೆ ಬೇಡೈ ದೇಶಂ।
ಕ್ಷಮಿಸೈ! ಬಾರೆನು ನಾ ಯತಿ।
ನಮಗೇಕೈ ಊರು? ಕಾಡು ನಮ್ಮದನರಿಯೆ ॥

ಎಂದು ಹೇಳಲು ರಾಜನು ನಾನಾ ವಿಧವಾಗಿ ಸಮಾಧಾನಂಗೈದು ಅವರನ್ನು ತನ್ನರಮನೆಗೆ ಕರೆದುಕೊಂಡು ಬಂದನು. ಅವರಿಗಾಗಿ ಒಂದು ಬಿಡಾರವನ್ನು ಕೊಟ್ಟು ಶ್ರೀಕೃಷ್ಣಪೂಜೆಯಲ್ಲಿರಲು ಏರ್ಪಡಿಸಿದನು.

ಇತ್ತ ಅದೇ ಊರಲ್ಲಿ ಗಣಿಕೆಯರ ಸದ್ವಂಶದಲ್ಲಿ ಮುತ್ತಿನಂತೆ ಇಬ್ಬರು ಕೋಮಲ ಬಾಲೆಯರು ಹುಟ್ಟಿ ವೃದ್ಧಿಚಂದ್ರನಂತೆ ಬೆಳೆಯುತ್ತಿದ್ದರು. ಅವರಿಗೆ ಅವರ ಜನನಿಯು ಚಿನ್ನ-ರನ್ನರೆಂಬ ಮೋಹದ ನಾಮಕರಣ ಮಾಡಿ ಗೌರೀ ಗಾಂಧಾರೀ ಎಂಬದಾಗಿ ಕರೆಯುತ್ತಿದ್ದರು. ಎಳೆಯ ವಯಸ್ಸಿನಲ್ಲಿಯೇ ಆ ಮಕ್ಕಳ ರೂಪಲಾವಣ್ಯಗಳು ನೋಡುವವರ ಕಣ್ಣುಗಳನ್ನು ಕುಕ್ಕುತ್ತಿದ್ದವು. ಅವರಿಗೆ ನಾಟ್ಯ-ಸಂಗೀತ-ಸಾಹಿತ್ಯಾದಿಗಳನ್ನು ಹೇಳಿಸಿದ್ದರು. ಒಟ್ಟಿನಲ್ಲಿ ಅವರ ರೂಪು-ಲಾವಣ್ಯಗಳ ಮಾತು ಊರಲ್ಲಿ ಎಲ್ಲೆಲ್ಲಿಯೂ ಹರಡಿತ್ತು. ಅವರೂ ಪ್ರಾಪ್ತವಯಸ್ಕರಾಗುವ ವೇಳೆಗೆ ಗೌರೀ-ಗಾಂಧಾರೀ ಸಮ ರೂಪನತಿಯರು ಭೂಲೋಕದಲ್ಲಿಯೇ ಇಲ್ಲವೆಂಬ ಕೀರ್ತಿ ಹಬ್ಬಿತು.

ರಾಗ ಶುನಕವರಾಳಿ. ॥ ಪಡ ॥ ತಾಳ ಕಂಚಿನಡು.

ನಲ್ಲೆಯ ಮುಖಲಾವಣ್ಯಕೆ ಜನಗಳು
ಹಲ್ಲ ಕಿರಿದು ನೋಡುತೆ ನಿಂತು।
ಎಲ್ಲಿನ ದೇವಸ್ತ್ರೀಯರು ಇವರು।
ನಿಲ್ಲಿರಿ ನೋಡುವ ಮುಖಪದುಮ ॥
ಬನ್ನಿರಿ ಗೌಡರೆ ಬನ್ನಿರಿ ವರ್ತಕ।
ಬನ್ನಿರಿ ದುಡ್ಡಿನ ಮಹನೀಯ।
ಹೊನ್ನ ಗಟ್ಟಿಗಳ ಹೊತ್ತು ತಂದು ನೀವ್।
ಚನ್ನೆಯು ಗೌರಿಗೆ ಕೊಡಿರಣ್ಣ ॥
ನಗುವೊಗ ಸಿರಿವೊಗ ಗೌರೀ ಚೆನ್ನ।
ಪಗಲೊಳು ಬೆಳಗುವ ಕಾಂತಿಯ ರನ್ನ।
ಜಗದೊಳು ಸಾಟಿಯು ಇಲ್ಲವು ಬಣ್ಣ।
ಬಗೆಬಗೆ ವಿಧದಲಿ ನೋಡೀರಣ್ಣ ॥

ಹೀಗಿರಲು ಅರಮನೆಯಲ್ಲಿರುವ ಯತೀಶ್ವರರ ಬಳಿಗೆ ಇವರ ಪ್ರಭಾನವು ಹಬ್ಬಿತು. ಸೇವಕ 'ನಿರ್ಗುಣಾಚಾರ್ಯನು' ಸ್ವಾಮಿಗಳಲ್ಲಿ ಪ್ರಸ್ತಾವಿಸಿ ಈ ಹುಡುಗಿಯರ ಸಂಗೀತ-ಭರತನಾಟ್ಯಗಳ ಪ್ರಶಂಸೆ ಮಾಡುತ್ತಾ ಬಾಯಲ್ಲಿ ಜೊಲ್ಲು ಸುರಿಸಿದನು. ಒಂದಾನವರ್ತಿ ದೇವರ ಸನ್ನಿಧಿಯಲ್ಲಿ ಇವರ ಸೇವಾ ನಡೆಯಲು ಅಪ್ಪಣೆಯಾಯಿತು.

ಊರಿನ ದೊಡ್ಡ ಮನುಷ್ಯರು, ವರ್ತಕರು, ಅಧಿಕಾರಿಗಳೂ ಬಂದರು. ಹೆಂಗಸರೂ ಮಕ್ಕಳೂ ಸಭೆಯಲ್ಲಿ ತುಂಬಿದರು. ಆ ದಿನ ಗೌರೀ-ಗಾಂಧಾರಿಯರ ಮೇಳವು ನಡೆಯತಕ್ಕದ್ದಾಗಿತ್ತು. ಊರೊಳಗೆಲ್ಲಾ ಅದೇ ಸುದ್ದಿ ಹರಡಿ, ಬಂದವರಿಗೆ ಸ್ಥಳವೇ ಇಲ್ಲದಂತಾಗಿತ್ತು. ಸಂಗೀತದ ಕಛೇರಿಯಾಯಿತು. ನಾಟ್ಯಕ್ಕಾರಂಭವಾಗಿ ಸಮಸ್ತರೂ ನಿಶ್ಶಬ್ದದಲ್ಲಿರಲು, ಗೌರಿಯು ಅಭಿನಯಕ್ಕಾರಂಭಿಸಿದಳು. ಗಾಂಧಾರಿಯು ಚೂರ್ಣಿಕೆಯನ್ನು ಹಾಡಲು ಪ್ರಾರಂಭಿಸಿ,

ಪದಿನಾಲ್ಕು ಸಹಸ್ರ ಗೋಪಿಯರ।
ಪದುಳದಿ ಬರೆಸೆಳೆದು ಸರಿತಸಂಗೊಂಡೆ।
ಪದಯ ಶ್ರೀಕೃಷ್ಣ ನಮ್ಮಿಬ್ಬರೊಳು।
ಮುದದಿಂದ ವಿಹರಿಸು ಮನ್ಮನೋಹರ ॥
ಕ್ರೀಡಾಸಕ್ತಂ ಕೃಷ್ಣಂ ಕ್ರೀಡಾಸಕ್ತಂ ನಂದನಂ।
ಕ್ರೀಡಾಸಕ್ತಂ ಗೋಪೀವನವಾದಸಾರಣಂ ಕೃಷ್ಣಂ।
ಕ್ರೀಡಾಸಕ್ತಂ ಜಲಜರುಹನೇತ್ರಂ ಕೃಷ್ಣಂ।
ಕ್ರೀಡಾಸಕ್ತಂ ಬಾಲಂ ಬ್ರಹ್ಮಚಾರಿ ಶ್ರೀಕೃಷ್ಣಂ ॥

ಈ ಪ್ರಕಾರವಾಗಿ ಹಾಡುತ್ತಿರಲು,

ಲಕ್ಷ್ಮೀರಮಣ ಗೋವಿಂದ—ಗೋವಿಂದ.

(ಎಲನೇ ಪುಟಕ್ಕೆ ಮುಂದರಿಸಿಯದೆ)


# ಪ್ರಭಾಕರ ಮುದ್ರಾಮಂದಿರ, ಉಡುಪಿ.



ಪ್ರೊಪ್ರೈಟರ್ ಪಿ. ನಾರಾಯಣ ಪ್ರಭುಗಳ ಸುಸ್ವಾಗತವಿದೆ ನಿಮಗೆ.

**ಅಂದವಾದ ಮುದ್ರಣ, ಸುಂದರವಾದ ರೂಲಿಂಗು, ಸೊಗಸಾದ ಬೈಂಡಿಂಗು, ಕೆಲೆಂಡರು ಪಿಂಟಿಂಗು, ಎನ್‌ಗ್ರೇವಿಂಗು, ರಿಲೀಫ್ ಪ್ರಿಂಟಿಂಗು, ಪೋಸ್ಟರುಗಳ ಪಿಂಟಿಂಗು, ಸ್ಯಾನ್‌ಬೋರ್ಡು ಪೈಂಟಿಂಗು,**

ಮೊದಲಾದುವಕ್ಕೆಲ್ಲ

ಮೊದಲ ಮನೆಯಿದು.

**ಕಾರ್ಡುಬೋರ್ಡುಪೆಟ್ಟಿಗೆಗಳ ತಯಾರಿ**

ಒಂದು ವಿಶೇಷತ್ವವಿಲ್ಲಿ.

**ಸ್ಟೇಷನರಿ, ಬ್ಯಾಂಡಿಂಗ್ ಸಾಮಗ್ರಿ, ರಬ್ಬರು ಸ್ಟಾಂಪುಗಳು, ಫೌಂಟನು ಪೇನುಗಳು, ಕನ್ನಡಕಗಳು, ಕ್ಯಾಲೆಂಡರುಗಳು, ಪ್ರತಿವರ್ಷದ ಪ್ರಭಾಕರ ಪಂಚಾಂಗಗಳು**

ಸುಲಭ ದರದಲ್ಲಿ.

ಅತ್ಯುತ್ತಮವಾದ ಕುಂಕುಮಾಗುರುಗಂಧ.

(೨೭ನೇ ಪುಟದಿಂದ ಮುಂದುವರಿಸಿದುದು)

ಯತಿಗಳಿಗೆ ಒಂದು ವಿಚಾರವು ಹೊಳೆಯಿತು. ಸಹಸ್ರ ಗೋಪೀಜನವಲ್ಲಭನಾದರೂ ಕೃಷ್ಣನು ಬ್ರಹ್ಮಚಾರಿಯಾಗ ಬಹುದಂತೆ. ನಾವೇಕೆ ಆಗಬಾರದು? ಕೃಷ್ಣಭಕ್ತರಲ್ಲವೆ ನಾವು? ಎಂದು ನಿರ್ಗುಣಾಚಾರ್ಯರಲ್ಲಿ ಪ್ರಸ್ತಾಪಿಸಿದರು.

ನಿರ್ಗುಣಾಚಾರ್ಯರು–ಸ್ವಾಮಿ ಚಿತ್ತವಿದ್ದಂತೆ ಆಗಬಹುದು. ಇಂಥ ಲಲನಾಮಣಿಯರು ಭೂಲೋಕದಲ್ಲಿ ಅಪರೂಪ. ತುಟಿಗಳೋ ತೊಂಡೆ ಹಣ್ಣುಗಳು. ಕಾಲ್ಗಳೋ ಮನೋಹರ ವಾದ ಎಳೆಯ ಬಾಳೆಯ ಗಿಡಗಳು. ಕಪೋಲಗಳೋ ಜಪಾನ್ ಕನ್ನಡಿಗಳು. ಕಣ್ಣುಗಳೋ ಜಿಂಕೆಯ ಕಣ್ಣುಗಳು. ಕಂಠವೋ ಶಂಖ. ಧ್ವನಿಯೋ ಕೋಕಿಲಾ ಸ್ವರ. ರೂಪೋ ಅಪ್ಸರೆಯರನ್ನೂ ವಿೂರಿಸಿದೆ. ಅಪ್ಪಣೆಯಾದರೆ ಮುಂದೆ ಏರ್ಪಾಡು ನನ್ನದಿರಲಿ— ಎಂದು ಅರಿಕೆಮಾಡುತ್ತಿರುವಾಗಲೇ ಅವರಿಗೆ ಬಹುಮಾನವನ್ನು ಕೊಟ್ಟು ಕಳುಹಿಸಿದರು. ಅವರೂ ನನುಸ್ಕರಿಸಿ ಹೊರಟು ಹೋದರು. ಸಭೆಯೂ ಭರಕಸ್ತಾಯಿತು.

ಅಂದಿನ ದಿನ ಶ್ರೀ ಯತಿಗಳಿಗೆ ನಿದ್ದೆಯಿಲ್ಲ. ಬುದ್ಧಿ ಭ್ರಾಂತಿ ಹಿಡಿಯಿತು. ನಿರ್ಗುಣಾಚಾರ್ಯರನ್ನು ಇವರ ಮನೆಗೆ ಕಳುಹಿಸಿದರು. ಸಮಸ್ತ ಸಲಕರಣೆಗಳೂ ಸಿದ್ಧವಾದವು. ಯತಿ ಗಳು ವೇಷಧಾರಿಗಳಾಗಿ ಈಗಿನ ಜಂಟಲ್‌ಮೇನ್ ಕೋಟು ಷರಾಯಿಗಳನ್ನು ಧರಿಸಿ ಗೌರೀ-ಗಾಂಧಾರಿಯರ ಮನೆಗೆ ದಯ ಮಾಡಿಸಿದರು. ಬಂದವರನ್ನು ಸತ್ಕರಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ ತಮ್ಮ ಹಾವಭಾವವಿಲಾಸಗಳನ್ನು ತೋರಿಸಿ ಶ್ರೀಕೃಷ್ಣಸೇವಾತತ್ಪರರಾದರು. ನಿರ್ಗುಣಾಚಾರ್ಯರು ಹೊರಗೆ ಮಲಗಿದರು.

ಪೋಲೀಸರು ಯಾರೆಂದರೆ ಪರಸ್ಥಳದವರೆಂದು ತಪ್ಪಿಸಿ ಕೊಂಡರು. ನಾಯಿಗಳು ಬಗುಳಿದರೆ ಇವರೂ ನಾಯಂತೆ ಬಗುಳಿದರು. ತಿಗುಣಿಗಳು ಕಡಿದರೆ ಜಾಗರಣೆ ಮಾಡಿದರು. ಗಾಳಿ ಬೀಸಿದರೆ ಹೊದ್ದುಕುಳಿತರು. ಚಳಿಯಾದರೆ ಮೂಗಿಗೆ ನಶ್ಯವನ್ನು ಏರಿಸಿದರು. ಹೀಗೆ ತೊಂದರೆ ಪಡುತ್ತಿರುವಲ್ಲಿ ಶ್ರೀ ಯತಿಗಳು ವೇಷಧಾರಿಗಳಾಗಿ ಹೊರಗೆ ಬಂದ ಕೂಡಲೆ ನಿರ್ಗುಣಾಚಾರ್ಯರು ಜೊತೆಯಲ್ಲಿ ಕರದುಕೊಂಡು ಬಂದು ಬಿಡಾರವನ್ನು ತಲಪಿಸಿದರು.

ಹೀಗೆ ರಾತ್ರೆಯೆಲ್ಲಾ ಯತಿಗಳು ಗಣಿಕಾಮಣಿಯರ ಮನೆ ಯಲ್ಲಿ ಸೇವಾತತ್ಪರರಾಗಿ, ಹಗಲು ಶ್ರೀಕೃಷ್ಣಪೂಜಾತತ್ಪರ ರಾಗಿರಲು ಗೌರೀ-ಗಾಂಧಾರಿಯರಲ್ಲಿ ಪರಸ್ಪರ ಮತ್ಸರವು ಹುಟ್ಟಿ ಮುಳ್ಳಿನ ಗಿಡದಂತೆ ಬೆಳೆಯಹತ್ತಿತು. ಗೌರಿಯನ್ನು ಕಂಡರೆ ಗಾಂಧಾರಿಗೆ ಆಗದು. ಅವಳನ್ನು ಕಂಡರೆ ಗೌರಿಗಾಗದು. ಹೀಗೆ ಜಗಳವೂ ಹೊಟ್ಟಿಕ್ಕುರಿ ಹತ್ತಿತು. ಏನು ಮಾಡಲಿಕ್ಕಾದೀತು? ಯತಿಗಳು ಇಬ್ಬರಿಗೂ ಸರಿಯಾಗಿದ್ದಾರೆ. ಹಣವನ್ನು ಕೊಡು ತ್ತಾರೆ. ಬಟ್ಟೆಯನ್ನು ಕೊಡುತ್ತಾರೆ. ಆದ್ದರಿಂದ ತಮ್ಮ ಹೊಟ್ಟೆ ಕಿಚ್ಚನ್ನು ಹೇಗೆ ತೀರಿಸಿಕೊಳ್ಳಬಹುದೆಂದು ಯೋಚಿಸಿದರು. ನಿರ್ಗುಣಾಚಾರ್ಯರನ್ನು ಆಶ್ರಯಿಸಿ ಗೌರಿ–ಗಾಂಧಾರಿಯರು ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ತಮ್ಮ ಅರಿಕೆಗಳನ್ನು ಹೇಳಿ ಕೊಂಡರು.

ನಿರ್ಗುಣಾಚಾರ್ಯರು—

॥ ಪದ್ಯ ॥

ಸಿಕ್ಕಿದುದೇ ಅವಕಾಶ । ದಕ್ಕಿದುದೇ ನನಗಿಂತು ।
ಲೆಕ್ಕಿಸುವರೆ ಯತಿಯನ್ನು । ನಿರ್ಗುಣಾರ್ಯ ॥
ಜಗಳವನು ಹತ್ತಿಸುತ । ಜಗಳಗಂಟಿಗನಂತೆ ।
ಬಗೆಬಗೆಯ ಬಹುಮಾನ । ಜನವರಿಯೆ ಕೊಳ್ಳೆ ॥

ಹೀಗೆಂದು ಗೌರಿಯನ್ನು ಕುರಿತು,–ಮಗಳೇ, ಒಂದುಪಾಯವಿದೆ, ಶ್ರೀಕೃಷ್ಣವ್ರತವೆಂಬುದೊಂದುಂಟು. ಹಿಂದೆ ಸತ್ಯಭಾಮೆಯು ಶ್ರೀ ಕೃಷ್ಣನನ್ನು ನಾರದರಿಗೆ ದಾನ ಕೊಟ್ಟಂತೆ ಇಂದು ಶ್ರೀಕೃಷ್ಣವ್ರತಿ ನಿಧಿಯಾದ ನಮ್ಮ ಯತೀಶ್ವರನನ್ನು ನನಗೆ ದಾನ ಕೊಡು. ಈ ರಾತ್ರೆ ಯತಿಯು ಬಂದಾಗ ಷೋಡಶೋಪಚಾರ ಮಾಡಿ ನನಗೆ ಒಪ್ಪಿಸಿಬಿಡು. ಆಗ ಯತಿಯನ್ನು ಗಾಂಧಾರಿಯಿಂದ ದೂರ ಮಾಡಿ ನಿನ್ನಿಷ್ಟಾರ್ಥವನ್ನು ಪೂರೈಸುವೆನು. ಹೀಗೆ ಮಾಡುವುದ ರಿಂದ ಯತಿಯು ಯಾವಾಗಲೂ ನಿನ್ನ ವಶವಾಗುವನು.—ಎಂದು ಯುಕ್ತಿಯನ್ನು ಹೇಳಿಕೊಟ್ಟನು. ಅತ್ತ ಗಾಂಧಾರಿಗೆ ತಾನು ಗೌರಿಗೆ ಹೇಳಿರುವ ಯುಕ್ತಿಯನ್ನು ತಿಳುಹಿಸಿ, ತುಲಾಭಾರವು ನಡೆಯುವಾಗ ಯತಿಯ ಮಗ್ಗಲಲ್ಲಿ ಕುಳಿತುಬಿಡಬೇಕೆಂದು ಸೂಚಿಸಿದನು.

ಎಂದಿನಂತೆ ಯತಿಗಳು ರಾತ್ರೆ ದಯಮಾಡಿಸಿದರು. ಗೌರಿ ಯು ತನ್ನ ಅಭೀಷ್ಟವನ್ನು ಅರಿಕೆಮಾಡಿದಳು. ಸಂತೋಷ ಸಾಗರದಲ್ಲಿ ಮುಳುಗಿ ತೇಲುತ್ತಿರುವ ಯತೀಶ್ವರರು ಈ ದಾನಕ್ಕೆ ಒಪ್ಪಿದರು. ನಮ್ಮ ನಿರ್ಗುಣಾಚಾರ್ಯರಿಗೆ ತಾನೇ ದಾನ? ಎಂದು ಹಿಗ್ಗಿ ಹೀರೇಕಾಯಿಯಾದರು. ದಾನವೂ ನಡೆದುಹೋಯಿತು. ಯತಿಗಳನ್ನು ಆಚಾರ್ಯರು ಕರೆದುಕೊಂಡು ಹೋಗುವಾಗ, —ಗೌರೀ,ಮುಂದೆ ಯತಿಗಳು ನನ್ನವರು. ನಿನಗೆ ಮೇಲ್ಲೋಟಿ ನಾಮ ಬಿತ್ತು—ಎಂದು ಹೇಳಿ ಯತಿಗಳನ್ನು ಸಾಗಿಸಿದರು. ಆ ರಾತ್ರಿ ಅವರು ಈ ಗಣಿಕೆಯರ ಮನೆಗೆ ಬರಲಿಲ್ಲ.

ಇವರ ಮನೆಯಲ್ಲಿ ಕೋಲಾಹಲವೇ ಕೋಲಾಹಲ. ಇಷ್ಟು ದಿನವೂ ಬರುತ್ತಿದ್ದ ಯತಿಗಳು ಬರಲಿಲ್ಲ. ಆಚಾರ್ಯರೂ ಬರಲಿಲ್ಲ. ದಾನ ಕೊಟ್ಟ ಮೇಲೆ ಬರುವುದುಂಟೆ? ಏನು ಗತಿ? ಗೌರಿಯು ಆಚಾರ್ಯನನ್ನು ಕರೆಸಿ ಕೇಳಿದಳು. ದಾನ ಕೊಟ್ಟ ಮೇಲೆ ಆಗದು ಎಂದರು. ಆಚಾರ್ಯರೇ ಕ್ಷಮಿಸಿ ಎಂದಳು. ಬೇಡಿದಳು. ಕಾಡಿದಳು. ಕೊಡಲಿಕ್ಕೆ ಶಾಸ್ತ್ರವೇ ಇಲ್ಲವೆಂದರು. ಹೀಗೆ ಹೋರಾಟ ಹತ್ತಿ ಶ್ರೀ ಯತಿಗಳನ್ನು ಕೊಡಬೇಕಾದರೆ ಅವರ ತೂಕದಷ್ಟು ಯಾವ ವಸ್ತುವನ್ನಾದರೂ ಕೊಡಬೇಕೆಂದು ನಿರ್ಧಾರವಾಯಿತು. ಇದೆಲ್ಲಾ ಗೌರಿಯ ಮನೆಯಲ್ಲಿ ರಾತ್ರಿ ಸರುಹೊತ್ತಿನಲ್ಲಿ ನಡೆಯಿತು.

ಆಚಾರ್ಯರು ಈ ವಿದ್ಯಮಾನವನ್ನು ನುಚ್ಚಿಡದೇ ಅಲ್ಲಲ್ಲಿ ಹರಡಿದರು. ರಾಜರಿಗೂ ವರ್ತಮಾನ ತಿಳಿಯಿತು. ಈ ತುಲಾಭಾರವನ್ನು ನೋಡಲು ತಮ್ಮ ಕಡೆ ಜಿಲ್ಲಾಧಿಕಾರಿಗಳು—ತಹಶೀಲುದಾರರು, ಇತ್ಯಾದಿ ಅಧಿಕಾರಿಗಳನ್ನೂ ಗೋಪ್ಯವಾಗಿ ಕಳುಹಿಸಿದನು. ಶ್ರೀಕೃಷ್ಣಪರಮಾತ್ಮನ ಲೀಲೆಯನ್ನು ನೋಡಲು ದೇವತೆಗಳೂ ಬಂದು ಮರೆಯಲ್ಲಿ ನಿಂತರು. ದೊಡ್ಡದೊಂದು ತಕ್ಕಡಿಯೂ ಸಿದ್ಧವಾಯಿತು. ಪೂಜಾ ಪುನಸ್ಕಾರಗಳು ನಡೆದ ನಂತರ ಸಂತೋಷಚಿತ್ತರಾದ ಶ್ರೀ ಯತಿಗಳು ತ್ರಾಸಿನ ಒಂದು ಕಡೆ ಕುಳಿತರು. ಗೌರಿಯು ಒಡವೆ ವಸ್ತುಗಳನ್ನೂ, ಹಣವನ್ನೂ ಬೇಕಾದ ಸಾಮಾನನ್ನೂ ಹಾಕಿದರೂ ಮೇಲಕ್ಕೇಳಲಿಲ್ಲ. ಮೊದಲೇ ಏರ್ಪಾಡಾಗಿದ್ದಂತೆ ಗಾಂಧಾರಿಯು ಬಂದು ಕೂತಳು. ತಕ್ಕಡಿ ಮೇಲಕ್ಕೇರಿತು. ಶ್ರೀ ಯತಿಗಳು ಹಾರಿ ಗೌರಿಯನ್ನು ಆಲಿಂಗಿಸಿಕೊಂಡರು. ನಿರ್ಗುಣಾಚಾರ್ಯರು ಗಾಂಧಾರಿಯನ್ನು ಆಲಿಂಗಿಸಲು ಬಹಳ ಪ್ರೇಮಾವಶಿಷ್ಟರಾಗಿ ಆತುರದಿಂದ ಮುಂದೆ ಬರುವುದರೊಳಗಾಗಿ ಆಕೆಯು ಯತೀಶ್ವರರ ಬಳಿ ನಿಂತಳು. ಆಚಾರ್ಯರು ಯತಿಗಳನ್ನು ಆಲಿಂಗಿಸಿ ನಿಂತರು. ಸಭಿಕರೆಲ್ಲರೂ ಗೊಳ್ಳೆಂದು ನಕ್ಕರು.

ಏನೋ ದಾಸಯ್ಯನ ಹರಿಕಥೆ. ತಪ್ಪಿದ್ದರೆ ಕ್ಷಮಿಸಬೇಕು. ಇಂಥ ತುಲಾಭಾರಗಳು ನಡೆಯುತ್ತಲೇ ಇರುತ್ತವೆ. ನಿಜ ಮಾತ್ರದ ತುಲಾಭಾರಗಳು. ಗೌರೀ–ಗಾಂಧಾರಿಯರೂ ಯತಿ ಗಳೂ ಭೂಲೋಕದಲ್ಲಿ ಅಂದಿನಿಂದ ಸುಖವಾಗಿ ಇರುವರು.

ಮಂಗಳಂ ಮಂಗಳಂ । ಶ್ರೀ ಗುರುರಾಜ ॥
ಮಂಗಳವನು ಪಾಡಿ । ರಂಗರೂಪಿನ ಯತಿಗೆ ।
ಹೆಂಗಳ ಮನದಲ್ಲಿ । ಸಿಂಗರ ಬೆಳಸಿ ॥
ಕೃಷ್ಣಸೇವಕನೆಂದು । ಕೃಷ್ಣಸೇವೆಗೆ ಬಂದು ।
ಕೃಷ್ಣಲೀಲೆಯ ಮಾಡಿ । ಭ್ರಷ್ಟನಾಗುವ ನಿನಗೆ ॥

ಶ್ರೀ ಲಕ್ಷ್ಮೀರಮಣ ಗೋವಿಂದಾ—ಗೋವಿಂದ.

ವಿ॥ ದಾಸಯ್ಯ.




ನಮ್ಮ 'ಏಕಾಂಕ' ಓದಿ! ಆ ನಾಟಕದ ಕೃಷ್ಣನ ಕಣ್ಣಿಗೆ ಬಿದ್ದ ಆ ಉಡುಪಿಯ ಹೋಟೆಲು ಇದೇ!.

## ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 107/35.

1. ಚಂದ್ರಮ್ಮ, 2. ಕೃಷ್ಣಯ್ಯ, 3. ರಾಮಪ್ಪಯ್ಯ, 4. ಆನಂದ ರಾವ್, 5. ಗುಂಡು ರಾವ್. } ಅರ್ಜಿದಾರರು.

ಅರ್ಜಿದಾರರು 1ನೇ ಅರ್ಜಿದಾರಳ ಹೆಸರಿಗೆ ಕಾರ್ಕಳ ತಾಲೂಕು ಮೂಳ ಗ್ರಾಮದ ಬೋಳ ಕೃಷ್ಣಯ್ಯನವರ ಮೊಗ ಪೌತಿ ಬೋಳ ವೆಂಕಟ್ರಾಯರಿಗೆ The Empire of India Life Assurance Co., Ltd. ನಿಂದ ಬರತಕ್ಕ ಸುಮಾರು ರೂಪಾಯಿ 515 ಪಡೆಯುವರೆಯೂ ಮತ್ತು The Kanara Bank, Karkalದಲ್ಲಿ Loan No. 103/35 ಆಗಿ ಅಡವು ಇಟ್ಟ ಆಭರಣಗಳನ್ನು ಹಿಂದೆ ಪಡೆಯುವರೆಯೂ ಒಂದು Succession Certificateಗೆ ಅರ್ಜಿ ಮಾಡಿಕೊಂಡಿರುವುದರಿಂದಲೂ ಮತ್ತು ಸದರಿ ಅರ್ಜಿಯು ತಿಸ್ಮಿಯು ಇದೇ ತಿಂಗಳ ತಾ. 29ಕ್ಕೆ ಇಟ್ಟಿರುವುದರಿಂದ ಸಹ ಸದರಿ ಅರ್ಜಿ ಬಾಬ್ತು ಸಂಬಂಧಪಟ್ಟ ಯಾರಿಗಾದರೂ ಸದರಿ ವೆಂಕಟ್ರಾಯರ ವಿಧವೆ 1ನೇ ಅರ್ಜಿದಾರಳಾದ ಚಂದ್ರಮ್ಮನ ಹೆಸರಿಗೆ Succession Certificate ಕೊಡುವರೆ ಆಕ್ಷೇಪವಿದ್ದರೆ ಸದ್ರಿಯವರು ತಾರೀಕು 29–1–1936ರ ದಿವಸ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಬಂದು ಆಕ್ಷೇಪಣೆ ದಾಕಲು ಮಾಡಬೇಕು. ಇಲ್ಲವಾದರೆ ಸದರಿಯವಳ ಹೆಸರಿಗೆ Succession Certificate ಕೊಡಲ್ಪಡುವುದು.

*Karkal, 7th Jan. '36.* } **I. S. Rao,** *Advocate for the Petitioners.*


## 'ರಾಮುದಾಸ' ವಜ್ರಕಾಯ ಗುಟಿಕಾ

***(STERN-VIGOUR)***

ಈ ಔಷಧದಲ್ಲಿ ಭಂಗಾರ, ಕಸ್ತೂರಿ, ಕೇಸರಿ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಧಾತು ಕ್ಷೀಣತೆ ಮೂಲಕ ಉದ್ಭವಿಸುವ ಸ್ವಪ್ನೇಂದ್ರಿಯ ಮೊದಲಾದ ಕೊರತೆಗಳನ್ನು ದೂರಪಡಿಸಿ, ಧಾತುಸ್ತಂಭನ ಶಕ್ತಿಯನ್ನು ಹೆಚ್ಚಿಸಿ, ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದವನ್ನು ಕೊಡುವುದು, ಹಾಗೂ ಆತ್ಯಾಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವುದು. ೧೨ ಗುಳಿಗೆಗಳ ಬಾಟ್ಲಿ ೧ಕ್ಕೆ ರೂ. ೧—೪—೦; ೫ಂಕ್ಕೆ ೪—೮—೦.

ಪ್ರತಿ ದಿನ ಒಂದೇ ಗುಳಿಗೆಯಂತೆ ಸೇವಿಸುವುದು.

ನಮ್ಮ ಇತರ ಅನುಭವಸಿದ್ಧ, ವನಸ್ಪತಿಜನ್ಯ ಔಷಧಗಳ ಮಾಹಿತೀ ಪತ್ರಿಕೆಯನ್ನು ನಮ್ಮ ಏಜಂಟರಿಂದಾಗಲೀ ವ್ಯಾಪಾರಸ್ಥರಿಂದಾಗಲೀ ಪಡೆಯಿರಿ. ನಮ್ಮ ಔಷಧಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಒಂದು ಊರಲ್ಲಿ ಪ್ರಮುಖ ವ್ಯಾಪಾರಸ್ಥರಲ್ಲಿ ದೊರಕುವವು.

ತಯಾರಿಸುವವರು:—
**ರಾಮುದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.**

ಜಿಲ್ಲಾ ಏಜಂಟರು:—
**ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.**

ಸಬ್ ಏಜಂಟರು:—
ಕೆ. ರಾಮ ನಾಯಕ, ಕಾಸರಗೋಡು.
ಎಮ್. ಮುಕುಂದ ಕೃಷ್ಣನಾಯಕ, ಮಂಜೇಶ್ವರ.
ಡಾ। ಕೆ. ಶ್ರೀನಿವಾಸ ಪೈ, L. M. P., ಪುತ್ತೂರು.
ವಿಕ್ಟೋರಿಯಾ ಪ್ರೆಸ್, ಬಂಟ್ವಾಳ.
ಡಾ। ರಾಯಪ್ಪ ಕಾಮತ್, ಎಲ್. ಎಂ. ಪಿ., ಮೂಲ್ಕಿ.
ವಿ. ವಿ. ಶೆಣೈ, ಕಾರ್ಕಳ.
ಮೆ। ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.
ದಿ ಮೊಡರ್ನ್ ಫಾರ್ಮಸಿ, ರಾಮಚಂದ್ರ ಹೆಬ್ಬಾರ, ಕೋಣೆ } ಕುಂದಾಪುರ.

# STRAW BOARDS

(Dutch unlined) all weights offered at competitive rates. Special rates for seasonal supply Ask for quotations.

***Basel Mission Book Depot,***
**MANGALORE, S. K.**

ನಕ್ಕು ನಗಿಸಿರಿ!
ಅಳಿಸಿ ನಗಿಸಿರಿ!

# ನಗುವ-ನಂದ

ಹಾಸ್ಯರಸಭರಿತ ಸಚಿತ್ರ ಮಾಸಪತ್ರಿಕೆ

● ನಗೆಯ ನೆಲೆಯೇ ಆನಂದದ ಬೀಡು! ಇಂದು ನಕ್ಕ ನಗೆಯು ಮುಂದಿನ ರೋಗಕ್ಕೆ ಮದ್ದು. ನಗೆಯ ತಿರುಳನ್ನರಿತವನು ಸರ್ವಜನ ಪ್ರಿಯನು. ಜನಮನರಂಜನೆಯ ಲೇಖನ, ಕಥೆ, ಕವಿತೆ, ವ್ಯಂಗ್ಯ ಚಿತ್ರಗಳಿಂದ ರಂಜಿಸುವ 'ನಗುವ-ನಂದ'ನು ನಿಮ್ಮನ್ನು ಆನಂದಗೊಳಿಸುವುದಲ್ಲದೆ ನಿಮ್ಮ ಗೃಹದಲ್ಲಿ ನಗೆಯ ಲಹರಿಯನ್ನೇ ಹರಿಸುವನು.

ವಾರ್ಷಿಕ ಚಂದಾ: ಒಂದು ರೂಪಾಯಿ.
ಬಿಡಿ ಪ್ರತಿ: ಒಂದಾಣೆ.

ಸೋಲ್ ಏಜೆಂಟರು:
ಸುಬೋಧ ಸಾಹಿತ್ಯ ಭಂಡಾರ, ಬೆಂಗಳೂರು ನಗರ.

# ಭಗವದ್ಗೀತೆಯೂ ಬಕವದ್ಗೀತೆಯೂ.

(ಎಮ್. ನರಸಿಂಗ ರಾವ್, ಬಿ. ಏ., ಎಮ್. ಎಲ್., ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜಿ-ನಿವೃತ್ತ.)

ಭಗವದ್ಗೀತೆಯ ವಿಷಯ ಬರೆಯಬೇಕೆಂದರು ಸಂಪಾದಕರು. ಬಕವದ್ಗೀತೆಯಾಗದೇ ಎಂದೆ. ಅಂದರೆ, ಹಲವರಿಗೆ ಜೇಬಿನಲ್ಲೂ ಬಾಯ್ಮಲ್ಲೂ ಭಗವದ್ಗೀತೆ, ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಕೃಷ್ಣಾರ್ಜುನಸಂವಾದೇ; ಹೊಟ್ಟೆಯಲ್ಲೂ ಎದೆಯಲ್ಲೂ ಬಕವದ್ಗೀತೆ, ಧರ್ಮವಿದ್ಯಾಯಾಂ ಭೋಗಶಾಸ್ತ್ರೇ ಕಾಕವಣ್ಣಡಕಸಂವಾದೇ. ಬಾಯ್ಬಿಟ್ಟು ಹೇಳಬೇಕಾದರೆ ಇವರೇ ಬಹುಮಂದಿ; ಭಗವದ್ಗೀತೆಯಂತೆ ನಡೆಯಲು ಯತ್ನಿಸುವವರು ವಾ ನ ವಾ; ಇದ್ದರೂ ಮೊದಲನೆಯವರು, ಅಂದರೆ ಬಕವದ್ಗೀತಾನುಯಾಯಿಗಳು, ಅವರಿಗೆ ರಹಸ್ಯದಲ್ಲಿ ಹಾಸ್ಯ ಮಾಡುವರು, ಸ್ವಸ್ಥರೆನ್ನುವರು. ಭಗವದ್ಗೀತೆ ಲೋಕಾಡಂಬರ, ಬಕವದ್ಗೀತೆ ಲೋಕಾಚರಣೆ.

ಇಂದೊಮ್ಮೆ ಮಾತ್ರ ಹೀಗಾದುದಲ್ಲ. ಸುವರ್ಣರಜತ ಯುಗಗಳು ಕಳೆದುಹೋದುವು. ಕಾಂಸ್ಯಯುಗದ ಕೊನೆ ಹತ್ತಿತು. ಸತ್ವಗುಣವು ಹೆಚ್ಚುಕಡಿಮೆ ಯಾರಲ್ಲೂ ಕಾಣದಾಯ್ತು, ರಜೋಗುಣದ ಅಭಿವೃದ್ಧಿ ಕಂಡಿತು, ಅಲ್ಲಲ್ಲಿ ತಮೋಗುಣದೊಡನೆ ಗೆಳೆತನ ಬೆಳೆಯಿಸಲು ಹೇಸಲಿಲ್ಲ. ಪ್ರಾರಂಭದಲ್ಲಿ ಈ ಗೆಳೆತನವು ರಹಸ್ಯವಾಗಿಯಿದ್ದಿತು. ಬೆಲೆವೆಣ್ಣುಗಳ ಮನೆಗೋ ಕಳ್ಳಂಗಡಿಗೋ ದ್ಯೂತರಂಗಕ್ಕೋ ಮೊದಲಾಗಿ ಇಳಿಯ ಹೋಗುವವರು ಅತ್ತಿತ್ತ ಹೊಂಚು ನೋಡಿ ಹಾರುವರಲ್ಲವೇ? ಕೆಲವು ಕಾಲಕ್ಕೆ ರಹಸ್ಯವು ರಟ್ಟಾದರೂ, ಕರ್ಮಿಗಳು ತಮಗೆ ತಿಳಿಯದಂತೆ ನಟಿಸಿದರು, ನಿರ್ದೋಷ ಕಾರ್ಯವನ್ನು ಉದ್ದೇಶಿಸಿ ಹೋದವರೆಂದರು, ಹಾಗೆ ಹೇಳುತ್ತ ಅಡ್ಡವಾಗಿ ಒಂದು ಕಣ್ಣು ಒತ್ತಿದರು, ಗಲ್ಲದಲ್ಲಿ ನಾಲಗೆಯನ್ನು ತೂರಿದರು. ಅಲ್ಲೇ ಕಾಪಟ್ಯದ ಹುಟ್ಟು.

ಕಾರ್ಯಾದಿಗಳಲ್ಲಿ ಸತ್ವರಜಸ್ತಮ ಭಾವಗಳಾವುವೆಂಬುದನ್ನು ಭಗವದ್ಗೀತೆಯ ಹದಿನೇಳನೆಯ ಮತ್ತು ಹದಿನೆಂಟನೆಯ ಅಧ್ಯಾಯಗಳಲ್ಲಿ ಕೂಲಂಕಷವಾಗಿ ವಿವರಿಸಿಯಿಡೆ. ಸಾರಾಂಶವಾಗಿ, ಪ್ರತಿಫಲವನ್ನು ಬಯಸದೆ ಸದ್ಧರ್ಮದಲ್ಲಿ ವರ್ತಿಸುವುದು ಸತ್ವಭಾವ, ಫಲಾಕಾಂಕ್ಷೆಯಿಂದ ಧರ್ಮಕ್ಕಾದರೂ ಕೆಯ್ಮಿಕ್ಕುವುದು ರಾಜಸ, ಪರಪೀಡಾನಿರೀಕ್ಷೆ ತಾಮಸ. ದ್ವಾಪರಾಂತ್ಯದಲ್ಲಿ ರಾಜಸಭಾವವು ತಲೆದೋರಿ ರಾಜಪ್ರಜೆಗಳಲ್ಲಿ ಬಲವಾಗಿ ನಿಂತಿತು. ಧರ್ಮಕ್ಕಾದರೂ ಹಾನಿಗ್ಲಾನಿಗಳು ಬಂದೊದಗಿದುವು.

ಎಲ್ಲರೂ ಹೀಗಿರಲಿಲ್ಲ. ಶ್ರೀಕೃಷ್ಣನು ತ್ರಿಗುಣಾತೀತನಷ್ಟೆ! ಯುಧಿಷ್ಠಿರ, ಭೀಷ್ಮ, ದ್ರೋಣ, ಕೃಪ, ವಿದುರ, ಮೊದಲಾದವರಲ್ಲಿ ಸತ್ವಗುಣಶೇಷವು ವಿಶೇಷವಾಗಿ ಹರಿಯುತ್ತಿದ್ದಿತು. ದುರ್ಯೋಧನ, ದುಶ್ಶಾಸನ, ಶಕುನಿ, ಜಯದ್ರಥ, ಇವರಲ್ಲಿ ತಮೋಗುಣದ ಅಂಧಕಾರವು ನಿಬಿಡವಾಗಿದ್ದಿತು. ಭೀಷ್ಮ ಕರ್ಣಾಶ್ವತ್ಥಾಮಾದಿಗಳು ಬರೆ ಹಠಸಾಧಕರು, ತಮೋಗುಣಪಂಕದಲ್ಲಿ ಮುಳುಗಾಡಿದವರಲ್ಲ. ಆ ಧೃತರಾಷ್ಟ್ರನನ್ನು ಎಂದಿಗೂ ನಂಬಬೇಡರಿ. ಅನೇಕ ಕವಿಗಳು ಅನೇಕ ವಿಧಗಳಲ್ಲಿ ಆತನ ಸ್ವಭಾವಗಳನ್ನು ಆತನ ಮಾತುಗಳಿಂದ ಅರಿಯಿಸಿದ್ದಾರೆ. ನನಗೆ ತೋರುವುದು ಆತನು ಮಹಾ ಸ್ವಾರ್ಥಪರಾಯಣನೆಂದು. ಪಾಂಡವರ ಮೇಲೆ ನಿಜವಾಗಿಯೂ ಮೋಹವಿಲ್ಲ. ಮಹಾತಂತ್ರಿಯಾದ ಶ್ರೀಕೃಷ್ಣನು ಅವರನ್ನು ಸ್ನೇಹಿಸಿರುವುದರಿಂದ ಅವರಿಗೆ ಜಯ ನಿಶ್ಚಯ, ತನ್ನವರಿಗೆ ಅಪಜಯ ನಿಸ್ಸಂಶಯವೆಂದು ಆತನಿಗೆ ಗೊತ್ತು. ಪಾಂಡವರಿಗೆ ಏನಾದರೂ ಕೊಟ್ಟುಕಳುಹಿಸೆಂದು ಅರ್ಧಮನಸ್ಸಿನಿಂದ ದುರ್ಯೋಧನನಿಗೆ ಬುದ್ಧಿ ಹೇಳುವನು. ಏಕೆ? ಶ್ರೀಕೃಷ್ಣನ ಭೀತಿಯಿಂದ, ಪಾಂಡವರ ಮೇಲಣ ಮಮತೆಯಿಂದಲ್ಲ—'ಬೇಡ, ಮಗನೇ, ಕೃಷ್ಣರಾಯನ। ಕೊಡೆ ಕಲಹ!' ಕೃಷ್ಣರಾಯನಿಗೆ ಕೌರವನಿಂದ ತನಗಾಗಿ ಏನೂ ಬೇಕಿತ್ತೇ? ಧೃತರಾಷ್ಟ್ರನು ಶುದ್ಧಮನಸ್ಕನಾಗಿದ್ದರೆ ಭಾರತ ಯುದ್ಧವು ನಡೆಯುತ್ತಿತ್ತೋ ಇಲ್ಲವೋ? ಸ್ವಾರ್ಥವೇ ರಜೋಗುಣದ ಬೀಜ. ಕಾಪಟ್ಯವೇ ತಮೋಗುಣದ ಸೀಮೆ.

ಬಕವದ್ಗೀತೆಯೆಂದರೆ ಕಾಪಟ್ಯದ ನಿಧಾನ—ಕಣ್ಮುಚ್ಚಿ ಮೊಣಕಾಲ್ನೀರಿನಲ್ಲಿ ಒಂದೇ ಕಾಲೂರಿ ಯೋಗಧ್ಯಾನದಲ್ಲೆಂಬಂತೆ ನಿಂತು ಸವಿಾಪಿಸುವ ಜಲಚರಗಳನ್ನು ನಿಶ್ಶಬ್ದವಾಗಿ ನುಂಗುವ ವಿದ್ಯೆ. ಭಗವದ್ಗೀತೆ ಬೇರೆ. ಅದನ್ನು ಅಥವಾ ಅದರ ತಾತ್ಪರ್ಯವನ್ನು ಶ್ರೀಕೃಷ್ಣನು ಅರ್ಜುನನಿಗೆ ಯುದ್ಧರಂಗದಲ್ಲಿ ಹೇಳಿದುದೇ ಇಲ್ಲ, ಅದನ್ನು ಬಾದರಾಯಣನು ತನ್ನ ಮಹಾಭಾರತದಲ್ಲಿ ಬರೆದುದೂ ಅಲ್ಲ, ಇಬ್ಬರೂ ಜ್ಞಾನಿಗಳು ದೇವಾಂಶಸಂಭೂತರಲ್ಲ, ಹೀಗೆ ತರ್ಕಿಸುವವರುಂಟು. ಹಾಗಾಗಲಿ. ಗೀತೆಯ ಉಪದೇಶವನ್ನು ಕುರಿತು ಏನು ಹೇಳಲಿಕ್ಕಿದೆ? ಅದು ಆ ಮತದ ಈ ಮತದ ಶಾಸ್ತ್ರವೇನಲ್ಲ. ಸರ್ವದರ್ಶನಸಮ್ಮತವು, ಸರ್ವಮತಾತೀತವು,ಆದುದರಿಂದಲೇ ಸರ್ವ ರಾಜ್ಯಗಳಲ್ಲಿಯೂ ಸರ್ವ ಮತಗಳಲ್ಲಿಯೂ ಅದಕ್ಕೆ ಮನ್ನಣೆಯುಂಟು. ಯಾವ ಕಾಲದಲ್ಲೊ ಯಾರೊ ಒಬ್ಬನು ಅದನ್ನು ಕಲ್ಪಿಸಿ ಭಾರತದಲ್ಲಿ ಸೇರಿಸಿಬಿಟ್ಟನೆನ್ನೋಣ. ಆದರೇನು? ಬಕವದ್ಗೀತೆಯಲ್ಲವಷ್ಟೆ! ಏಕೆ ಎಂದು ಬರೆದಿರಬೇಕು? ಲೋಕದಲ್ಲಿ ಮಿಥ್ಯಾಚಾರವೇ ತಥ್ಯವಾಗಿ ತಮಗನುಕೂಲವಿದ್ದಷ್ಟಕ್ಕೆ ಮಾತ್ರ ಜನರು ಕರ್ತವ್ಯ-ಧರ್ಮದಲ್ಲಿ ಅರೆಜುರಿಕೆಯಿಂದ ಕೈಯಿಕ್ಕುತ್ತಿರುವಾಗ ಅನೇಕ ವಿಧದ ತತ್ವ ಜ್ಞಾನಗಳನ್ನು ಕುರಿತು ವಾಗ್ಯುದ್ಧ ನಡೆದೂ ಇಹಪರಸಾಧಕವಾದ ಕರ್ಮಜ್ಞಾನವು ಬತ್ತಿಹೋದಾಗಲೂ ಇರಬಹುದು.

ಗೀತಾಕರ್ತೃವಿನ ಮುಖ್ಯ ಧ್ಯೇಯವು ಕರ್ತವ್ಯ ಧರ್ಮ ಕರ್ಮಗಳನ್ನು ಫಲಾಕಾಂಕ್ಷೆಯಿಲ್ಲದೆ ಮಾಡಬೇಕೆಂಬುದೇ. ಈ ಸೂತ್ರವನ್ನು ಅನೇಕ ವಿಧವಾಗಿ ಒತ್ತಿ ಹೇಳಿದೆ. ಉದಾಸೀನವದಾಸೀನವಾಗದೆ ಇಂತಹ ಕರ್ಮಗಳಲ್ಲಿ ಯಾರೊಬ್ಬನು ನಿರತನಾದರೆ ಫಲದ ಬಯಕೆಯಿಲ್ಲದುದರಿಂದ ಕರ್ಮಜನಿತ ದೋಷಗಳು ಆತನನ್ನು ತಟ್ಟವು; ಆತನು ಕರ್ಮಾರಂಭದಲ್ಲಿ ಪ್ರವೇಶಿಸದಂತ ತ್ಯಾಗಿಯೇ. ಎಂತಹ ಸತ್ಕರ್ಮವನ್ನಾದರೂ ಸ್ವಫಲಾಪೇಕ್ಷೆಯಿಂದ ಮಾಡಿದರೆ ಆ ನಿರೀಕ್ಷೆಯಿಂದಲೇ ಫಲವು ಹುರುಳಿಲ್ಲದಾಗುವುದು. ಕರ್ಮಕ್ಕೆ ಕೈ ಹಾಕದ ಮಾತ್ರದಿಂದ ಸಂನ್ಯಾಸ ಫಲವು ದೊರೆಯದು—ಕರ್ಮವನ್ನು ಮಾಡಲಾರೆನೆಂದು ಎಷ್ಟು ನಿರ್ಧರಿಸಿದರೂ ಪ್ರಕೃತಿಗುಣಗಳು ಮಾಡಿಸಿಯೇ ಬಿಡುವುವು. ತ್ಯಾಗವೆಂದರೆ, ಸಂನ್ಯಾಸವೆಂದರೆ,—ಫಲತ್ಯಾಗ, ಕರ್ಮತ್ಯಾಗವಲ್ಲ. ಇಂತಹ ಕರ್ಮವನ್ನು ತಾನು ಮಾಡತಕ್ಕುದೇ ಎಂಬುದು ಪ್ರಥಮ ವಿಚಾರ, ಮಾಡತಕ್ಕುದೆಂದಾದರೆ ಅದಕ್ಕೆ ಕೈಯಿಕ್ಕಲೇಬೇಕು. ಅದರ ಫಲವು ಆತನಿಗೆ ಶುಭವಾಗಲಿ ಅಶುಭವಾಗಲಿ, ಪುಣ್ಯಪ್ರದವಾಗುವುದು, ಅಥವಾ ಸಾರ್ಥಕವಾಗುವುದು. ಪಾಪ ಪುಣ್ಯದ ಯೋಚನೆ ಕೂಡ ಬೇಡ.

(ಭಜ ಗೋವಿಂದ ಧಾಟಿ)

ಕರ್ಮದಿ ಮಾತ್ರ ನಿವಸನಗಧಿಕಾರ-
ವುಂಟಿಂದೆಂದೂ ಫಲದೊಳಗಿಲ್ಲಾ! ।
ಕರ್ಮದ ಫಲಕುದ್ದೇಶಿಸ ಬೇಡ!
ನಿನಗೆ ಅಕರ್ಮದ ಸಂಗವೆ ಸಲ್ಲಾ! ॥ (II ೪೭)

ಯೋಗದಿ ನಿಂತಾಸಕ್ತಿಯ ತ್ಯಜಿಸಿ,
ಸಫಲತೆ ನಿಷ್ಫಲತೆಯಲಿ ಸಮಾನ- ।
ಭಾವವನಿಟ್ಟುರೆ ಕರ್ಮವ ಮಾಡೈ;
ಯೋಗವೆನಿಪುದು ಸಮತ್ವದ ಜ್ಞಾನ! ॥ (II ೪೮)

ಸಮಬುದ್ಧಿಯ ಮಾನವನಿಂಗಿಲ್ಲೀ
ಪಾಪದ ಪುಣ್ಯದ ಸೋಂಕೇ ಇಲ್ಲಾ! ।
ಹೀಗಿರೆ ಯೋಗಕೆ ಯತ್ನವ ಮಾಡೈ!
ಯೋಗ್ಯವೆನಲು ಕರ್ಮದ ಕೌಶಲ್ಯ! ॥ (II ೫೦)

ಶುಭವೇ ಬರಲಿ, ಅಶುಭವೇ ಬರಲಿ,—
ಸಂತಸವಿಲ್ಲಾ, ಶೋಕವದಿಲ್ಲಾ! ।
ಸರ್ವತ್ರದೊಳಾಸಕ್ತಿರಹಿತನಾ
ಪ್ರಜ್ಞೆ ಪ್ರತಿಷ್ಠಿತವಾಗಿಹುದಲ್ಲಾ! ॥ (II ೫೭)

(ಗೋವಿನ ಹಾಡ್ಲು)

ಕರ್ಮ ಮಾಡದ ಮಾತ್ರ ಸಿಗದೈ
ಫಲವು ಕರ್ಮತ್ಯಾಗದಾ; ।
ಅಂತ ಬಾಹ್ಯತ್ಯಾಗದಿಂದಲಿ
ಹೊಗಲರಿದು ಸಿದ್ಧಿಯ ಪದಾ. ॥ (III ೪)

ಕರ್ಮ ಮಾಡದೆ ನಿಲ್ಲಲರಿದಹು-
ದಾರಿಗೂ ಒಂದೇ ಕ್ಷಣಾ; ।
ಅಸ್ವತಂತ್ರದಿ ಮಾಡಿಸುವುದಾ
ಪ್ರಕೃತಿಸಂಭವವಹ ಗುಣಾ. ॥ (III ೫)

ಈ ಉಪದೇಶಕ್ಕೆ ವಿಪರೀತವಾಗಿದ್ದರೆ ವೇದಗಳನ್ನಾದರೂ ಲಕ್ಷ್ಯಿಸಲಾಗದು, ಏಕೆಂದರೆ ತ್ರಿಗುಣಗಳಿಂದ ಹೊರ ಬಿದ್ದವನಿಗೆ ತ್ರೈಗುಣ್ಯವಿಷಯವಾದ ವೇದಗಳು ಕೆಲಸಕ್ಕೆ ಬಾರವು. (IX ೨೧; II ೪೫)

(ಭಜ ಗೋವಿಂದ ಧಾಟಿ)

ಸುತ್ತಲು ತುಂಬಿದ ನೀರಿರೆ ಕೆರೆಯಿಂ-
ದೆಷ್ಟು ಪ್ರಯೋಜನ ಸಿಕ್ಕುವುದಣ್ಣಾ, ।
ವೇದಗಳಿಂದಲಿ ಬ್ರಹ್ಮಜ್ಞಂಗೆ
ಸಿಗುವ ಪ್ರಯೋಜನವಷ್ಟೇ ಸಣ್ಣಾ! ॥ (II ೪೬)

ಈ ಮುಖ್ಯವಾದ ನಿಷ್ಕಾಮ ಕರ್ಮವೆಂಬ ಧ್ಯೇಯವೇ ಸರ್ವ ಲೋಕದ ಮನಸ್ಸನ್ನು ಸೆರೆಹಿಡಿಯಲಿಕ್ಕೆ ಕಾರಣ. ಕಾಮ ದೊಡನೆ ಕ್ರೋಧವನ್ನೂ, ಕ್ರೋಧಲೋಭಗಳನ್ನೂ ಹೀಗಳೆದಿದೆ. ಫಲನಿರೀಕ್ಷೆಯೇ ಕಾಮವು; ಸಿಕ್ಕಿದ ಫಲವನ್ನು ತನಗಾಗಿಯೇ ಬಚ್ಚಿಟ್ಟುಕೊಳ್ಳುವುದೇ ಲೋಭವು; ಕ್ರೋಧವೆಂದರೆ ಫಲಾನ್ವೇಷಣೆಯಲ್ಲಿ ತಗಲುವ ಮನೋಭ್ರಮಣವು, ಅಶಾಂತತ್ವವು, ಬರೆ ಸಿಟ್ಟೆಂತಲ್ಲ (III ೩೭-೪೧ಯಲ್ಲಿ ಕಾಮಕ್ರೋಧಗಳನ್ನು ವೊದಲು ಬೇರೆಬೇರೆಯಾಗಿ ಹೇಳಿ ಆ ಮೇಲೆ ಒಂದೇ ಎಂಬಂತೆ ಏಕವಚನವಾಗಿ ಹೇಳಿಯಿದೆ.)

ಗೀತೆಯ ಎರಡನೆಯದಾದ ಮುಖ್ಯ ಧ್ಯೇಯಕ್ಕೆ ನಿರ್ದ್ವಂದ್ವವೆನ್ನಬಹುದು. ಇದು ನಿಷ್ಕಾಮ ಕರ್ಮದಿಂದ ಹರಿದು ಬರುವುದು. ಶುಭಾಶುಭಫಲವಿಚಾರವಿಲ್ಲದೆ ಕರ್ಮವನ್ನು ಮಾಡಲಾರಂಭಿಸಬೇಕೆಂದರೆ, ಕರ್ಮ ಮಾಡಿ ತೀರಿದ ಮೇಲೆ ಶುಭ ಫಲವಾದರೆ ಹಿಗ್ಗಲೂ ಅಶುಭ ಫಲವಾದರೆ ಕುಗ್ಗಲೂ ಬಾರದೆಂತಾಯ್ತಷ್ಟೆ! ಕರ್ಮಫಲಗಳಲ್ಲಿ ಮಾತ್ರವಲ್ಲ, ಸರ್ವತ್ರ ಪ್ರಾಣಿಗಳನ್ನು ಏಕದೃಷ್ಟಿಯಾಗಿ ನೋಡತಕ್ಕುದು. ದೇಹವು ನಶ್ವರ; ದೇಹಿಯು, ದೇಹದಲ್ಲಿರುವ ಆತ್ಮನು, ಶಾಶ್ವತ. ಪೂರ್ವಕಾಲದಲ್ಲಿ ಸಾವಿರಾರು ಕಾಲ ಮುಖವೆತ್ತಿ ಕಾಲುಂಗುಟವೊಂದರಲ್ಲಿ ನಿಂತು ತಪಸ್ಸು ಗೆಯ್ಯುತ್ತಿದ್ದರಂತೆ, ಬಹುಕಾಲ ಬಹುಶ್ರಮದಿಂದ ಧ್ಯಾನಗೆಯ್ಯುತ್ತಿದ್ದರೆಂದು ತಾತ್ಪರ್ಯ. ಅಷ್ಟೇಕೆ ಬೇಕಾಯಿತು? ತನಗೆ ಪ್ರಸನ್ನನಾಗಿ ತನಗೆ ಮುಕ್ತಿಯನ್ನು ಕೊಡು ಎಂಬ ಧ್ಯಾನವಿರುವಷ್ಟಕ್ಕೆ ಒಂದೂ ಹುಟ್ಟಲಿಲ್ಲ. ನಾನು ತಾನೆಂಬಲ್ಲಿ ಜ್ಞಾನ ಶೂನ್ಯ. ಸಮಸ್ತ ಜೀವಿಗಳಲ್ಲಿ 'ಸಮತ್ವವನ್ನು ಯೋಜಿಸಿ ಧ್ಯಾನಕ್ಕೆ ತೊಡಗಿದ ಕೂಡಲೆ ಪರಮಾತ್ಮನು 'ಪ್ರತ್ಯಕ್ಷನಾದನು'. ಪ್ರತ್ಯಕ್ಷನಾದನೆಲ್ಲಿ? ಸನ್ಮುಖಕ್ಕಲ್ಲ, ತನ್ನ ಹೃದಯದಲ್ಲೇ! ಬ್ರಹ್ಮಜ್ಞಾನವು ಹುಟ್ಟಿತೆಂಬರ್ಥ. ಕರ್ಮಯೋಗದ ಇಂಗಿತವು ಇಕ್ಷ್ವಾಕು ಕುಲದ ಅರಸರಲ್ಲಿ ಪಾರಂಪರ್ಯವಾಗಿ ಬಂದು ಕೊನೆಗೆ ನಷ್ಟವಾಯ್ತೆಂದು, ರಜೋಗುಣದಲ್ಲಿ ಸಿಕ್ಕೊಂಡಿತೆಂದು, ಗೀತೆಯಲ್ಲೇ ಇದೆ. ಜನಕರಾಜನಷ್ಟು ದೊಡ್ಡ ಯೋಗಿಯು ಇದ್ದಿರಲಿಲ್ಲ. ಅಂತಹ ಯೋಗಿಯೇ ರಾಜ್ಯಭಾರವನ್ನು ವಹಿಸಿದ್ದನು, ಗುಹಾವಾಸಿಯಾಗಿರಲಿಲ್ಲ.

(ವಂಶಸ್ಥ ವೃತ್ತ)

ವನೇಷು ದೋಷಾಃ ಪ್ರಭವಂತಿ ರಾಗಿಣಾಂ ।
ಗೃಹೇಷು ಪಂಚೇಂದ್ರಿಯನಿಗ್ರಹಸ್ತಪಃ ॥
ಅಕುತ್ಸಿತೇ ಕರ್ಮಣಿ ಯಃ ಪ್ರವರ್ತತೇ ।
ನಿವೃತ್ತರಾಗಸ್ಯ ಗೃಹಂ ತಪೋವನಮ್ ॥

ನಿಷ್ಕಾಮ ಕರ್ಮವೂ ನಿರ್ದ್ವಂದ್ವವೂ ಅಲ್ಲದೆ ಬೇರೆ ಕೆಲವು ಉಪದೇಶಗಳು ಗೀತೆಯಲ್ಲಿವೆ. ಭಕ್ತಿಯೂ ಸ್ವಧರ್ಮ ಪ್ರಶಂಸೆಯೂ ಇವುಗಳಲ್ಲೆರಡು. ಭಕ್ತಿಯೆಂದರೆ ಅನನ್ಯ ಪರಾಭಕ್ತಿ, ಬಾಹ್ಯಭಕ್ತಿಯಲ್ಲ, ವಿಧ್ಯಾಚಾರವಲ್ಲ. ಇದು ಸುಲಭವಾದ ಮಾರ್ಗ, ರಾಜವೀಥಿ. ಸ್ವಲ್ಪ ಉದ್ವಿಗ್ನವಿರಬಹುದು. ಆದರೆ ಕಲ್ಮನುಷ್ಯಗಳ, ನವೀನವಗಳ, ಗುಡ್ಡಬೆಟ್ಟಗಳ, ಏರು ತಗ್ಗುಗಳ ಒಳದಾರಿಯಲ್ಲ. ಸ್ವಧರ್ಮಪ್ರಶಂಸೆಯೆಂದರೆ ಅನ್ಯ ಮತದೂಷಣೆಯಲ್ಲ. ಪರಮಾತ್ಮನನ್ನು ಗಣಿಸುವ ಎಲ್ಲಾ ಮತಗಳಲ್ಲೂ ಮುಕ್ತಿಸಾಧನಗಳುಂಟೆನ್ನುವುದು ಹಿಂದೂ ಮತ. ಇದು ಕಾರಣದಿಂದ ಹಿಂದುಗಳಿಗೆ ಬೇರೆ ಮತಗಳವರನ್ನು ಸೇರಿಸಿಕೊಳ್ಳುವ ಆವಶ್ಯಕತೆ ಇದ್ದಿರಲಿಲ್ಲ.

ಸಾಕಾದ ಧ್ಯೇಯಗಳನ್ನು ಬಿಟ್ಟು ಬೇರೆ ಹಾಟೆಗಳನ್ನು ಗೀತೆಯಲ್ಲಿ ಹಚ್ಚುವುದುಂಟು. ಕುರಾನಿನಲ್ಲಿಯೂ ಬೈಬಲಿನಲ್ಲಿಯೂ ಪೀನಲ್ ಕೋಡು ಉಂಟೆಂಬಂತೆಯಾಯ್ತು. 'ಸೀದಂತಿ ಮಮ ಗಾತ್ರಾಣಿ.....ಭ್ರಮತೀವ ಚ ಮೇ ಮನಃ' ಎಂಬೆರಡು ಶ್ಲೋಕಗಳಲ್ಲಿ (I ೨೯-೩೦) ಆಯುರ್ವೇದವ ಸಾರವುಂಟೆಂದು ಹೇಳಿದವರುಂಟು. 'ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ' ಎಂಬಿತ್ಯಾದಿ ಶ್ಲೋಕಗಳಲ್ಲಿ ಜ್ಯೋತಿಷವ ವಾಸನೆಯುಂಟೆಂದು ಹೇಳುವವರಿರಬಹುದು. ಗೀತೆಯಲ್ಲಿ ಇದ್ದ ತತ್ವಗಳು ಇಹಪರಸಾಧನೆಗೆ ಸಾಲವೇ? ಇಲ್ಲದುದನ್ನು ಕೈಕಾಲು ಕೆಟ್ಟಿ ತಂದು ಸೇರಿಸುವ ವಿದ್ಯೆ ಏಕೆ? ಬೇರೆಯವರ ತಲೆಗೆ ಸುತ್ತಿ ಭ್ರಮೆಗೊಳಿಸಲಿಕ್ಕಿರಬಹುದೇ?

ಗೀತೆಯಲ್ಲಿ ಯಜ್ಞವೆಂಬ ಶಬ್ದವು ಬಹಳವಾಗಿ ಬರುವುದುಂಟು. ಇವಕ್ಕೆ ಗೂಢಾರ್ಥವಿದೆ. ಎರಡರ್ಥಗಳೂ ಇಂಗ್ಲಿಷಿನ Sacrifice ಎಂಬ ಶಬ್ದಕ್ಕೂ ಇರುವುವು. ಸ್ವಪ್ರಯೋಜನವನ್ನು ಮಾತ್ರ ನೋಡದೆ ಧರ್ಮರಕ್ಷಣೆಗಾಗಿ ಪ್ರವರ್ತಿಸುವುದೆಂಬುದು ಗೂಢಾರ್ಥ. ಇದನ್ನು ಗಾಂಧಿ ಮಹಾತ್ಮರು ಚೆನ್ನಾಗಿ ಬಲ್ಲರು. ಧರ್ಮಕ್ಷೇತ್ರವೆಂದರೆ ಒಂದಲ್ಲ ಒಂದು ಕಾಲದಲ್ಲಿ ಮುಕ್ತಿಯನ್ನು ಪಡೆಯಿಲಿರುವ ಮನುಷ್ಯನ ಜೀವಾತ್ಮವೆಂದೂ, ಅದು ಕರ್ಮದೇಹದಲ್ಲಿ ಪಾಪಭಾಗಿಯಾಗಿ ಕುರುಕ್ಷೇತ್ರದ ಬಯಲಾಗಿತ್ತೆಂದೂ, ಕೌರವರು ಆಸುರೀವೃತ್ತಿಗಳೂ ಪಾಂಡವರು ದೈವೀ ಸ್ವಭಾವಗಳೂ ಎಂದೂ, ಸರ್ವಾನುಭವವಾಗಿ ಇವೆರಡಕ್ಕೂ ಹುಟ್ಟುತ್ತಲಿರುವ ಹೋರಾಟವೇ ಭಾರತಯುದ್ಧವೆಂದೂ, ಆ ಹೋರಾಟದಲ್ಲಿ ದೈವೀಸ್ವಭಾವಗಳೇ ಬಹು ಕಷ್ಟಪಟ್ಟಾದರೂ ಗೆದ್ದೇ ಗೆಲ್ಲುವುವೆಂದೂ ಗಾಂಧಿ ಮಹಾತ್ಮರ ಟೀಕೆ. ಹಾಗಾದರೆ ಗೀತೆಯ ಉಪದೇಶಕ್ಕೆ ಇನ್ನಷ್ಟು ತೇಜಸ್ಸು ಬಂತು, ಕುಂದಲ್ಲ.

ಭಗವದ್ಗೀತೆಯನ್ನು ಹಿಡಿಯಬೇಕು, ಬಕವದ್ಗೀತೆಯನ್ನು ಬಡಿಯಬೇಕು, ಕೂಡಿದ ಮಟ್ಟಿಗೆ ವೊದಲನೆಯದನ್ನು ನನ್ನು ಚರ್ಯೆಗಳಲ್ಲಿ ಸೆಳೆಯಲೂ ಎರಡನೆಯದನ್ನು ಕಳೆಯಲೂ ಯತ್ನಿಸಬೇಕು—ಹೀಗಾದರೆ ಗೀತಾಕರ್ತೃವಿನ ಉದ್ದೇಶವು ಸಾರ್ಥಕವಾಗುವುದು. ಇಲ್ಲದಿದ್ದರೆ ತುಷಾಣಾಂ ಖಂಡನಂ ಯಥಾ.


## ಮೂಲ್ಕಿ ನರಸಿಂಗ ರಾವ್

ಬಿ. ಏ., ಎಮ್. ಎಲ್.

ರಿಟಾಯರ್ಡ್ ಡಿಸ್ಟ್ರಿಕ್ಟ್ ಜಡ್ಜ್, ಇವರಿಂದ

**ಸರ್ವಜ್ಞ—ಸಹಸ್ರಾರ್ಥ**

(ಸರ್ವಜ್ಞನ ತ್ರಿಪದಿಗಳು)

**ಉಪೋದ್ಘಾತ—ಟಿಪ್ಪಣಿ ಸಮೇತ ಬೆಲೆ ಆಣೆ 5.**

**ಸುಶೋಭಿತ—ಸುಭಾಷಿತ**

(ಸುಭಾಷಿತ ಶ್ಲೋಕಗಳು)

**ಕನ್ನಡ ಲಿಪಿ, ತಾತ್ಪರ್ಯಾರ್ಥ ಸಮೇತ ಬೆಲೆ ಆಣೆ 7.**

**ಭಗವದ್ಗೀತೆ**

ಸುಲಭ ಗದ್ಯಪದ್ಯಾತ್ಮಕ ಕನ್ನಡ ಟೀಕಾಟಿಪ್ಪಣಿ ಸಮೇತ

ಬೆಲೆ ಆಣೆ 4.

**ಸಿಗುವ ಸ್ಥಳ:—ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು.**

## ಮಂಗಳೂರು ಪೇಟೆಯ ಚಾಲತಿ ಧಾರಣ್ಣ.

| | | | |
|---|---|---|---|
| ಹೊಸ ರಾಶಿ | ... | 3—6 | 3—12 |
| ಮುಸ್ಕತಿ ಅಕ್ಕಿ ಮುಡಿ ೧ಕ್ಕೆ | ... | 3—10 | 4— 2 |
| ಗುಡು | ... | 3— 8 | 3—14 |
| ಹೊಸ ರಾಶಿ | ... | 3— 6 | 3—12 |
| ಅವ್ವಲ್‌ಬಿ ಬೆಳ್ತಿಗೆ ,, ೧,, | ... | 4— 0 | 4— 8 |
| ಗುಡ್ಡು ಬೆಳ್ತಿಗೆ ,, ,, | ... | 3—10 | — |
| ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ | ... | 6— 4 | 7— 0 |
| ಗೋಧಿ ಗೋಣಿ ೧ಕ್ಕೆ | ... | 8— 8 | 10— 4 |
| ಹುರುಳಿ ,, ,, | ... | 5— 4 | 5—12 |
| ಕಡಲೆ ,, ,, | ... | 7— 4 | 9— 8 |
| ತೊಗರಿ ,, ,, | ... | 9— 0 | 9— 8 |
| ತೊಗರಿಬೇಳೆ ಗೋಣಿ ೧ಕ್ಕೆ | ... | 11— 0 | 15— 8 |
| ಉದ್ದು ಮುಡಿ ೧ಕ್ಕೆ | ... | 4— 6 | 4—10 |
| ಹೆಸರು ,, ,, | ... | 4—10 | 5— 0 |
| ರಾಗಿ ಗೋಣಿ ೧ಕ್ಕೆ | ... | 5— 0 | 6— 4 |
| ಊರು ಬೆಲ್ಲ ಖಂಡಿ ೧ಕ್ಕೆ | ... | 32— 8 | 40— 8 |
| ಉಪ್ಪು ಗೋಣಿ ,, | ... | 4— 8 | — |
| ಹೊಬ್ರಿ ಖಂಡಿ ,, | ... | 60— | 70— 0 |
| ಹೊಬ್ರಿ ಹಿಂಡಿ ಖಂಡಿ ೧ಕ್ಕೆ | ... | 28— 0 | 29— 0 |
| ಎಳ್ಳಿಂಡಿ ಖಂಡಿ ೧ಕ್ಕೆ | ... | 33—12 | 35— 0 |
| ಹೊಬ್ರಿ ಎಣ್ಣೆ ಮಣ ೧ಕ್ಕೆ | ... | 5— 0 | 6— 0 |
| ಎಳ್ಳೆಣ್ಣೆ ಡಬ್ಬಿಗೆ | ... | — | 7— 0 |
| ಹಿಮಿಜಿ ಎಣ್ಣೆ ಪೆಟ್ಟಿಗೆ ೧ಕ್ಕೆ | ... | — | 6— 5 |
| ಮೋರಿಸ್ ಸಕ್ಕರೆ ಮಣ ೧ಕ್ಕೆ | ... | 3— 9 | — |
| ಮೆಣಸಿನ ಕಾಯಿ ಮಣ ೧ಕ್ಕೆ | ... | 2— 8 | 4— |
| ಸಾಸಿವೆ ಮುಡಿ ೧ಕ್ಕೆ | ... | 5— 8 | 6— 0 |
| ಕೊತ್ತಂಬರಿ ಮುಡಿ ೧ಕ್ಕೆ | ... | 2— 8 | 3— 0 |
| ವೇಟಿವ ಕಾಫಿ ಖಂಡಿ ೧ಕ್ಕೆ | ... | 145— 0 | 150— 0 |
| ವೇಟಿವ ಪೀಬರಿ ಕಾಫಿ ಖಂಡಿ ೧ಕ್ಕೆ | ... | 185— 0 | 190— 8 |
| ಮೂನ್‌ಸೂನ್ ಏ ಏ ಕಾಫಿ ಖಂಡಿ ೧ಕ್ಕೆ | ... | 190— 0 | 195— 0 |
| ಬಿಳಿ ಗೋಟು ಅಡಿಕೆ ಖಂಡಿ ೧ಕ್ಕೆ (ಹಳ್ತು | | 100— 0 | 115— 0 |
| ಕಾಳುಮೆಣಸು ಖಂಡಿ ೧ಕ್ಕೆ | ... | 102— 8 | 105— 0 |
| ಯೊಲಕ್ಕಿ ಮಣ ೧ಕ್ಕೆ ಕೊಡಗು | ... | 24— 0 | 26— 4 |
| ,, ,, ,, ಸಕಲೇಶಪುರ | ... | 26— 0 | 30— 0 |
| ,, ,, ,, ಬೀಜ | ... | 38— 0 | 40— 0 |
| ಗೇರುಬೀಜ ಮುಡಿ ೧ಕ್ಕೆ | ... | 4— 6 | 4— 8 |
| ಬತ್ತ ಮುಡಿ ೧ಕ್ಕೆ | ... | 1— 8 | 1—10 |
| ಎಳ್ಳು ಮುಡಿ ೧ಕ್ಕೆ | ... | 6— 4 | 6— 8 |
| ತುಪ್ಪ ಮಣ ೧ಕ್ಕೆ | ... | 18— 0 | 19— 0 |
| ಕಬ್ಬಿಣ ಖಂಡಿ ೧ಕ್ಕೆ | ... | 35— 0 | 37— 8 |
| ತಾಂಬ್ರ ತಗಡು ಮಣ ೧ಕ್ಕೆ | ... | 9—12 | 9—14 |
| ಪೀಸು ೧ಕ್ಕೆ | ... | 22— 8 | — |
| ತಾಂಬ್ರ ಪಾತ್ರಗಳು ಮಣ ೧ಕ್ಕೆ | ... | 12— 8 | 14— 0 |
| ಜೀನಿ ಬೆಳ್ಳಿ ಸೇರು ೧ಕ್ಕೆ | ... | 17— 8 | 18— 0 |
| ಹಿತ್ತಾಳೆ ತಗಡು ಮಣ ೧ಕ್ಕೆ | ... | 10— 0 | 10— 0 |
| ಹೊಸತ್ತು ಬಿಳಿಗೋಟು ಖಂಡಿ ೧ಕ್ಕೆ | ... | 75— 0 | 85— 0 |
| ಮಂಗಳೂರು ಹಂಚು I ಕ್ಲಾಸ್—1000ಕ್ಕೆ | | ರೂ. 26ರಿಂದ | 30 |
| ,, ದಂಬೆಗಳು ,, ,, | | ರೂ. 70ರಿಂದ | 80 |
| ನೆಲಕ್ಕೆ ಹಾಸುವ ಇಟ್ಟಿಗೆಗಳು ,, ,, | | ರೂ. 35ರಿಂದ | 40 |

## ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

| ಗಾಡಿಗಳು | ಹೊರಡುವ | ಘಂಟೆ | ತಲಪುವ | ಘಂಟೆ |
|---|---|---|---|---|
| ಮಿಕ್ಸೆಡ್ | ಬೆಳಿಗ್ಗೆ | 5-55 | ರಾತ್ರಿ | 9-0 |
| ಶಾಂಜಂಗಾಡ್ ಪ್ಯಾಸಂಜರ್ | ಬೆಳಿಗ್ಗೆ | 8-25 | ಮಧ್ಯಾಹ್ನ | 1-55 |
| ಜುಲಜಾರ್ ಎಕ್ಸ್‌ಪ್ರೆಸ್ | ಬೆಳಿಗ್ಗೆ | 9-50 | ಸಂಜೆ | 4-25 |
| ಫಾಸ್ಟ್ ಪೆಸೆಂಜರ್ | ಮಧ್ಯಾಹ್ನ | 1-0 | ಮಧ್ಯಾಹ್ನ | 2-4b |
| ಶಾಸರಗೋಡ್ ಪ್ಯಾಸಂಜರ್ | ಮಧ್ಯಾಹ್ನ | 3-25 | ಸಂಜೆ | 6-25 |
| ಶಟಲ್ | ಸಂಜೆ | 5-30 | ಬೆಳಿಗ್ಗೆ | 9-26 |

ವಿದ್ಯಾವತಿ ಹೆಂಡತಿ:—"ಅಲ್ರೀ—ಚುನಾವಣೆ ಆಗಿ, ತಿಂಗಳು ಕಳೀತು. ಹಿಂದಿನಂತೆ ನಿಮ್ಮ ದಸ್ಕತು ಹಾಕಿಸೋಕೆ ಯಾರೂ ಬರೋಲ್ಲವಲ್ಲ, ಯಾಕ್ರೀ?"

ಮೆಂಬರು:—"ರಾಜಕಾರ್ಯ; ಹಾಗೆಲ್ಲಾ ಹೆಂಗಸರು ಬಾಯಿ ಹಾಕ್ಕೊಂಡು ಬರಬಾರದು. ತಿಳೀತೆ?"

ಹೆಂಡತಿ:—"ಬೋರ್ಡ್ ಮೆಂಬರು ಅಂತ ಲೆಟರ್ ಪೇಪರ್ ಬೇರೆ ಪ್ರಿಂಟ್ ಮಾಡಿಸಿಟ್ಟಿದ್ದೀರಿ."

ಮೆಂಬರು:—"ಸುಮ್ಮಗೆ ಬಾಯಿ ಮುಚ್ಕೊಂಡು ಒಳಗೆ ಹೋಗ್ತಿಯಾ, ಇಲ್ಲವೇ?"


SADHANA AUSHADHALAYA,
DACCA, BENGAL.

## ಸಾಧನ ಔಷಧಾಲಯ,
ಡಾಕ್ಕಾ, ಬಂಗಾಲ.

ಅಧ್ಯಕ್ಷ:—ಜೋಗೇಶ್‌ಚಂದ್ರ ಘೋಷ್, ಆಯುರ್ವೇದ ಶಾಸ್ತ್ರಿ, ಎಮ್. ಎ., ಎಫ್. ಸಿ. ಎಸ್. (ಲಂಡನ್).

**ಅಖಿಲ ಭಾರತದಲ್ಲಿ ಪ್ರಖ್ಯಾತಿಪಟ್ಟವು.**
**ಅತಿ ಪುರಾತನ ಸಂಸ್ಥೆ!**

**ಮಕರಧ್ವಜ (ಸ್ವರ್ಣಸಿಂಧೂರ)** ಎಲ್ಲ ವ್ಯಾಧಿಗಳಿಗೂ ಪರಮಾಶ್ಚರ್ಯಕರ ಔಷಧ. ಸ್ನಾಯುಗಳನ್ನೂ ಪಿತ್ತ, ಕಫಗಳನ್ನೂ ಕ್ರಮದಲ್ಲಿರಿಸಿ, ಧಾತುವೃದ್ಧಿಯನ್ನುಂಟು ಮಾಡಿ ಮಾನಸಿಕ-ಕಾಯಿಕ ಶಕ್ತಿಗಳನ್ನು ವೃದ್ಧಿಸಿ, ದೇಹವನ್ನು ಸದೃಢವನ್ನಾಗಿ ಮಾಡುವುದು. (ಸ್ವರ್ಣಸಹಿತವಾದುದು.) ತೊಲೆಗೆ ರೂ. ೪—೦—೦.

**ಸಾರಿಬಾದಿ ಸರಸ**—ಫರೆಂಗಿ ರೋಗಕ್ಕೆ ಅಶ್ಚರ್ಯಕರವಾದ ಖಂಡಿತ ಗುಣಕಾರಿ. ಪ್ರಮೇಹವನ್ನೂ ಪಾದರಸ ಸಂಬಂಧ ವಿಷ ದೋಷಗಳನ್ನೂ ಮೂತ್ರದ ನಾನಾ ರೋಗಗಳನ್ನೂ ರಕ್ತದ ಎಲ್ಲ ಅಶುದ್ಧತೆಗಳನ್ನೂ ನಿರ್ಮೂಲ ಮಾಡುವುದು. ಸೇರಿಗೆ ರೂ. ೨—೧೨—೦.

**ಶುಕ್ರ ಸಂಜೀವನ**—ಧಾತು ಹೀನರಾದವರಿಗೂ ಪುಂಶಕ್ತಿ ಕಳಕೊಂಡವರಿಗೂ ದೇವರ ವರಪ್ರದಾನ. ನಿಮಗೆ ಕೂಡಲೆ ಶಕ್ತಿಯನ್ನು ಕೊಟ್ಟು ನವಯುವಕರನ್ನಾಗಿ ಮಾಡುವದು. ಸೇರಿಗೆ ರೂ. ೧೬.

**ಅಬಲಾಬಾಂಧವ ಯೋಗ**—ಸ್ತ್ರೀಯರ ಎಲ್ಲಾ ವ್ಯಾಧಿಗಳಿಗೂ ಖಾತ್ರೀ ಮದ್ದು. ಬಿಳಿ ಸೆರಗು, ಹಳದಿ ಯಾ ಕಪ್ಪಗಿನ ಸ್ರಾವ, ಅಕ್ರಮಮುಟ್ಟು, ಗರ್ಭಕೋಶ—ಸೊಂಟಗಳ ಎಲ್ಲಾಗುವ ನೋವುಗಳನ್ನು ಪರಿಹರಿಸಿ ಮುಟ್ಟನ್ನು ಕ್ರಮಪಡಿಸಿ, ಬಂಜೆತನವನ್ನು ನಿವಾರಿಸುವುದು. ೧೬ ಗುಟುಕಿನ ಔಷಧಕ್ಕೆ ರೂ. ೨. ೫೦ ಡೋಜಿಗೆ ರೂ. ೫.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ.


## ಶಕ ೧೮೫೭ ಯುವ ಸಂ ೧೯೩೬ನೇ ಇಸವಿ ಜನವರಿ ಮಾಹೆ ಪಂಚಾಂಗ

| ತಾರೀಖು | ವಾರಗಳ ಹೆಸರು | ಚಾಂದ್ರಮಾನ ಮಾಸ | ತಿಥಿ | ಕಾಲ | ಸೌರಮಾನ ಮಾಸ | ಕೇತಿ | ನಕ್ಷತ್ರಗಳು ಹೆಸರು | ಕಾಲ | ಸೂರ್ಯ ಉದಯ | ಅಸ್ತ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | | | | ಘ. ವಿ. | | | | ಘ. ವಿ. | ಗಂ. ನಿ. | ಗಂ. ನಿ |
| 15 | ಬುಧವಾರ | | 6 | 0 16 | | 2 | ಹಸ್ತ | 53 20 | 6 47 | 6 16 |
| 16 | ಗುರುವಾರ | | 7 | 5 39 | | 3 | ಚಿತ್ತ | 59 33 | 6 47 | 6 17 |
| 17 | ಶುಕ್ರವಾರ | ಪುಷ್ಯ | 8 | 10 37 | | 4 | ಸ್ವಾತಿ | 60 0 | 6 47 | 6 18 |
| 18 | ಶನಿವಾರ | | 9 | 14 46 | | 5 | ವಿಶಾಖ | 5 1 | 6 47 | 6 18 |
| 19 | ಆದಿತ್ಯವಾರ | ಪುಷ್ಯ | 10 | 17 53 | | 5 | ಅನು. | 9 32 | 6 47 | 6 19 |
| 20 | ಸೋಮವಾರ | | 11 | 19 48 | | 7 | ಜ್ಯೇಷ್ಠ | 12 54 | 6 48 | 6 20 |
| 21 | ಮಂಗಳವಾರ | | 12 | 20 25 | | 8 | ಮೂಲ | 15 2 | 6 48 | 6 20 |

### ರಾಹುಕಾಲ.

| ವಾರ | | ಗಂಟೆಯಿಂದ | ಗಂಟೆ ವರೆಗೆ. |
|---|---|---|---|
| ಭಾನು | ಸಾಯಂಕಾಲ | 4½ | 6 |
| ಸೋಮ | ಬೆಳಿಗ್ಗೆ | 7½ | 9 |
| ಮಂಗಳ | ಸಾಯಂಕಾಲ | 3 | 4½ |
| ಬುಧ | ಬೆಳಿಗ್ಗೆ | 12 | 1½ |
| ಗುರು | ಸಾಯಂಕಾಲ | 1½ | 3 |
| ಶುಕ್ರ | ಬೆಳಿಗ್ಗೆ | 10½ | 12 |
| ಶನಿ | ಬೆಳಿಗ್ಗೆ | 9 | 10½ |

### ಗುಳಿಕಕಾಲ.

| ವಾರ | | ಗಂಟೆಯಿಂದ | ಗಂಟೆ ವರೆಗೆ |
|---|---|---|---|
| ಭಾನು | ಸಾಯಂಕಾಲ | 3 | 4½ |
| ಸೋಮ | ,, | 1½ | 3 |
| ಮಂಗಳ | ಬೆಳಿಗ್ಗೆ | 12 | 1½ |
| ಬುಧ | ,, | 10½ | 12 |
| ಗುರು | ,, | 9 | 10½ |
| ಶುಕ್ರ | ,, | 7½ | 9 |
| ಶನಿ | ,, | 6 | 7½ |


## ದಸರಾ ಮತ್ತೂ ದೀಪಾವಳಿ ಮಹೋತ್ಸವ

ಹತ್ತರ ಬಂತು. ಆಂತಹ ಶುಭಸಂತೋಷ ಸಮಯದಲ್ಲಿ ಹಿಂದಿನ ಕಾಲದಲ್ಲಿ, ಸುಜ್ಞರಾದ ಗೃಹಸ್ಥರೂ, ಮಹಿಳೆಯರೂ ತಮ್ಮ ತಲೆಗಳು ಶುಭ್ರವಾಗಿಯೂ ತಂಪಾಗಿಯೂ ಇರುವಂತೆ, ಮಧುರವಿದ್ದು ಮನೋಹರವಾಗಿ ಪರಿಮಳಿಸುತ್ತಿರುವ ಶುದ್ಧ ಸುಗಂಧ ತೈಲವನ್ನು ಲೇಪಿಸಿಕೊಳ್ಳುವ ಪದ್ಧತಿ ಇದ್ದಿತೆಂದು ಚರಿತ್ರೆಯು ನಮಗೆ ಸ್ಮರಣೆಗೆ ತಂದುಕೊಡುತ್ತಿದೆ. ಕಾರಣವಿಷ್ಟೆ;—ಆ ತೈಲದ ಮಧುರ ಮನೋಹರ ಸುವಾಸನೆಯು, ಆವರ ಸುತ್ತುಮುತ್ತಿಲಿನ ಪ್ರದೇಶವನ್ನೆಲ್ಲ,—ಆವರು ಹೋದಲ್ಲೆಲ್ಲ,—ಪರಿಶುದ್ಧವಾಗಿಯೂ, ಆನಂದಮಯವಾಗಿಯೂ ಮಾಪರ್ಡಿಸುತ್ತಿತ್ತು. ಇದರಿಂದ ಮನಸ್ಸಿನ ಮೇಲಿನ ನೇರವಾದ ಪರಿಣಾಮವೂ ಸುಸ್ಪಷ್ಟವೂ, ಉತ್ಸಾಹದಾಯಕವೂ, ಶಾಂತಿದಾಯಕವೂ ಆಗಿರುತ್ತಿತ್ತು. ಈ ರೀತಿ ಪರಿಶುದ್ಧವಾದ ಮನಸ್ಸು, ಅಂಥ ಮಂಗಲೋತ್ಸವದ ಶುಭಮುಹೂರ್ತಕ್ಕೆ ಹಿತಾವಹವೆಂದು ಆ ಗೃಹಸ್ಥ ಗೃಹಿಣಿಯರಿಗೆ ಚೆನ್ನಾಗಿ ಗೊತ್ತಿತ್ತು. ಹಿಂದಿನ ಕಾಲದ ಈ ಸುಜ್ಞರಾದ ಸ್ತ್ರೀ ಪುರುಷರ ಹಾದಿಯನ್ನು ಅನುಸರಿಸುವುದೇ, ನಿಮ್ಮ ಹಿತಾಭಿವೃದ್ಧಿಯ ಮಾರ್ಗವೂ ಆಹುದೆಂದು ನೀವು ತಿಳಿದುಕೊಳ್ಳುವುದಾದರೆ, ಯಾವುವುಗಳ ಉಪಯೋಗದಿಂದ ನಿಮಗೆ ತಲೆಶೂಲೆಯುಂಟಾಗಲು ಕಾರಣವಾಗಬಹುದೋ, ಅಂಥ ಅಗ್ಗವಾದ, ಗುಣದಲ್ಲಿ ಕನಿಷ್ಟವಾದ, ನಿಮ್ಮಿಂದ ಪರೀಕ್ಷಿಸಲ್ಪಡದ, ಆದರೆ ಮಾರ್ಕೆಟುಗಳಲ್ಲೆಲ್ಲ ತುಂಬಿ ಉಕ್ಕುತ್ತಿರುವ ಕೇಶ 'ತೈಲ'ಗಳನ್ನು ಕೊಳ್ಳುವಲ್ಲಿ, ನೀವು ಕಷ್ಟಪಟ್ಟು ಸಂಪಾದಿಸಿದ ಹಣವನ್ನೆಂದಿಗೂ ಹಾಳು ಮಾಡಬೇಡಿ, ಕೆಂಡಿರಾ?

ಚುನಾಯಿಸಿ ಮಾಡಿದ ಸುಪ್ರಸಿದ್ಧವಾದ

### ಕಾಮಿನಿಯಾ ಲಿಮಿಟೆಡ್ ಯನ್ನೇ (ರಿಜಿಸ್ಟರ್ಡ್) ಉಪಯೋಗಿಸಿರಿ.

'ಕಾಮಿನಿಯಾ ತೈಲ'ದ ಪರಿಚಯವಿಲ್ಲದ ಕುಗ್ರಾಮವಾಸಿಯಾದ ಹಳ್ಳಿಯವನಲ್ಲಿ ಕೂಡ ಅದು ದೊರಕುವುದು.

ಒಂದಾಣೆಯ ಪೋಸ್ಟಲ್ ಸ್ಟ್ಯಾಂಪನ್ನು ಕಳುಹಿಸಿ, ಮಾದರಿಗಳನ್ನು ಉಚಿತವಾಗಿ ಪಡೆಯಿರಿ. ಬೆಲೆ ಬಾಟಲಿ 1ಕ್ಕೆ ರೂ. 1—0—0. ಬಾಟಲಿಗಳಿಗೆ ರೂ. 2—10—0. ವಿ. ಪಿ. ಚಾರ್ಜು ಬೇರೆ.

ಹೂವುಗಳ ಒಂದು ಇಡೀ ತೋಟವನ್ನೇ—

### ಒಟೋ ದಿಲ್‌ಬಹಾರ್ (ರಿಜಿಸ್ಟರ್ಡ್)ನ ಒಂದು ಬಾಟಲಿಯಲ್ಲಿ ಹಿಂಡಿದಂತೆ ಕಂಡುಬರುವುದು.

ಇದು ಹೂವುಗಳ ಶುದ್ಧವಾದ ಸಾರ; ಇದರ ಯಾವ ಬಾಟಲಿಯಲ್ಲಿಯಾದರೂ ಅಲ್ಪಹೋಲಿನ ಒಂದು ಬಿಂದುವಾದರೂ ಇಲ್ಲವೆಂದು ನಮ್ಮಿಂದ ನಿಮಗೆ ಗ್ಯಾರಂಟಿ ಇದೆ. ಒಮ್ಮೆ ಕೆಲವು ಬಿಂದುಗಳನ್ನು ಮಾತ್ರವೇ ಚುಮುಕಿಸಿರಿ—ಸಾಕು! ಬೆಲೆ ¼ ಔನ್ಸು ಬಾಟಲಿಗೆ ರೂ. 1—4—0. ಒಂದು ಡ್ರಾಮಿನ ಬಾಟಲಿಗೆ ಆಣೆ 12 ವಿ. ಪಿ. ಚಾರ್ಜು ಪ್ರತ್ಯೇಕ. 2 ಆಣೆ ಪೋಸ್ಟೇಜ್ ಸ್ಟ್ಯಾಂಪು ಕಳುಹಿಸಿಕೊಟ್ಟಲ್ಲಿ ಇದರ ಮಾದರಿ ನಿಮಗೆ ಉಚಿತ.

ಈಗ ತಾನೇ ಸಿದ್ಧವಾದ ನವೀನ ಸುಗಂಧ ದ್ರವ್ಯ.

### ಒಟೋ್ಟೋ ಮಸ್ಕ್ ಬಹಾರ್ (ರಿಜಿಸ್ಟರ್ಡ್)

ತಾಜಾ ಕಸ್ತೂರಿ ಸುಗಂಧದ್ರವ್ಯಗಳಲ್ಲಿ ಇದಕ್ಕೆ ಸರಿಯಾದದ್ದು ಇನ್ನೊಂದಿಲ್ಲ ಇದೇ ಅದ್ವಿತೀಯ. ಇದರ ಅತ್ಯಂತ ಸೂಕ್ಷ್ಮವಾದ, ಮೋಹಗೊಳಿಸುವ ಸುವಾಸನೆಯು ನಿಜವಾದ ಸ್ವರ್ಗ ಸುಖಾನುಭವವನ್ನು ನಿಮ್ಮಲ್ಲಿ ಉಂಟುಮಾಡುವುದು. ಬೆಲೆ ಬಾಟ್ಲಿ 1ಕ್ಕೆ ರೂ. 1—4—0; (¼ ಔನ್ಸಿನದು) 1 ಡ್ರಾಮಿನ ಒಂದು ಬಾಟಲಿಗೆ ಆಣೆ 0—12—0; ವಿ. ಪಿ. ಚಾರ್ಜು ಪ್ರತ್ಯೇಕ. ಉಚಿತವಾದ ಮಾದರಿಗೆ 2 ಆಣೆಯ ಪೋಸ್ಟೇಜು ಸ್ಟ್ಯಾಂಪು ಕಳುಹಿಸಬೇಕು.

### ಆರೋಗ್ಯಕ್ಕೂ ಬಣ್ಣಕ್ಕೂ,

ಆಧುನಿಕ ಶಕದಲ್ಲಿ, ಕಾಮಿನಿಯಾ ಟ್ಯಾಲೆಟ್ ಸೋಪು ಅಲಂಕಾರ ಸಾಮಗ್ರಿಗಳ ರಾಜರುಗಳಲ್ಲಿ ಅತ್ಯದ್ಭುತ ಸಾಧನವಾದ 'ಕಾಮಿನಿಯಾ ವ್ಯಾಟ್ ರೋಸ್ ಸೋಪು' (ರಿಜಿಸ್ಟರ್ಡ್) ಮಧುರವಾದ ಗುಲಾಬೀ ಹೂವುಗಳ ಅತ್ಯಂತ ಸೂಕ್ಷ್ಮವಾದ ಪುಷ್ಪಸೌರಭವನ್ನು ಬೀರುತ್ತದೆ.

### ಕಾಮಿನಿಯಾ ಗಂಧದ ಸಾಬೂನು (ರಿಜಿಸ್ಟರ್ಡ್).

ಇದೀಗ ಹಿಂದೀಯರಿಗೆ ಅದರ್ಶಪ್ರಾಯವಾದ ಸಾಬೂನು. ಉಷ್ಣ ಹವೆಯ ಎಲ್ಲ ಬಾಧಕಗಳಿಂದ, ಇದು ಅತ್ಯಂತ ಸೂಕ್ಷ್ಮವಾದ ಚರ್ಮವನ್ನು ರಕ್ಷಿಸುತ್ತದೆ. ಚರ್ಮವನ್ನು ಸಯಗೊಳಿಸಿ, ಅದನ್ನು ಸಂಪೂರ್ಣವಾಗಿ ನಿರ್ಮಲಗೊಳಿಸುತ್ತದೆ; ಗಂಧದ ಸೂಕ್ಷ್ಮವಾದ ಮತ್ತೂ ಆಹ್ಲಾದಕರವಾದ ಪರಿಮಳವನ್ನು ಹೊರಸೂಸುತ್ತದೆ.

### ದಿಲ್‌ಬಹಾರ್ ಸೋಪ್ (ರಿಜಿಸ್ಟರ್ಡ್)

ಚರ್ಮಕ್ಕಿದು ಅತ್ಯುತ್ಕೃಷ್ಟವಾದ ಸಾಬೂನು; ಇದರ ಚಿತ್ತಾಕರ್ಷಕವಾದ ಪರಿಮಳದ ವಿಚಾರದಲ್ಲಿ ಇದು ನಿಜವಾಗಿಯೂ ಅಪ್ರತಿಮ. ಬೆಲೆ ಮೇಲೆ ಕಾಣಿಸಿದ 3 ತರಹದ ಸಾಬೂನಿಗೂ 3 ತುಂಡುಗಳ ಒಂದು ಪೆಟ್ಟಿಗೆಗೆ 0—14—0 ಆಣೆ; ವಿ. ಪಿ. ಚಾರ್ಜು ಪ್ರತ್ಯೇಕ.

ದೊರಕುವ ಸ್ಥಳ:—ಮೆಸರ್ಸ್ ಷಾ ಎಂಡ್ ಕೊ., ಮಂಗಳೂರು, ಮತ್ತೂ ಇಂಡಿಯದ ಯಾವತ್ತು ಮುಖ್ಯ ಸ್ಟೋರುಗಳಲ್ಲೆಲ್ಲ.

ಸೋಲ್ ಏಜೆಂಟರು:—

ದಿ ಆಂಗ್ಲೋ—ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, 285, ಜುವ್ಮಾ ಮಸೀದಿ, ಬೊಂಬಯಿ 2.

# ಉಡುಪಿ ಕ್ಷೇತ್ರ ಮಹಾತ್ಮ್ಯ

(ಏಕಾಂಕ ನಾಟಕ.)

[ಈ ನಾಟಕವು ಯಾರನ್ನೂ ಉದ್ದೇಶಿಸಿ ಬರೆದಿಲ್ಲ; ಕೇವಲ ಕಾಲ್ಪನಿಕವಾಗಿದೆ. ಲೇಖಕ.]

(*Rights Reserved*)

## ಒಂದನೆಯ ದೃಶ್ಯ.

(ಮುಸ್ಕೊಡೆ ಮಾಧವಾಚಾರ್ಯರು ಪ್ರವೇಶಿಸಿ, ಅತ್ತಿತ್ತ ನೋಡುತ್ತ)

ಏನಪ್ಪ! ಗ್ರಹಚಾರ! ಎರಡೇ ಎರಡು ದಿನ–ನಾನು ಹಾಸಿಗೆ ಹಿಡಿದು ಮಲಗಿದ್ದೇ ಮಲಗಿದ್ದು. ಅಷ್ಟರಲ್ಲೇ, ಆ ಶುಂಠ ಶುಕಾಚಾರ್ಯ ಬಂದ ಬಂದ ಯಾತ್ರಿಕರನ್ನೆಲ್ಲಾ ಹಿಡಿದು ತನ್ನ ಮನೆಗೆ ಸೆಳೆದೊಯ್ದು ಬಿಟ್ಟ! ನಾನು....ಮೋಟರ್ ಕಂಪೆನಿಯ ಏಜೆಂಟರಿಗೆ ಮೊದಲೇ ಕೈ ಬೆಚ್ಚಗೆ ಮಾಡಿದ್ದೆ. ಬಂದ ಯಾತ್ರಿಕರನ್ನೆಲ್ಲ ನಮ್ಮ ಮನೆಗೇ ಕಳುಹಿಸು ಎಂತ ಕಂಟ್ರಾಕ್ಟ್ ಮಾಡಿದ್ದೆ. ಅವನೂ ಇನ್ನೆಂಥಾ ಪುಣ್ಯಾತ್ಮನೊ! ಒಬ್ಬನನ್ನಾದರೂ ಕಳುಹಿಸಲೇ ಇಲ್ಲ! ಹೋಗಿ ಅವನನ್ನು ಜೋರು ಮಾಡಿದ್ದಕ್ಕೆ 'ಶುಕಾಚಾರ್ಯರೋ, ಸುಕ್ರುಂಡೇ ಭಟ್ಟರೋ ಯಾರೋ ಅವರು—ಊರಿಗೆ ಮೊದಲೇ ಉದ್ಯಾವರಕ್ಕೂ, ಕಲ್ಯಾಣಪುರಕ್ಕೂ ಮುಂದಾಗಿ ಹೋಗಿ ಯಾತ್ರಿಕರಿಗೆ ಗಂಟುಬಿದ್ದರೆ ನಾವೇನು ಮಾಡಬೇಕಯ್ಯಾ!' ಎಂದು ಗದರಿಸಿಬಿಟ್ಟ. ಎಂಥಾ ಫರ್ಮಾಷಿ ಏಜೆಂಟ್! ಈ ಏಜಂಟರಿಗೆ ಹೇಳಿದ ಮಾತೇ ಇಲ್ಲ; ಕೊಟ್ಟ ಲಂಚದ ಗುರುತವೂ ಇಲ್ಲ.

**ಲಂಬೋದರ ಶಾಸ್ತ್ರಿಗಳು:**—ಏನಾಚಾರ್ರೇ! ಮೋಟರ್ ಆಫೀಸಿನ ಬಳಿ ನಿಂತಿದ್ದೀರಲ್ಲ! ಯಾವ ಮಠ ಈ ಸಲ ವಹಿಸಿಕೊಂಡಿದ್ದೀರಿ? ಎಷ್ಟು ಪರಿಶೆ ನಿಮ್ಮಲ್ಲಿಗೆ ಬಂದಿದೆ?

**ಮಾಧವ:**—ಅಯ್ಯೋ! ಅದೇನು ಕೇಳುತ್ತೀರಿ–ಸಂಭ್ರಮ! ೧೫೦ ರೂಪಾಯಿ ತೆತ್ತು ಒಂದೇ ಒಂದು ಮಠ ವಹಿಸಿಕೊಂಡೆ. ಇಲ್ಲೀ ವರೆಗೆ ೧೦ ರೂಪಾಯಿ ಬಾಡಿಗೆ ಕೊಡತಕ್ಕ ಪರಿಶೆಯೂ ಬಂದಿಲ್ಲ. ಬಂದವರೂ ಕೂಡ ಪ್ರಾಣ ದೇವರ ಭೋಜನಶಾಲೆ ಪ್ರಸಾದ ಕಂಠಪೂರ್ತಿ ಹೊಡೆಯುವವರೇ–ಸೇವೆ ಕೊಡತಕ್ಕವರು ಯಾರೂ ಇಲ್ಲ. ಕಳೆದ ಪರ್ಯಾಯದಲ್ಲಿ ದೊಡ್ಡ ದೊಡ್ಡ ಪರಿಶೆಯೂ ಇತ್ತು. ಸೇವೆಗಳನ್ನೂ ಕೊಡಿಸಿದ್ದೆ. ಭಾಡಿಗೆಯೂ ದಾನದಕ್ಷಿಣೆಯೂ ಕೈತುಂಬಾ ಸಿಕ್ಕಿತ್ತು. ಸೇವೆ ಕೊಡಿಸಿದ್ದಕ್ಕೆ ಬೆಳ್ಳಿ ಪಂಚಪಾತ್ರ, ಜರಿಶಾಲು ವಗೈರೆ ಬೇರೆ ಮಠದಿಂದ ಬಹು ಮಾನ ಸಿಕ್ಕಿತ್ತು. ಈ ಸಲ ಎಲ್ಲದಕ್ಕೂ ಗೋಪಿನಾಮ ಎಂತ ತೋರುತ್ತೆ.

(ಇಷ್ಟರಲ್ಲಿ ಮೋಟರು ಬರುವುದು. ಲಂಬೋದರ ಶಾಸ್ತ್ರಿಗಳು ಹೋಗುವರು. ಶುಕಾಚಾರ್ಯರ ಪ್ರವೇಶ.)

**ಮಾಧವ:**—ಇಳೀರಮ್ಮಾ! ಇಳೀರಿ. ಗಂಟೀಚೆಗೆ ಕೊಡಿ. ಛಲೋ ಬಿಡಾರ ನಮ್ಮಲ್ಲಿದೆ. ಭಾಡಿಗೆ ಹೆಚ್ಚಿಲ್ಲ. ನಾನು ಏಳುವ ಮಠದ ಸ್ವಾಮಿಯರ ಕಡೆಯಿಂದ ಬಂದವನು.

**ಶುಕ:**—ಇದೆಲ್ಲಾ ಹಸೀ ಸುಳ್ಳಮ್ಮಾ! ಮಠದ ಕಡೆ ಆಚಾರ್ರು ನಾನು. ನಿಮ್ಮ ಕಡೆಯವರೆಲ್ಲಾ ನಮ್ಮಲ್ಲೇ ಉಳಿದಿದ್ದರು. ನಿಮ್ಮ ಹಿರಿಯರೂ ಹಿಂದೆ ನಮ್ಮಲ್ಲಿಯೇ ಉಳಿದಿದ್ದರು. ನಮ್ಮ ಮನೆಯಿಂದ ಕೃಷ್ಣನ ಗುಡಿಗೆ ಎರಡೇ ಹೆಜ್ಜೆ. ನಮ್ಮಲ್ಲಿಗೇ ಬನ್ನಿ.

**ಮಾಧವ:**—ನಿಮ್ಮ ಮನೆ 'ಕುಂಜಬೊಟ್ಟು' ಅದೇನು ಎರಡು ಹೆಜ್ಜೆಯೋ? ಎರಡು ಮೈಲೋ? ಮತ್ತೆ ನಿಮ್ಮ ಹೆಂಡತಿಯ ಸೂಟೆ ಬಾಯಲ್ಲಿ ಇನರೆಲ್ಲ ಬದುಕುವುದುಂಟೇ? ಬನ್ನಿ; ಅಮ್ಮಾ!

**ಶುಕ:**—ಎಲಾ! ನನ್ನ ಹೆಂಡತಿ ಸುದ್ದಿ ನಿನಗೆ ಯಾಕೋ! ನೀನು, ನಿನ್ನ ಹೆಂಡತಿ, ನಿಮ್ಮ ತಾಯಿ, ಇವರ ಚರಿತ್ರೆ ಊರಿಗೇ ತಿಳಿದಿದೆ ಬಿಡು! ಬನ್ನಿ ಅಮ್ಮಾ! ಗುಡಿಯಲ್ಲಿ ದೀವಟಿಗೆ ಸೇವೆಗೆ ಹೊತ್ತಾಯಿತು.

(ಯಾತ್ರಿಕರು ಇಳಿದು ಹೊರಡುವರು.)

**ಮಾಧವ:**—ಇವರನ್ನೂ ಎಳೆದುಕೊಂಡು ಹೋದ! ಹೋಗಲಿ. ಆದರೆ ನನ್ನ ಹೆಂಡತಿ, ತಾಯಿ, ಅಜ್ಜಿಯನ್ನು ಬೈದದ್ದಕ್ಕೆ ಇವನ ಮೇಲೆ ಒಂದು ಫಿರ್ಯಾದಿ ಹೆಟ್ಟದೆ ಬಿಡೆ. ಬೈದದ್ದನ್ನು ನಮ್ಮ ಮೋಟರ್ ಏಜೆಂಟ್ ಕೇಳಿದ್ದಾನೆ. ಅವನೇ ಸಾಕ್ಷಿ. ಅವನನ್ನು ಒಂದು ಮಾತು ಕೇಳಿಬಿಡುತ್ತೇನೆ.—'ಏಜಂಟರೆ!'

**ಜಗದ್ಭಕ್ಷಕ ಏಜೆಂಟ್:**—ಏನು ಆಚಾರ್ರೆ! ನಾಳೆ ನಿಮ್ಮಲ್ಲಿಂದ (ಮದ್ರಾಸ್) ಮೈಲಿಗೆ ಹೋಗುವವರಿದ್ದಾರೋ!

**ಮಾಧವ:**—(ಸಿಟ್ಟಿನಿಂದ) ಮೈಲಿಗಲ್ಲ; ಯಮಪಟ್ಟಣಕ್ಕೆ!

**ಏಜೆಂಟ್:**—(ನಗುತ್ತ) ಅಲ್ಲಿಗಾದರಲ್ಲಿಗೆ! ಟಿಕೇಟ್ ಕೊಡುವ. ಎಷ್ಟು ಟಿಕೆಟ್?

**ಮಾಧವ:**—ಅಲ್ಲವಯ್ಯಾ! ಆ ಶುಂಠ ಆಚಾರಿ ನನ್ನ ಹೆಂಡತಿ—ತಾಯಿಯನ್ನು ಬೈದದ್ದು ನೀನು ಕೇಳಲಿಲ್ಲವೋ? ಇಲ್ಲೇ ನಿನ್ನ ಮುಂದೇ ಅಂದನಲ್ಲ!

**ಏಜೆಂಟ್:**—ಬೈದನೇ? ಅಂದನೇ? ನಾನಾಗ ಟಿಕೆಟ್ ಬರೆಯುತ್ತಾ ಇದ್ದೆ ಸ್ವಾಮೀ—ನನಗೆ ಕೇಳಲಿಲ್ಲ.

**ಮಾಧವ:**—ಅಷ್ಟು ಗಟ್ಟಿ ಬೈದೂ ಕೇಳಲಿಲ್ಲ? ನಾಳೆ ನಿನ್ನನ್ನು ಸಾಕ್ಷಿ ಬರೆಸಿದರೆ?

**ಏಜೆಂಟ್:**—ನೀವು ಶುಕಾಚಾರ್ಯರ ಹೆಂಡತಿಗೆ ಬೈದದ್ದು ಎಂತ ಹೇಳುತ್ತೇನೆ. ಅದನ್ನು ನಾನು ಚೆನ್ನಾಗಿ ಕೇಳಿದ್ದೇನೆ.

**ಮಾಧವ:**—(ಮನಸ್ಸಿನಲ್ಲಿ) ನೀನು ಹಾಳಾಗ ಹೋಗು! ಕಳ್ಳ ಏಜೆಂಟ!

---

## ಎರಡನೆಯ ದೃಶ್ಯ.

(ಯಾತ್ರಿಕರೂ, ಶುಕಾಚಾರ್ಯರೂ ಬೀದಿಯಲ್ಲಿ ಬರುತ್ತಿರುವರು.)

**ಗಂಗಮ್ಮ:**—ಇದು ಧಾವ ಗುಡಿ? ಆಚಾರ್ರೆ?

**ಶುಕ:**—ಇದು ಬೊಬ್ಬರಿಯ ದೇವನ ಗುಡಿ. ಈತ ರಜತ ಪೀಠದ ಕಾವಲಿನವ. ಮಧ್ವಾಚಾರ್ಯರ ಪ್ರತಿಷ್ಠೆ. ಕೈ ಮುಗಿದು ದಕ್ಷಿಣೆ ಕೊಡಿ.

(ಗಂಗಮ್ಮ ಒಂದು ಕಾಲಾಣೆ ದಕ್ಷಿಣೆ ಕೊಟ್ಟು ಕೈ ಮುಗಿಯುವಳು.)

**ಶುಕ:**—ಬನ್ನಿ. ಈ ಬೀದಿಗೆ. ಈಚೆ ಪಕ್ಕಕ್ಕೆ ಸರಿಯಿರಿ. ಸ್ವಾಮಿಗಳ ಕಾರು ಬಂತು.

**ತುಂಗಮ್ಮ:**—ಧಾವ ಸ್ವಾಮಿಗಳ ಕಾರು? ಸ್ವಾಮಿಗಳೂ ಕಾರಿನಲ್ಲಿ ಕೂರುತ್ತಾರೆಯೇ ಉಡುಪಿಯಲ್ಲಿ?

**ಶುಕ:**—ಅದಕ್ಕೇನು? ಕೂಡಬಹುದೂ ಎಂತ ಶಾಸ್ತ್ರ ಧಾರವಿದೆ. ಕಾರಿನಲ್ಲೆಲ್ಲಾ ಕೃಷ್ಣಾಜಿನ ಹಾಸಿದೆ. ಡ್ರಾಯವರು ಬ್ರಾಹ್ಮಣ. ಕಾರು ಅಶುದ್ಧ ಪದಾರ್ಥವಲ್ಲ. ಅಗ್ನಿಪ್ರತಿಷ್ಠೆ ಇದೆಯಲ್ಲ!

**ಗಂಗಮ್ಮ:**—ಅಯ್ಯೋ! ಇಲ್ಲಿ ನೋಡಿರೇ? ಸ್ವಾಮಿಗಳು ಜರೀ ಶಾಲು ಹೊದೆದಿದ್ದಾರಲ್ಲ! ಇದೇನು ಪದ್ಧತಿ! ಸರ್ವ ಬಿಟ್ಟ ಸನ್ಯಾಸಿಗಳು ಕಾವಿ ವಸ್ತ್ರ ಬಿಟ್ಟು ಜರಿ ಬಟ್ಟೆ ಯಾತಕ್ಕಪ್ಪ?

**ಶುಕ:**—ಇಲ್ಲಿ ನಮ್ಮ ಸ್ವಾಮಿಗಳೆಲ್ಲ ಹಾಗೇ. ಜರಿ ಬಟ್ಟೆ ಉಪಯೋಗಿಸುತ್ತಾರೆ. ದೇಶದ ಸ್ವಾಮಿಗಳ ಹಾಗೆ ಕಾವಿ ಬಟ್ಟೆಯನ್ನೇ ಬೈರಾಗಿಗಳಂತೆ ಯಾವಾಗಲೂ ಉಪಯೋಗ ಮಾಡುವುದಿಲ್ಲ. ಹಾಗೆ ಮಾಡಿದರೆ ಇಲ್ಲಿನ ಜನಗಳು ನಗುತ್ತಾರೆ. ನೋಡಿದರಲ್ಲ! ನಮ್ಮ ಸ್ವಾಮಿಗಳನ್ನ! ಒಳ್ಳೆ ಮನ್ಮಥನ ಹಾಗೆ ಕಾಣುವುದಿಲ್ಲವೆ?

**ಗಂಗಮ್ಮ:**—ಹೆಂಗಾದರೂ ಕಾಣಲಿ, ಬಿಡಿ. ನಮಗೇನು ಅದರಿಂದ? ನಡೀರಿ ಬಿಡಾರಕ್ಕೆ. ಇನ್ನೂ ಅಲ್ಲಿಗೆ ಬಹಳ ದೂರವೋ?

(ತೊಗರಿಬೀಳೆ ತಮಣ್ಣಾಚಾರ್ಯರ ಪ್ರವೇಶ.)

**ತಮ್ಮಣ್ಣ:**—ಯಾರಮ್ಮ, ನೀವು? ಯಾವ ಮಠದ ಶಿಷ್ಯರು?

**ಗಂಗಮ್ಮ:**—ನಾವು ಉತ್ತರಾದಿ ಮಠದ ಶಿಷ್ಯರು. ಈ ಯಂಕಮ್ಮನೂ ಅಷ್ಟೆ.

**ತಮ್ಮಣ್ಣ:**—ಹಾಗಾದರೆ ನಮ್ಮ ಉತ್ತರಾದಿ ಮಠಕ್ಕೆ ಬನ್ನಿ. ಅಷ್ಟು ದೂರ ಅವರ ಮನೆಗೆ ಯಾಕೆ ಹೋಗುತ್ತೀರಿ?

**ನಾಗಮ್ಮ:**—ಇವರ ಮನೆಗೇ ಹೊರಟಿದ್ದೇವೆಯಲ್ಲಾ!

**ತಮ್ಮಣ್ಣ:**—ಸರಿ; ತಿಳಿಯದೆ ಹೊರಟಿರಿ. ಈಗ ತಿಳಿದ ಮೇಲೆ ನಮ್ಮಲ್ಲಿಗೆ ಬನ್ನಿ. ಬಾರದಿದ್ದರೆ ನಮ್ಮ ಮಠದ ದಿವಾನರಿಗೆ ತಿಳಿಸಿಬಿಡುತ್ತೇನೆ. ಕಂಡಿರಾ?

(ಯಾತ್ರಿಕರು ಹೊರಡುವರು. ಶುಕಾಚಾರ್ಯ ಸುಮ್ಮನೆ ಮನೆಗೆ ಹಿಂತಿರುಗುವನು. ಬಾಗಿಲಲ್ಲಿ ಅವನ ಹೆಂಡತಿ ಕಾಳಮ್ಮ.)

**ಶುಕ:**—(ಸ್ವಗತ) ಯಾರೂ ಬರಲಿಲ್ಲ ಇವತ್ತು ನಮ್ಮಲ್ಲಿಗೆ. ಆಗಲಿ! ಇನ್ನೂ ಎರಡು ಬಸ್ಸು ಬರಲಿಕ್ಕಿವೆಯಂತೆ. ಅಷ್ಟರಲ್ಲಿ ನಮ್ಮ ಬಿಡಾರದವರಿಗೆ ದೇವರ ದರ್ಶನ ಮಾಡಿಸಿಕೊಂಡು ಬರುತ್ತೇನೆ. (ಪ್ರಕಾಶ) ಅಂದಾ–ಜೆ! ಆ ದೇಶಂತಾಕುಳು, ಪರಿಶೆ ದಾಕುಳು ಆಕಳೆನ್ ಒಳೆಪುಲ.

**ಕಾಳಮ್ಮ:**—ಆಕುಳು ಸೋಜುಣದ್ಯೆರು.

**ಶುಕ:**—ಒಡೆ ಪೋಯೆರ್?

**ಕಾಳಮ್ಮ:**—ಅವೇ ಯಾನ್‌ಲಾ ಇನುಕ್‌ಳೆಡ ಕೇಣುಣ.

**ಶುಕ:**—ಅಂಚ ಪಣ್‌ಂಡ? ಆಕುಳೆ ಗಂಟ್?

**ಕಾಳಮ್ಮ:**—ಅವುಲಾ ಸೋಜುಣದ್ದಿ.

**ಶುಕ:**—ಅಂಚ್ಯಾಂಡ ಬೇತೆ ಕೋಡಿಗ್ ಬುಡಾರ ಪೋಯೆರಾ? ಈ ಖರ್ಮಂತಾಳ್ ಸೂನದ್ಯಾ? ಈ ಓಳ್ ಸೈತ್‌ದ?

**ಕಾಳಮ್ಮ:**—ಏನ್ ಜ್ಯಾನೆ ಅಂಪುಣ? ಈ ಮಲಾಮತ್‌ಗ್? ಇನುಕುಳು ಅಂಚಿ ಪೋಯರಾತಾ! ಇಂಚಿತ್ತ್ ಬಾವೆ, ಬಾವಾ ರಾಮಣಿ, ಬಾವಾ ರಾಮಣಿ ಮಗಳ್, ಆ ಮಗಳೆ ಬಾಲೆ, ಅಜ್ಜಿ ಮಂತೇರಾ ಬತ್ತೆರ್. ಏನ್ ಆಕುಳೆಡ ಪಾತ್ಯೆ ರೊಣ್ತು ಕುಳ್ಳಿಯೆ. ಬೆತ್ತ್ ಆಕುಳು ಪೋಪುಣನೆ ನಮೆ.....

ಮಠಂತ ಕೊಠಾರಿಳೆ ನೆಗ್ಗೆ ಪುಟ್ಟಣ್ಣೆ ಬತ್ತೆ. ಆಯೆ, ಇನುಕುಳು ಬನ್ನಾಗ ಪೋನ ಆತೆ. ಅಂಚ ಆತ್ ನೊಕುಳೆ ಗೋಸ್ಕಿ ಯೇನ್ ಅಂತ್ನದ್ದಿ.

**ಶುಕ:**—ಇತ್ತೆ ನೊಕುಳೆನ್ ಓಳ್ ನಾಡುಣ? ಮಾಣಿ ಹಯಗ್ರೀವೆ ಒಡೆಗ್ ಪೋತೆ? ಆಯಲಾ ಇದ್ಯೆ?

**ಕಾಳಮ್ಮ:**—ಆಯಾನ್ ಸ್ವಾಮುಳು ಎಕ್ಕಡ್.....?..... ಆಡೆಗ್ ಕಡಪುಡುತೆರ್‌ಕೆರೆ. ಅಲೆ, ಬತ್ತೆ!

**ಹಯಗ್ರೀವ:**—ಅಪಯ! ಎಂಕುಳೆ ಇಲ್ಲೊಳಿತ್ತಿ ಪರಿಶೆ ದಾಕುಳೆನ್ ಮಾಧವಾಚಾರ್ರೆ ಇಲ್ಲೊಳ್ ಸೂಯೆ.

**ಶುಕ:**—ಇಡ್ಗೆಗ್ ಬಲೆ ಅಂದದ್ ಆಕುಳೆಗ್ ಪಣೊಡಿತ್ನ್. ಪಂಡನಾ? ಮಂಗೆ!

**ಹಯಗ್ರೀವ:**—ಅಂಚ ಮಂತ ನೆರ್‌ಂಡ ಯೆಂಕ್ ಕೋಪ ಬರ್ಪು. ಬೆತ್ತ್ ಏನ್ ಇನುಕುಳೆನ್ ಅಪ್ಪಯೆ ಅಂದದ್ ಒಳೆ ಪಾಯೆ. ದಲಾಲಿ ಅಂದದ್ ಪಣ್ಪೆ!

**ಕಾಳಮ್ಮ:**—ಇನುಕುಳೆಗ್ ಜಾಯೇಗ್? ಮಾಣೇ ಸುದ್ದಿ! ಏತಾಂಡಲಾ ಯನ ಮಗೆ ಆತಾ? ಆಯೆ ಇನುಕುಳೇಗ್ ಬುಡ್ತು ಕೊಳ್ಪೆನಾ? ಮುದ್ದೋ! ಈ ಇಂಚಿ ಬಲ ಮಗ!

---

## ಮೂರನೆಯ ದೃಶ್ಯ.

(ಶುಕಾಚಾರ್ಯರು ೩-೪ ಮಂದಿ ಯಾತ್ರಿಕರ ಸಹಿತ ಶ್ರೀ ಕೃಷ್ಣ ದೇವಸ್ಥಾನದೊಳಗೆ ಪ್ರವೇಶಿಸಿ.)

ಕನಕನಗುಡಿ, ಅನಂತೇಶ್ವರ, ಚಂದ್ರೇಶ್ವರ ಮೊದಲಾದ್ದನ್ನು ನೋಡಿದಿರಲ್ಲ! ಇಗೋ! ಇದು ಮಧ್ವ ಸರೋವರ; ಇದು ಗಂಗಾ ದೇವಿಯ ಗುಡಿ! ದಕ್ಷಿಣೆ ಕೊಡಿ; ನಮಸ್ಕಾರ ಹಾಕಿ, ಪ್ರದಕ್ಷಿಣೆ ಮಾಡಿ. ಅಲ್ಲಿ ತೋರುವದು ಕಟ್ಟಿಗೆಯ ತೇರು; ನಮಸ್ಕಾರ ಮಾಡಿ, ದಕ್ಷಿಣೆ ಕೊಡಿ; ಮೇಲೆ ಬನ್ನಿ; ಇದು ಕನಕನ ವಿಗ್ರಹ; ನಮಸ್ಕಾರ ಮಾಡಿ, ದಕ್ಷಿಣೆ ಕೊಡಿ; ಇದೇ ಕೃಷ್ಣನ ಗುಡಿ; ನಮಸ್ಕಾರ ಮಾಡಿ, ದಕ್ಷಿಣೆ ಕೊಡಿ; ಇದು ಗರುಡ ದೇವರು; ನಮಸ್ಕಾರ ಹಾಕಿ, ದಕ್ಷಿಣೆ ಕೊಡಿ; ಇದು ಮುಖ್ಯ ಪ್ರಾಣನ ಗುಡಿ; ತೀರ್ಥ ತೆಗೆದುಕೊಳ್ಳಿ, ಕಾಣಿಕೆ ಹಾಕಿ, ದಕ್ಷಿಣೆ ಕೊಡಿ; ಇಲ್ಲಿ ಬನ್ನಿ; ಇದು ಮಧ್ವಾಚಾರ್ಯರು; ದಕ್ಷಿಣೆ ಕೊಡಿ, ನಮಸ್ಕಾರ ಮಾಡಿ; ಮಾಡಿದಿರಾ? ಇನ್ನು ನೀವು ಒಳಗೆ ಹೋಗಿ ದೇವರ ದರ್ಶನ ಮಾಡಬಹುದು; ತಲೆಗೆ ಕಾಲಾಣೆಯಂತೆ ಬಾಗಿಲು ಕಾಯುವವರಿಗೆ ಕೊಡಬೇಕು.

(ಎಂದು ದೇವರ ದರ್ಶನಕ್ಕೆ ಅವರನ್ನು ಕಳುಹಿಸುವರು.)

**ಪಾರುಪತ್ಯೆಗಾರರು:**—ಜಾನೆ, ಆಚಾರ್ರೆ! ಮುಳಾನಿ ಚಿಮಿಣಿ ಬಾಯಿ ಮಹಾಪೂಜೆ ಕೊಳ್ಳ ರೂಪಾಯಿ ನಣಲಾ ಬರ್ತ್ನದ್ದಿ. ಇನುಕುಳು ಪಂಡಿ ಪ್ರಕಾರ ಯಾನ್ ಕೈಟ್ ಪಾಡ್ದೆ.

**ಶುಕ:**—ಅವು ಮಲ್ಲೆ ಇದ್ದಿ. ಎಲ್ಲೆ ರಾತ್ರಿ ಕೊಳ್ಪೆ ಅಂತಾಳ್.

**ಪಾರು:**—ಇನುಕುಳೇ ವಸೂಲ್ ಅಂತ್‌ತ್ ಯೆಂಕ್ ಮುಟ್ಟಾವರಾ?

**ಶುಕ:**—ಯಾನ್ ಎಲ್ಲೆ ರಾತ್ರಿ ಮೂಳು ಇಪ್ಪಾಯೆ. ಎಲ್ಲೆ ಪರಿಶೆದಾಕುಳೆನ್ ಕುಂಜಾರುಗು ವೊಳೆತೊಂಡ್ತು ಪೋಪೆ. ಇನುಕುಳು ಒಂಜಿ ಕೆಲಸ ಅಂಪುಲೆ. ರಾತ್ರಿ ಇಲ್ಲಡೆಗ್ ಪೋನಾಗಾ ಅಂಚನೇ ಚಿಮಿಣಿ ಇಲ್ಲಾಗ್ ಪೊಗಿತ್ ಪೋಲೆ. ವಸೂಲ್ ಆಪುಣು. ಆಳೇಗ್ಲಾ ಆಳೇ ಪಳಿ ಚೀರೂಗ್‌ಲಾ ಈ ವಸೂಲಿ ವಿಲೇವಾರಿ ಪಣ್ತೆ;–ಎಲ್ಲೆ ತನುಕುಳೇ ಆಡೇಗ್ ವಸೂಲಿಗ್ ಬರ್ಪರ್ ಅಂದದ್.

**ಪಾರು:**—ಆನ್, ಬೆತ್ತ್ ಜಾನೆ ಅಂಪುಣ! ತನ್‌ಕುಳೆ ಸಾತೆರ ಕಳೆ ಪಾಡ್ಯೆರೆ ಆವುಣಾ! ಎಂಚಾಂಡಲಾ ರೂಪಾಯಿ ಬತ್ನ್ ಅಂದದ್ ಆವೊಡೇ! ಆಂಡಾ ಆಳೆಗ್ ಎನ ಗುರ್ತ ಉಂಡು ಕೆರೆನಾ?

**ಶುಕ:**—ತನುಕುಳೆ ಗುರ್ತ ಇದ್ದಿ ಪಣ್ಣಂಡ ಜಾನೆ? ಎಡ್ಡೆ ಪಂಚಾತಿಕೆ! ತನುಕುಳೆ ಗುರ್ತ ಆ ಓಣಿಡ್ ಇನ್ಸುಣಾಕುಳೆಗ್ ಮಂತಾ ಉಂಡು. ತನುಕುಳು ಇಲ್ಲಡೆಗ್ ದಿನೋಲಾ ಪೋತು ಬರ್ಪಿ ಸಾದಿ ಆತಾ! ಮುಳಾನಿ ತನುಕುಳು ನನು ಮಾಣಿ ಹಯಗ್ರೀವೆಡ ಪಂಚಕಜ್ಜಾಯಂತ ಕಟ್ಟ ಕಡಪುಡ್ತರಾ? ಆಳ್ ಪಂಡಳ್.

**ಪಾರು:**—(ನಗುತ್ತ) ಅಂದ್!

**ಶುಕ:**—ಬೆತ್ತ್ ಈತ್ ಮುಂತ ಗುರ್ತ ಇತ್ತತ್, ಯೆನನ್ ಪರೀಕ್ಷೆ ಅಂಪುಣನಾ?

(ಇಷ್ಟರಲ್ಲಿ ಪರಿಶೆಯವರು ದೇವರ ದರ್ಶನ ಮುಗಿಸಿ ಹೊರಬರುವರು.)

**ಪಾರು:**—ಆಚಾರ್ರೆ! ಮೊಕುಳು ಇನುಕುಳೆ ಇಲ್ಲಾಡ್ ಉಳ್ಳೇರಾ? ಆವಾಡ್, ಸೇವೆ ಕೊಳ್ಪೋಲೆ. ಆತ್,–ಯೇನನ್ ಪಣೋಡಾ? 'ಏನಮ್ಮಾ! ಬಹಳ ದೂರದಿಂದ ಪ್ರಯಾಸಪಟ್ಟು ಕೊಂಡು ನಮ್ಮಲ್ಲಿಗೆ, ಈ ಕ್ಷೇತ್ರಕ್ಕೆ ಬಂದಿದ್ದೀರಿ. ಯಾವ ಶ್ರೀ ಮನ್ಮಧ್ವಾಚಾರ್ಯರಂಥಾ ಹನುಮಾವತಾರದವರು ಈ ಕ್ಷೇತ್ರದಲ್ಲಿ ಶ್ರೀಕೃಷ್ಣನನ್ನು ತಂದು ನಿಲ್ಲಿಸಿದ್ದಾರೆ; ನೋಡ್ರಿ! ಇದು

(ಇನ್ನೇ ಪುಟಕ್ಕೆ ಮುಂದರಿಸಿಯದೆ.)

# The Kanara Enterprise Ltd., Puttur.

Estd: 1920] [1920ರಲ್ಲು ಸ್ಥಾಪಿತವಾಗಿದ್ದು.

## ದಿ ಕೆನರಾ ಎಂಟರ್‌ಪ್ರೈಸ್ ಲಿಮಿಟೆಡ್, ಪುತ್ತೂರು.

**ಠೇವಣಾತಿಗಳ ದರ.**

**ನಿರಖು ಠೇವಣಾತಿಗಳು.** 3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

**'ಸೇವಿಂಗ್ಸ್ ಬೇಂಕ್'** ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

**'ಚಾಲ್ತಿ ಠೇವಣಾತಿಗಳು'** ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

**ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು.**

ಬೇಂಕಿನ ಆಫೀಸು,
ಪುತ್ತೂರು.
ತಾ. 10—4—1935.

G. N. LAKSHMAN PAI,
ಸೆಕ್ರಟರಿ.

ಡಾಕ್ಟರ್ ಜಿ. ಬಿ. ಇವರ

# ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

**ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ.** (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

# Hail and Co

**70/4, Chickpet, BANGALORE CITY.**

**Illustrate Your Announcements and Double Their Effectiveness.**

**THE LEADING BLOCK MAKERS**

FOR OVER 18 YEARS' EXPERIENCE ARE NOW AT YOUR SERVICE.

Line and Half-tone Blocks on Zinc or Copper for

BOOK ILLUSTRATIONS, MAGAZINES & NEWSPAPERS,
ART LABELS, ETC., ETC.

***We specialize in designing and Cinema Slides.***

**The Zandu Pharmaceutical Works, Ltd., Bombay.**

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಯಿ.

ಇವರ

# ಕೇಸರೀ ಜೀವನ

**ಆಬಾಲವೃದ್ಧರಲ್ಲಿ ನವಜೀವನವನ್ನುಂಟುಮಾಡುವ ಶಕ್ತಿವರ್ಧಕ 'ಟಾನಿಕ್'.**

ಈ ಔಷಧವು ಶ್ರೇಷ್ಠವಾದ ಹಸಿಯ ನೆಲ್ಲಿಕಾಯಿ, ರಸಸಿಂಧೂರ, ಅಭ್ರಕ ಭಸ್ಮ, ಕುಂಕುಮಕೇಸರ, ಕಸ್ತೂರಿ ಮೊದಲಾದ ಅತ್ಯಮೂಲ್ಯ ಪದಾರ್ಥಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿದೆ.

ಕೆಮ್ಮು, ಶೀತಗಳನ್ನು ನಿವಾರಿಸಿ, ಸ್ವರದ ಕಾಠಿಣ್ಯವನ್ನು ಹೋಗಲಾಡಿಸುವುದಕ್ಕೂ, ಜೀರ್ಣಶಕ್ತಿಯನ್ನು ಹೆಚ್ಚಿಸಲಿಕ್ಕೂ ಇದಕ್ಕೆ ಸಮಾನವಾದ ಔಷಧಿಯು ಬೇರೊಂದಿಲ್ಲ. ಕ್ಷಯರೋಗಕ್ಕಿದು ರಾಮಬಾಣ. ಕ್ರಮವಾಗಿ ಇದನ್ನು ಸೇವಿಸುವುದರಿಂದ ಅಕಾಲದಲ್ಲಿ ಬರುವ ವೃದ್ಧಾಪ್ಯವೂ, ನರಗಳ ನಿಶ್ಶಕ್ತಿಯೂ ಸಂಪೂರ್ಣವಾಗಿ ಗುಣವಾಗುವುದು. ನಿತ್ರಾಣಕ್ಕೂ, ಎದೆಯ ರೋಗಗಳಿಗೂ, ಮೆದುಳಿನ ಕೆಲಸದವರಿಗೂ ಇದು ಅಮೃತಪ್ರಾಯವಾದುದು. ಮಕ್ಕಳಾದಿಯಾಗಿ ಮುದುಕರ ತನಕ ಇದನ್ನು ಸೇವಿಸಿ ಕಳೆದುಹೋದ ಆರೋಗ್ಯಭಾಗ್ಯವನ್ನು ತಿರುಗಿ ಪಡೆಯಬಹುದು. ಇಂದೇ ತರಿಸಿ ಅನುಭವ ಪಡೆಯಿರಿ. ಬೆಲೆ ಪೌಂಡಿಗೆ ರೂ. 5-0-0. ಅರ್ಧ ಪೌಂಡಿಗೆ ರೂ. 2-12-0.. ಕಾಲು ಪೌಂಡಿಗೆ ರೂ. 1-9-0. ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನವರಿಂದ ತಿಳಿಯಿರಿ.

ಮದ್ರಾಸ್ ಪ್ರೆಸಿಡೆನ್ಸಿ ಏಜಂಟ್:—**ದಾಮೋದರ್ ಎಂಡ್ ಕೋ.**, 78, ಚೈನಾ ಬಜಾರ್ ರೋಡ್, ಮದ್ರಾಸ್.

ಮಂಗಳೂರು—**ಷಾ ಅಂಡ್ ಕೋ.** ‖ ಕಾರ್ಕಳ— **ವಿ. ವಿ. ಶೆಣೈಯವರು.**
ಉಡುಪಿ— **ಪಿ. ಎ. ಹೈ ಬ್ರದರ್ಸ್.** ‖ ಕಾಸರಗೋಡು—**ಕ್ಷೇಮಾಯತನ ಫಾರ್ಮಸಿ.**

# ಕಾರಣ ಮತ್ತು

# ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶಾರೀರಕ ಯೋಗ್ಯತೆಯು
ರಮ್ಯವಾದ ಅನುಭವವಾಗಿದೆ.
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗ
ಳೊಡನೆ ಮಿಶ್ರವಾಗುತ್ತಿರುವುದೇ.

## ಮೈಸೂರು
## ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

**GOVT. SOAP FACTORY,**
**BANGALORE.**

# ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ಟ. ಖ. 11 ಆಣೆ.

# ಸ್ಪ್ಲೀನ್‌ಷ್ಟಿಲೀವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚೆಕ್ಕಬಿಂದು ದಿವ್ಯೌಷಧವು.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

# M. GOPAL RAU

**Prop: KANARA PHOTO STORES.**

Artists, Photographers, Photo Material Dealers.

**Shifted opposite**
**Wenlock Hospital Gate.**

Photos Cabinet 3 copies Rs. 2—0—0
Full Size ,, Rs. 5—0—0

**Amateurs films developed free.**
**Awarded gold medals for**
**High Class Enlargements.**

(೩೧ನೇ ಪುಟದಿಂದ)

ವೈಷ್ಣವರಿಗೆಲ್ಲ ಭೂ ವೈಕುಂಠ. ಇಲ್ಲಿ ಶ್ರೀ ಕೃಷ್ಣನಿಗೆ ಸೇವೆ ಕೊಡ ತಕ್ಕಂಥಾ ನಿಮ್ಮಂಥಾ ಭಕ್ತರಿಗೆ ಶ್ರೀ ಕೃಷ್ಣ ಸಕಲೇಷ್ಟಾರ್ಥಗಳನ್ನು ಕೊಟ್ಟು ಉದ್ಧಾರ ಮಾಡುತ್ತಾನೆ. ಅಂಥಾ ಸೇವೆಗಳಲ್ಲಿ ಮಹಾ ಪೂಜೆ ಎಂಬತಕ್ಕಂಥಾದ್ದು ಕೃಷ್ಣನಿಗೆ ಪ್ರೀತಿಯಾಗುವಂಥಾದ್ದು. ಅದನ್ನು ನೀವು ಕೊಡಬೇಕು. ಯಾರು ಕೃಷ್ಣನಿಗೆ ಆ ಸೇವೆ ಸಲಿಸುತ್ತಾರೋ ಅಂಥವರಿಗೆ ಅವಸಾನಕಾಲದಲ್ಲಿ ಯಮ ದೂತರು ಬಹಳ ಸೌಮ್ಯರೂಪದಿಂದ ಕಾಣಿಸುತ್ತಾರೆ. ಆ ದೂತರು ಇವರನ್ನು ಪಲ್ಲಕಿಯಲ್ಲಿ ಕೂರಿಸಿ, ಹೂವಿನ ಮಳೆ ಕರೆಯುತ್ತಾ ಸ್ವರ್ಗಕ್ಕೆ ಒಯ್ಯುತ್ತಾರೆ. ವೈತರಣಿ ನದಿ ತಾನಾಗಿ ದಾರಿ ಬಿಡುತ್ತದೆ. ಸ್ವರ್ಗದಲ್ಲಿ ನಾರಾಯಣನ ದರ್ಶನವಾಗಿ ಸಾಯುಜ್ಯ ಪದವಿ ದೊರಕುತ್ತೆ.

**ಗಂಗಮ್ಮ**:-ನಾವು ಬಡ ಹೆಂಗಸರು. ದೇವರೇ ನಮಗೆ ಕೊಡಬೇಕು. ನಾವೇನು ಕೊಡೋಣ?

**ಶುಕ**:-ಉಂದು ಮಂತಾ ಭೋಜನ ಶಾಲೆ ಬಾಬು; ಚರಿಗೆ ಭರ್ತಿದವು. ಆಂಡ, ವೊಕುಳಿ ಒಟ್ಟುಗು ನನ ವೊಂಜಿ ಪೊಣ್ ಜೇವು ಉಂಡು. ಅಯಿತ ಕೈಟ್ ಸ್ವಲ್ಪ ಬಗೆ ಉಂಡುಕೆರೆ. ಕಾರ್ ಬೇನೆ ಅಂದದ್ ಅವು ಇನಿ ಇಡೆಗ್ ಬರ್ತ್ನದ್ದಿ. ತಾಗ್ಂಡ ಅವು ಒಂಜಿ ಮಹಾಪೂಜೆ ತಾಗೊಳಿ. ತನುಕುಳು ಎಲ್ಲೆನೇ ಎಂಕುಳಿ ಇಲ್ಲಡೆಗ್ ಪೋತ್, ಆ ಪೊಣ್ಜೋವುದ ಕೈಟ್ ಪಾತೆರ್ತ ಬರೋಳಿದೆ?

**ಪಾರು**:-ಎಲ್ಲೆ ಇನುಕುಳು ಕುಂಜಾರ್ಗ್ ಪೋಪರ್ ಲ್ಲತಾ?

**ಶುಕ**:-ಯಾನ್ ಪೋಂಡ ಜಾನೆ ಆಚಾರ್ರೆ! ಯನ ರಾಮಣಿ ಉಳ್ಯಾಳ್! ಜಾಲಾ ದಾಕ್ಷಿಣ್ಯ ಬೋತ್ನದ್ದಿ. ಇನುಕುಳಿಗ್, ಎನ ಇಲ್ಲ್ ಬೇತೆ, ಇನುಕುಳಿ ಇಲ್ಲ್ ಬೇತೆನಾ? ಎಂಚಾಂಡಲಾ ಬಡವೆ; ಅನಿತ್ತಿಂಚಿ ತನುಕುಳಿ ಆಶ್ರಯ ಅಂತೊಂಡ್ತು ಉಳ್ಳೆ. ಒಟ್ಟಾರೆ ಮಂತ ಸಂಗತಿಡ್ಲಾ ತನುಕುಳು ಸುದಾರಿಪೊಡು.

**ಪಾರು**:-ಆವಡ್, ಚಿಂತ್ತೆ ಇದ್ದಿ. ಎಲ್ಲೆ ಇನುಕುಳಿ ರಾಮಣಿ ಚೌಕಿಗ್ ಪ್ರಸಾದೊಂಕು ಬರಡ್. ಅಂಚಾಂಡ, ಎಂಕಲಾ ಇನುಕುಳಿ ಇಲ್ಲಡೆಗ್ ಪೊವೇರೆಗ್ ನೆನೆಪು ಆವು.

**ಶುಕ**:-ಈ ಗಡಿಬಿಡಿಟ್ ಎಲ್ಲೆ ರಾತ್ರಿ ಚಿಮಿಣಿ ಇಲ್ಲಡೆಗ್....

**ಪಾರು**:-ಇದ್ದಿ, ಖಾತ್ರಿ ಪೋಪೆ. ಯೇತ್ ಕೆಲಸ ಇತ್ತ್ಂಡಲಾ ಬುಡ್ತು ಪೋಪೆ. ವಸೂಲಿ ಢೀಲಿ ಅಂತಂಡ್ ಬೆತ್ತ್ ಅವು ಸೂಲಿ!

---

## ನಾಲ್ಕನೆಯ ದೃಶ್ಯ.

(ದ್ವಾರಕೆಯ ಅರಮನೆಯ ಒಂದು ಕೊಠಡಿಯಲ್ಲಿ ಶ್ರೀ ಕೃಷ್ಣನು ಇಂತಿರುವನು. ನಾರದರ ಪ್ರವೇಶ. ಬಾಯಲ್ಲಿ 'ನೀನಿರುವ ವರೆಗೆ ಉಡುಪಿಯಲ್ಲಿ ಮುಷ್ಟಿ ಅನ್ನ'ವೆಂಬ ಹಾಡು.)

**ನಾರದ**:-ಇದೇನು ಆಶ್ಚರ್ಯ! ನಮ್ಮ ಕೃಷ್ಣ ಸ್ವಾಮಿಯು ಈ ದಿನ ತನ್ನ ಗುರುತೇ ಸಿಕ್ಕದಂತೆ ಈ ವಿಚಿತ್ರ ವೇಷ ಧಾರಣೆ ಮಾಡಿ ನಿಂತಿರುವನಲ್ಲ! ಕಿರೀಟವಿಲ್ಲ; ಕರ್ನಕುಂಡಲವಿಲ್ಲ; ವಜ್ರಕವಚವಿಲ್ಲ; ಭುಜಕೀರ್ತಿ ಇಲ್ಲ; ವೀರಕಸೆ ಇಲ್ಲ; ಒಂದೂ ಇಲ್ಲ. ಎಲ್ಲಾ ಹೊಸ ಡ್ರೆಸ್, ಹೊಸ ಫ್ಯಾಶನ್. ತಲೆ ಬೋಳು ಕ್ರಾಪು; ಅದಕ್ಕೆ ವ್ಯಾಸ್ಲಿನ್; ಫ್ರೆಂಚ್ ಕಟ್ಟು ಮೀಸೆ; ಮುಖಕ್ಕೆ ಪೌಡರು; ಮೈಗೆ ಸಿಲ್ಕು ಕೋಟು; ನೆಕ್ಕು ಟಾಯಿ; ಕಾಲೇರ್; ಕಣ್ಣಿಗೆ ಕನ್ನಡಕ; ಕೈಗೆ ಅರಿಸ್ಟ ವಾಚು; ಕಾಲಿಗೆ ಬೂಟೀಸು; ಅರ್ಧ ಚಲ್ಲಣ; ಸುದರ್ಶನದ ಬದಲು ಬಣ್ಣದ ಬೆತ್ತ;-ಇದೇನು, ರುಕ್ಮಿಣೀ ದೇವಿಯೂ ಇತ್ತ ಬರುತ್ತಿರುವಳು. ಅವಳಿಗೂ ಹೊಸ ವೇಷ! ಓರೆ ಬೈತಲೆ; ಮುಖಕ್ಕೆ ಪೌಡರು; ಕುಂಕುಮವಿಲ್ಲ; ಅರ್ಧ ಕೈ ರವಕೆ; ತೆಳ್ಳಗಿನ ರೇಶ್ಮೆ ಸೀರೆ; ಕೈಯಲ್ಲಿ 'ಮೆನಿಪರ್ಸ್';—ಒಳ್ಳೇ ಅಪ್‌ಟುಡೇಟ್ ಲೇಡಿ-ಜಂಟಲ್‌ಮ್ಯಾನರಂತೆ ಕಾಣುತ್ತಿದ್ದಾರಲ್ಲಪ್ಪ!

**ಕೃಷ್ಣ**:—ಏನು ನಾರದರೆ! ಸುಮ್ಮನೆ ನಿಂತು ನೋಡುತ್ತಾ ಇದ್ದೀರಲ್ಲ! ಮ್ಹಾತಿಲ್ಲ. ಏನು ನಮ್ಮ ವೇಷ ನೋಡಿ ಬೆರಗಾದರೋ! ಅಲ್ನೋಡಿ. ರಥವಿಲ್ಲ; ಮೋಟರ್‌ಕಾರು ನಿಂತಿದೆ. ಅದರಲ್ಲಿ ಒಂದು ನಾಯಿ ಬೇರೆ ಇದೆ. ಕಾರಿನಲ್ಲಿ ಮಿಸೆಸ್ ರುಕ್ಮಿಣಿ ಬಾಯಿಯವರೂ, ನಾನೂ ಪ್ರಯಾಣ. ಉಡುಪಿಗೆ. ಅಲ್ಲಿ ನನ್ನ ಉತ್ಸವ, ಪರ್ಯಾಯ ಎಲ್ಲಾ ನಡೆಯುತ್ತಾ ಇದೆ! ಅನೇಕ ವರ್ಷಗಳ ಹಿಂದೆ ಅವುಗಳನ್ನು ನೋಡಿದ್ದೆ. ಈಗ ಅವುಗಳಲ್ಲಿ, ಅವುಗಳನ್ನು ಆಚರಿಸುವವರಲ್ಲಿ-ಭಕ್ತರಲ್ಲಿ, ಸ್ವಾಮಿಗಳಲ್ಲಿ, ಶಿಷ್ಯರಲ್ಲಿ ಬಹಳ ಬದಲಾವಣೆಯಾಗಿದೆಯಂತೆ. ಅದನ್ನೆಲ್ಲ ನೋಡಿ ಬರೋಣ ಎಂದು ಹಳೇ ಕ್ರಮ ಬಿಟ್ಟು, ಈಗಿನ ಸುಧಾರಣೆಗಳಿಗೆ ತಕ್ಕ ಹೊಸ ಕ್ರಮದ ಈ ವೇಷಭೂಷಣಗಳನ್ನು ಧರಿಸಿ, ಫ್ಯಾಮಿಲಿ ಸಹಿತ ಹೊರಟಿದ್ದೇನೆ. ನೀವೂ ನಮ್ಮ ಜತೆಯಲ್ಲಿಯೇ ಬಂದುಬಿಡಿ.

**ನಾರದ**:—ನಾನು ಯಾತಕ್ಕೆ ಬರಲಯ್ಯಾ! ಉಡುಪಿ ಸಮಾಚಾರವೆಲ್ಲಾ ನಮ್ಮ ಡೈರಿಗೆ ಎಂದೋ ದಾಖಲಾಗಿದೆ. ಎಲ್ಲಾ ನಿನ್ನ ಲೀಲೆಯೇ ಅಲ್ಲಿ. ನಿನ್ನ ಮಹಾತ್ಮೆ. ನಿನ್ನ ಪ್ರಭಾವ.

**ಕೃಷ್ಣ**:—ಹಾಗಾದರೆ ನಮ್ಮ ಲೇಡಿ ರುಕ್ಮಿಣಿ ಬಾಯಿಯವರಿಗೂ ಅದನ್ನಿಷ್ಟು ಹೇಳಿಬಿಡಿ. ನನ್ನ ಮಾತು ಅವಳು ನಂಬುವುದಿಲ್ಲ. ಉಡುಪಿಗೆ ನಾನೊಬ್ಬನೇ ಸರ್ಕೀಟ್ ಬಿಟ್ಟರೆ, ಅಲ್ಲಿಯ ಓಣಿಓಣಿ ಹೆಂಗಸರು ನನ್ನನ್ನು ಪುನಃ ದ್ವಾರಕೆಗೆ ಹಿಂದಿರುಗಲು ಬಿಡುವರೋ ಇಲ್ಲವೋ ಎಂಬ ಸಂದೇಹದಿಂದ ಮಾತ್ರ ಅವಳೀಗ ನನ್ನ ಕಾವಲಿನ ಬಗ್ಗೆ ನನ್ನೊಡನೆ ಹೊರಟು ನಿಂತಿದ್ದಾಳೆ. ಹೇಳಿಬಿಡಿ ನಾರದರೆ-ನಿಮ್ಮ ಡೈರಿ ಸಮಾಚಾರ.

**ನಾರದ**:—ಮೇ-ಡಮ್! ರುಕ್ಮಿಣಿ ಬಾಯಿಯವರೆ! ಉಡುಪಿ ಎಂದರೇನು ಸಾಮಾನ್ಯವೇ? ಆ ಕ್ಷೇತ್ರಮಹಾತ್ಮೆ ಬಹಳ ದೊಡ್ಡದು. ಅಲ್ಲಿ ಮಠ ಸಂಸ್ಥಾನದ ಆಡಳಿತದಲ್ಲಿ ಹುಲಿಕರಡಿಗಳಷ್ಟು ದೊಡ್ಡ ಹೆಗ್ಗಣಗಳಿವೆ. ಉಗ್ರಾಣದಿಂದ ಕೊಟ್ಟ ಭೋಜನಸಾಮುಗ್ರಿಗಳನ್ನು ಕೆಲವನ್ನು ಭೋಜನ ಶಾಲೆಯ ಪಾತ್ರೆಗಳೇ ನುಂಗುತ್ತವೆ. ಮುಡಿಮುಡಿ ಅಕ್ಕಿಯನ್ನು ಉಗ್ರಾಣಗಳೇ ತಿನ್ನುತ್ತವೆ. ಕಾಸಿಲ್ಲದವರು ಮಠಕ್ಕೆ ನವುಕರರಾಗಿ ಸೇರಿದ ಕೆಲವು ಕಾಲದಲ್ಲೆಯೇ ಅವರ ಹೆಂಡರುಮಕ್ಕಳ ಹೆಸರಲ್ಲಿ ಆಸ್ತಿ! ಚಿಟ್ಟಿ ಫಂಡು! ಹಣದ ಲೇವಾದೇವಿ! ಇನ್ನೂ ಬೇಕಾದರೆ-ಹೊಸ ಮನೆ, ಕಟ್ಟೋಣ; ಮನೆ ತುಂಬ ಚಿನ್ನ, ಸೀರೆ, ರತ್ನಾಭರಣ; ಇದೆಲ್ಲಾ ಯಾವ ದುಡ್ಡು ಎನ್ನ ಬೇಡಿ. ಮಠದ ನವುಕರರ ಸಂಸಾರಕ್ಕೆಲ್ಲ. ಮಠವೇ ಮನೆಯಾದರೆ, ಏನಾಗಬೇಕು?

**ರುಕ್ಮಿಣಿ**:—ಹೀಗೂ ಇದೆಯೇ? ನಾರದರೆ?

**ನಾರದ**:—ಇಷ್ಟೇ ಅಲ್ಲ. ಸ್ವಾಮಿಗಳು ಕೆಲವರ ಈಗಿನ ಚರಿತ್ರೆ ಏನು ಬಲ್ಲಿರಿ? ಯತಿಗಳಿಗೆ ಕೆಲವರಿಗೆ ಪ್ರಯಾಣಕ್ಕೆ ದಂಡಿಗೆ ಬೇಡ; ಕಾರು ಬೇಕು; ಕಾವಿ ಶಾಟಿ ಬೇಡ; ಜರತಾರಿ ಪಟ್ಟೆ ಬೇಕು; ಫಲಾಹಾರಕ್ಕೆ ಹಣ್ಣು ಬೇಡ; ಸಜ್ಜಿಗೆ ಕಡುಬು ಬೇಕು; ಮಲಗಲಿಕ್ಕೆ ವ್ಯಾಘ್ರಾಸನ ಬೇಡ; ಅಲಂಕಾರ ಮಾಡಿದ ಕೋಣೆಯಲ್ಲಿ ಶೃಂಗಾರದ ಮಂಚದ ಮೇಲಿನ ಮೆತ್ತಗಿನ ಸುಪ್ಪತ್ತಿಗೆ ಬೇಕು. ಇನ್ನೂ ಒಂದೆರಡು ಕಡೆ ಹೀಗೂ ಇದೆಯಂತೆ ಮಠದಲ್ಲಿ-ನೋಡಿದರೆ ಅದೊಂದು ಚಿಕ್ಕ ಕೊಠಡಿ; ಅದರಲ್ಲಿ ಗೋಡೆಗೆ ಹೊಡೆದ ಒಂದು ಕಬಾಟು. ಆದರೆ ಆ ಕಬಾಟಿನ ಬಾಗಿಲು ತೆರೆದರೆ, ಒಂದು ಚಿಕ್ಕ ಗುಪ್ತಗೃಹವೂ, ಅಲ್ಲಿ ಶಯ್ಯಾ ಸಾಮುಗ್ರಿಗಳೂ ಇವೆಯಂತೆ. ಇದು ರಾತ್ರಿ ಸಂಧಾನದ ವಾಗ್ದೇವಿವಂಶೀಯರ ಗುಪ್ತಮಂದಿರವಾಗಿರಬೇಕು,—ಮೊಗಲರ ಕಾಲದ ನೆಲಮಾಳಿಗೆಯಂತೆ.

**ರುಕ್ಮಿಣಿ**:—ಎಲ್ಲೋ ಕೆಲವರು ಅಯೋಗ್ಯರೇನಾದರೂ ಹಾಗೆ ಮಾಡಿರಬಹುದು! ಎಲ್ಲರೂ ಯೋಗ್ಯರೇ ಆಗಬೇಕೆಂದರೆ ಹೇಗಾದೀತು? ಮನುಷ್ಯಾನ್ನ ಉಂಡು ಕೊಬ್ಬಿದವರಿಗೆ ತಿಂದದ್ದು ಕಣ್ಣಿಗಿಳಿದ ಫಲ ತಾನೇ ಲೋಕದಲ್ಲಿ ಇಂತಹ ಅನಾಚಾರ, ಅನ್ಯಾಯ, ಅನರ್ಥಪರಂಪರೆ? ಯಾರು ಜಿತೇಂದ್ರಿಯರಾಗಿರಲಾರರೋ, ಕಡು ಬ್ರಹ್ಮಚರ್ಯವ್ರತವನ್ನು ಪಾಲಿಸಲಾರರೋ ಅಂತಹ ಯತಿಗಳಿಗೆ 'ರಿಜಿಸ್ಟರ್ಡ್' ಮದುವೆ ಮಾಡಿಸುವುದೇ ಲೇಸು. ಪ್ರಾಟೆಸ್ಟೆಂಟ್ ಕ್ರೈಸ್ತರ ಗುರುಗಳ ಹಾಗೆ!

**ನಾರದ**:—ಇನ್ನು ಆ ಕ್ಷೇತ್ರವಾಸಿಗಳ ಸಮಾಚಾರ ಕೇಳಿ! ಪರ್ಯಾಯ, ಉತ್ಸವ ಬಂತೋ ಇಲ್ಲವೋ ಯಾತ್ರಿಕರ ಸುಲಿಗೆ. ಒಂದಂಕಣ ಜಾಗಕ್ಕೆ ವರಹದ ಬಾಡಿಗೆಯಯ್ಯ. ಯಾತ್ರಿಕರಿಗೆ ಯಾವ ಸೌಕರ್ಯವೂ ಇಲ್ಲ. ಇದಲ್ಲದೆ ಆ ಮಠ, ಈ ಮಠ, ಆ ಗುಡಿ, ಈ ಗುಡಿ, ಗೋಶಾಲೆ, ವೃಂದಾವನ, ಕುಂಜಾರು, ಒಡಭಾಂಡೇಶ್ವರ ಮೊದಲಾದವುಗಳನ್ನು ಸುತ್ತಿಸಿ ತೋರಿಸಿ, ಮಧ್ವಸರೋವರ, ಸಮುದ್ರಗಳಲ್ಲಿ ಜಳ್ಳು ಸಂಕಲ್ಪ ಹೇಳಿಸಿ ಮುಳುಗು ಹಾಕಿಸಿ, ದಕ್ಷಿಣೆ ದಾನ ಹೊಡೆಯುವುದು ಬೇರೆ. ಆ ದಕ್ಷಿಣೆಯೋ-ಕೂತರೆ ದಕ್ಷಿಣೆ; ನಿಂತರೆ ದಕ್ಷಿಣೆ; ಮಾತಾಡಿದರೆ ದಕ್ಷಿಣೆ; ಉಸಿರಾಡಿದರೆ ದಕ್ಷಿಣೆ. ನೋಡಿ. ಮಠದ ಬಾಗಿಲು ಕಾಯುವವನಿಗೆ ದಕ್ಷಿಣೆ; ಮಧ್ವಸರೋವರದ ಕಾವಲಿನವನಿಗೆ ದಕ್ಷಿಣೆ; ತೀರ್ಥಕ್ಕೆ ದಕ್ಷಿಣೆ; ಪ್ರಸಾದಕ್ಕೆ ದಕ್ಷಿಣೆ; ಗರ್ಭಗುಡಿಯ ಪ್ರವೇಶಕ್ಕೆ ದಕ್ಷಿಣೆ; ಚೌಕಿ ಊಟಕ್ಕೆ ದಕ್ಷಿಣೆ; ಮನುಷ್ಯಾನ್ನದ ಊಟಕ್ಕೆ ದಕ್ಷಿಣೆ; ಸಂಕಲ್ಪಕ್ಕೆ ದಕ್ಷಿಣೆ; ಸ್ನಾನಕ್ಕೆ ದಕ್ಷಿಣೆ; ಆಚಮನಕ್ಕೆ ದಕ್ಷಿಣೆ! ಮತ್ತೆ ಇವತ್ತೇನು—ಇಂಥಾ ತಿಥಿ; ಗೋದಾನ ಕೊಡ್ರಿ. ತಮ್ಮ ಮನೇ ದನವನ್ನೇ ತಂದು ಕಟ್ಟಿ ಹಾಕಿ ಅದರ ಕ್ರಯ ಎಂತ ದುಡ್ಡು ವಸೂಲಿ. ಇವತ್ತೇನು—ಇಂಥಾ ತಿಥಿ; ಪಾತ್ರ ದಾನ ಕೊಡ್ರಿ. ಸರಿ, ಕಲ್ಮಂಜೆಯವರ ಅಂಗಡಿಯಿಂದ ಹೊಸ ಪಾತ್ರೆ ತಂದು ಎದುರಿಗಿಟ್ಟು ದುಡ್ಡು ವಸೂಲಿ. ಪುನಃ ಇವತ್ತೇನು-ಇಂಥಾ ತಿಥಿ; ವಸ್ತ್ರದಾನ ಕೊಡ್ರಿ. ಸರಿ, ಪಿ. ಏ. ಪೈಗಳವರ ಮಳಿಗೆಯಿಂದ ಸಿಲ್ಕಿನ ಶೀರೆ, ಒಳ್ಳೆ ಅಹಮ್ಮದಾಬಾದ್ ವೇಷ್ಟಿ ತಂದಿಟ್ಟು ವಸೂಲಿ! ಇಷ್ಟರ ಮೇಲೆ ಬಡ ಪರಿಶೆಯವರಿಗೆ ಭೋಜನಶಾಲೆ, ರಾಜಾಂಗಣದಲ್ಲಿ ಒಂದು ಎಲೆ ಸಿಕ್ಕಬೇಕಾದರೆ ಕೃತಾಕಂಟಕ. ಹಾಗೂ ಪರಿಶೆಯವರು ಊರಿಗೆ ಹೊರಟು ನಿಂತಾಗ, ಅವರ ಪಾತ್ರೆ ಪದಾರ್ಥ, ಸೀರೆ ಕುಪ್ಪಸ ಬಾವಿಗೆ ಹಾಕಿ ಹಾಗೆ ಸಂಪಾದನೆ ಬೇರೆ. ಇವೆಲ್ಲ ನಿಮ್ಮ ಹಸ್ಬೆಂಡ್ ಮಿ. ಕೃಷ್ಣ ಸ್ವಾಮಿಗಳ ಹೆಸರಲ್ಲಿ ನಡೆಯುತ್ತಾ ಇದೆ-ಬ್ರಾಹ್ಮಣರೆನ್ನುವ ಕೆಲವು ಪಂಚಮಹಾ ಪಾತಕಿಗಳಿಂದ! ಇಂಥಾ ಅಕೃತ್ಯಗಳ ಮಧ್ಯ ಶ್ರೀಕೃಷ್ಣನ ಸಾನ್ನಿಧ್ಯ ಆ ಕ್ಷೇತ್ರದಲ್ಲಿದೆಯೋ ಇಲ್ಲವೊ ತಿಳಿದಿಲ್ಲ.

**ಕೃಷ್ಣ**:—ಸಾಕು, ನಾರದರೆ! ನಿಮ್ಮ ಪುರಾಣ, ಬನ್ನಿ, ಕಾರ್ ಹತ್ತಿ. ಸೆಲ್ಫ್‌ಡ್ರೈವ್ ಮಾಡ್ತೀನಿ. ಲೈಸನ್ಸ್ ಇದೆ. ಈ ಮಾಡರ್ನ್ ಕೃಷ್ಣನ ೧೧ನೆ ಅವತಾರ ಸ್ವಲ್ಪ ನೋಡಿ.

---

## ಪಂಚಮ ದೃಶ್ಯ.

(ಭೋಜನಶಾಲೆಯ ಊಟ ಮುಗಿಸಿ ಮನೆಗೆ ಹಿಂದಿರುಗುವ ಇಬ್ಬರು ವಿಧವೆಯರು ದಾರಿಯಲ್ಲಿ)

**ರಾಮಕ್ಕ**:—ಅಂದಾ, ಅತ್ತೈ, ಸಾಮುಳೆಗ್‌ಲಾ, ಪಾರುಪತ್ಯೆಗಾರೆರಿಗ್‌ಲಾ, ಪರ್ಯಯಾ ಲಕ್ಕುಣ ದುಂಬು ಭಾರೀ ಲಡಾಯಿಕೆರೆ. ಕೇಣ್ದಾರಾ?

**ಯಮುನಕ್ಕ**:—ಇದ್ದಿ, ಏನ್ ಕೇಣ್ದ್ ಇದ್ದಿ. ಜಾನೆಕೆರೆ!

**ರಾಮಕ್ಕ**:—ಬೆತ್ತ್, ಮಠದ ಲೆಕ್ಕೊಂಟು ಸುಮಾರ್ ೧೦ ಸಾವಿರ ರೂಪ್ಯಾ ಸೋಜ್ಯುಣ ಇದ್ದಿಕೆರೆ. ಪಾರುಪತ್ಯ ಗಾರ್...ಆಚಾರ್ರು,-ಸ್ವಾಮುಳೆ ಮೆಗ್ಗೆ-ಚಿಮಿಣಿಗ್ ಬೋಡಾಯಿ ಪದ್ದೇಯಿಬಂಗಾರ್ ಅಂಪೋತ್ ಕೊಳ್ತೆರ್‌ಕೆರೆ. ಒಂಜಿ ಅಡವುದ ಮಿತ್ತ್ ರಾಮಣಿ ಪುದರ್‌ಡ್ ೫ ಸಾವಿರ ರೂಪಾಯಿ ಪಾಡ್ದೆರ್ ಕೆರೆ. ಉಂದು ಮಂತ ಸ್ವಾಮುಳೆಗ್ ಗೊತ್ತಾತ್, ಬೀಗಂತ ಕೈ ಕೊಳು ಪಂಡೆರ್‌ಕೆರೆ. ಆಚಾರ್ರು ತಪ್ಪಾನು ಅಂದ್‌ದ್ ಪಂಡ್‌ತ್, ಎರ್ಡ್ ತೆಂಗೈ ಇಜಿತ್, ಸ್ವಾಮುಳೆಗೆ ಅಡ್ಡ ಬೂಳ್ಕೆರ್‌ಕೆರೆ. ನನ ಆಳೆ ಇಲ್ಲಾ ಬಾಕಿಲ್‌ಗ್ ಪೋವಾಯೆ ಪಂಡ್‌ತ್, ಬಾಲೆದ ತರೆತ ಮಿತ್ತ್ ಕೈ ಇಜಿತ್ ಪ್ರಮಾಣ ಅಂತೆರ್‌ಕೆರೆ. ಇತ್ತೆ ರಾಜಿಕೆರೆ!

**ಯಮುನಕ್ಕ**:—ಅಂದ, ಅಕ್ಕಾ! ನನ ಪರ್ಯಾಯೊಂಟು ಮಂತೆರೆಗ್ಲಾ ಭೋಜನ ಶಾಲೆಡ್ ಅಶನ ಇದ್ದಿಕೆರೆ. 'ದಪ್ಪಿ ಪತ್ತುಣ; ದುಡ್ಡು ಅಂಪುಣ; ಚಿಟ್ಟಿ ಇಜಿಪುಣ; ದುಡ್ಡು ಅಂಪುಣ; ಕಾಫಿ ಹೋಟ್ಲು ಇಜಿಪುಣ; ದುಡ್ಡು ಅಂಪುಣ. ಅವ್ವೆನೇ ಬಡ್ಡಿಗ್ ಕೊಳ್ತು ಮಲ್ಲೆ ಅಂಪುಣ; ಇಂಚಿನಾಕುಳಿಗ್ ಮಂತ ಭೋಜನ ಶಾಲೆಡ್ ನಿತ್ಯಲಾ ಅಶನ ಜಾಯಿಗ್ ಪಾಡೊಡು? ಇಂಚಿನಾಕುಳಿ ಇಲ್ಲ್‌ತ್ತ್ ಪೊಣ್‌ಜೋವುಳು ನಿತ್ಯ ಭೋಜನ ಶಾಲೆಗ್ ಅಶನಂಕು ಬನ್ನಾಗ, ಪರ್ಕಟ್ ಸೀರೆ; ರವಕೆ ಇತ್ತ್ಂಡ ಇತ್ತ್; ಇದ್ಯಾಂಡ ಇದ್ದಿ. ಏಕುಳೇ ಉಪನಯನ, ಮದಿಮೆ, ಶೋಭನ, ಶ್ರೀಮಂತಂಕು ಓಡೆಗಾಂಡಲಾ ಪೋನಾಗ, ಆಕುಳಿ ಪದ್ದೆಯಿ ಜಾನೆ! ಮುತ್ತುದ ಓಲೆ ಜ್ಯಾನೆ! ಚಕ್ಕಸರ ಜ್ಯಾನೆ! ಕಾಶೀ ನಾರಾಣಾಚಾರ್ಯರೆ ಜರೀ ಪೀತಾಂಬರ ಜ್ಯಾನೆ! ಸಿಲ್ಕ್‌ದ ರವಕೆ ಜ್ಯಾನೆ! ಇಂಚಿನಾಕುಳಿಗ್ ಮಂತ ಜ್ಯಾಯೆಗ್ ಭೋಜನ ಶಾಲೆಡ್ ಅಶನ ಪಾಡೋಡು?' ಇಂಚ ಯೇರೋ ಪಾರುಪತ್ಯೆಗಾರೆ ಪಣ್ಪೆಕೆರೆ!... ಕಾಸ್‌ದಾಯೆ! ಭೋಜನ ಶಾಲೆ ಯೇರೆ ಅಮ್ಮ ಗುಟ್ಟ್? ಮೈಸೂರು ಅರಸು, ಕೊಚ್ಚಿ ಅರಸು, ಅನಂತಶಯನದ ಅರಸು ಅಯ್ಕ್ ತಸ್ತೀಕ್ ಬುಡುತ್ನದ್ದಿಯಾ-ಮುಂತ ಬ್ರಾಹ್ಮಣೆಕೈಗ್ಲಾ, ಯಂಕ್‌ಲಾ, ಇನುಕುಳಿಗುಲಾ ಅವುಳು ಧರ್ಮಂತ ಅಶನ ಪಾಡ್ದೆರೆಗ್? ಭೋಜನ ಶಾಲೆ ಉಂಪು ಗೆತ್ತಂಡ್ ಆಕ್ಕು ಕೇಣುನದ್ಯರಾ? ಆಕುಳು ತಸ್ತೀಕ್ ಕೊಳ್ಪುಣದ್ದಿ ಪಣ್‌ಂಡ್? ಅಂಚ ನಮ್ಮ ಮುಖ್ಯಪ್ರಾಣೆ ಬುಡುವೆನಾ? ಉಂಪು ಗೆತ್ತೀ ಪಾರುಪತ್ಯಗಾರಾ ಇಲ್ಲ್ ಗುಂಡಾಂತರ ಅಂತ್‌ತ್ ಪಾಡುವೆ!

**ರಾಮಕ್ಕ**:—ಜ್ಯಾನ್ಯಾವುಣೋ ಜ್ಯಾನ್ನೋ! ಭೋಜನ ಶಾಲೆ ಉಂಪು ಎಂತಂಡ ಎಂಕ್ ಭಾರೀ ಕಷ್ಟೆ. ಸೂಲಾ! ಇಂಕಾಂಡಲಾ ಅಟ್ಟಿಲ್‌ದ ಕುಪ್ಪಣ್ಣನ ಬಲ ಆಂಡಲಾ ಉಂಡು. ಎಂಕ್ ಇತ್ತೆ ವಾ ಆಣುಜೇವುಳೇ ಬಲಲಾ ಇದ್ದಿ. ಯೇನ್, ಪೆತ್ತ ಎರ್ಮೆ ಸಾಂಕ್‌ತ್, ಭೋಜನ ಶಾಲೆ ಅಶನ ಅಂತೋಣ್ತು, ಏರೇರೆ ನೆರಡೆ ಕೇಣ್ತ್, ಏರೇರೆ ಕಂಡಂತ ಪಜಿರ್ ಕೊಯ್ತ್, ಪೇರ್, ಅಳೆ, ನೈ ನವಾರ್ತ್, ನಾಲ್ ಕಾಸ್ ಅಂತೋಣ್ತು ಎನ ಮಟ್ಟಿಗ್ ಯಾನ್ ಇತ್ತೆ. ಆತಾನಗ, ಎಂಕುಳಿ ಊರುದ ಒಂಜಿ ಕೊಂಕಣೆ—ಕೈತೊಳ್ ಇತ್ತಿನಾಯೆ-ಚಕ್ಕುಲಿ ಮೂರುಣಾಯೆ-ರೂಪಾಯಿ ಸಾಲ ಕೇಂಡೆ. ಮುಕ್ಯಾಲ್ ಬಡ್ಡಿಡ್ ಗುಟ್ಟೆಡು ಕೊಳಿಯೆ. ಆಯೆ ಇತ್ತೆ ಊರು ಬುಡ್ತು ಪೋತೆ. ಓಡೆಗ್ ಅಂದ್‌ದ್ ಯೇರ್ಲಾ ಪಣ್ಪುಣದ್ಯೆರ್. ಎನ ಗ್ರಹಚಾರ! ಅಂಚಿತ್ತ್ ನಮ ಕಟ್ಟೆ ಪುರಾಣಂತ.....ಆಚಾರಾಲಾ ಪೋಯೆರ್. ನನ ಎನ ಗತಿ ಜ್ಯಾನ್ನೋ!—ಕೃಷ್ಣಾ!

(ಆವರು ಹೋಗುವರು, ಕೃಷ್ಣ-ರುಕ್ಮಿಣಿ-ನಾರದರ ಪ್ರವೇಶ)

**ಕೃಷ್ಣ**:—ಪರ್ಯಾಯವೆಲ್ಲಾ ಮುಗಿಯಿತು. ಎಲ್ಲಾ ಸಂಭ್ರಮ ನೋಡಿದಿರಲ್ಲ! ಈ ವಿಧವಾ ಸ್ತ್ರೀಯರು ಮಾತಾಡಿದ್ದೂ ನನ್ನ ಹೆಸರು ಕರೆದದ್ದೂ ಕೇಳಿದಿರಲ್ಲ!

**ನಾರದ**:—ಮಹಾಪ್ರಭೋ! ಎಲ್ಲಾ ನಿನ್ನ ಲೀಲೆ. ಈಗ ಎಲ್ಲವೂ ಕುಲಗೆಟ್ಟು ಹೋದಂತೆ ತೋರುತ್ತದೆ. ಬ್ರಾಹ್ಮಣರು ತಮ್ಮ ಸ್ವಧರ್ಮ ಬಿಟ್ಟಿದ್ದಾರೆ. ಎಲ್ಲ ಯತಿಗಳೂ ತಮ್ಮ ಅನುಷ್ಠಾನದಲ್ಲಿಲ್ಲ. ಭಕ್ತರು ಹೊಟ್ಟೆಯ ಪಾಡನ್ನು ಹುಡುಕುತ್ತಿದ್ದಾರೆ. ಭಕ್ತಿಯ ಶಕ್ತಿಯು ಅಡಗಿತು. ನಾಸ್ತಿಕವಾದ, ಸ್ವಸುಖಾಭಿಲಾಷೆ ಇವು ಹೆಚ್ಚಿತು. ಮಠವೆಂದರೇನು? ಯತಿಗಳೆಂದರೇನು? ದೇವರು ಅಂದರೇನು? ಧರ್ಮವೆಂದರೇನು? ಎಲ್ಲಾ ಹೋಯಿತು. ಆದರೂ ಮಹಾಪ್ರಭು, ನೀನು ಮನಸ

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ

ಮಕ್ಕಳನ್ನು ಕಾಪಾಡಿರಿ.

# ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ
ವಿಜಯನಗರಂ ಔಷಧ.

ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು, ಎಷ್ಟೇ ಕಠಿಣತರ ದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯ ಪಾತ್ರುಡು ಮತ್ತು ಸಹೋದರ,
(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),
98—99 ಬ್ರೋಡೀಸ್ ರೋಡ್, ಮೈಳಾಪುರ್, :: ಮದ್ರಾಸು.
(ರಾಮಕೃಷ್ಣ ಮಠದ ಎದುರು).

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೇಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣಪಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,— ಲಿವರ್‌ಕ್ಯೂರ್ (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜಮ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ, ಮದ್ರಾಸು. } ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ. { ಹ್ಯಾರಿಸನ್ ರೋಡ್, ಕಲ್ಕತ್ತಾ.

ಅಶಕ್ತ ಮಕ್ಕಳು

# ಡೋಂಗರೆ

ಇವರ

# ಬಾಲಾಮೃತ.

ಪನ್ನು
ಕೊಡುವುದರಿಂದ
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷಚಿತ್ತರೂ ಆಗುವರು.

ಕೆ. ಟೀ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

# The Reliance Assurance Company Limited, Bangalore City.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಈ ವರೆವಿಗೆ ಕೊಟ್ಟಿರುವ ಹಕ್ಕಿನ ಹಣ ರೂ. 2,85,000. ಅಭಿವೃದ್ಧಿ ಹೊಂದುತ್ತಿರುವ ಸಂಪೂರ್ಣ ಸ್ವದೇಶಿ ಕಂಪೆನಿ.

1. ಪಾಲಿಸಿಯು ತಾನಾಗಿಯೇ ಜಾರಿಯಲ್ಲಿರುವ ಕ್ರಮ.
2. ರದ್ದಾದ ಪಾಲಿಸಿಗಳನ್ನು ಪುನಃ ಜಾರಿಗೆ ತರುವ್ದು.
3. ಸ್ಥಿರವಾದ ಅಶಕ್ತತೆಗೆ ರಿಯಾಯತಿ.
4. ಭರವಸೆಯಾದ ಸರೆಂಡರ್ ವ್ಯಾಲ್ಯು. ಮತ್ತು ಪೈಡಪ್ ಪಾಲಿಸಿಗಳನ್ನು ಪಡೆಯುವಿಕೆ.
5. ಇಮ್ಮಡಿ ಹಣ ಪಡೆಯುವಿಕೆ.
6. ಸರೆಂಡರ್ ವ್ಯಾಲ್ಯುವಿನ ಸೇಕಡ 90ರಷ್ಟು ಸಾಲಗಳನ್ನು ಪಡೆಯುವಿಕೆ.

ಇವು ರಿಲೈಯನ್ಸ್ ಕಂಪೆನಿಯ ವಿಶೇಷತೆಗಳು.

ಸಮರ್ಥರಾದ ಚೀಫ್ ಏಜಂಟರುಗಳೂ ಮತ್ತು ಅಗರ್ನೈಸರುಗಳೂ, ಧಾರವಾಡ, ಬಳ್ಳಾರಿ, ಬೆಳಗಾಂ, ಬಿಜಾಪುರ ಜಿಲ್ಲೆಗಳಿಗೂ ಮತ್ತು ಮುಂಗಳೂರು ಪ್ರಾಂತ್ಯಕ್ಕೂ ಬೇಕಾಗಿದ್ದಾರೆ.

ತಿರುಪತಿ ಬಲಿಜಾ ಅಂಡ್ ಕಂಪೆನಿ,
ಮ್ಯಾನೇಜಿಂಗ್ ಏಜಂಟರುಗಳು.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಟ್ರೇಡ್‌ಮಾರ್ಕ್.

# ಡಾ. ವಾಮನ್ ಗೋಪಾಲರ

ನ ರ್ಸ ಪ ರಿ ಲ್ಲಾ

೬ ವರ್ಷಗಳ ಅನುಭವದಿಂದ ತಿಳಿಯಲಾಗಿದೆ ಜನರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ! ಗೌತಮರಾವ್ ಕೇಶವರಾವ್‌ರವರ ಟೊನಿಕ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ! ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

# PAINTERS

Do you require the service of a painter? Please call or write to:

THE MANGALORE ART WORKS,
Hampankatta, Mangalore.

# K. NAGAPPA RAO,

MANGALORE JEWELLER,
*Dadoba Jagannath Trust Building, Gamdevi,*
BOMBAY.

High class Jewellery of the latest designs manufactured.

DEALERS IN

All sorts of precious stones, Diamonds, Pearls. Moderate Rate. Ready made ornaments of up-to-date style are always in stock.

Orders—accepted, for all kinds of ornaments, which will be manufactured on short notice—prompt delivery. Reasonable charges.

A trial will ensure satisfaction.

ರುಚಿಯಾದ ತೀನಿ

ನಿಮ್ಮ ನಿತ್ಯದ ತಿಂಡಿ ಪಲ್ಯಗಳಲ್ಲಿ ಎ. ಕೆ. ಮಾರ್ಕಿನ ಹಿಂಗನ್ನು ಉಪಯೋಗಿಸಿರಿ. ದಬ್ಬಾ 1ಕ್ಕೆ 0-2-6, 0-3-0, 0—4—0, 0—12—0, 1—2—0, 2—0—0.

ವಿಳಾಸ:— ಷಾ ಕಂಪೆನಿ, ಮುಂಗಳೂರು.

ಬೆಲೆ ಬಹು ಸುಲಭ! | ಒಂದೇ ದರ!! | ಹೊಸ ಜವ್ವಳಿಗಳು!!!

ಮ್ಹಾಲುಗಳ ಬಣ್ಣ, ಮೊಳ ಮುಂತಾದ ನಿಜಸ್ಥಿತಿಗಳನ್ನು ಹೇಳಿಯೇ ಮಾರಲ್ಪಡುತ್ತದೆ.

ಒಮ್ಮೆ ದಯಮಾಡಿ ಬಂದು ನಮ್ಮ ಮಳಿಗೆಯನ್ನು ಸಂದರ್ಶಿಸಿದ್ದಲ್ಲಿ ಮನಸ್ಸಿಗೆ ಸಮಾಧಾನ ಕಂಡೀತು.

ಈಗಿನ ಹೊಸ ಹೊಸ ಫೇಶನುಗಳಿಗೂ, ಮದುವೆ ಮೊದಲಾದ ಶುಭಕಾರ್ಯಗಳಿಗೂ ಬೇಕಾದ ನಮೂನೆವಾರು ರೇಶ್ಮೆ ಜರಿ ಶೀರೆಗಳೂ, ಬೇರೆ ಬೇರೆ ಪ್ರಾಂತದ ಕೈಮಗ್ಗಗಳಲ್ಲಿ ತಯಾರಾದ ಅನೇಕ ವಿಧದ ಸ್ವದೇಶಿ ಶೀರೆಗಳೂ, ಮುಂಗಳೂರು ಉದ್ಯಿಯಲ್ಲಿ ತಯಾರಾದ ಮಿಶನ್ ಮಗ್ಗದ ಶೀರೆಗಳೂ ರಖಂ ಮತ್ತು ಚಿಲ್ಲರೆಯಾಗಿ ದೊರೆಯುತ್ತವೆ.

**ಸಿಲ್ಕು, ಜರಿ ಮತ್ತು ನೂಲಿನ ನಾಜೂಕಾದ ಧೋತಿಗಳು, ಶಾಲು, ರುಮಾಲುಗಳು, ಮುಡಿಗಳು, ಕೋಟಿಂಗ್ ಮತ್ತು ಶರ್ಟಿಂಗ್ ಬಟ್ಟೆಗಳೂ, ಇನ್ನೂ ಅನೇಕಾನೇಕ ನಮೂನೆವಾರು ಜವ್ವಳಿಗಳೂ ಕೂಡಾ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕಿವೆ.**

ವಿ. ಸೂ:— ನಮ್ಮಲ್ಲಿ ಕೊಡೆದ ಮ್ಹಾಲು ಬೇರೆ ಕಡೆಗಳಿಗಿಂತ ಬೆಲೆ ಸುಲಭವಲ್ಲವೆಂತ ಕಂಡುಬಂದಲ್ಲಿ ಯಾ ಇತರ ಕಾರಣಗಳಿಂದಾಗಲಿ ಬೇಡವೆಂತ ಕೋರಿದ್ದಲ್ಲಿ ಹಾಳು ಮಾಡದೆ 8 ದಿವಸದೊಳಗೆ ವಾಪಾಸು ಮಾಡಬಹುದು.

ಸೇಲಂಕಾರ್ ಎ. ಪರದರಾಜು ಚೆಟ್ಟಿಯಾರ್, ಜವ್ವಳಿ ಅಂಗಡಿ, ಮಾರ್ಕೆಟು ರಸ್ತೆ, ಮುಂಗಳೂರು.

# ಕಸಬರಿಗೆಯ ಸಂಸಾರ.

ಕಳೆದ ಜನವರಿ ತಾ. ೨೦ರಲ್ಲಿ "ನವಯುಗ"ವು 'ಕಂಠೀರವ'ದ ಕುರಿತು, ತನ್ನ ಅಗ್ರಲೇಖದಲ್ಲಿ ಟೀಕಿಸಿದೆ. ಅದರಲ್ಲಿ ರಸ ಕ್ಕಿಂತಲೂ ಕಸ ಹೆಚ್ಚು. ಆ ಕಸಕ್ಕೆ ಬೇಕು,—ಕಸಬರಿಗೆಯ ಸಂಸಾರವೇ. ಆ ಸಂಸಾರಕ್ಕೆ ನಮ್ಮ ಅಗ್ರಲೇಖದಲ್ಲಿ ಸ್ಥಳವೂ ಸ್ಥಾನವೂ ಸಲ್ಲದು. ಅದಿಲ್ಲಿ ಬಿದ್ದುಕೊಳ್ಳಲಿ!

ವಕೀಲನ ಪ್ರಶ್ನೆಗಳಿಂದ ಕ್ರೋಧಗೊಂಡು ಸಾಕ್ಷಿಗಾರನು ದುಡುಕಿ ನುಡಿಯುವಂತೆ, "ನವಯುಗ"ವೂ ಒಂದೆರಡು ಪ್ರಾಮುಖ್ಯ ವಿಷಯಗಳಲ್ಲಿ ತಾನಾಗಿ ಒಪ್ಪಿಗೆ ಕೊಟ್ಟಿದೆ. ಇದರಲ್ಲಿ ಒಂದಿದು; **ಶ್ರೀ। ವಿ. ಬಿ. ಸೆಟ್ಟರು "ನವಯುಗ"ದ ಈಗಿನ ಸಂಚಾಲಕರು.**

ಈ ಹೇಳಿಕೆ 'ಕಂಠೀರವ'ನ ಕಸಬರಿಗೆಯ ಕೆಲಸವನ್ನು ಬಹಳ ಹಗುರ ಮಾಡಿದೆ. ಸೆಟ್ಟರ ಪತ್ರಿಕೆ ಸೆಟ್ಟರನ್ನು ಹೊಗಳುತ್ತಿದೆ. ಅಥವಾ ಸೆಟ್ಟರೇ ತಮ್ಮನ್ನು ತಾವು ಕೊಂಡಾಡಿಕೊಳ್ಳುತ್ತಾರೆ;—ಎನ್ನುವಾಗ ಆ ಹೊಗಳಿಕೆಯ ಬೆಲೆ?

"ಸಿಟ್ಟಿನ ಭರ" "ತೀವ್ರ ಮತ್ಸರದ ಕಿಚ್ಚು" "ಶಕುನಿ ತಂತ್ರ ಹೂಡುವವರ ಸೂತ್ರಚಾಲನೆಗಳಿಗೆ ಒಳಗಾಗಿ" "ವಿಚಾರ ವಿವೇಕ ವಿಲ್ಲದೆ" "ವಿಕಟೋಲ್ಲಾಸ" "ವಿಲಕ್ಷಣ ರೀತಿ" "ಮೂರ್ಖತನ" "ತಲೆಗೆಟ್ಟು" "ಕ್ಷುದ್ರ ಬುದ್ಧಿ"—ಇವು ಡಿ॥ ಬೋರ್ಡಿನ ಪ್ರೆಸಿಡೆಂಟರಾಗಿದ್ದ, ಇನ್ನು ಮುಂದೆಯೂ ಆಗಲಿರುವ ಶ್ರೀ। ಸೆಟ್ಟರ ಸಂಚಾಲಕತೆಯ ಅಥವಾ ಅವರ ಕಡೆಯ ಯೋಗ್ಯ ವಾಕ್ಯುಗಳಲ್ಲಿ ಕೆಲವು "ಸ್ಯಾಂಪಲ್"! ಆದರೆ ಈ ಮಾತುಗಳೊಂದೂ ಪೋಲೀ ಪಂಗಡಕ್ಕೆ ಸೇರಿದುವಲ್ಲ! ಇವು ಇಲ್ಲಿಯ ಕಾಂಗ್ರೆಸಿನ ಶಾಂತಿ ಚಳುವಳಿಗೆ ಉಜ್ವಲ ದೃಷ್ಟಾಂತಗಳೇ.

"ನವಯುಗ"ದ ೨೬ನೇ ತಾರೀಖಿನ ಅಗ್ರಲೇಖದ ೩ ಪ್ಯಾರಾಗಳಿಗೆ ೩ ಅಗ್ರಲೇಖಗಳನ್ನು, ೩ ಬಾರಿಯಾಗಿ ದಶಂಬರ ತಾ. ೩೧, ಜನವರಿ ೭ ಮತ್ತೂ ಜನವರಿ ೧೪ರಲ್ಲಿ ಕ್ರಮವಾಗಿ "ಕಂಠೀರವ"ದಲ್ಲಿ ಪ್ರಕಟಿಸಲ್ಪಟ್ಟಿದೆ. "ನವಯುಗ"ವು ಕೇಳಿದ ಪ್ರಶ್ನೆಗಳಿಗೆ ಉತ್ತರ ಅಲ್ಲಲ್ಲಿಯೇ ಇದೆ. ಆದರೆ ನಮ್ಮ ಉತ್ತರವು ಮುಗಿವ ಮೊದಲು, ಆರು ತಿಂಗಳಿಗೆ ಹುಟ್ಟಿದವರಂತೆ, ಆತುರ ಗೊಂಡು "ನವಯುಗ" "ನಾವು ಎತ್ತಿದ ಪ್ರಶ್ನೆಗಳಿಗೆ ಉತ್ತರ ವೀಯದೆ" ಎಂದು ವಿಜೃಂಭಿಸಿದೆ! ಇದು "ತರ್ಕ"ಪಾಂಡಿತ್ಯದ ಹೆಡಿಗೆಯನ್ನೇ ಕಂಕುಳಿಡೆಯಲ್ಲಿ ಹೊತ್ತಿರುವ "ನವಯುಗ"ದ ಮೇಲ್ಪಂಕ್ತಿ.

"ನವಯುಗ ಎತ್ತಿದವರ ಕೈಗೂಸಲ್ಲ; ಕೈಗೊಂಬೆಯಲ್ಲ; ಅರೆಮೊಳ ನಾಲಿಗೆಯನ್ನು ವಿಕಟವಾಗಿ ಹೊರಚಾಚಿಲ್ಲ; ಭೈರವ ನೃತ್ಯ ಮಾಡಿಲ್ಲ; ವೇಷ ಕಟ್ಟಿಲ್ಲ; ಕೊಳಕು ಬುದ್ಧಿಯಿಲ್ಲ; ಕುಟಿಲ ನೀತಿ ಇಲ್ಲ!" ಒಂದೂ ಇಲ್ಲ; ಯಾವುದೂ ಇಲ್ಲ. ಹಾಗಾದರೆ ಡಿಕ್ಷನೆರಿಯ ಈ ಶಬ್ದಗಳ ಇಷ್ಟೊಂದು ಪ್ರಚಂಡ ಘೋಷ ಯಾವುದಕ್ಕಾಗಿ? "ನವಯುಗ"ದ ಮೊದಲಿನ ಸಂಪಾದಕರೂ, ಈಗಿನ ಸಂಚಾಲಕರೂ ಶ್ರೀ। ಸೆಟ್ಟರೇ ಎಂದು ಅವರ ಕಸ ಬಳಿಯಲಿಕ್ಕಾಗಿಯೇ? ಅವರ ಪ್ರತ್ಯಕ್ಷ ಕೈಕೂಸೂ, ಅವರ ಕೈಗೊಂಬೆಯೂ ಆಗಿರುವ "ನವಯುಗ" ಆ ಕಸ ಅದೇ ಬಳಿಯದೆ ಇನ್ಯಾವ ಬಲಗೈ ಬಂಟ ಅವರಿಗೆ ಒದಗಬೇಕು?

ಶ್ರೀಮಾನ್ ಏ. ಬಿ. ಸೆಟ್ಟಿ, ಎಂ. ಎಲ್. ಸೀ. ಯಂಥ ಅತಿರಥ ಮಹಾರಥರೇ ಕೂತ ಜಿಲ್ಲಾ ಬೋರ್ಡಿನ ರಥ ಈಗ ಸದ್ಯ ಕೊಳಕು ಕೆಸರಲ್ಲಿ "ಮುಗ್ಗರಿಸಿ; ಕಳವಳಿಸಿ, ತಳಮಳಗೊಂಡು," ಕೈಯಲ್ಲೇನೂ ಸಾಗದೆ, ಕೊನೆಗೆ ಸರಕಾರದ ಕಡೆಯ ಗವರ್ನರರ ಕಾಲ ಬುಡಕ್ಕೆ "ಮೆಮೋರಿಯಲ್"ನ್ನು ಸಮರ್ಪಿಸುವ ಕಾಲಗತಿಯೊದಗಿರುವಾಗ, ಇಂತಹ ಸತ್ಕೀರ್ತಿ ಹಿಂದಿನ ಯಾವ ಪ್ರೆಸಿಡೆಂಟರಿಗೂ ಸೇರಿದುದಲ್ಲವೆನ್ನುವಾಗ, ಇದರ ಮುಂದೆ ಬಡ ವೋಟರ್ ಕಂಪೆನಿಯ ಮಾತೇ? ಇದು "ಶ್ರೀಮತಿ ಪರಿಣಯ"ದಲ್ಲಿ, ನಾರದ ತನ್ನ ಮುಖದ ಸ್ವರೂಪವೇನಾಗಿದೆ ಎಂದು ತಿಳಿಯದೆ ತನ್ನ ಪ್ರತಿಸ್ಪರ್ಧಿಯ ಮುಖ ನೋಡಿ ನಕ್ಕಂತೆಯೇ ಆಾನೇ?

'ಮುಗ್ಗುರಿಸುತ್ತಿರುವ ಅದೊಂದು ವೋಟರ್ ಕಂಪೆನಿ' ಯಿಂದಲೇ ಆಗ ಬೋರ್ಡಿಗೆ ಸುಮಾರು ೭-೮ ಸಾವಿರ ರುಪಾಯಿಗಳ ವಾರ್ಷಿಕ ಉತ್ಪನ್ನವಿದ್ದಿತು. ಈಗ "ಅದು ಎದ್ದು ನಿಂತ" ಮೇಲೆ ಬೋರ್ಡಿಗೆ ಸುಮಾರು ೨॥-೩ ಸಾವಿರ ರುಪಾಯಿಗಳ ವಾರ್ಷಿಕ ಉತ್ಪನ್ನವಿದೆ. ಹೀಗೆ ಬೋರ್ಡಿಗೆ ವರ್ಷಕ್ಕೆ ಸುಮಾರು ೪-೫ ಸಾವಿರದ ಉತ್ಪತ್ತಿ ಹೆಚ್ಚಿದ ಸಂಬಂಧ 'ನವಯುಗ'ವು ಬೋರ್ಡನ್ನು ಅಗತ್ಯವಾಗಿಯೂ ಅಭಿನಂದಿಸಬೇಡವೇ?

ದಿ. ಬ. ಹೆಗ್ಗಡೆಯವರ ಕಾಲದ ವೋಟರ್ ನೀತಿಯ ಕುರಿತು ಇಂದೂ ನಮ್ಮ ಅಭಿಪ್ರಾಯ ಬದಲಾಗಿಲ್ಲ!

ಶ್ರೀ। ಹೆಗ್ಗಡೆಯವರನ್ನು ಪಾತಾಳಕ್ಕೊತ್ತಿ, ಇದೇ ಸೆಟ್ಟರನ್ನು ಆಕಾಶಕ್ಕೇರಿಸಿ ಬರೆಯಲಾದ "ಕಂಠೀರವ"ನ ಸಂಪಾದಕೀಯ ಟಿಪ್ಪಣಿಗಳನ್ನು ಅಗತ್ಯವಾಗಿ "ಕಂಠೀರವ"ನ ಸಂಚಿಕೆಗಳಿಂದ ಎತ್ತಿ ಉದ್ಧರಿಸಿ ಹಾಗೇ ಪ್ರಕಟಿಸಬೇಕು. "ನವಯುಗ"ದ್ದು ಬಾಯಿ ಬುರುಡೆಯೆ, ಯಥಾರ್ಥವೇ ಆಗ ನೋಡೋಣ. "ನವಯುಗ" ಕೇಳಿದುದಕ್ಕೆಲ್ಲ ಸಮರ್ಪಕವಾದ ಉತ್ತರ ಹೇಳುವ ಧೀರ ಪತ್ರಿಕೆಯಷ್ಟೆ! "ಕಂಠೀರವ"ದ "ಇಂತಹ ಸಂಚಿಕೆ ನೋಡಿ" ಎಂದರೆ 'ನವಯುಗ'ದ ನವುಕರರು ಯಾರು? "ನವಯುಗ"ವೇ! ನಿನ್ನ ಪಟಾಕಿಯೇ!

ಡಿ॥ ಬೋರ್ಡಿನ ಪ್ರಿಂಟಿಂಗ್ ಕೆಲಸಕ್ಕಾಗಿ "ಕಂಠೀರವ"ದ ಸರಸ್ವತೀ ಪ್ರೆಸ್ "ಮಂತ್ರ ತಂತ್ರ ಹೂಡಿತು". (ಯಂತ್ರ ಮಾತ್ರ ಕಟ್ಟಲಿಲ್ಲ.) ಹೀಗೆಂದು ನವಯುಗದ ಡಂಗುರ.

"ಕಂಠೀರವ" ಆ ಪ್ರೆಸ್ಸಿನವರದಲ್ಲ; ಮಾಲಕರು ದುಡ್ಡು ತೆತ್ತು ಪ್ರಿಂಟ್ ಮಾಡಿಸುತ್ತಾ ಇದ್ದಾರೆ. ಪ್ರೆಸ್ಸಿಗೆ ಕೆಲಸ ಬರಲಿ; ಬಾರದಿರಲಿ; "ಕಂಠೀರವ"ನಿಗೆ ಸಂಬಂಧವಿಲ್ಲ. "ಕಂಠೀರವ"ವು ಅದೊಂದು ಸ್ವತಂತ್ರ ಸಂಸ್ಥೆ. ಇತರ ಯಾವ ಸಂಸ್ಥೆಗಳ ಸಂಬಂಧವೂ ಅದಕ್ಕಿಲ್ಲ. ಇದು ನಮ್ಮ ಹೇಳಿಕೆ."

ಹೀಗಿರುವಲ್ಲಿ ಈ "ಮಂತ್ರ ತಂತ್ರ", "ಕೈಗೆ ಬಂದ ತುತ್ತು ಬಾಯಿಗೆ ಬಾರದಾಯಿತು" "ಅತಿ ಆಶೆ ಗತಿಗೆಡಿಸಿತು" ಎಂದು ಹಾರಾಡುತ್ತಿರುವ "ನವಯುಗ"ದ ಗಾದೆಗಳ ಗುಟ್ಟೇನು? ನೋಡುವ!

**ಹೊಸ ಅಡ್ವೊಕೇಟ್**:—(ಟೋಪಿಯ ಡಿ. ಬೋರ್ಡಿನ ಮೆಂಬರರನ್ನು ದಾರಿಯಲ್ಲಿ ಸಂಧಿಸಿ) "ಮಿಸ್ಟರ್! ನಮ್ಮುಂ ಐತಲ್ಲಾ, ವಕಾಲತ್‌ನಾಮೆಗೆ ಒಂದು ದಸ್ಕತು ಹೆಟ್ಟಿಬಿಡಿ."

**ಮೆಂಬರು**:—"ಸಾರ್! ಇನ್ನು ಕೆಲವು ದಿನ ಬಿಟ್ಟು ನಮ್ಮ ಮನೆಗೆ ಬನ್ನಿ. ಈವಾಗ ವೆಕೇಶನ್ ಮೇಲಿದ್ದೇನೆ, ಥೇಂಕ್ಸ್."

೧೯೩೫-'೩೬ನೆಕ್ಕೆ ೫-೫-'೩೫ರಲ್ಲಿ ಬೋರ್ಡಿನ ಪ್ರಿಂಟಿಂಗ್ ಕೆಲಸಕ್ಕೆ ಟೆಂಡರ್ ಕರೆದದ್ದು ಯಾರು?—ಶ್ರೀಮಾನ್ ಸೆಟ್ಟರು. ಅದನ್ನು 'ಮದ್ರಾಸಿನ ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್' ಇವರಿಗೆ ಕಳುಹಿಸಿ ಕೊಟ್ಟುದು ಯಾರು? — ಶ್ರೀಮಾನ್ ಸೆಟ್ಟರು. "ಕೆಲವು ದರಗಳಲ್ಲಿ ನೀವು ಹೆಚ್ಚುಕಡಿಮೆ ಮಾಡಿದರೆ, ನಿಮ್ಮ ಟೆಂಡರನ್ನೇ ಸ್ವೀಕರಿಸುವಂತೆ ಮದ್ರಾಸಿನವರ ಶಿಫಾರಸ್ ಆಗಿದೆ" ಎಂದು ಸರಸ್ವತೀ ಪ್ರೆಸ್ಸಿನವರಿಗೆ ದಯವಿಟ್ಟು ತಿಳಿಸಿದವರು ಯಾರು?—ಶ್ರೀಮಾನ್ ಸೆಟ್ಟರು. ದರಗಳನ್ನು ಬೇಕಾದಂತೆ ಮಾರ್ಪಡಿಸಿ ಬೋರ್ಡಿಗೆ ಕಳುಹಿಸಿದ ಮೇಲೆ, "ನಿಮಗಿಲ್ಲಾ, ನಮಗುಂಟು" ಎಂದೂ, "ಬೋರ್ಡಿನವರು ಕೆನರಾ ಪ್ರೆಸ್ಸಿಗೇ ಕೊಟ್ಟಿದ್ದಾರಯ್ಯಾ!" ಎಂದೂ ದಯವಿಟ್ಟು ತಿಳಿಸಿದವರು ಯಾರು?—ಶ್ರೀಮಾನ್ ಏ. ಬಿ. ಸೆಟ್ಟರು. ಎಲ್ಲಾ ಅವರೇ. ಎಲ್ಲಾ ಅವರದೇ—ಈ ಪ್ರಹಸನ.

ಇದರಲ್ಲಿ ಯಂತ್ರ, ತಂತ್ರ, ಮಂತ್ರ ಯಾರದು? ಸೆಟ್ಟರು ಯಾರು? ಬೋರ್ಡ್ ಯಾರದು? ಕೆನರಾ ಪ್ರೆಸ್ ಯಾವುದು? "ಕಂಠೀರವ"ನ ಕಡೆ ಬೋರ್ಡ್ ಮೆಂಬರರು ಯಾರು? ಇಂತಹ ಸೆಟ್ಟರನ್ನೂ, ಅವರೇ ಅಧ್ಯಕ್ಷರಾಗಿರುವ ಅವರ ಬೋರ್ಡನ್ನೂ, ಅವರದೂ, ಆದ್ದರಿಂದ ಇವರದೂ ಆದ ಕೆನರಾ ಪ್ರೆಸ್ಸನ್ನೂ ನಂಬಿ ಕೊಂಡು ಟ್ಯಾಪ್ ಹೊಸದಾಗಿ ತಯಾರು ಮಾಡಿಸಿದವರು ಯಾರು? ಕೆನರಾ ಪ್ರೆಸ್ಸಿನವರೇ?

ಇನ್ನೊಂದು ಮಾತು;—ಡಿ॥ ಬೋರ್ಡಿನ ಕೆಲಸವಿಲ್ಲದೆ ಸರಸ್ವತೀ ಪ್ರೆಸ್ ಇದುವರೆಗೆ ನಡೆದಿದೆ. ಕೆನರಾ ಪ್ರೆಸ್ ಅದಿದ್ದೇ ನಡೆಯುತ್ತಿದೆ ಏನು?

ಮತ್ತೊಂದು ಮಾತು;—ಕೆನರಾ ಪ್ರೆಸ್ ಬೋರ್ಡಿನದು; ಬೋರ್ಡ್ ಕೆನರಾ ಪ್ರೆಸ್ಸಿನದು. ಸೆಟ್ಟರು ಪ್ರೆಸಿಡೆಂಟರು. ಹೀಗಿರುವಾಗ, ಇತರ ಪ್ರೆಸ್ಸುಗಳ ಟೆಂಡರುಗಳು ಸುರಕ್ಷಿತವೇ? ಯಾವ ಪ್ರೆಸ್ಸುಗಳ ಟೆಂಡರುಗಳ ಗುಟ್ಟೂ ಹೊರಗೆ ಹೋಗ ಬಾರದು; ನಿಜ. ಹೋಗಿಲ್ಲವೆಂದು ಏನು ಗೊತ್ತು?

"ವಿಕಟ ನೃತ್ಯದ ರಂಗಸ್ಥಳ ಕಾಂಗ್ರೆಸಿನವರೆಂಬವರು ಹಾಕಿಸಿದುದು"—ಸುರತ್ಕಲ್ಲಿನಲ್ಲಿ! ಈಗ ಕುಣಿಯುವವರೂ ಅವರೇ. ಅಬ್ಬರ ತಾಳವೂ ಅವರದೇ—ಅಯ್ಯ!

ಸೆಟ್ಟರುಗಳ ಬಹುಮತದ ಪ್ರಾತಿನಿಧ್ಯದ "ಹಕ್ಕು" ಸೆಟ್ಟರ ದರ್ಬಾರಿನಲ್ಲಿರಲಿ; ಅವರ ಅಧಿಕಾರ ಅವರು ಚಲಾಯಿಸಲಿ! ಆದರೆ ಬೋರ್ಡಿಗೆ ಗ್ರಾಂಟು ಸರಕಾರದ್ದು! ಸರಕಾರಕ್ಕೆ ಉತ್ಪತ್ತಿ ಪ್ರಜೆಗಳಿಂದ. ಪ್ರಜೆಗಳೆಂದರೆ, ತೆರಿಗೆ ತೆರುವವರೆಂದರೆ ಒಂದು ಸಮಾಜ ಮಾತ್ರವಲ್ಲ. ಬೇರೆ ಸಮಾಜದವರೂ ತೆರುತ್ತಾರೆ. ಹೀಗೆ ತೆತ್ತು ಬಂದ ಹಲವು ಸಮಾಜದ ಹಣ, ಒಂದು ಸಮಾಜವೇ ನುಂಗುವ "ಮೊನಾಪೊಲಿ" ಅಲ್ಲ; ಆದುದರಿಂದ ಒಂದು ಸಮಾಜದ ಪ್ರತಿನಿಧಿಗಳು ಹೆಚ್ಚಿದ್ದಾರೆ; ಕೆನರಾ ಪ್ರೆಸ್ಸಿಗೇ ಬೋರ್ಡಿನ ಕೆಲಸ ಕೊಡಬೇಕೆಂಬ ಈ "ಸ್ವರಾಜ್ಯ"ದ ಕಾನೂನು, ಭದ್ರವಾಗಿ ಗಂಟು ಕಟ್ಟಿ ಒಳಗೆ ಇಡಬೇಕು.

ಕೆನರಾ ಪ್ರೆಸ್ಸಿಗೇ ಬೋರ್ಡಿನ ಕೆಲಸ ದೊರೆಯುವಂತೆ, ಸೆಟ್ಟರು ಅನುಕೂಲ ಅಧ್ಯಕ್ಷರಾಗಬೇಕೆಂದು, ಕಾಂಗ್ರೆಸಿನ ಹೆಸರಲ್ಲಿ ನಡೆದ ಹಂಚಿಕೆ, ಆಗಲೇ 'ಕಂಠೀರವ'ದಲ್ಲಿ ಪ್ರಕಟವಾಗಿದೆ. 'ಸುಣ್ಣ ಬೆಣ್ಣೆಗಳ' ವ್ಯಾಪಾರ ಹಿಂದೆಯೂ ಸೆಟ್ಟರ ದರ್ಬಾರಿನಲ್ಲಿ ಕಡಿಮೆಯಾಗಿಲ್ಲ. ಮುಂದೆಯೂ ಕಡಿಮೆಯಾಗಲಾರದೆನ್ನಿ. "ನವಯುಗ"ದ ನಿಃಸ್ವಾರ್ಥ ದೃಷ್ಟಿ ಏನಿದ್ದರೂ ಅದು 'ಕೆನರಾ ಪ್ರೆಸ್ಸೂ, ಡಿ॥ ಬೋರ್ಡಿನ ಮುದ್ರಣ ಕೆಲಸವೂ' ಎಂಬೀ ಚತುರ್ಗಡಿಗಳೊಳಗೇ ಅಡಕವಾಗಿದೆ. ಇಲ್ಲಿ "ಕಸಬರಿಗೆ" ಬರಬಾರದೆಂದು, ಬಂತೆಂದು 'ನವಯುಗ'ದ ರೋಷ! ಕಾಲ ರುದ್ರನ ಅಪರಾವತಾರ ತಾನೇ?

ಬಂಟರ ಯಾನೆ ನಾಡವ ಸಮಾಜದವರಲ್ಲಿ ಕೆಲವರಿಂದ ಸ್ಥಾಪಿತನಾದ "ಕೆನರಾ ಪ್ರೆಸ್ಸಿ"ಗೇ ಬೋರ್ಡ್ ಕೆಲಸ ಸಿಕ್ಕಿದರೆ ಮಾತ್ರ—ಊರಿಗೇ "ಸಂಭ್ರಮ; ಸುಖ."

"ಮುನಿಸಿಪಾಲಿಟಿ"ಯ ನೂರಾರು ರುಪಾಯಿಗಳ ಕೆಲಸವನ್ನು ಸರಸ್ವತೀ ಪ್ರೆಸ್ಸಿನವರು ಕೆನರಾ ಪ್ರೆಸ್ಸಿನವರಿಗೆ ಬಿಟ್ಟು ಕೊಟ್ಟು, ಕೆನರಾ ಪ್ರೆಸ್ಸಿನವರ ಸಾವಿರಾರು ರುಪಾಯಿಗಳ ಬೋರ್ಡ್ ಕೆಲಸವನ್ನು ಸರಸ್ವತಿ ಪ್ರೆಸ್ ತೆಗೆದುಕೊಳ್ಳುವ "ಎಕ್ಸ್‌ಚೇಂಜ್" ವ್ಯಾಪಾರ ನಡೆಸಿದರಾದೀತೇ?

(೩೬ನೇ ಪುಟಕ್ಕೆ ಮುಂದರಿಸಿಯದೆ.)


ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ, ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ, ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

# ಕಂಠೀರವ

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಠವರ್ಗದ

**ಕನ್ನಡ ವಾರ ಪತ್ರಿಕೆ.**

ಚೆಂದಾ ವಿವರ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ೧ ವರ್ಷಕ್ಕೆ | ರೂ. ೨—೮—೦ | ರೂ. ೩— ೫—೦ |
| ೬ ತಿಂಗಳುಗಳಿಗೆ | ರೂ. ೧—೪—೦ | ರೂ. ೧—೧೧—೦ |

**ಬಿಡಿ ಸಂಚಿಕೆ ಬೆಲೆ ೦—೧—೦.**

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಿಸಲ್ಪಡುವವು.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

**Circulation Manager,**
THE KANTEERAVA,
MANGALORE.



## ಶ್ರೀ ದತ್ತಾತ್ರೇಯ ಕಾಫಿ ಪುಡಿ

**ಶ್ರೇಷ್ಠತೆಗೂ, ಪರಿಶುದ್ಧತೆಗೂ ಮೈಸೂರು ಗೌರ್ಮೆಂಟು ಕೆಮಿಕಲ್ ಎಕ್ಸಾಮಿನರಿಂದ ಪರೀಕ್ಷಿಸಲ್ಪಟ್ಟಿದೆ.**

ಇದನ್ನು ಉತ್ತಮವಾದ ಗಿರಿ ಕಾಫಿಯಿಂದ ತಾಕದೆ ಎಲೆಕ್ಟ್ರಿಕ್ ಮಿಷನ್ನುಗಳಿಂದ ತಯಾರಿಸಲ್ಪಟ್ಟಿದೆ. ಬಳ್ಳಾರಿ, ಧಾರವಾಡದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿಯೂ, ಬೆಂಗಳೂರು ಪಾರ್ಕು ಫೇರಿನಲ್ಲಿಯೂ ಬಂಗಾರದ ಪದಕಗಳು ಬಹುಮಾನವಾಗಿ ಬಂದಿವೆ.

**ಒಂದು ದಫ ತರಿಸಿನೋಡಿ.**

ಶ್ರೀ ದತ್ತಾತ್ರೇಯ ಕಾಫಿ ವರ್ಕ್ಸ್,
ಮೈಸೂರು ರೋಡು, ಬೆಂಗಳೂರು ಸಿಟಿ.

## BLOCKS

Used in this weekly are available at very reasonable rates. For further particular write to:—

**The Kanteerava Office,**
(Publication Dept.),
MANGALORE.

ಈ ಪತ್ರಿಕೆಯಲ್ಲಿ ಮುದ್ರಿಸಲ್ಪಡುವ ಪಡಿಯಚ್ಚುಗಳು ಯೋಗ್ಯ ಬೆಲೆಗೆ ಕೊಡಲ್ಪಡುವವು. ಬೇಕಾದವರು ಮಂಗಳೂರು, ಕಂಠೀರವ ಕಾರ್ಯಾಲಯದೊಡನೆ ಪತ್ರವ್ಯವಹಾರ ನಡೆಸಬಹುದು.

## ಪದವಿಗಳು! ಔಷಧಗಳು! ಪುಸ್ತಕಗಳು!

ಎಚ್. ಎಲ್. ಎಂ. ಎಸ್. ಎಚ್. ಎಂ. ಬಿ., ಎಚ್. ಯಂ. ಡಿ., ವೈದ್ಯರಾಜ ಮೊದಲಾದ ಹೋಮಿಯೊ-ಆಯುರ್ವೇದ, ಯುನಾನಿಗಳಲ್ಲಿ ಟಪ್ಪಾಲಿನ ಮೂಲಕ ಬೋಧನೆ ಪಡೆಯಬಹುದು. ಡಿಗ್ರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಹೋಮಿಯೋ-ಮೆಟೀರಿಯ ಮೆಡಿಕ ಇದರ ಬೆಲೆ ರೂ. ೬. ಹೋಮಿಯೋ ಪ್ರಾಕ್ಟಿಸ್ ಓಫ್ ಮೆಡಿಸಿನ್ ಬೆಲೆ ರೂ. 4. ೨ ಆಣೆಯ ಸ್ಟಾಂಪುಗಳನ್ನಿಡಿರಿ.

**Homœopathic Institute,**
MAHUVA (Kathiawar Dt.)

ESTD. 1925.

# The Canara Industrial & Banking Syndicate, Ltd.

*(INCORPORATED IN BRITISH INDIA.)*

| | | | |
|---|---|---|---|
| Authorised Capital | Rs. 5,00,000. | Subscribed Capital | Rs. 2,84,000. |
| Paid-up Capital | Rs. 2,14,000. | Reserve Fund | Rs. 45,000. |

**FIRST & FOREMOST**

First & foremost among the ideals of the Syndicate are the ideals of SERVICE to Customers and the SECURITY OF DEPOSITORS' MONEY.

Our last five years' progress is a proof of our growing popularity.

**YEAR WORKING CAPITAL.**

| | |
|---|---|
| 1930 | 2,42,095/- |
| 1931 | 4,95,266/- |
| 1932 | 9,25,958/- |
| 1933 | 13,90,798/- |
| 1934 | 15,93,238/- |

It now exceeds **20** lakhs.

**FIXED DEPOSITS.**

| | |
|---|---|
| 3 to 5 months | 4% p. a. |
| 6 to 11 months | 4½% p. a. |
| 12 to 23 months | 5% p. a. |
| 24 months | 5½% p. a. |
| 60 months | 6% p. a. |

**CURRENT DEPOSITS.**
2% p. a. on daily balances.

**SAVINGS BANK DEPOSITS.**
3½% p. a. on the minimum balance standing between 5th and the last day of every month. Operation by Cheques.

**Our Laxmi Cash Certificates, yielding Rs. 6—10—8% p. a. a speciality.**

All kinds of Banking business transacted.

Further particulars can be had from the Branch Agent or Head Office, UDIPI.

**BRANCHES.**

| | | | |
|---|---|---|---|
| 1. Mangalore. | 5. Bangalore. | 9. Hubli. | 13. Belgaum. |
| 2. Ankola. | 6. Brahmavar. | 10. Payyanur. | 14. Kanhangad (Hosdurg.) |
| 3. Honavar. | 7. Coondapoor. | 11. Hungarcutta. | 15. Sirsi. |
| 4. Bellary. | 8. Karwar. | 12. Cannanore. | 16. Udipi. |

17. Kumta & 18. Adoni.

P. A. PAI BROS., *Managing Agents.*

ಬೆನ್ನು ನೋವು! **ಕ್ಷೀರಬಲಾ** KSHEERABALA ಸೊಂಟದಲ್ಲಿ ನೋವು!

ವಾತಜ ಪ್ರಥಮ ಲಕ್ಷಣಗಳಲ್ಲಿ ಇವೂ ಒಂದು. ಬೆನ್ನಿನಲ್ಲಿ, ಸೊಂಟದಲ್ಲಿ ಸೆಳೆಯುವ, ಕೊರೆಯುವ, ಚುಚ್ಚುವ ನೋವು ಎಷ್ಟೇ ಇದ್ದರೂ, ಪ್ರತಿನಿತ್ಯವೂ ಬೆಳಗ್ಗೆ, ಬರೇ ಹೊಟ್ಟೆಗೆ, ಋಷಿಗಳ 'ಕ್ಷೀರಬಲ'ದ ಕೆಲವು ಬಿಂದುಗಳನ್ನು ಸೇರಿಸಿದ ಒಂದು ಟಂಬ್ಲರು ಬಿಸಿ ನೀರು ಕುಡಿಯುವುದರಿಂದಲೇ ವಾಸಿಯಾಗುವುದು. ಈ ಪ್ರಕಾರ ಮಾಡುವುದರಿಂದ, ನರಗಳು ಸರಿಯಾದ ಸ್ಥಿತಿಯಲ್ಲಿರುವುವು; ಶರೀರಗತವಾದ ಅಶುದ್ಧತೆಯನ್ನು ಹೊರತಳ್ಳುವುದು; ನೋವಿರುವಲ್ಲಿ ರಕ್ತಸಂಚಾರವು ಕ್ರಮವಾಗಿ ಆಗುವಂತೆ ಮಾಡುವುದು; ಗೋಳಾಡಿಸುವ ಸ್ಥಿತಿಯನ್ನು ತಪ್ಪಿಸುವುದು.

ಸೊಂಟದಲ್ಲಿ, ಬೆನ್ನಿನಲ್ಲಿ, ಕೈಕಾಲುಗಳಲ್ಲಿ, ಅಥವಾ ಗಂಟುಗಳಲ್ಲಿ ವಿಪರೀತವಾದ ನೋವು ಇದ್ದು ನರಳುತ್ತಿರುವ ಸಂದರ್ಭದಲ್ಲಿ—ಬಿಸಿ ನೀರಿನ ಬದಲಿಗೆ—ಸಾಮಾನ್ಯ ಜೀರಿಗೆ ಕಷಾಯವನ್ನು ಉಪಯೋಗಿಸಿದರೆ, ನಮ್ಮ ಋಷಿಗಳ 'ಕ್ಷೀರಬಲ'ವು ಎಂತಹ ಆಶ್ಚರ್ಯಕರವಾದ ಪರಿಣಾಮವನ್ನು ಉಂಟುಮಾಡುವುದೆಂದು ನೀವೇ ನೋಡುವಿರಿ! ಈ ಋಷಿಗಳ 'ಕ್ಷೀರಬಲ'ಕ್ಕೆ ಅಪೂರ್ವವಾದ ಗಿಡಮೂಲಿಕೆಗಳೂ, ಜೀರು ನಾರುಗಳೂ, ಧಾರಾಳವಾದ ಅಕಳ ಹಾಲೂ ಬೇಕು; ಮಾತ್ರವಲ್ಲ; ಬಹಳ ತಾಳ್ಮೆಯಿಂದ, ಬಹಳ ಜಾಗರೂಕತೆಯಿಂದ ಅದನ್ನು ಸಿದ್ಧಮಾಡಬೇಕು. ಅದನ್ನು ಪೂರ್ಣವಾಗಿ ತಯಾರಿಸಲು ಸುಮಾರು ನೂರೊಂದು ದಿನಗಳು ಹಿಡಿಯುವುದಾದರೆ,—ಅದು ಉಪಯೋಗಕ್ಕೆ ಬರುವಂತೆ ಸರಿಯಾಗಿ ಪಾಕವಾಗಲು ಅದಕ್ಕಿಂತಲೂ ಎಷ್ಟೋ ಹೆಚ್ಚಿನ ಸಮಯವೇ ಬೇಕು. ಋಷಿಗಳ 'ಕ್ಷೀರಬಲ'ವು ದುರ್ಬಲವಾದ, ಹಡಗೆಟ್ಟ ನರಗಳ ಮೇಲೆ ಅತ್ಯಂತ ತೀವ್ರ ಪರಿಣಾಮಕಾರಿಯಾಗಿರುವುದಲ್ಲದೆ, ಅವುಗಳನ್ನು ಎಷ್ಟು ಚುರುಕಾಗಿಯೂ, ಆರೋಗ್ಯಕಾರಿಯಾಗಿಯೂ ಮಾಡುವುದೆಂದರೆ,—ಅದು ಗೋಳಾಡಿಸುವ ಎಲ್ಲ ಬಗೆಯ ನೋವುಗಳನ್ನೂ 'ಗಡಿಪಾರು' ಮಾಡಿಬಿಡುತ್ತದೆ. ಅದು ತುಪ್ಪದಷ್ಟೇ ದಪ್ಪ. ಒಂದು ಔನ್ಸಿನ ಬಾಟಲಿಯೊಂದರ ಬೆಲೆ ರೂ. 4—0—0. (ಪೋಸ್ಟೇಜ್ ಬೇರೆ.)

ನರಗಳು ಎಳೆಯುವುದು, ಬಿಗಿಹಿಡಿಯುವುದು, ಹೆಚ್ಚುಕಡಿಮೆಯಾಗಿರುವುದು ಇವಕ್ಕೂ,—ಗಂಟುಗಳು, ಮೊಣಕಾಲು ಗಂಟುಗಳು, ಕೈಗಳು ಬಾಯುವುದಕ್ಕೂ, ಕಪ್ಪಡಿಂದ ಉಸಿರಾಡುವುದಕ್ಕೂ, ಕೆಸಕ್ಕೂ, ಬರೆಯುವಾಗ ಕೈ ನಡುಗುವುದಕ್ಕೂ ದೇಹದ ಯಾವ ಭಾಗದಲ್ಲಿಯಾದರೂ ಸೂಜಿಯಿಂದ ಚುಚ್ಚುವಂತೆ ಅಥವಾ ಕಠಾರಿಯಿಂದ ಇರಿದಂತೆ ನೋವಾಗುವುದಕ್ಕೂ, ಪಾದಗಳು ಉರಿಯುವುದಕ್ಕೂ ಟೊಂಕದಿಂದ ತೊಡೆಯ ವರೆಗಿನ ನರಗಳಲ್ಲಿ ವೇದನೆಯಾಗುವುದಕ್ಕೂ, ಎಲ್ಲ ಬಗೆಯ ರಕ್ತವಾತ, ಪಕ್ಷವಾತಗಳಿಗೂ ಋಷಿಗಳ ಈ 'ಕ್ಷೀರಬಲ'ವು ಅತ್ಯುತ್ಕೃಷ್ಟವಾದ ರಾಮಬಾಣದಂತಹ ದಿವ್ಯೌಷಧವಾಗಿದೆ.

## ದಿ ಮಲೆಯಾಳ ಔಷಧ ಕಂಪೆನಿ,

ಚಾಲಪುರಂ ಪೋಸ್ಟ್, ಮಲಬಾರ್.

ನಮ್ಮಲ್ಲಿ ಗ್ಯಾರಂಟಿಯುಳ್ಳ ಇನ್ನೂ ಅನೇಕ ಸಿದ್ಧೌಷಧಗಳಿವೆ. ಸಂತಾನೋತ್ಪತ್ತಿಯನ್ನು ಮಿತಪಡಿಸಲಿಕ್ಕೆ; ನವಚೈತನ್ಯವನ್ನು ತುಂಬಿಸಲಿಕ್ಕೆ; ಚಪ್ಪಟೆಯಾದ, ಸಡಿಲವಾದ, ಜೋತುಬಿದ್ದ ಹೆಂಗಸರೆದೆಯನ್ನು ದುಂಡಗಾಗಿ ಮಾಡುವುದಕ್ಕೆ.

# ಸೂಜೀಕಾರ್ ಬ್ರದರ್ಸರಲ್ಲಿಗೇ ಹೋಗುವುದೇತಕ್ಕೆ?

ಯಾತಕ್ಕೆಂದರೆ—ಈಗಿನ ಫ್ಯಾಶನಿಗೆ ತಕ್ಕುದಾದ ನೂತನವಾದ, ನಯ ನಾಜೂಕಾದ, ಬಗೆಬಗೆಯ ಅಂದವಾದ ಬಣ್ಣಗಳ, ಮಾದರಿಗಳ, ಹೊಸ ಹೊಸ ಬಟ್ಟಿಬರೆಗಳನ್ನು ಅಲ್ಲಿ ಚುನಾಯಿಸಿ ಇರಿಸಲಾಗಿದೆ. ಬಾಳಿಕೆಯಲ್ಲಿ ಬಣ್ಣದಲ್ಲಿ ಹಿರಿದು; ಬೆಲೆಯಲ್ಲಿ ಕಿರಿದು; ನಿತ್ಯ ಉಪಯೋಗಕ್ಕೆ, ಶುಭ ಶೋಭನಗಳಿಗೆ, ಕರವಸ್ತ್ರದಿಂದ ಮೊದಲ್ಗೊಂಡು ಜರಿಯ ಪೀತಾಂಬರದ ವರೆಗೆ, ಎಲ್ಲವೂ ದೊರಕುವುದಿಲ್ಲಿಯೇ—ಬಡವರಿಗೆ, ಶ್ರೀಮಂತರಿಗೆ, ಗಂಡಸರಿಗೆ, ಹೆಂಗಸರಿಗೆ, ಎಲ್ಲರಿಗೂ! ಸೊಗಸಾದ ಶೀರೆಗಳು ನಮ್ಮಲ್ಲೊಂದು "ಸ್ಪೆಶಾಲಿಟಿ!" ನಂಬಿಕೆಯ ಸನಗು; ಪ್ರಮಾಣಿಕತೆಯ ವ್ಯವಹಾರ; ಹಲವು ವರ್ಷಗಳ ಅನುಭವಸಿದ್ಧವಾದ ವ್ಯಾಪಾರ. ಸಂದರ್ಶಿಸದವರೊಮ್ಮೆ ದಯವಿಟ್ಟು ಪರೀಕ್ಷಿಸಿರಿ!

## ಮೆಸರ್ಸ್ ಸೂಜೀಕಾರ್ ಬ್ರದರ್ಸ್,

ಮಾರ್ಕೆಟ್ ರೋಡ್, ಮಂಗಳೂರು, ದ. ಕ.

(೩೫ನೇ ಪುಟದಿಂದ.)

ಮುನಿಸಿಪಲ್ ಕೌನ್ಸಿಲಿನಲ್ಲಿ 'ಸರಸ್ವತಿ ಪ್ರೆಸ್ಸಿ'ನ ಡೈರೆಕ್ಟರಿಲ್ಲ; ಅಧ್ಯಕ್ಷರಾಗಲೀ, ಅವರ ಕುಟುಂಬದವರಾಗಲಿ "ಪಾಲುದಾರ"ರಲ್ಲ. ಕೆಥೊಲಿಕ ಸಮಾಜದ ಕೌನ್ಸಿಲರರು ಧಾರಾಳವಾಗಿದ್ದರೂ "ನಮ್ಮ ಜಾತಿಯವರ ಪ್ರೆಸ್ಸಿಗೇ ಈ ಕೌನ್ಸಿಲಿನ ಮುದ್ರಣ ಕೆಲಸ ಕೊಡಿ" ಎಂದು ರೂಲ್ ಮಾಡಿಡಲಿಲ್ಲ. ಸದ್ಯ ಮುದ್ರಾಲಯದ ಸ್ವರಾಜ್ಯಾಧಿಕಾರ ದೊರಕಿರುವುದು ಒಂದು ಸಮಾಜಕ್ಕೇ. ಊರಿನಲ್ಲಿ "ವಿಶಿಷ್ಟ ಯೋಗ್ಯತೆ" ಇರುವ ಪ್ರೆಸ್ ಎಂದರೆ ಅದೊಂದೇ!

ಯಾರಾದರೂ ಪ್ರಕಟಣೆ, ಜಾಹಿರಾತು ಮತ್ತೂ ನೋಟೀಸುಗಳನ್ನು ಪ್ರಕಟಿಸುವುದು ಆದಷ್ಟು ಹೆಚ್ಚು ಮಂದಿಗೆ ಅದು ತಿಳಿಯಬೇಕೆಂದಲ್ಲದೆ—ಪತ್ರಿಕೆಯೊಂದರಲ್ಲಿ ಅದು ಬಂದರಾಯಿತೆಂಬ ಹರಿಕೆ ಸಲ್ಲಿಸಲಿಕ್ಕಲ್ಲ. "ಕಂಠೀರವ"ನಲ್ಲಿ ಮಂಗಳೂರು ಮುನಿಸಿಪಾಲಿಟಿಯೊಂದರ ನೋಟೀಸೇ ಪ್ರಕಟವಾಗುವುದಲ್ಲ. ಇತರ ಹಲವು ಮುನಿಸಿಪಾಲಿಟಿಗಳ ನೋಟೀಸುಗಳೂ ಪ್ರಕಟವಾಗುತ್ತವೆ. ಇದಕ್ಕೆ "ನವಯುಗ"ದ ಟೆಂಡರುಗಳನ್ನೂ ಕಳುಹಿಸಬಾರದೇಕೆ? ಯಾರು ಬೇಡವೆಂದವರು?

"ಕಂಠೀರವ"ನಿಗೆ ಅರಸೂ ಬೇಕು; ರಾಷ್ಟ್ರವೂ ಬೇಕು; ಕನ್ನಡ ನಾಡೂ ಬೇಕು; ನುಡಿಯೂ ಬೇಕು. ಕಾಂಗ್ರೆಸ್ ಮಾಡಿದುದೆಲ್ಲ ಒಳ್ಳಿದೆಂದು ಹೊಗಳುವ ಅಂಧ ಮನೋವೃತ್ತಿ "ಕಂಠೀರವ"ನಿಗಿಲ್ಲ. ಭಿನ್ನಾಭಿಪ್ರಾಯದ ಟೀಕೆಗಳು "ನವಯುಗ"ದ ಮಾರ್ಜಾಲದೃಷ್ಟಿಗೆ ಸರಿಬೀಳದಿದ್ದರೆ, ಒಪರೇಶನ್ ಮಾಡಿಸಿಕೊಳ್ಳುವುದೊಳ್ಳಿದು!

"ಕಾಂಗ್ರೆಸ್ ಕಮಿಟಿಯವರ ಆಗ್ರಹದ ಕೇಳಿಕೆ," ದಿನಕ್ಕೊಂದು ರೀತಿ ಇರಬಹುದು. "ಸರಿ" ಎಂದು ತೋರಿದಂತೆ "ಕಂಠೀರವ"ನೂ ಮಾಡಿರುತ್ತಾನೆ. 'ಕಂಠೀರವ'ನು ಈ ಕಮಿಟಿಗೆ ತನ್ನನ್ನು ಮಾರಿಕೊಂಡಿಲ್ಲ. "ಗುಲಾಮಗಿರಿಯ ಮನೋವೃತ್ತಿ" ಇರಬಾರದೆಂದು ಕಾಂಗ್ರೆಸ್ ಸಾರಿಲ್ಲವೇ?

"ಯೂನಿಯನ್ ಜಾಕ್" "ಚಕ್ರವರ್ತಿಗಳ ರಜತೋತ್ಸವದ ಸಂಚಿಕೆ" ಇವುಗಳ ವಿಷಯದಲ್ಲಿ ಆಕ್ಷೇಪಿಸುವ 'ನವಯುಗ' ತನ್ನ ಕೋಳಿಯಾದ ಡಿ॥ ಬೋರ್ಡಿನ ಕಾಂಗ್ರೆಸಿನ ಮೆಂಬರರೆಂಬವರು ಮಾಡಬೇಕಾದ "ರಾಜಭಕ್ತಿಯ ಪ್ರಮಾಣ"ದ ನೀತಿಯ ಕುರಿತು ಹೇಳಲಿರುವುದೇನು? ಗವರ್ನರರಿಗೆ ಕಾಂಗ್ರೆಸಿನ ಪಕ್ಷದವರೆಂಬ ಪ್ರೆಸಿಡೆಂಟರೇ ಎಡ್ರೆಸನ್ನು ಒಪ್ಪಿಸಬೇಕಾದ ಈ ದೈನ್ಯಾವಸ್ಥೆ ಏಕೆ ಒದಗಿತು? ಚಕ್ರವರ್ತಿಗಳ ರಜತೋತ್ಸವ ಕಮಿಟಿಯಲ್ಲಿ ಶ್ರೀ. ಸೆಟ್ಟರು ಉಪಾಧ್ಯಕ್ಷರಲ್ಲಿ ಒಬ್ಬರಾಗಿರಲಿಲ್ಲವೇ? ಆಗ ಇವರು ಕಾಂಗ್ರೆಸಿನಲ್ಲಿಯೂ ಏನಾದರೂ ಆಗಿದ್ದರೋ? ಆಗಿದ್ದರೆ 'ರೂಲಿಗೆ' ಇವರಿಗೇನಾದರೂ 'ಎಕ್ಸೆಪ್ಶನ್' ಸಿಕ್ಕಿತ್ತೋ? ಇವರಿಗೆ ಸಿಕ್ಕಿದ 'ಜುಬಿಲಿ ಮೆಡಲು' ಇವರಲ್ಲಿಯೇ ಈಗಲೂ ಇದೆಯಲ್ಲವೇ? ಇದು ಕಾಂಗ್ರೆಸಿನ ಪರವಾಗಿ ಸ್ವೀಕರಿಸಿದುದೇ? 'ನವಯುಗ'ದಲ್ಲಿಯಾದರೂ, ಅದರ ಧೈರ್ಯಸ್ಥೈರ್ಯಗಳ ನಿದರ್ಶನವಾಗಿ, ಎಷ್ಟು ಕಡೆ ಅದರಲ್ಲಿ ರಾಷ್ಟ್ರಧ್ವಜ ಹಾರುತ್ತಿದೆ? ಕಸಬರಿಗೆ ಈ ಕಸವನ್ನೆಲ್ಲ ಗುಡಿಸಿ ಹೊರಗೆ ಹಾಕಬಾರದೇ?

ಕಾಂಗ್ರೆಸ್ ಡಿ॥ ಬೋ॥ ಚುನಾವಣೆಯಲ್ಲಿ ಭಾಗ ವಹಿಸಿದ್ದಾಗ, ಅದರ ಕಡೆಯ ಉಮೇದುವಾರರುಗಳ ಮೇಲೆ ನಾನಾ ರೀತಿಯಲ್ಲಿ "ಕಂಠೀರವ"ನು "ಕೆಸರೆರಚಿತ"ನೆಂಬುದಕ್ಕೆ "ನವಯುಗ" "ಕಂಠೀರವ"ದಿಂದಲೇ ಕೆಲವು ಉಲ್ಲೇಖಗಳನ್ನಾದರೂ ಉದ್ಧರಿಸಿ ಏಕೆ ಪ್ರಕಟಿಸಲಿಲ್ಲ? ಬರೇ ಕೈಯಲ್ಲಿ ಮೊಳ ಹಾಕುವ ಈ ತರ್ಕಸರಣಿಗೆ ಯಾವ ಬಹುಮಾನ ಕೊಡಬೇಡ?

"ಕಾಂಗ್ರೆಸಿನ" ಪರವಾಗಿ ಇಷ್ಟೆಲ್ಲ ವಕಾಲತ್ತಿನ ಪ್ರಚಾರ ಕಾರ್ಯವನ್ನು ನಡೆಯಿಸಿ, "ಕಂಠೀರವ"ನ ಮೇಲಿನ ಸಿಟ್ಟಿಗಾಗಿ, (ಶ್ರೀ. ಸೆಟ್ಟರನ್ನು ಸಮರ್ಥಿಸುವ ಭರದಲ್ಲಿ) ಕಾಂಗ್ರೆಸಿನ ಕುರಿತು ಅಖಂಡ ಭಕ್ತಿವಿಶ್ವಾಸಗಳ ಮೂಟೆಯನ್ನು ಪ್ರದರ್ಶಿಸುತ್ತಿರುವ ಈ 'ನವಯುಗ'ವು ಕಾಂಗ್ರೆಸ್ ಜುಬಿಲಿ ಸಮಯದಲ್ಲಿಯೂ, ಕರ್ಣಾಟಕದ ಎಲ್ಲ ಪತ್ರಿಕೆಗಳೂ ನಾಚುವಂತೆ, ತಲೆಬಾಗುವಂತೆ ತನ್ನದೊಂದು ಸರ್ವಾಂಗಸುಂದರವಾದ, ಕಾಂಗ್ರೆಸ್ ಜುಬಿಲಿ ಸಂಚಿಕೆಯನ್ನು ಹೊರಡಿಸಿರುವುದೂ ಕೊಂಡಾಡತಕ್ಕುದೇ. ಅದರಲ್ಲಿನ ಅಗ್ರಲೇಖವು ಮಾತ್ರ "ಜುಬಿಲಿ" ಸಂಬಂಧವಲ್ಲ; "ಕಂಠೀರವ"ನ ಮೇಲಿನದೇ.

'ನವಯುಗ'ದ ಬದಲು 'ಪ್ರಜಾಮತ'ವೆಂದಿದೆ. ಇದು ಮುದ್ರಣದ ಪ್ರಮಾದವಾಗಿರಬಹುದೇ? ಆ ಇಡೀ ಸಂಚಿಕೆ?

ಡಾ॥ ವಿಠಲ ಸೆಟ್ಟರು ಕಾಂಗ್ರೆಸಿನ ಅಚ್ಚುಮೆಚ್ಚಿನ "ವಾಲರಲ್ಲ" ಎಂದು ಈಗಲಾದರೂ ತಿಳಿದುದು ಒಳ್ಳಿದೇ ಆಯಿತು.

ಗಿಲೀಟ್ ಕಾಂಗ್ರೆಸ್‌ವಾಲರ ಸಂಗತಿ,—ನವಯುಗಕ್ಕೆ ತಿಳಿದಿರುವಷ್ಟು ಇತರರಿಗೆ ತಿಳಿಯಲಾರದು. ಅದು ಇಂದಿನ ಚುನಾವಣೆಯ ಸ್ಥಿತಿಗತಿಗಳಿಂದಲೂ ಚೆನ್ನಾಗಿ ವೇದ್ಯವಾಗುತ್ತದೆ. ಬರೇ ಚುನಾವಣೆಯ ಯಶಸ್ಸನ್ನೂ, ಜಾತಿಯ ಅಭಿಮಾನವನ್ನೂ ಇಟ್ಟುಕೊಂಡು ಮುಂದೆ ಬಂದ "ಕಾಂಗ್ರೆಸುವಾಲ"ರು ಬರೇ ಗಿಲೀಟಿನವರೆ ಏಕಲ್ಲ?

ಹಳ್ಳಿಹಳ್ಳಿಗಳ ಶಾಲಾ ವರ್ಧಂತಿಗಳ ಅಧ್ಯಕ್ಷತನದ ಗುಟ್ಟು ಎಲ್ಲರಿಗೂ ತಿಳಿದಿದೆ. ಚುನಾವಣೆಗೆ ಅದೇ ಪ್ರಸಂಗ ಪೀಠಿಕೆ. "ಅನುದಿನವೂ ತನು-ಮನ-ಧನವನ್ನು ಪೂರ್ವ ಜನಿಕ ಸೇವೆಗಾಗಿ ಸವೆಯಿಸಿದುದರ" ಪರಿಣಾಮವಾಗಿಯೇ, ಬೋರ್ಡಿನ ಆಡಳಿತಕ್ಕೆ ಸಮಯ ಸಾಲದೆ, ಆ ಆಡಳಿತದ ಕ್ರಮ ಸಡಿಲವಾಗಿರಬಹುದು. ಬಿರುದುಬಾವಲಿಗಳಿಗೆ ಮರುಳಾಗಿಲ್ಲವೆಂಬುದಕ್ಕೆ ಕೈಸರ್-ಈ-ಹಿಂದ್ ಮೆಡಲೂ ಒಂದು ಪ್ರತ್ಯಕ್ಷ ನಿದರ್ಶನವಲ್ಲ.

ಪೂರ್ವಕಾಲದ ರಾಜಾಸ್ಥಾನಗಳ ಸ್ತುತಿಪಾಠಕರ ಸ್ತೋತ್ರಪಾಠಕ್ಕೂ ಒಂದು ರೀತಿ ಇದ್ದಿತು. "ವೈರಿಕುಲ .....ಬಹು ಪರಾಕ್"ನ ಈ ಸೆಟ್ಟರ ಆತ್ಮಪ್ರಶಂಸೆಯ ಸಹಸ್ರ ಸಿಡಿಲಿನ ಶಬ್ದ, ಆಕಾಶಪಾತಾಳಗಳ ಹೃದಯವನ್ನು ಭೇದಿಸದಿದ್ದರೆ ಸಾಕು! ಉತ್ತರ ಕುಮಾರನೂ ಸ್ವರ್ಗದಿಂದಿಳಿದು ಬಾರದಿದ್ದರೆ ಸಾಕು.

ವರದಕ್ಷಿಣೆಯ ದುಡ್ಡು, ಹಿರಿಯರು ಮಾಡಿಟ್ಟ ಜಮೀನು, ಹೆಂಡತಿ ತಂದ ಮನೆಮಾರು, ಆಸ್ತಿಪಾಸ್ತಿ ಇವುಗಳಿಂದಲೇ ದೇಹವನ್ನು ಬಳಿಯಿಸಿ ಮೆರೆಯುವ ಪರಾವಲಂಬನದ ಗಂಟು ಕರಗಿಸುವ ಪುಣ್ಯಜೀವಿಗಿಂತ, ಸ್ವಾವಲಂಬನದ, ತನ್ನ ಕಷ್ಟದ, ಸ್ವತಂತ್ರೋದ್ಯೋಗದ ಸಂಪಾದನೆಯಿಂದ ಜೀವನ ನಡೆಯಿಸುವ ಅನನೊಬ್ಬ, ಪುರುಷಜನ್ಮದನು. "ಸ್ತ್ರೀವಿತ್ತಂ ಅಧನಾಧನುಂ" ಎಂಬುದನ್ನು ಮನಗಂಡವನು.

"ಸೆಲ್ಫ್ ಜೆಕ್" "೧೮ ಸಾವಿರದ ಮಾಚನೆ" ಇವನ್ನೆಲ್ಲ ಸರಕಾರವು ವಿಚಾರಿಸುತ್ತಿದೆಯಂತೆ. ಅದರ ನಿರ್ಧಾರವಾಗದೆ, ನಾವು ಏನೂ ಡಿ॥ ಎ॥ ಕೌನ್ಸಿಲಿನ ಕುರಿತು ಬರೆಯಲಾರೆವು. ಆದರೆ ಕೆಲ ಬೋರ್ಡ್ ಮೆಂಬರರು ಈ ಕೃತಕ ಶಾಲೆಗಳನ್ನು ಪರಿಶೋಧಿಸಬೇಕೆಂದಾಗಲೂ, ಅದಕ್ಕೆ ಲಕ್ಷ್ಯ ಕೊಡದೆ, ಡಿ॥ ಬೋರ್ಡಿನ ಈ "ಧರ್ಮ ಛತ್ರ" ಸಾಂಗವಾಗಿ ನಡೆಯುತ್ತಿರುವುದು ವಿಚಿತ್ರವಾಗಿದೆ. ಈ "ಧರ್ಮ ಛತ್ರ"ದ ಧರ್ಮಬುದ್ಧಿ, ೩೯ ಸಾವಿರ ಖರ್ಚಿಗೆ ಸಾಲದೆ ಬಾದ ಮೇಲೂ ಒಂದೇ ರೀತಿಯಾಗಿ ನಡೆದರೂ-ಯಾರಿಗೇನು? "ಹಳ್ಳಿಹಳ್ಳಿಗಳಿಗೂ ಆಮಂತ್ರಿಸಲ್ಪಟ್ಟು ಶಾಲಾವರ್ಧಂತಿಗಳಲ್ಲಿ ಅಧ್ಯಕ್ಷರಾಗಿ ಪಡೆದ ಈ ಗೌರವ"ಕ್ಕೆ-ಪಾಪ-ಏಕೆ ದುರ್ಭಿಕ್ಷ ಬರಬೇಕು?

ದ. ಕ. ಎ. ಕೌನ್ಸಿಲಿನ ಗುಟ್ಟು "ನವಯುಗ"ಕ್ಕೆ ತಿಳಿದಿದೆಯಲ್ಲ! ಅದನ್ನೆಲ್ಲ ಆ ಪತ್ರಿಕೆಯಲ್ಲಿ ಇನ್ನೂ ಬಹಿರಂಗಪಡಿಸಿಲ್ಲವೇಕೆ?

ಘಂಡಿನಲ್ಲಿ ದುಡ್ಡಿಲ್ಲದಾಗ ಬರೆದ ಚೆಕ್ಕುಗಳನ್ನು ಬೋರ್ಡ್ ಪ್ರೆಸಿಡೆಂಡರು ದಸ್ಕತು ಹಾಕುವುದು ಕಣ್ಣು ಮುಚ್ಚಿ ಕೊಂಡೋ-ಕಣ್ಣು ಬಿಟ್ಟೋ—ಅರ್ಧ ನಿದ್ರೆಯಲ್ಲಿಯೋ ಪೂರಾ-ನಿದ್ರೆಯಲ್ಲಿಯೋ?

"ದಕ್ಷಿಣ ಕನ್ನಡದಲ್ಲಿ ಜನಮತದ ದೌರ್ಬಲ್ಯವಿದೆ"; ಕಾಂಗ್ರೆಸಿನವರಾದರೂ ಅವರ ಸಾಮರ್ಥ್ಯ ಹೆಚ್ಚಿಸಿಲ್ಲ! "ಸಾರ್ವಜನಿಕ ಜೀವನದ ದೈನ್ಯತೆ ಇವೆ" ಅದನ್ನು ಸಾರ್ವಜನಿಕ ಸೇವೆಗಾಗಿ "ತಣು—ಮಣ—ದಣ"ಗಳನ್ನು ಮಣಗಟ್ಟಳೆ ಒಪ್ಪಿಸಿದವರಾರೂ ನೋಡಲಿಲ್ಲ. ಪ್ರಾಯಶಃ ಈ ರೀತಿಯು ಈ ಕಾಂಗ್ರೆಸೂ, ಅಧ್ಯಕ್ಷಸದವಿಯು ಅತ್ಯಾಶೆಯೂ ಆ ದೌರ್ಬಲ್ಯವನ್ನೂ ದೈನ್ಯತೆಯನ್ನೂ ಹೆಚ್ಚಿಸುವಲ್ಲಿ ಸಹಾಯಕವಾಗಿರುವುದೆಂದರೆ ತಪ್ಪಾದೀತೇ?

ನಮ್ಮ ಜಿಲ್ಲಾ ಬೋರ್ಡ್ ಕಾಂಗ್ರೆಸ್ ಮೆಂಬರರೆಂಬವರ ಧೈರ್ಯಸ್ಥೈರ್ಯ ಪರಾಕ್ರಮಪೌರುಷಗಳನ್ನು "ಸಹಸ್ರಫಣದ ಆದಿಶೇಷನಿಂದಲೂ ವರ್ಣಿಸಲಸದಳ". ಇದಕ್ಕೆ ಮೊನ್ನೆಯ ಕಾಂಗ್ರೆಸ್ ಜುಬಿಲಿಯಲ್ಲಿ ಇವರು ತೋರಿಸಿದ ಆಸಕ್ತಿಯೇ ಸಾಕ್ಷಿ. ಈ ಸಂದರ್ಭದಲ್ಲಿ "ಕಂಠೀರವನ ಮೂರ್ಖತನದ ಬೈರೂಪವು ಸಂಪೂರ್ಣ ಬಟ್ಟಬಯಲಾಗಲಿಲ್ಲ." ಇಲ್ಲಿಯ 'ಕಾಂಗ್ರೆಸ್ ಉಮೇದ್ವಾರಿಗಳನ್ನಾರಿಸಿದ' ಸಿವಿಕ್ ಬೋರ್ಡಿನ ಪ್ರತಿಷ್ಠಾಕಾಮಿಗಳ ಮುಖ ತುಂಬ ಮಸಿಯೂಗಿದೆ. ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಪಾಥಕ್ಕಾಗಿ, ರಾಷ್ಟ್ರೀಯ ಹಿತಕ್ಕಾಗಿ ಹೋರಾಡಿದವರೂ, ಹೋರಾಡುತ್ತಿರುವವರೂ ಬಡವರ ಮಕ್ಕಳು. ಅಂತಹವರೊಡನೆ ಶ್ರೀಮಂತ ಬೋರ್ಡ್ ಮೆಂಬರರೆಷ್ಟು ಮಂದಿ ಇದ್ದಾರೆ?




(ಹೊಸ) ಡಿ. ಬೋ. ಮೆಂಬರು:—"ಎಲೇ! ಡಿಸ್ಟ್ರಿಕ್ಟ್ ಬೋರ್—ಥನ್ಯಾ! ಒಳಗೆ ಬಿಡೇ!"
ಮಿಸ್ ಡಿ. ಬೋ. ಅಮ್ಮ:—"ಯಾರಯ್ಯಾ—?"
ಮೆಂಬರು:—"ನನ್ನ ಟೋಪಿ ನೋಡ್‌ಬಾರ್ದೆ?"
ಡಿ. ಬೋ. ಅಮ್ಮ:—"ಹಾಗಾದ್ರೆ—ಸ್ವಲ್ಪ ಸ್ಟಾಪ್—ಗೂಡು ಬಯ್."


**The United India Life Assurance Co., Ltd.**

Head Office: **MADRAS.** { ESTABLISHED: 1906. } Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

*For particulars apply to:—*

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS* KODIALBAIL, MANGALORE.

REGISTERED NO. M. 1393. ವಾರ್ಷಿಕ ಚಂದಾ ರೂ. 2-8-0. SINGLE COPY ONE AN[illegible]

# ಕಂತೀರವ

# KANTEERAVA MANGALORE

THE MOST WIDELY CIRCULATED KANARESE WEEKLY

VOL. XVII MANGALORE, TUESDAY, JANUARY 14, 1936. NO. 41.


## ನಮ್ಮ ಬ್ಯಾಲೆನ್ಸ್ ಷೀಟುಗಳೇ ಇರುವ ವಿದ್ಯಮಾನಗಳನ್ನು ಪ್ರಕಟಿಸುತ್ತವೆ.

"ಸ್ವದೇಶಿ"ಯ ಜಾಗ್ರತಿಯ ಕಾಲ್ಕದಲ್ಲಿ ಸ್ಥಾಪನೆಗೊಂಡ, ಕಲ್ಕತ್ತೆಯ "ನ್ಯಾಶನಲ್" ದಿನದಿನಕ್ಕೂ ಬಲಗೊಂಡು ಪುಷ್ಟಿಯಾಗಿ, ಪರಿಣಾಮದಲ್ಲಿ, ಅದು ಇಂದು ಪೂರ್ವದೇಶಗಳ. ಜೀವವಿಮಾ ಕಾರ್ಯಾಲಯಗಳಲ್ಲಿ ಪ್ರಮುಖವೆನ್ನಿಸಿದೆ. ಈ ಸಂಸ್ಥೆಯು, ಈ ವ್ಯವಹಾರ ನಡೆಸಿರುವ ಸುಮಾರು 30 ವರ್ಷಗಳ ಕಾಲದಲ್ಲಿ, ಪಾಲಿಸಿದಾರರಿಗೂ, ಅವರ ಹಕ್ಕುದಾರರಿಗೂ ಇಷ್ಟೊಂದು ಅಲ್ಪಾವಧಿಯಲ್ಲಿಯೇ "ಕ್ಲೈಮುಗಳ" ಪಾವತಿಗಾಗಿ 1,30,00,000 ರೂಪಾಯಿಗಳಿಗೂ ಮಿಕ್ಕು ಸಲ್ಲಿಸಿರುವ ದಷ್ಟೇ ಅಲ್ಲದೆ, ಕಂಪೆನಿಯ ಆಸ್ತಿಯ ರೂಪದಲ್ಲಿ ರೂಪಾಯಿ 2,50,00,000ಗಳಿಗೂ ಹೆಚ್ಚಾಗಿ ಸಂಗ್ರಹಿಸಿಡಲೂ ಸಮರ್ಥವಾಗಿದೆ. ಜೀವನದಲ್ಲಿ ಉಳಿಸಲಾದ ಗಂಟಿನೊಡನೆ ಜೂಜಾಡಲು ಬಯಸದವರ ಆತುರಪೂರ್ವಕವಾದ ಆಲೋಚನೆಗೆ ಒಳಗಾಗಲು ಈ ನಿಜ ವಿದ್ಯಮಾನಗಳೇ ಸಾಕೆನ್ನಬಹುದಾಗಿದೆ. ಇದು ನಿನ್ನ ಪರ್ಯಾಲೋಚನೆಗೂ ಏತಕ್ಕೆ ಒಳಗಾಗಬಾರದು?

ನಿಮಗೆ ಬೇಕಾದುದೇನೆಂದು ನೀವು ನಮಗೆ ತಿಳಿಸಿದರೇ ಸಾಕು; ಮಿಕ್ಕ ವಿಚಾರಗಳನ್ನೆಲ್ಲ ನಾವೇ ನೋಡಿಕೊಳ್ಳುವೆವು.

**ನ್ಯಾಶನಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,**
ಹೆಡ್ ಆಫೀಸು, ಕಲ್ಕತ್ತ.

ಏಜನ್ಸಿಯ ಶರ್ತಗಳಿಗೆ ಬರೆದುಕೊಳ್ಳಿ:—
ಬ್ರಾಂಚ್ ಸೆಕ್ರಟರಿ, ನ್ಯಾಶನಲ್ ಇನ್ಶ್ಯೂರೆನ್ಸ್ ಕೊ., ಲಿಮಿಟೆಡ್,
362, ಚೈನಾ ಬಜಾರ್ ರೋಡ್, ಎಸ್ಪ್ಲನೇಡ್, ಮದ್ರಾಸ್.
ಅಥವಾ
ದಿ ಆರ್ಗನೈಜಿಂಗ್ ಸೆಕ್ರಟರಿ, ಸಬ್ ಆಫೀಸ್, 171, ನ್ಯೂ ಸ್ಟ್ರೀಟ್, ಮಧುರೆ.
ದಿ ಚೀಫ್ ಏಜೆನ್ಸಿ, ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ.

ಬೆಂಕಿ ಮತ್ತೂ ಮೋಟರ್ ಅವಗಡಗಳ ಇನ್ಶ್ಯೂರೆನ್ಸಿಗಾಗಿ
ದಿ ಅಸೋಸಿಯೇಟೆಡ್ ನ್ಯಾಶನಲ್ ಫಯರ್ ಮತ್ತೂ ಜನರಲ್ ಇನ್ಶ್ಯೂರೆನ್ಸ್ ಕೋ., ಲಿಮಿಟೆಡ್,
ಎಂಬೀ ಸಂಸ್ಥೆಯೊಡನೆ ವಿಚಾರಿಸಿರಿ.

# S. K. M.

## ಸಿದ್ಧ ಕಲ್ಪ ಮಕರಧ್ವಜ

(ರಿಜಿಸ್ಟರ್ಡ್)

ನಿಶ್ಶಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು, ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಚಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೨೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ರೂ. ೧೦.

THE MADRAS
AYURVEDIC PHARMACY (LTD.),
*Madras—P. O. Box 151, 289 Esplanade,*
180, Mount Rd., MADRAS.

# THE BANK OF MANGALORE, LTD.,

Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.

# ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

| | | | | | |
|---|---|---|---|---|---|
| Authorised Capital ಅಧಿಕೃತ ಮೂಲಧನ | Rs. 2,00,000. | Subscribed Capital ಚಂದಾ ಅರ್ಪಿಸಿದ್ದು | Rs. 28,325. | Paid-up Capital ತೆತ್ತು ಬಂದದ್ದು | Rs. 6,025. |

STATEMENT OF AFFAIRS AS ON 30TH JUNE 1935.

| | | | | | |
|---|---|---|---|---|---|
| Capital ಪಾಲು ಮ್ಯೂಲಿಕರಿಂದ ವಸೂಲಾದ ಧನ | ರೂ. | 6,025— 0— 0 | Furniture and Safe ಬೈಜರಿ ವಗ್ಗೆರೆ | ರೂ. | 1,050— 0— 0 |
| Reserve Fund ಕ್ಷೇಮ ನಿಧಿ | ರೂ. | 500— 0— 0 | Authorised Investments ಚಿನ್ನಾಭರಣ, ಪ ಇತರ ಜವಾಬ್ದಾರಿಯ ಮೇಲೆ | ರೂ. | 94,325—14— 6 |
| Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಠೇವಣಾತಿಗಳು | ರೂ. | 74,707— 0— 9 | Bills per contra ಬಿಲ್ಸ್ ಜಮಾ ಇರುವಂತೆ ಬಹಾ | ರೂ. | 16,037— 9— 5 |
| Due to Bankers ಬೇಂಕರರಿಗೆ ಸಲ್ಲುತಕ್ಕದ್ದು | ರೂ. | 16,582— 1—10 | Sundries ಸಾದಿಲವಾರು | ರೂ. | 1,827— 6— 7 |
| Bills for Collection ಜಮಾ ಮಾಡುವರೆ ಇರುವ ಬೀಲುಗಳು | ರೂ. | 16,037— 9— 2 | Cash in hand and with Bankers at call ಕೈಯಲ್ಲಿ ಇರತಕ್ಕ ಪ, ಬೇಂಕ್ಕರರಲ್ಲಿರತಕ್ಕ ನಗದಿ ಶಿಲ್ಕು | ರೂ. | 4,130— 1— 2 |
| Sundries ಸಾದಿಲವಾರು | ರೂ. | 3,519— 3—11 | | | |
| | ರೂ. | 117,370—15— 8 | | ರೂ. | 117,370—15— 8 |

**Fixed Deposits ನಿರಖು ಠೇವಣಾತಿ.**

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.
For 1 year 6% ಒಂದು ವರ್ಷ " For 3 months 4½% ಮೂರು ತಿಂಗಳ "

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಠೇವಣಾತಿಗಳು ಸ್ವೀಕರಿಸೋಣಾಗುವುವು. Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲ್ಲಿಕೋಟೆ, ಮತ್ತು ಬೆಂಗಳೂರುಗಳಿಗೆ ಡ್ರೆಫ್ಟ್ಗಳು ಕೊಡಲಾಗುವುವು. ಚಕ್ಸ್ ಮತ್ತು ಬಿಲ್ಸ್ ಒಫ್ ಎಕ್ಸ್ಚೆಂಜ್ ಹಿಂದೂಸ್ಥಾನದಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ವಟಾಯಿಸಿಕೊಡಲಾಗುವುವು. Savings Bank Deposits-Interest allowed on daily balances at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ದಿವಸಂಪ್ರತಿ ಶಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.
A FEW SHARES ARE STILL AVAILABLE AT PAR.
*APPLY FOR PARTICULARS.*

ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.
ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.
ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.


Printed and Published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rau.

# The Canara Banking Corporation, Udipi, Ltd.

*(Incorporated in British India)*

The First Indigenous Cosmopolitan Bank of
South Kanara District.

## Head Office: UDIPI.

BRANCHES:-

1. Udipi, 2. Coondapoor, 3. Car Street-Mangalore, 4. Shimoga, 5. Madras,
6. Bunder-Mangalore, 7. Mercara and 8. Virarajendrapet.

CAPITAL: Authorised, issued and subscribed.. Rs. 3,50,000.
Paid up .. .. .. .. .. Rs. 2,69,795.
RESERVE and other funds .. .. .. Rs. 3,28,906.

**FIXED DEPOSIT RATES up to 5% per annum.**

DEPOSITS received and paid AT PAR through the
Mercantile Bank of India, Ltd., Bombay,

*For further particulars kindly apply to any of our Offices.*

# ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡ್ಪಿ, ಲಿಮಿಟೆಡ್,

(ಬ್ರಿಟಿಶ್ ಇಂಡಿಯದಲ್ಲಿ ಇನ್‌ಕೊರ್ಪರೇಟಾಗಿದೆ.)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವದೇಶೀಯವಾದ ಸ್ಥಳೀಯ "ಕಾಸ್ಮೊಪೊಲಿಟನ್" ಬ್ಯಾಂಕಿಂಗ್ ಸಂಸ್ಥೆಯೆಂದರೆ, ಇದೇ ಮೊದಲಿನದು—ಸ್ಮರಣವುದ್ದು!

## ಹೆಡ್ ಆಫೀಸು—ಉಡುಪಿ.

### ಶಾಖೆಗಳು.

1. ಉಡುಪಿ,
2. ಕುಂದಾಪುರ,
3. ರಥಬೀದಿ—ಮಂಗಳೂರು,
4. ಶಿವಮೊಗ್ಗಾ,
5. ಮದ್ರಾಸು,
6. ಬಂದರ—ಮಂಗಳೂರು,
7. ಮಡಿಕೇರಿ ಮತ್ತು
8. ವೀರರಾಜೇಂದ್ರಪೇಟೆ.

| | | |
|---|---|---|
| ಮೂಲಧನ—ಅಧಿಕಾರ ಹೊಂದಿದ, ಅರ್ಪಿಸಿದ ಮತ್ತೂ ಚೆಂದಾ ಹಾಕಲ್ಪಟ್ಟ ಮೌಲ್ಯ. | ... ... ... | ರೂ. 3,50,000. |
| ತೆತ್ತು ಬಂದುದು. | ... ... ... | ರೂ. 2,69,795. |
| ಕ್ಷೇಮನಿಧಿ ಮತ್ತೂ ಇತರ ಫಂಡುಗಳು. | ... ... ... | ರೂ. 3,28,906. |

### ಕಾಯಂ ಠೇವಣಾತಿಗಳ ದರ

ವರ್ಷಕ್ಕೆ ಸೇಕಡಾ 5% ವರೆಗಿದೆ.

ಮರ್ಕೆಂಟೈಲ್ ಬ್ಯಾಂಕ್ ಆಫ್ ಇಂಡಿಯಾ, ಲಿಮಿಟೆಡ್, ಬೊಂಬಯಿ ಇದರ ಮೂಲಕ, ಯಾವ ವಿಚಾರ ಇಲ್ಲದೆ ಡಿಪೊಜಿಟುಗಳನ್ನು ಸ್ವೀಕರಿಸಲಾಗುತ್ತದೆ; ಹಿಂದೆ ತೆರಲಾಗುತ್ತಿದೆ.

ಹೆಚ್ಚಿನ ವಿವರಕ್ಕೆ ದಯವಿಟ್ಟು ನಮ್ಮ ಯಾವ ಕಾರ್ಯಾಲಯಕ್ಕಾದರೂ ಬರೆದು ಕೇಳಿ.

ದಕ್ಷಿಣ ಕನ್ನಡದ ಆದರ್ಶ ವಿಮಾ ಸಂಸ್ಥೆ

ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾ ಸಂಸ್ಥೆ

ಪ್ರಥಮ ಮೌಲ್ಯವೇತನದಲ್ಲಿ ಬೋನಸನ್ನು
ಹಂಚಿದ ಅಖಿಲಕರ್ನಾಟಕದ ಒಂದೇ ಸಂಸ್ಥೆ

ನಿಮ್ಮ ದೇಶವಾತ್ಸಲ್ಯವನ್ನು
ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ನಾಡಿನ ಅಭಿಮಾನವನ್ನು
ಕಾರ್ಯತಃ ತೋರಿಸಿರಿ.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ
ವಿಮಾರಂಗದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚಗೌರವವನ್ನೂ ಸಂಪಾದಿಸಿರುವ

## ಮಂಗಳೂರಿನ

# ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುಮೆಯ

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮಾಪತ್ರದ ಮೇಲೆ,—

## ವರ್ಷ 1ರ ರೂಪಾಯಿ 10/-ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮಾಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಸಂಬಳ
ಮತ್ತು ಕಮಿಶನಿನ ಮೇಲೆ ಬೇಕು.

ಅವರಿಗೆ ವಿಪುಲವಾದ ಸೌಕರ್ಯಗಳಿವೆ—ಯಥೋಚಿತವಾದ ಪುರಸ್ಕಾರಗಳಿವೆ—ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

---

***Wanted Ladies & Gentlemen to join our Agency Core both on Pay & Commission.***

# MAKE 1936

**A Bright and Prosperous New Year**
**by investing in a Policy of**

# THE POPULAR INSURANCE CO., LTD.

## Head Office:- MANGALORE, S. India.

ESTD. 1929.

**The Pioneer Life Office of the west coast & the first of its kind in British Karnataka.**